ಕರ್ನಾಟಕ ಸರಕಾರ

# ಮಂಡ್ಯ ಜಿಲ್ಲೆಯ ದೇವಾಲಯಗಳು:

## ಒಂದು ಸಮೀಕ್ಷೆ

◆ ತೈಲೂರು ವೆಂಕಟಕೃಷ್ಣ



ಕನ್ನಡ ಪುಸ್ತಕ ಪ್ರಾಧಿಕಾರ

# ಮಂಡ್ಯ ಜಿಲ್ಲೆಯ ದೇವಾಲಯಗಳು : ಒಂದು ಸಮೀಕ್ಷೆ

ತೈಲೂರು ವೆಂಕಟಕೃಷ್ಣ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-೫೬೦ ೦೦೨

**'Mandya Jilleya Devalayagalu; Ondu Sameekshe'** : An Essay on Temple's Cultural heritage of Mandya Dist. by Thyloor Venkata Krishna (H. Venkata Krishne Gowda) Published by **Ashoka N. Chalawadi**, Administrative Officer Kannada Pusthaka Pradhikara, Kannada Bhavana, J.C. Road, Bangalore - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

| | | |
|---|---|---|
| ಪ್ರಥಮ ಮುದ್ರಣ | : | ೨೦೧೦ |
| ಪುಟಗಳು | : | x + ೧೭೦ = ೧೮೦ |
| ಪ್ರತಿಗಳು | : | ೧,೦೦೦ |
| ಬೆಲೆ | : | ರೂ. ೮೦=೦೦ |

| | | |
|---|---|---|
| First Print | : | **2010** |
| Pages | : | **x+ 170 = 180** |
| Copies | : | **1,000** |
| Price | : | **Rs. 80=00** |
| ISBN | : | **81-7713-271-7** |

ಪ್ರಕಾಶಕರು
ಅಶೋಕ ಎನ್. ಚಲವಾದಿ
ಆಡಳಿತಾಧಿಕಾರಿಗಳು
ಕನ್ನಡ ಪುಸ್ತಕ ಪ್ರಾಧಿಕಾರ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-೫೬೦ ೦೦೨


ಕರಡು ತಿದ್ದಿದವರು : ಲೇಖಕರು

ಮುದ್ರಕರು :
ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.,
ನಂ. ೧೬/೧, ೨ನೇ ಮುಖ್ಯರಸ್ತೆ, ೩ನೇ ಅಡ್ಡರಸ್ತೆ
ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು-೫೬೦ ೦೨೬
ದೂರವಾಣಿ : ೦೮೦-೨೬೭೪ ೮೮೧೧; ಮೊ : ೯೩೪೨೮ ೬೪೭೬೧

## ಅರ್ಪಣೆ

ಸ್ಮರಣೀಯ ತಂದೆ

ಹೆಚ್. ಹೊನ್ನೇಗೌಡ ಅವರಿಗೆ


ಹಾಸನ ಜಿಲ್ಲೆ
ತುಮಕೂರು ಜಿಲ್ಲೆ
ಬೆಂಗಳೂರು ಜಿಲ್ಲೆ
ಮೈಸೂರು ಜಿಲ್ಲೆ
ಮಂಡ್ಯ
ಮಂಡ್ಯ ಜಿಲ್ಲೆ
ಕರ್ನಾಟಕ ರಾಜ್ಯ
ರೈಲು ಮಾರ್ಗ
ನದಿಗಳು
ಅಣೆಕಟ್ಟುಗಳು
ಜಿಲ್ಲಾ ಕೇಂದ್ರ
ಪ್ರವಾಸಿ ಸ್ಥಳಗಳು
ಹೆದ್ದಾರಿಗಳು

# ನಾಲ್ಕು ಮಾತು

ಒಂದು ದೇಶದ ಹಿರಿಮೆ ಅಲ್ಲಿನ ಕಲೆ, ಸಂಸ್ಕೃತಿಯ ಪರಂಪರೆಯನ್ನು ಅವಲಂಬಿಸಿರುತ್ತದೆ. ಭಾರತೀಯ ಸಂಸ್ಕೃತಿಯ ವೈವಿಧ್ಯತೆಯಲ್ಲಿ ದೇವಾಲಯಗಳು ಪ್ರಮುಖ ಪಾತ್ರವಹಿಸಿವೆ. ಅದರಲ್ಲಿಯೂ ಜನರ ಧಾರ್ಮಿಕ ಚಟುವಟಿಕೆಗಳನ್ನು ಅತ್ಯಂತ ಪ್ರಬಲವಾಗಿ ನಿರೂಪಿಸುವಂತಹ ಮಾಧ್ಯಮಗಳಾಗಿವೆ. ಚರಿತ್ರೆಯ ವಿವಿಧ ಕಾಲ ಘಟ್ಟಗಳಲ್ಲಿ ಈ ದೇವಾಲಯಗಳು ದೇಶದ ವಿವಿಧ ಭಾಗಗಳಲ್ಲಿ ಪ್ರಚಲಿತದಲ್ಲಿದ್ದ ಜನಜೀವನ ಧರ್ಮದ ಹಲವು ಛಾಯೆಗಳನ್ನು ಭೇದಗಳನ್ನು ಪ್ರಾಧಾನ್ಯತೆಯನ್ನು ಪ್ರತಿಬಿಂಬಿಸುತ್ತವೆ. ಜತೆಗೆ ಆಯಾ ಕಾಲದಲ್ಲಿನ ಸಂಸ್ಕೃತಿ, ನಾಗರೀಕತೆ, ತತ್ವಶಾಸ್ತ್ರಕ್ಕೆ ಕೈಗನ್ನಡಿಯಾಗಿವೆ. ವಾಸ್ತುಶಿಲ್ಪ, ಮೂರ್ತಿಶಿಲ್ಪ, ಚಿತ್ರಕಲೆ, ಸಂಗೀತ, ನೃತ್ಯಕಲೆಗಳನ್ನು ಪೋಷಿಸಿಕೊಂಡು ಬಂದಿವೆ. ವೇದ, ಉಪನಿಷತ್ತು, ಪುರಾಣ, ಮಹಾಕಾವ್ಯ ಮುಂತಾದ ಸಾಹಿತ್ಯ ಪ್ರಕಾರಗಳನ್ನು ಜೀವಂತವಾಗಿರಿಸಿವೆ. ಸಾಮಾಜಿಕವಾಗಿ ಜನರ ಮೇಲೆ ಧರ್ಮದ ಪ್ರಭಾವವನ್ನು ಬೀರಿ ದಾನಧರ್ಮ, ಪಾಪ ಪುಣ್ಯಗಳ ಅಂತರಾರ್ಥವನ್ನು ಬಿಡಿಸಿ ನೈತಿಕ ಶಿಕ್ಷಣವನ್ನು ನೀಡಿವೆ. ಇತಿಹಾಸದ ಪುಟಗಳನ್ನು ಅವಲೋಕಿಸಿದಾಗ ವಿವಿಧ ರಾಜಮನೆತನಗಳ ಆಳ್ವಿಕೆಯ ಅವಧಿಯಲ್ಲಿ ವಿಶಾಲಭಾರತದ ವಿವಿಧ ಭಾಗದಲ್ಲಿ ನಿರ್ಮಾಣವಾಗಿರುವ ಪುರಾತನ ದೇವಾಲಯಗಳು, ಸ್ಮಾರಕಗಳು ನಮ್ಮ ನಾಡಿನ ಸಾಂಸ್ಕೃತಿಕ ವೈಭವ, ಶಿಲ್ಪಕಲೆ, ವಾಸ್ತುಶಿಲ್ಪವನ್ನು ಜಗತ್ತಿಗೆ ಸಾರಿ ಹೇಳುತ್ತಿವೆ. ಈ ಹಿನ್ನೆಲೆಯಲ್ಲಿ ದೇಶದ ವ್ಯಾಪ್ತಿಯಲ್ಲಿ ಹರಡಿರುವಂತೆ ಮಂಡ್ಯ ಜಿಲ್ಲೆಯಲ್ಲಿಯೂ ದೇವಾಲಯಗಳು ಹರಡಿಕೊಂಡಿವೆ. ಇವುಗಳನ್ನು ಅಧ್ಯಯನ ಮಾಡಿ ಅನುಭವಕ್ಕೆ ತಂದುಕೊಳ್ಳುವುದೇ ರೋಮಾಂಚನವಾಗಿರುತ್ತದೆ.

ಕಳೆದ ಹತ್ತಿಪ್ಪತ್ತು ವರ್ಷಗಳಿಂದ ಜಿಲ್ಲೆಯಲ್ಲಿ ಸುತ್ತಾಡುವ ಯೋಗ ನಾನಾ ಕಾರಣಗಳಿಂದ ಒದಗಿಬಂದಿದೆ. ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿದ್ದಾಗ ವಿವಿಧ ಕಾರ್ಯಕ್ರಮಗಳ ಕಾರಣಕ್ಕಾಗಿ ಜಿಲ್ಲೆಯಿಡೀ ಸುತ್ತಾಡಿದ್ದೇನೆ. ಆಗ ನನ್ನ ಅಭಿರುಚಿಗೆ ತಕ್ಕಂತೆ ಗ್ರಾಮಾಂತರ ಪ್ರದೇಶದಲ್ಲಿನ ಸ್ಥಿತಿಗತಿ, ಅವರ

ಹಾಡುಪಾಡು, ಹಬ್ಬಹರಿದಿನಗಳು, ಜಾತ್ರೆ, ಉತ್ಸವಗಳು, ದೇವಾಲಯಗಳು, ಶಾಸನಗಳು, ಸ್ಥಳನಾಮಗಳು ಹೀಗೆ ಅವಲೋಕಿಸುತ್ತಾ ಬಂದಿರುವ ಅನುಭಾವದ ಫಲವೇ ಮಂಡ್ಯ ಜಿಲ್ಲೆಯ ಸಂಸ್ಕೃತಿ ಮತ್ತು ಸ್ಥಳನಾಮಗಳ ಬಗ್ಗೆ ಒಂದೆರಡು ಪುಸ್ತಕಗಳು ಹೊರಬರಲು ಕಾರಣವಾದವು. ಇದರಲ್ಲಿಯೇ ದೇವಾಲಯ ಸಂಸ್ಕೃತಿ ಬಗ್ಗೆ ಕೆಲವಷ್ಟು ಹೇಳಿದೆನಷ್ಟೆ. ಇದೀಗ ಈ ಪುಸ್ತಕ ಹೊರಬರುತ್ತಿರುವುದು ಸಮಗ್ರ ಎಂದು ನಾನು ಭಾವಿಸಿಲ್ಲ. ಜಿಲ್ಲೆಯ ಅದೆಷ್ಟೋ ದೇವಾಲಯಗಳ ವಿವರಣೆ ಮಾಡಹೊರಟರೆ ಒಂದೊಂದು ದೇವಾಲಯಗಳ ಬಗ್ಗೆ ಒಂದೊಂದು ಗ್ರಂಥ ರಚಿಸಬಹುದಾದಷ್ಟು ಸರಕುಗಳಿಂದ ಕೂಡಿವೆ. ಆ ಒಂದು ಮಾರ್ಗಕ್ಕೆ ಇದೊಂದು ಪ್ರಾರಂಭದ ಪ್ರಾಮಾಣಿಕ ಪ್ರಯತ್ನವಷ್ಟೆ ಎನ್ನಬಯಸುತ್ತೇನೆ. ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ಪ್ರಕಟಣೆಯ (೨೦೦೩) ಮಂಡ್ಯ ಜಿಲ್ಲೆ ಆವೃತ್ತಿಯ ಸಲಹಾಸಮಿತಿ ಸದಸ್ಯನಾಗಿದ್ದಾಗ ಬಹಳಷ್ಟು ಪ್ರಯೋಜನ ನನಗಾಯಿತು.

ಈ ಪುಸ್ತಕ ಬರೆಯಲು ಮತ್ತು ಹೊರಬರಲು ಒಂದು ಕಾರಣ ಬೇಕಾಗಿತ್ತು. ಕನ್ನಡ ಅಭಿವೃದ್ಧಿ ಪ್ರಾಧಿಕಾರದಲ್ಲಿ ಒಟ್ಟಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಜತೆಯಲ್ಲಿ ಪ್ರವಾಸ ಮಾಡುವಾಗ ನನ್ನ ಆಸಕ್ತಿಯನ್ನು ಗಮನಿಸಿದ್ದ ನಾಡಿನ ಖ್ಯಾತಕವಿ ಹಾಗೂ ಬರಹಗಾರರೂ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಆಗಿನ ಅಧ್ಯಕ್ಷರೂ ಹಾಗೂ ಈಗ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಸಿದ್ದಲಿಂಗಯ್ಯ ಅವರು ನನಗೆ ಈ ಒಂದು ಅವಕಾಶ ಕೊಟ್ಟರು. ಈ ನಿಟ್ಟಿನ ಪ್ರೋತ್ಸಾಹದಿಂದ ವಿಷಯವನ್ನು ಬರೆಯುವುದರ ಜತೆಗೆ ಅಗತ್ಯ ಛಾಯಾಚಿತ್ರಗಳನ್ನೂ ತೆಗಿಸಿದ್ದಾಯಿತು. ಒಟ್ಟಾರೆ ಈ ಪುಸ್ತಕ ಪ್ರಕಟಿಸಲು ಮುಂದಾದ ಕನ್ನಡ ಪುಸ್ತಕ ಪ್ರಾಧಿಕಾರದ ಮಾನ್ಯ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರಿಗೂ, ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿ ಅವರಿಗೂ, ಸ್ಥಾಯಿಸಮಿತಿ ಸದಸ್ಯರಿಗೂ ಮತ್ತು ಅಲ್ಲಿನ ಸಿಬ್ಬಂದಿ ವರ್ಗದವರಿಗೂ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಈ ಕಾರ್ಯಕ್ಕೆ ತುಂಬು ಸಹಕಾರ ನೀಡಿದ ಮಂಡ್ಯ ಜಿಲ್ಲಾ ಪ್ರಾಚೀನ ಸ್ಮಾರಕಗಳ ಸಂರಕ್ಷಣಾ ಒಕ್ಕೂಟ ಎಂಬ ನಮ್ಮದೇ ಸಹೃದಯ ಕಾರ್ಯಕರ್ತರೂ ಹಾಗೂ ಸನ್ಮಿತ್ರರೂ ಆದ ಬೆಳ್ಳೂರಿನ ಸೋಮಸುಂದರ್, ನಾಗಮಂಗಲದ ಮುಹಮದ್ ಕಲೀಂಉಲ್ಲಾ, ಬಾಲು, ನಾ.ಸು. ನಾಗೇಶ್, ಶಿಕ್ಷಕ ಎಂ. ತಿಮ್ಮರಾಯಿಗೌಡರು, ದೇವಲಾಪುರದ ಡಾ. ವೆಂಕಟೇಶ್, ಪಾಂಡವಪುರದ ಬಿ. ನಾರಾಯಣಗೌಡರು, ಹರವು ದೇವೇಗೌಡರು, ಡಾ. ಕೆ.ವೈ. ಶ್ರೀನಿವಾಸ್, ಶ್ರೀರಂಗಪಟ್ಟಣದ ಎಂ.ಆರ್. ಸುರೇಶ್, ಎನ್. ಬೋರಯ್ಯ, ಗಣಂಗೂರು

ನಂಜೇಗೌಡರು, ಕೃಷ್ಣರಾಜಪೇಟೆಯ ಕೆ.ಎಸ್. ಸೋಮಶೇಖರ್, ಬಳ್ಳೇಕೆರೆ ಮಂಜುನಾಥ್, ಶ್ಯಾಮೇಶ್, ಭಾರತೀಪುರದ ಗೋಪಾಲ್, ಅಘಲಯ ರಾಜೇಗೌಡರು, ಮಳವಳ್ಳಿಯ ಮ.ಸಿ. ನಾರಾಯಣ್, ತಳಗವಾದಿ ನಾಗರಾಜ್, ಆಲಭುಜನಹಳ್ಳಿ ನಾಗಣ್ಣ, ಮದ್ದೂರಿನ ಚನ್ನಯ್ಯಸ್ವಾಮಿ, ನಾರಾಯಣ್, ಶ್ರೀಕಂಠಪ್ರಸಾದ್ ಮತ್ತು ತೈಲೂರು ಮಿತ್ರರು, ಮಂಡ್ಯದ ಲಿಂಗಣ್ಣಬಂಧೂಕಾರ್, ಕೆ.ಟಿ. ಶ್ರೀಕಂಠೇಗೌಡರು, ಎಚ್.ಕೆ. ರವಿ, ಎನ್. ಬಿ. ರಾಜು (ರಾವಣಿ), ಶಂಭೂನಹಳ್ಳಿ ಕೃಷ್ಣೇಗೌಡರು ಮುಂತಾದ ಮಹನೀಯರಿಗೆ ನನ್ನ ಹೃತ್ಪೂರ್ವಕ ವಂದನೆಗಳು.

ಈ ನಿಟ್ಟಿನಲ್ಲಿ ನನಗೆ ಜತೆಗೂಡಿ ಸಹಕರಿಸಿದ ಮಂಡ್ಯದ ಜಿಲ್ಲಾಧಿಕಾರಿ-ಗಳಾಗಿದ್ದ ಕೆ.ಎಚ್. ಗೋಪಾಲಕೃಷ್ಣೇಗೌಡರನ್ನು ನೆನೆಯುತ್ತೇನೆ. ಅಂತೆಯೇ ಜಿಲ್ಲಾಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾಗಿದ್ದ ಡಾ. ಬಾಬುರಾವ್ ಮುಡ್‌ಬಿ ಅವರನ್ನೂ; ತರುವಾಯ ಜಿಲ್ಲಾಧಿಕಾರಿಗಳಾಗಿ ಬಂದ ಎಲ್.ಕೆ. ಅತಿಕ್ ಅವರನ್ನೂ ಮರೆಯುವಂತಿಲ್ಲ.

ಪುಸ್ತಕ ರಚನೆಯಲ್ಲಿ ಸಲಹೆ ಸಹಕಾರ ನೀಡಿದ ಕರ್ನಾಟಕ ಗ್ಯಾಸೆಟಿಯರ್ ಇಲಾಖೆಯ ಸಂಪಾದಕರಾದ ಎಸ್. ರಾಜೇಂದ್ರಪ್ಪ ಅವರಿಗೂ, ಕರಡನ್ನು ತಿದ್ದಿ ಕೊಟ್ಟ ಕವಿ ಹಾಗೂ ಬರಹಗಾರರಾದ ಡಾ. ಪ್ರದೀಪ್‌ಕುಮಾರ್ ಹೆಬ್ರಿ ಅವರಿಗೂ, ಲೇಖಕ ಹಾಗೂ ಶಿಕ್ಷಕರಾದ ಎಂ.ಆರ್. ಸುರೇಶ್ ಹಾಗೂ ಎಂ. ತಿಮ್ಮರಾಯಿಗೌಡ ಅವರಿಗೂ, ಅಲ್ಲಲ್ಲಿ ಹಲವು ವಿಷಯಗಳನ್ನು ತಿಳಿಸಿದ ಇತಿಹಾಸಜ್ಞ, ಪುತ್ರ ಟಿ.ವಿ. ಬಾನು ಪ್ರಕಾಶ್‌ಗೂ ನನ್ನ ಕೃತಜ್ಞತೆಗಳು.

ದೇವಾಲಯಗಳಿಗೆ ಸಂಬಂಧಿಸಿದಂತೆ ಹಲವಷ್ಟು ವಿಚಾರವನ್ನು ತಿಳಿಸಿದ ಗ್ರಾಮಸ್ಥರು ಮತ್ತು ಅರ್ಚಕರಿಗೆ ನನ್ನ ವಿನಮ್ರ ನಮನಗಳು, ಈ ಹಸ್ತಪ್ರತಿಯನ್ನು ಕಂಪ್ಯೂಟರ್ ಮೂಲಕ ಅಕ್ಷರ ಜೋಡಣೆ ಮಾಡಿಕೊಟ್ಟ ಮಂಡ್ಯದ ಕ್ರಿಯೇಟಿವ್ ಡಿಜಿಟಲ್ ಇಮೇಜ್‌ನ ಮಾಲೀಕರಾದ ದೇಶಹಳ್ಳಿ ದಿಲೀಪ್ ಹಾಗೂ ಸಹಾಯಕಿ ಅನುಶ್ರೀ ಅವರಿಗೂ ನನ್ನ ವಂದನೆಗಳು.

ಓದುಗರ ಅಭಿಪ್ರಾಯವನ್ನು ನಮ್ರತೆಯಿಂದ ಸ್ವೀಕರಿಸುತ್ತೇನೆ. ಅದು ಮುಂದಿನ ಮುದ್ರಣಕ್ಕೆ ನೆರವಾಗುತ್ತದೆ ಎಂದು ಭಾವಿಸುತ್ತೇನೆ.

೨೪-೦೩-೨೦೧೦
ಶ್ರೀರಾಮನವಮಿ
ಮಂಡ್ಯ

– ತೈಲೂರು ವೆಂಕಟಕೃಷ್ಣ

# ಅಧ್ಯಕ್ಷರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಜನಪ್ರಿಯ ಸಾಹಿತ್ಯ ಪ್ರಕಾರಗಳನ್ನು ಹೊರತುಪಡಿಸಿ, ಅಪರೂಪದ ಶಾಸ್ತ್ರಸಂಬಂಧವಾದ ಹಾಗೂ ಆರೋಗ್ಯ, ವಿಜ್ಞಾನ, ಸಮಾಜಶಾಸ್ತ್ರಕ್ಕೆ ಸಂಬಂಧಿಸಿದಂತಹ ಕೃತಿಗಳನ್ನು ಸುಲಭದರದಲ್ಲಿ ಪ್ರಕಟಿಸಿ ಕನ್ನಡಿಗರಿಗೆ ಮುಟ್ಟಿಸುವ ಪ್ರಯತ್ನವನ್ನು ಮಾಡುತ್ತಿದೆ. ಒಂದು ಪ್ರದೇಶವನ್ನು ನಿರ್ದಿಷ್ಟವಾಗಿ ಗುರುತಿಸಿ, ಆ ಭಾಗದ ದೇವಾಲಯಗಳ ಬಗ್ಗೆ ಒಂದು ಸಮೀಕ್ಷೆಯನ್ನು ಹೊರತರಬೇಕೆಂಬ ಆಶಯದಿಂದ ಮೊದಲನೆಯದಾಗಿ ಮಂಡ್ಯ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡು ಅಲ್ಲಿನ ದೇವಾಲಯಗಳ ಸಮೀಕ್ಷೆ ಕಾರ್ಯವನ್ನು ಇಲ್ಲಿ ಕೈಗೊಳ್ಳಲಾಗಿದೆ.

ಶ್ರೀ ತೈಲೂರು ವೆಂಕಟಕೃಷ್ಣರವರು ವಿದ್ವಾಂಸರು, ಮಂಡ್ಯ ಜಿಲ್ಲೆಯ ಪ್ರತಿ ಅಂಗುಲ ಅಂಗಲದ ಪರಿಚಯ ಇರತಕ್ಕವರು. ಅವರ ಈ ಕೃತಿ 'ಮಂಡ್ಯ ಜಿಲ್ಲೆಯ ದೇವಾಲಯಗಳು : ಒಂದು ಸಮೀಕ್ಷೆ' ಒಂದು ಅಪರೂಪದ ಕೃತಿ. ಮಂಡ್ಯ ಜಿಲ್ಲೆಯ ಪ್ರತಿಯೊಂದು ಸಣ್ಣ, ದೊಡ್ಡ ದೇವಾಲಯವನ್ನು ಸಂದರ್ಶಿಸಿ ಅದರ ಸೂಕ್ಷ್ಮತೆಗಳನ್ನು ಅರ್ಥೈಸಿಕೊಂಡು ಬಹಳ ಸಮರ್ಥವಾಗಿ ವೈಜ್ಞಾನಿಕವಾಗಿ ನಿರೂಪಿಸಿದ್ದಾರೆ. ಮಂಡ್ಯ ಜಿಲ್ಲೆಯ ದೇವಸ್ಥಾನಗಳನ್ನು ನಾಲ್ಕು ಕಾಲಘಟ್ಟಗಳಲ್ಲಿ ಗುರುತಿಸಿ, ಅವುಗಳ ವಿಶ್ಲೇಷಣೆ ಮಾಡಿರುವುದು ಮೆಚ್ಚತಕ್ಕದ್ದಾಗಿದೆ. ಇಲ್ಲಿ ಕೇವಲ ದೇವಾಲಯಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಿದೆ, ಅಗತ್ಯ ಇದ್ದಲ್ಲಿ ಅಲ್ಲಲ್ಲಿ ಅಲ್ಲಿನ ಸಾಂಪ್ರದಾಯಿಕ ಪದ್ಧತಿ, ನಂಬಿಕೆಗಳನ್ನು ಮಿತವಾಗಿ ಉಲ್ಲೇಖಿಸಿ, ಪುಸ್ತಕದ ಮೌಲ್ಯ ಹೆಚ್ಚಾಗುವಂತೆ ಮಾಡಿದ್ದಾರೆ. ಈ ಪುಸ್ತಕವನ್ನು ಪ್ರಕಟಿಸಲು ಅನುಮತಿ ನೀಡಿದ ಲೇಖಕರಿಗೆ ಕೃತಜ್ಞತೆಗಳು.

ಈ ಕೃತಿಯನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಅಶೋಕ ಎನ್. ಚಲವಾದಿ, ನನ್ನ ಆಪ್ತ ಕಾರ್ಯದರ್ಶಿ ಶ್ರೀ ಕೆ. ಮುಕುಂದನ್, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಕೃತಿಯನ್ನು ಕನ್ನಡ ಸಾಹಿತ್ಯ ವಲಯ ತುಂಬು ಹೃದಯದಿಂದ ಸ್ವಾಗತಿಸುತ್ತದೆ ಎಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಮಂಡ್ಯ ಜಿಲ್ಲೆಯ ದೇವಾಲಯಗಳು : ಒಂದು ಸಮೀಕ್ಷೆ

'ಸ್ವಸ್ಥ ದೇಹದಲ್ಲಿ ಸ್ವಸ್ಥ ಮನಸ್ಸು' ಎಂಬ ಮಾತಿದೆ. ಅಂತೆಯೇ 'ದೇಹೋ ದೇವಾಲಯಃ ಪ್ರೋಕ್ತಾಃ ಜೀವೋ ದೇವಸ್ಸನಾತನಃ' ಎಂಬ ಈ ಉಕ್ತಿಯು ಮನುಷ್ಯನ ದೇಹದಲ್ಲಿ ನೆಲೆಸಿರುವ ಪರಮಾತ್ಮನ ಬಗ್ಗೆ ಹೇಳುತ್ತದೆ. "ಪರಮಾತ್ಮನಿರುವ ಲೋಕವನ್ನು ಸೂರ್ಯನಾಗಲೀ, ಚಂದ್ರನಾಗಲೀ, ಅಗ್ನಿಯಾಗಲೀ, ಬೆಳಗುವುದಿಲ್ಲ. ಸ್ವಯಂ ಪ್ರಕಾಶವಿರುವ ಸೂರ್ಯಚಂದ್ರಾದಿಗಳಿಗೂ ದೂರವಿರುವ ಲೋಕವದು. ಅದುವೇ ದೇವರ ನಿವಾಸ ಸ್ಥಳ" ಎಂಬುದನ್ನು ಭಗವದ್ಗೀತೆಯಲ್ಲಿ ಹೇಳಲಾಗಿದೆ. "ಈಶಾವಾಸ್ಯಮಿದಂ ಸರ್ವಂ...." ಜಗತ್ತಿನಲ್ಲಿ ಎಲ್ಲಾ ಜೀವವೂ ಈಶ್ವರನಿಂದ ತುಂಬಿದೆ ಎಂಬುದು ಉಪನಿಷತ್ತಿನ ಸಾರವಾಗಿದೆ. ಹೀಗೆ ನಿಗಮಕ್ಕೆ ಸಿಲುಕದ ಸರ್ವಾಂತರ್ಯಾಮಿಗೆ ಭೂಮಿಯಲ್ಲಿ ದೇವಾಲಯಗಳು ಅವತರಿಸಿದವು.

ದೇವಾಲಯವು ಪರಬ್ರಹ್ಮ ಸ್ವರೂಪವಾದ ಭಗವಂತನ ಸ್ವರೂಪವೆಂದು ತಿಳಿದು ಆತನ ಪ್ರತಿನಿಧಿ ವಿಗ್ರಹವನ್ನು ಪ್ರತಿಷ್ಠಾಪಿಸಿ ಪೂಜಿಸಬೇಕೆನ್ನುವುದು ದೇವಾಲಯದ ಬಗ್ಗೆ ಇರುವ ವೇದಾಂತ ತತ್ತ್ವ ದೇವಾಲಯದ ಇತರ ಭಾಗಗಳೆಲ್ಲ ಭಗವಂತನ ಅವಯುವಗಳೆಂದೂ ಅದೇ ರೀತಿಯುಲ್ಲಿ ದೇವಾಲಯುದ ಅರ್ಧಮಂಟಪ, ನೃತ್ತಮಂಟಪ, ಪ್ರಾಕಾರ, ಶಿಖರ, ಗೋಪುರಗಳು ಭಗವಂತನ ಅಂಗಾಂಗಗಳೆಂದು ಭಾವಿಸಬೇಕು ಎನ್ನುತ್ತದೆ ವೇದಾಂತ. ಕೃತಯುಗ, ತ್ರೇತಾಯುಗ, ದ್ವಾಪರಂಯುಗದಲ್ಲಿ ಮನುಷ್ಯರು ತಮ್ಮ ತಪೋಬಲದಿಂದಲೋ, ಮನೋಬಲದಿಂದಲೋ ದೇವತೆಗಳನ್ನು ಸಾಕ್ಷಾತ್ಕಾರಗೊಳಿಸಿಕೊಳ್ಳುತ್ತಿದ್ದರು. ನಂತರ ಕಲಿಯುಗದಲ್ಲಿ ದೇವತೆಗಳು ಮನುಷ್ಯರ ಕಣ್ಣಿಗೆ ಅಗೋಚರವಾಗಿರುವುದರಿಂದ ದೇವತೆಗಳ ದರ್ಶನ, ಪೂಜೆ ಎಲ್ಲವೂ ದೇವತಾ ಪ್ರಾತಿನಿಧ್ಯವನ್ನು ಹೊಂದಿದ

ವಿಗ್ರಹವನ್ನೇ ಅವಲಂಬಿಸಿತು. ಮೂಲತಃ ನದಿತೀರ, ಪರ್ವತ ಪ್ರದೇಶ, ಅರಣ್ಯ ಪ್ರದೇಶ, ನಿರ್ಜನ ತಾಣ, ಉದ್ಯಾನವನ ಇತ್ಯಾದಿ ಪ್ರಾಕೃತಿಕ ಸೊಬಗಿನಿಂದ ಕೂಡಿದ ಪ್ರದೇಶದಲ್ಲಿ ಭಗವಂತನ ಸಾನ್ನಿಧ್ಯವನ್ನು ಬಯಸುವುದು ವೇದಾಂತ ತತ್ವವೇ ಆಗಿದೆ. ಮುಂದೆ ಅದೇ ವೇದಾಂತವು ಗ್ರಾಮ ನಗರಗಳಲ್ಲಿ ಆಲಯಗಳನ್ನು ನಿರ್ಮಿಸಿ ಭಗವಂತನ ಪ್ರತಿನಿಧಿ ವಿಗ್ರಹವನ್ನು ಪ್ರತಿಷ್ಠಾಪಿಸಿ ಪೂಜಿಸುವುದು ಲೋಕ ಕಲ್ಯಾಣಕ್ಕಾಗಿ ಎನ್ನುತ್ತದೆ. ಒಟ್ಟಿನಲ್ಲಿ ಮನುಷ್ಯನಿಗೆ ನಿರ್ಮಲವಾದ ಮನಸ್ಸನ್ನು ಪ್ರೇರೇಪಿಸಿ, ಪವಿತ್ರ ವಾತಾವರಣವನ್ನು ಸೃಷ್ಟಿಸುವುದು ದೇವಾಲಯಗಳ ಮುಖ್ಯ ಉದ್ದೇಶವಾಗಿದೆ.

ಹೀಗೆ ಹುಟ್ಟಿಕೊಂಡ ದೇವಾಲಯಗಳ ಕಲ್ಪನೆ, ರಚನೆ, ಸಿದ್ಧಾಂತ ವಿವಿಧ ಹಂತದಲ್ಲಿ ಬೆಳೆದು ಅವು ನಾಡಿನ ಧಾರ್ಮಿಕ ಕೇಂದ್ರಗಳಾದವು. ಜನರ ಆಧ್ಯಾತ್ಮಿಕ ಭಾವದೊಂದಿಗೆ ದೇವಾಲಯಗಳು ನಿರ್ಮಾಣಗೊಂಡು ಆಯಾ ಕಾಲದಲ್ಲಿನ ಪ್ರದೇಶದ ಸಂಸ್ಕೃತಿ, ಧರ್ಮ, ನಾಗರೀಕತೆ, ತತ್ವಶಾಸ್ತ್ರಕ್ಕೆ ಕೈಗನ್ನಡಿಯಾದವು. ವಾಸ್ತುಶಿಲ್ಪ, (ಕಟ್ಟಡಗಳ ನಿರ್ಮಾಣ ಕಲೆ) ಮೂರ್ತಿಶಿಲ್ಪ, ಚಿತ್ರಕಲೆ, ಸಂಗೀತ, ನೃತ್ಯ ಕಲೆಗಳ ಭಂಡಾರವೇ ಮೈವೆತ್ತಂತೆ ಹೊಸರೂಪ ತಾಳಿದವು. ವಿದ್ಯಾರ್ಜನೆಯ ಕೇಂದ್ರಗಳಾದವು. ಹೀಗೆ ಬೇರೆ ಬೇರೆ ಧರ್ಮದವರು ತಮಗೆ ತಕ್ಕ ಹಾಗೆ ದೇವಾಲಯಗಳನ್ನು ಕಟ್ಟಿಕೊಂಡರು. ಜೈನರು ಬಸದಿಗಳೆಂದು, ಬೌದ್ಧರು ಚೈತ್ಯಾಲಯಗಳೆಂದು, ಸಿಖ್ಖರು ಗುರುದ್ವಾರಗಳೆಂದು, ಮಹಮದೀಯರು ಮಸೀದಿಗಳೆಂದು, ಕ್ರೈಸ್ತರು ಚರ್ಚುಗಳೆಂದು ಕರೆದುಕೊಂಡರು.

ಒಂದು ದೇಶದ ಹಿರಿಮೆ ಅಲ್ಲಿನ ಕಲೆ, ಸಂಸ್ಕೃತಿಯ ಪರಂಪರೆಯನ್ನು ಅವಲಂಬಿಸಿರುತ್ತದೆ. ಕಲೆ ಮೂಲತಃ ಮಾನಹನ ಸೃಷ್ಟಿ. ಅದು ಪ್ರತಿಭಾನ್ವಿತ ಮಾನವನ ಜೀವನಾನುಭವದ ಅಭಿವ್ಯಕ್ತಿ. ಅದರಲ್ಲಿ ಜನಜೀವನವನ್ನು ಉದಾತ್ತಗೊಳಿಸಬಲ್ಲ ಶಕ್ತಿ ಅಡಗಿದೆ. ಮಾನವ ಸಮಾಜವನ್ನು ಪರಿಷ್ಕರಿಸಿ ವ್ಯಕ್ತಿಮಾನವನನ್ನು ವಿಶ್ವಮಾನವನನ್ನಾಗಿಸುವುದೇ ಕಲೆಯ ಪರಮೋದ್ದೇಶ. ಅದು ಜನಾಂಗದ ಧೀಶಕ್ತಿಯನ್ನು ಸ್ಫುಟಗೊಳಿಸುತ್ತದೆ. ತಾನು ಕಂಡ ನೋಟವನ್ನೋ, ಅದರ ಅಂದ ಚೆಂದವನ್ನೋ, ಕೇಳಿದ ಇಂಪನ್ನೋ, ಗಮನಿಸಿದ ಚಲನೆಯನ್ನೋ, ಹಲವು ವಿಧದ ಭಾವನೆಗಳನ್ನೋ, ಕಲ್ಪನೆಗಳನ್ನೋ ಕಲೆಗಳಿಂದ ಇತರರಿಗೆ ತಿಳಿಸುವುದು ಸಾಧ್ಯವಾಗುತ್ತದೆ. ಅದಕ್ಕಾಗಿಯೇ ಇತಿಹಾಸ ಒಂದು ಜನಾಂಗದ ಜೀವನ ಚರಿತ್ರೆಯಾದರೆ, ಕಲೆ ಎಂಬುದು ಆ ದೇಶದ ಅಥವಾ ಸಮಾಜದ ಆತ್ಮ ಚರಿತ್ರೆಯಾಗುತ್ತದೆ. ನಮ್ಮ ಪ್ರಾಚೀನ ಶಿಲ್ಪಚಿತ್ರಗಳು ಕೇವಲ ಕುರುಡು ಕುರುಡಾಗಿ

ರಚಿತವಾದುವಲ್ಲ. ನಿಯುತ ಸೂತ್ರ, ವಿಧಾನ ಹಾಗೂ ಸಂಪ್ರದಾಯ ಬದ್ಧವಾಗಿರುತ್ತವೆ. ಅದಲ್ಲದೆ ರಾಜಕೀಯ, ಸಾಮಾಜಿಕ, ಧಾರ್ಮಿಕ ಬದಲಾವಣೆಗಳಿಗೆ ತನ್ನದೇ ಆದ ರೀತಿಯಲ್ಲಿ ಕಲೆಯ ವಿಕಾಸಮಾರ್ಗದಲ್ಲಿ ಹಲವು ವೈಶಿಷ್ಟ್ಯ ಲಕ್ಷಣಗಳನ್ನು ಪಡೆದುಕೊಂಡಿವೆ. ಈ ನಿಟ್ಟಿನಲ್ಲಿ ಭಾರತೀಯ ವಾಸ್ತು, ಶಿಲ್ಪ, ಚಿತ್ರ, ಸಂಗೀತ, ನೃತ್ಯ ಇತ್ಯಾದಿ ಲಲಿತಕಲೆಗಳೊಂದಿಗೆ ಪರಂಪರಾಗತವಾಗಿ ನಮ್ಮ ಬದುಕಿನೊಂದಿಗೆ ಬಂದಿರುವ ಜಾನಪದ ಹಾಡು, ಕುಣಿತ, ಕಲೆ ವಿಶ್ವದಲ್ಲಿ ತನ್ನದೇ ಆದ ಒಂದು ಸಾಂಸ್ಕೃತಿಕ ಪ್ರಧಾನಸ್ಥಾನವನ್ನು ಪಡೆದುಕೊಂಡಿದೆ. ಭಾರತದಲ್ಲಿ ಅಜಂತ ಎಲ್ಲೋರದ ಭಿತ್ತಿಚಿತ್ರ ಮತ್ತು ಸಾಂಚಿಯ ಬೌದ್ಧಸ್ತೂಪದ ಮೂಲಕ ಕ್ರಿಪೂ. ೧ನೇ ಶತಮಾನದಿಂದ ಕಲಾಕೃತಿಗಳನ್ನು ಅವಲೋಕಿಸಬಹುದಾದರೂ ಅದರ ಹಿಂದಿನ ಪ್ರಾಚೀನತೆಯ ಅರಿವು ನಮಗಿರಲೇಬೇಕಾಗುತ್ತದೆ. ವೇದ, ರಾಮಾಯಣ, ಮಹಾಭಾರತ, ಭಾಗವತ ಕಾಲಗಳಲ್ಲಿಯೂ ಲಲಿತಕಲೆಗಳ ಅರ್ಥಭಾವಗಳನ್ನು ಕೇಳುತ್ತೇವೆ. ಪುರಾಣಗಳಲ್ಲಿ ಅಮರಾವತಿ, ಹಸ್ತಿನಾವತಿ, ಅಯೋಧ್ಯಾ, ಅವಂತಿ, ಇಂದ್ರ ಪ್ರಸ್ಥ, ಮಥುರಾ, ದ್ವಾರಕಾ, ಲಂಕಾ ಮುಂತಾದ ಪಟ್ಟಣಗಳ ವಾಸ್ತು, ಶಿಲ್ಪ ಇನ್ನಿತರೆ ಲಲಿತಕಲೆಗಳ ವರ್ಣನೆ ಕಣ್ಣಿಗೆ ಕಟ್ಟುವಂತೆ ಸಿಗುತ್ತದೆ. ದೇವತೆಗಳ ಶಿಲ್ಪಿಯಾದ ವಿಶ್ವಕರ್ಮ ಭೂಮಿಯ ಮೇಲೆ ಇಂದ್ರಪ್ರಸ್ಥ, ಲಂಕಾಪಟ್ಟಣವನ್ನು ನಿರ್ಮಾಣಮಾಡಿಕೊಟ್ಟನು. ಸುಂದೋಪಸುಂದರ ವಧೆಗಾಗಿ ಈತನೇ ತಿಲೋತ್ತಮೆಯನ್ನು ನಿರ್ಮಿಸಿದನು. ಕಲಾಸೃಷ್ಟಿಯಲ್ಲಿ ಈತನ ಪರಂಪರೆಯ ಕಥೆ ಮೈನವಿರೇಳಿಸುತ್ತದೆ. ಮುಂದೆ ಶಿಲ್ಪಿಗಳ ಕೈಚಳಕಕ್ಕೆ ಕೃಷ್ಣನ ಲೀಲಾವಿನೋದಗಳು, ಶಿವಲೀಲಾ ತಾಂಡವನೃತ್ಯಗಳು, ವಿಷ್ಣುವಿನ ನಾನಾ ಅವತಾರಗಳು, ರೂಪಗಳು, ರಾಮಪರಿವಾರದ ಶಿಲ್ಪಗಳು, ದೇವಾನುದೇವತೆಗಳ ಶಿಲ್ಪಗಳು ಅವತರಿಸಿದವು. ಇವುಗಳಿಗೆ ಪೂರಕವಾಗುವಂತೆ ದೇವಾಲಯಗಳು ನಿರ್ಮಾಣಗೊಂಡವು.

ಸಂಸ್ಕೃತಿ ಎಂದರೆ ವ್ಯಕ್ತಿಯ ಬುದ್ಧಿ ವಿಕಾಸ ಹಾಗೂ ಮಾನಸಿಕ ಪಕ್ವತೆ. ಅದು ಹೃದಯವನ್ನು ಸಂಸ್ಕರಿಸುವ, ಹೃದಯವನ್ನು ತಟ್ಟುವ, ಸ್ಫೂರ್ತಿಯನ್ನು ನೀಡುವ ಮಹಾಶಕ್ತಿಯುಳ್ಳದ್ದು. ಜೀವನದ ಪ್ರತಿಯೊಂದು ಸನ್ನಿವೇಶದಲ್ಲಿಯೂ ಮನುಷ್ಯನ ಮನೋಭಾವವೂ, ವರ್ತನೆಯೂ ಔಚಿತ್ಯಪೂರ್ಣವಾಗುವಂತೆ ಮಾಡುವ ಪ್ರಯತ್ನವೇ ಸಂಸ್ಕೃತಿ. ಮಾನವ ಜಾತಿಗೆ ಬೇಕಾದ ಉನ್ನತ ಜೀವನ ಮೌಲ್ಯಗಳನ್ನು ಭಾರತೀಯ ಸಂಸ್ಕೃತಿಯು ಜಗತ್ತಿಗೆ ನೀಡಿದೆ. ನೀತಿ, ನಿಯಮ ಹಾಗೂ ಉನ್ನತ ಚಾರಿತ್ರ್ಯಗಳನ್ನು ಎತ್ತಿ ಹಿಡಿಯುವುದು ಭಾರತೀಯ ಸಂಸ್ಕೃತಿ. ದಿವ್ಯತ್ವಕ್ಕೂ, ಸಾಮಾನ್ಯ ಜೀವನಕ್ಕೂ ಸಾಮರಸ್ಯವನ್ನು ಬೆಳೆಸುವುದು ಇದರ ಗುಣ. ಭಾರತೀಯ ಸಂಸ್ಕೃತಿಯ ಬುನಾದಿಯು ಅನ್ವೇಷಣೆ, ಅಧ್ಯಯನ ಮತ್ತು ಪ್ರಯೋಗಗಳ ಫಲವಾಗಿ

ಅಂಕುರಗೊಂಡವು. ಇದರಿಂದ ಉತ್ಪತ್ತಿಯಾದ ಧರ್ಮವು ಒಂದು ವಿಜ್ಞಾನವಾಯಿತು. ಈ ವಿಜ್ಞಾನ ಮತ್ತು ಆತ್ಮವಿಜ್ಞಾನ ರಾಷ್ಟ್ರದ ಲಕ್ಷಣವಾಯಿತು. ಜನಾಂಗದ ಸತ್ವವಾಯಿತು. ಯಾವುದನ್ನು ತಿಳಿಯುವುದರಿಂದ ಉಳಿದೆಲ್ಲವನ್ನು ತಿಳಿಯಬಹುದೋ ಅದನ್ನು ತಿಳಿಯುವಂತೆ ಮಾಡುವ ವಿಜ್ಞಾನವೇ ಅತ್ಯಂತ ಶ್ರೇಷ್ಠವಾದುದು ಎಂದು ನಮ್ಮ ಪ್ರಾಚೀನ ಉಪನಿಷತ್ತುಗಳು ಸಾರುತ್ತವೆ. ಈ ವಿಜ್ಞಾನವು ಚಿಂತನಾ ಜಗತ್ತು ಹಾಗೂ ಭೌತಿಕ ಜಗತ್ತುಗಳಲ್ಲಿ ಕಂಡುಬರುವ ಅಸಂಖ್ಯ ವೈವಿಧ್ಯದ ತಳದಲ್ಲಿರುವ ಆಧ್ಯಾತ್ಮಿಕ ಏಕತೆಯ ತತ್ವವನ್ನು ಸ್ಥಾಪಿಸಿತು.

"ಸಂಸ್ಕೃತಿಯು ಮನಸ್ಸನ್ನು ತಿಕ್ಕಿ ತೊಳೆದು ಶುಚಿ ಮಾಡುವ ಕೆಲಸ" ಎನ್ನುತ್ತಾರೆ ಕವಿ ಡಿ.ವಿ.ಜಿ. ಸಮಾಜ ವಿಜ್ಞಾನಿಗಳ ದೃಷ್ಟಿಯಲ್ಲಿ ಸಂಸ್ಕೃತಿಯು ಒಂದು ಪ್ರದೇಶದ ಜನರ ಮಾನಸಿಕ ಅಥವಾ ನಾಗರಿಕತೆಯ ಬೌದ್ಧಿಕ ಸಾಧನೆ. ಇದು ಒಂದು ಜನಾಂಗದ, ಪ್ರಾಂತ್ಯದ ಜನಜೀವನದ ಹೊರಲಕ್ಷಣಗಳನ್ನು ಸೂಚಿಸುತ್ತದೆ. ಅಂದರೆ ಜನರ ವೇಷಭೂಷಣಗಳು, ಹಬ್ಬಹರಿದಿನಗಳು, ಜಾತ್ರೆ, ಉತ್ಸವ, ಕಲೆ ಮುಂತಾದವುಗಳನ್ನು ಸೂಚಿಸುವ ರೂಪಗಳಾಗುತ್ತವೆ. ಇದು ಒಂದು ಸಮಾಜವನ್ನು ಒಟ್ಟುಗೂಡಿಸುವ ಸಂಸ್ಕೃತಿ. ದಾರ್ಶನಿಕ ಮ್ಯಾತ್ಯೂಅರ್ನಾಲ್ಡನ ಪ್ರಕಾರ "ಬುದ್ಧಿಗೆ ತಿಳುವಳಿಕೆಯನ್ನು ಸಂಪಾದಿಸಿಕೊಡಬೇಕೆಂಬ ಶುದ್ಧ ವಿಜ್ಞಾನಾಕಾಂಕ್ಷೆಯ ಬಲದಿಂದ ಮಾತ್ರವೇ ಅಲ್ಲದೆ; ಜನಕ್ಕೆ ಒಳ್ಳೆಯದನ್ನು ಮಾಡಬೇಕೆಂಬ ಸಮಾಜ ಹಿತಾಕಾಂಕ್ಷೆಯ ಮತ್ತು ಧರ್ಮಾಕಾಂಕ್ಷೆಯ ಬಲದಿಂದಲೂ ಪ್ರೇರಿತವಾಗಿ ನಡೆಯತಕ್ಕದ್ದು ಸಂಸ್ಕೃತಿ". ಹೀಗೆ ಕಲೆ ಮತ್ತು ಸಂಸ್ಕೃತಿಯ ಪರಂಪರೆ ಭಾರತೀಯ ಜನಜೀವನದ ಅವಿಭಾಜ್ಯ ಅಂಗವಾಗಿದೆ. ಇವನ್ನು ಪ್ರಚುರಪಡಿಸಲು ವೇದಾಂತ ವಿಷಯಗಳೊಂದಿಗೆ ನಿರ್ಮಾಣವಾದುದೇ ದೇವಾಲಯಕಲೆ ಹಾಗೂ ದೇವಾಲಯ ಸಂಸ್ಕೃತಿ.

ಕನ್ನಡನಾಡು ಮತ್ತು ಕನ್ನಡಿಗರ ಗುಣಲಕ್ಷಣವನ್ನು ಸಾಮ್ರಾಟಕವಿ ಅಮೋಘವರ್ಷ ನೃಪತುಂಗನು (ಕ್ರಿ.ಶ. ೮೫೦) ತನ್ನ ಕಾವ್ಯದಲ್ಲಿ ಪ್ರತಿಬಿಂಬಿಸಿರುವ ಪ್ರಾಚೀನ ಕರ್ನಾಟಕದ ಭೌಗೋಳಿಕ ಮೇರೆಯನ್ನು ದೃಢಪಡಿಸಿದ್ದಾನೆ.

ಕಾವೇರಿಯಿಂದಮಾ ಗೋ
ದಾವರಿವರ ಮಿರ್ದ ನಾಡದಾ ಕನ್ನಡದೊಳ್
..................................................
..................................................

ಮೇಲಾಗಿ ಈ ನಾಡಿನಲ್ಲಿ ಜನರು ಆಚರಿಸಿದ ತ್ಯಾಗ ಮನೋಭಾವದ ರೀತಿ ನೀತಿಗಳು ನಮ್ಮ ಪ್ರಾಚೀನ ಸಂಸ್ಕೃತಿಯನ್ನು ಎತ್ತಿಹಿಡಿಯುತ್ತವೆ. ಧರ್ಮ

ಮತ್ತು ಮೋಕ್ಷದ ಸಾಧನಭೂಮಿ ಎಂದು ವರ್ಣಿಸಿದೆ. ಹೀಗೆ ಕರ್ನಾಟಕದ ಒಡಲಲ್ಲಿ ಮಾನವ ಸಂಸ್ಕೃತಿಯ ಅತ್ಯಮೂಲ್ಯ ಅಂಶಗಳು ಅಡಗಿವೆ. ಈ ಭೂ ಪ್ರದೇಶವನ್ನು ಆಳಿದ ರಾಜ ಮನೆತನಗಳು ಇತಿಹಾಸ, ಸಂಸ್ಕೃತಿ, ಕಲೆ, ವಾಸ್ತುಶಿಲ್ಪ ಮುಂತಾದವುಗಳಿಗೆ ತಮ್ಮದೇ ಆದ ಕೊಡುಗೆ ನೀಡಿವೆ. ಇಂತಹ ವೈವಿಧ್ಯಮಯ ಪರಂಪರೆಯಲ್ಲಿ ಕರ್ನಾಟಕದ ಪ್ರಾಚೀನ ವಾಸ್ತುಶಿಲ್ಪವನ್ನು ಆಳಿದ ಸಾಮ್ರಾಜ್ಯಗಳಿಗನುಸಾರವಾಗಿ ಐದು ಘಟ್ಟಗಳಾಗಿ ವಿಭಾಗಿಸುವುದುಂಟು.

೧. ಚಾಲುಕ್ಯ ಪೂರ್ವಯುಗ: ಸುಮಾರು ೬ನೇ ಶತಮಾನದವರೆಗಿನ ಕಾಲ.

೨. ಚಾಲುಕ್ಯಯುಗ : ೬ ರಿಂದ ೧೦ನೇ ಶತಮಾನ ಪೂರ್ತಿ ಒಳಪಡುತ್ತದೆ. ಇದರಲ್ಲಿ ರಾಷ್ಟ್ರಕೂಟರ ಕಾಲವೂ ಮಿಳಿತವಾಗಿದೆ.

೩. ಕಲ್ಯಾಣದ ಚಾಲುಕ್ಯ ಯುಗ : ೧೦-೧೨ನೇ ಶತಮಾನ.

೪. ಹೊಯ್ಸಳ ಯುಗ : ೧೧ ರಿಂದ ೧೪ನೇ ಶತಮಾನದವರೆಗೆ.

೫. ವಿಜಯನಗರ ಕಾಲ : ೧೪ನೇ ಶತಮಾನ ಮತ್ತು ನಂತರ.

ಮುಂದೆ ಕರ್ನಾಟಕದ ಮೇಲೆ ಇಸ್ಲಾಂ ಆಡಳಿತದ ಪ್ರಭಾವದಿಂದಾಗಿ ಮುಸ್ಲಿಂ ಶೈಲಿ ಗರಿಗೆದರಿತು. ಪ್ರಾಚೀನ ದೇವಾಲಯಗಳಲ್ಲಿ ಮೂರು ಸೃಷ್ಟಿ ಶೈಲಿಗಳನ್ನು ಕಾಣುತ್ತೇವೆ. ಶಿಲ್ಪಗ್ರಂಥಗಳ ಆಧಾರದಿಂದ ಈ ಶೈಲಿಗಳಿಗೆ 'ನಾಗರ, ದ್ರಾವಿಡ ಮತ್ತು ವೇಸರ' ಎಂಬ ನಾಮಾಂಕಿತಗಳಿವೆ. ಇವುಗಳ ಪಾರಿಭಾಷಿಕ ವಿವರಣೆ ಶಿಲ್ಪಶಾಸ್ತ್ರಗಳಲ್ಲಿ ಸುದೀರ್ಘವಾಗಿ ಬರುತ್ತದೆ. ನಾಗರ ಮತ್ತು ದ್ರಾವಿಡ ಶೈಲಿಗಳೆರಡರಲ್ಲೂ ದೇವಾಲಯಗಳ ಮೇಲೆ ಶಿಖರಗಳಿರುತ್ತವೆ. ವೇಸರ ಶೈಲಿಯ ದೇವಾಲಯಗಳಲ್ಲಿ ಶಿಖರವಿಲ್ಲದೆ ಮಟ್ಟಸವಾದ ಮೇಲ್ಹೊವಣೆ ಮಾತ್ರ ಇರುತ್ತದೆ. ನಾಗರಶೈಲಿಯಲ್ಲಿ ಪ್ರಮುಖವಾಗಿ ಕಾಣುವ ಮುಖ್ಯ ಅಂಶವೆಂದರೆ, ಬಾಗಿದ ರೇಖೆಯ ಆಕಾರದ ಶಿಖರ ಮತ್ತು ಅದರ ಮೇಲೆ ಶೃಂಗದ ಸಂಕೇತಗಳನ್ನುಳ್ಳ ಕಳಶ. ಇದು ಉತ್ತರ ಭಾರತದ ವಾಸ್ತುಶಿಲ್ಪ, ಆದ್ದರಿಂದ ಇದನ್ನು ಔತ್ತರೇಯ ರೀತಿಯ ಶಿಖರ ಎಂದು ಕರೆಯಲಾಗುತ್ತದೆ. ಭುವನೇಶ್ವರ, ಕೋನಾರ್ಕ್, ಪುರಿ ಇತ್ಯಾದಿ ಕಡೆಗಳಲ್ಲಿ ಈ ಮಾದರಿಗಳನ್ನು ಕಾಣಬಹುದು. ವಿಶೇಷ ರೀತಿಯ ಮತ್ತೊಂದು ದ್ರಾವಿಡ ಶೈಲಿಯ ಶಿಖರಗಳು ಮೆಟ್ಟಲು ಮೆಟ್ಟಿಲುಗಳಂತೆ ಮೇಲೇರಿ ಕ್ರಮೇಣ ಕಿರಿದಾಗುತ್ತ ಹೋಗುತ್ತದೆ. ಇದೇ ಕದಂಬ ಶೈಲಿ. ಚಾಲುಕ್ಯರಿಗಿಂತ ಹಿಂದೆ ನಿರ್ಮಿತವಾದ ಪ್ರಾಚೀನ ದೇವಾಲಯಗಳನ್ನು 'ಕದಂಬ ಶೈಲಿ' ಎಂದು ಕರೆಯಬಹುದಾಗಿದೆ. ಕದಂಬ ಶೈಲಿಯ ಅತಿ ಪ್ರಾಚೀನ ದೇವಾಲಯವೆಂದರೆ ಹಲಸಿ ಅಥವಾ ಪಲಸಿಕೆ ಎಂಬಲ್ಲಿರುವ ಜೈನಬಸ್ತಿ. ಅದೇ ರೀತಿ ತಾಳಗುಂದದ ಪ್ರಣವೇಶ್ವರ,

ಬನವಾಸಿಯ ಬಾಣಲಿಂಗೇಶ್ವರ, ಗುಡ್ನಾಪುರದ ಕಾಮಜಿನಾಲಯಗಳು ಕದಂಬ ಕಾಲದ ಪ್ರಮುಖ ರಚನೆಗಳಾಗಿದ್ದು ನಂತರದಲ್ಲಿ ಸಾಕಷ್ಟು ಜೀರ್ಣೋದ್ಧಾರ –ಗೊಂಡಿವೆ. ಈ ಶೈಲಿಯ ಬೆಳವಣಿಗೆಯನ್ನು ಐಹೊಳೆ, ಪಟ್ಟದಕಲ್ಲುಗಳಲ್ಲಿ ಕಾಣಬಹುದಾಗಿದೆ. ಇವೆರಡು ಶೈಲಿಗಳ ಸಮ್ಮಿಲನವೇ 'ಚಾಲುಕ್ಯಶೈಲಿ' ಎಂದು ಕರೆಯಲಾಗಿದೆ.

ಉತ್ತರ ಭಾರತದಲ್ಲಿ ಕಂಡುಬರುವ ಮೌರ್ಯರ ಕಾಲದ ಕ್ರಿಸ್ತಪೂರ್ವ ಸ್ತಂಬಗಳು ಪ್ರಾಚೀನ ಶಿಲ್ಪಕಲೆಗೆ ಸಾಕ್ಷಿಯಾಗಿ ನಿಂತಿವೆ. ಕ್ರಿಸ್ತಪೂರ್ವದ ಮತ್ತು ನಂತರದ ಆದಿಭಾಗದಲ್ಲಿ ವಾಸ್ತುಶಿಲ್ಪ ಅಥವಾ ಕಟ್ಟಡದ ಕೆಲಸಗಳಿಗೆ ಮರಮಟ್ಟುಗಳೇ ಪ್ರಧಾನವಾಗಿತ್ತೆಂದು ಹೇಳಬಹುದು. ಉದಾಹರಣೆಗೆ ಮೌರ್ಯರ ಕಾಲದ ಕೋಟೆಕೊತ್ತಲುಗಳು ಮಾತ್ರವಲ್ಲದೆ ಕಟ್ಟಡದ ಕೆಲಸಗಳಲ್ಲಿ ಮರದಿಂದ ಮಾಡಿದ ಕುಸುರಿ ಕೆತ್ತನೆಗಳು ಇದಕ್ಕೆ ಸಾಕ್ಷಿಯಾಗಿವೆ. ಅಶೋಕನ ಕಾಲದಲ್ಲಿ ನಿರ್ಮಾಣವಾದ ಶಿಲಾಸ್ತಂಬಗಳು, ಸ್ತೂಪಗಳು, ಶಾಸನಗಳು, ಬಂಡೆಯಲ್ಲಿ ಕೊರೆದು ಮಾಡಿದ ಗುಹೆಗಳನ್ನು ಅವಲೋಕಿಸಿದಾಗ ಕಲ್ಲಿನ ಬಳಕೆಯೂ ಪ್ರಾರಂಭವಾಯಿತು ಎನ್ನಬಹುದಾಗಿದೆ. ಮೌರ್ಯರ ನಂತರ ಭಾರತದ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿ ಸುಂಗರು, ದಕ್ಷಿಣದಲ್ಲಿ ಶಾತವಾಹನರು ಆಳಿದ ಕಾಲದಲ್ಲಿ ಬೌದ್ಧವಿಹಾರಗಳು ಗಮನಾರ್ಹವಾದ ಬದಲಾವಣೆಯನ್ನು ಪಡೆದುಕೊಂಡವು. ಅಶೋಕನ ಸಾಂಚಿಯ ಸ್ತೂಪ ತನ್ನ ಹಳೆಯ ರೂಪವನ್ನು ಕಳೆದುಕೊಂಡು ಹೊಸತನದಲ್ಲಿ ವಿಸ್ತಾರವಾಗಿ ನಿರ್ಮಾಣಗೊಂಡಿತು.

ಕ್ರಿ.ಶ. ೧ನೇ ಶತಮಾನದಿಂದ ೨ನೇ ಶತಮಾನದವರೆಗೆ ಆಳಿದ ಕುಶಾನರು ಭಾರತದ ಧರ್ಮ, ಸಾಹಿತ್ಯ, ಕಲೆ, ವಾಸ್ತುಶಿಲ್ಪದಲ್ಲಿ ಗಮನಾರ್ಹವಾದ ಬದಲಾವಣೆ ತಂದರು. ಇವರ ಕಾಲಕ್ಕೆ ವಾಯವ್ಯ ಭಾರತದಲ್ಲಿ ಹುಟ್ಟಿಕೊಂಡ ಗಾಂಧಾರ ಕಲಾಶೈಲಿ ಬೆಳವಣಿಗೆ ಜನಮನ್ನಣೆ ಪಡೆಯಿತು. ನಂತರದಲ್ಲಿ ಗಂಗಾನದಿ ಕಣಿವೆಯಲ್ಲಿ ಮಥುರಾ ಶೈಲಿಯೂ, ಆಂಧ್ರ ಭಾಗದಲ್ಲಿ ಅಮರಾವತಿ ಶೈಲಿಯೂ ಪ್ರವರ್ಧಮಾನಕ್ಕೆ ಬಂದವು. ವಿಶೇಷವಾಗಿ ೪ನೇ ಶತಮಾನದಿಂದ ೬ನೇ ಶತಮಾನದವರೆಗಿನ ಗುಪ್ತರ ಆಡಳಿತ ಯುಗವನ್ನು ಸುವರ್ಣಯುಗವೆಂದೇ ಕರೆಯಲಾಗಿದೆ. ಇವರ ಕಾಲದಲ್ಲಿ ಕಲೆ, ವಾಸ್ತುಶಿಲ್ಪ, ವರ್ಣಚಿತ್ರಕಲೆ ಗಮನಾರ್ಹವಾದ ಬೆಳವಣಿಗೆಯನ್ನು ಕಂಡಿತು. ರಜಪೂತರ ಕಲಾಮಾಧ್ಯಮದ ಕೊಡುಗೆಗಳು ದೇಶದ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ನಿಂತವು. ಅಜಂತಾ, ಎಲ್ಲೋರ, ಖಜುರಾಹೊ, ಕೋನಾರ್ಕ್, ಸೋಮನಾಥ ದೇವಾಲಯಗಳು ನಮ್ಮ ಸಂಸ್ಕೃತಿಯ ಪ್ರತೀಕವಾಗಿವೆ.

ಇನ್ನು ದಕ್ಷಿಣಭಾರತದಲ್ಲಿ ಆಡಳಿತ ನಡೆಸಿದ ಶಾತವಾಹನರು, ಕಂದಬರು, ಪಲ್ಲವರು, ಗಂಗರು, ಚೋಳರು, ಚಾಲುಕ್ಯರು, ಪಾಂಡ್ಯರು, ಹೊಯ್ಸಳರು, ವಿಜಯನಗರದ ಅರಸರು ಮುಂತಾದ ರಾಜವಂಶದವರು, ಮಾಂಡಳಿಕರು, ಆಳಿದ ಸಾಮ್ರಾಜ್ಯದ ಭವ್ಯತೆಯನ್ನು ದೇವಾಲಯಗಳ ನಿರ್ಮಾಣದ ಮೂಲಕ ತೋರ್ಪಡಿಸಿದ್ದಾರೆ. ಮಹಾಬಲಿಪುರಂ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಬನವಾಸಿ, ಕಂಚಿ, ಮಧುರೈ, ತಂಜಾವೂರು, ತಿರುವನಂತಪುರ, ಶ್ರವಣ ಬೆಳಗೊಳ, ಹಳೇಬೀಡು, ಬೇಲೂರು, ಸೋಮನಾಥಪುರ, ಹಂಪಿ, ಶ್ರೀರಂಗಂ, ಶ್ರೀರಂಗಪಟ್ಟಣ, ನಂಜನಗೂಡು ಹೀಗೆ ಅನೇಕಾನೇಕ ದೇವಾಲಯಗಳನ್ನು ಕಾಣಬಹುದಾಗಿದೆ ಹಾಗೂ ಅವುಗಳ ವೈಶಿಷ್ಟ್ಯವನ್ನು ತಿಳಿಯಬಹುದಾಗಿದೆ.

ದೇವಾಲಯದ ವಿಮಾನ ಮತ್ತು ಗೋಪುರಗಳು ಎಷ್ಟು ದೂರದವರೆಗೆ ದೃಷ್ಟಿಗೆ ಕಾಣಸಿಗುವುದೋ ಅಲ್ಲಿಯವರೆಗಿನ ಭೂಭಾಗವು ಪುಣ್ಯಕ್ಷೇತ್ರವಾಗಿರುತ್ತದೆ ಎಂಬ ನಂಬಿಕೆಯೂ ಗೋಪುರದ ಎತ್ತರದ ರಚನೆಗೆ ಆಧಾರವಾಗಿದೆ. ಈ ಭೂಭಾಗವು ಹಸಿರಿನಿಂದ ಅಥವಾ ಫಲವತ್ತತೆಯಿಂದ ಕೂಡಿರಬೇಕು ಎಂಬ ನಂಬಿಕೆಯೂ ಇದೆ. ವಿಮಾನವೆಂದರೆ ಗರ್ಭಗುಡಿಯ ಕಂಠ, ಶಿಖರ ಮತ್ತು ಸ್ತೂಪೀ ಈ ಮೂರು ಭಾಗಗಳು ಸೇರಿ ವಿಮಾನ ಎಂದು ಹೆಸರಾಗಿದೆ. ಒಟ್ಟು ದೇವಾಲಯದ ರಚನೆಯನ್ನು ಸೂಕ್ಷ್ಮ ರೀತಿಯಲ್ಲಿ ಹೇಳಬಹುದಾದರೆ ೧. ಗರ್ಭಗೃಹ ೨. ಅರ್ಧಮಂಟಪ (ಸುಖನಾಸಿ) ೩. ನೃತ್ತಮಂಟಪ (ನವರಂಗ) ೪. ಮುಖಮಂಟಪ ೫. ಧ್ವಜಸ್ತಂಭ ೬. ಬಲಿಪೀಠ ೭. ಪ್ರಾಕಾರ ೮. ಪ್ರಾಕಾರದ ಮಂಟಪಗಳು ೯. ಗೋಪುರ ೧೦. ದೀಪಸ್ತಂಭ ೧೧. ಪುಷ್ಕರಣಿ ೧೨. ಉಪವನ–ಇವಿಷ್ಟು ಒಂದು ಆಲಯದ ಅಂಗಾಂಗಗಳು. ಗರ್ಭಗೃಹವು ದೇವರ ಶಿಲ್ಪವನ್ನು ಹೊಂದಿ ಪೂಜಿಸಲ್ಪಡುವ ಮೂಲಸ್ಥಾನವಾಗಿದೆ.

'ಭಾರತ ಜನನಿಯ ತನುಜಾತೆ' ಎಂದು ಕರ್ನಾಟಕವನ್ನು ಉಲ್ಲೇಖಿಸುವ ಕವಿ ಕುವೆಂಪು ಅವರ ಪೂರ್ಣದೃಷ್ಟಿಯಲ್ಲಿ ಭರತಖಂಡದ ಸಮಗ್ರ ಸಂಸ್ಕೃತಿಯ ನೆಲೆಗಟ್ಟು ವ್ಯಕ್ತವಾಗುತ್ತದೆ. ಅಂತೆಯೇ ಇದಕ್ಕೆ ಕರ್ನಾಟಕದಲ್ಲಿರುವ ಮಂಡ್ಯ ಜಿಲ್ಲೆಯೂ ಹೊರತಾಗಿಲ್ಲ. ಏಕತೆಯಲ್ಲಿ ವೈವಿಧ್ಯತೆಯಿರುವುದು ಈ ದೇಶದ ವಿಶಿಷ್ಟತೆಯಾಗಿದ್ದು ಅದನ್ನು ಮಂಡ್ಯ ಜಿಲ್ಲೆಯಲ್ಲೂ ನಾವು ಕಾಣಬಹುದು.

ಮಂಡ್ಯ, ಮದ್ದೂರು, ಮಳವಳ್ಳಿ, ಶ್ರೀರಂಗಪಟ್ಟಣ, ಪಾಂಡವಪುರ, ಕೃಷ್ಣರಾಜಪೇಟೆ, ನಾಗಮಂಗಲ ಎಂಬ ಏಳು ತಾಲ್ಲೂಕುಗಳಿಂದ ಕೂಡಿ ಮಂಡ್ಯಜಿಲ್ಲೆ (೧೯೩೯) ರಚನೆಗೊಂಡಿದೆ. ಸುಮಾರು ಒಂದೂವರೆ ಸಾವಿರದಷ್ಟು ಹಳ್ಳಿಗಳಿವೆ.

ಮುಖ್ಯ ಕಸುಬು ಕೃಷಿ ಮತ್ತು ಪಶುಪಾಲನೆ. ಆಧುನಿಕವಾಗಿ ಶಾಲಾ ಕಾಲೇಜುಗಳು ತೆರೆದಿವೆ. ಕನ್ನಂಬಾಡಿ ಮತ್ತು ಹೇಮಾವತಿ ಬೃಹತ್ ಅಣೆಕಟ್ಟುಗಳಿಂದ ನೀರಾವರಿ ಬೇಸಾಯ ನಡೆಯುತ್ತಿದೆ. ಪುರಾಣೋಕ್ತಿಯಲ್ಲಿ ಬರುವಂತೆ ಈ ಪ್ರದೇಶವೂ ದಂಡಕಾರಣ್ಯ, ಮೃಗ ಪಕ್ಷಿಗಳ ಆಶ್ರಯಧಾಮ, ಮಹರ್ಷಿಗಳಾದ ಮಾಂಡವ್ಯ, ಕದಂಬ, ಅಗಸ್ತ್ಯ, ಗೌತಮ, ಭೃಗು, ಕಣ್ವ, ಲಂಭಕರ್ಣರ ತಪೋಭೂಮಿ. ಪವಿತ್ರ ಜೀವಧಾರೆ ಎನಿಸಿದ ಕಾವೇರಿ, ಹೇಮಾವತಿ, ಲೋಕಪಾವನಿ, ಶಿಂಷಾ, ವೀರವೈಷ್ಣವಿ ನದಿಗಳು ಪ್ರಾಚೀನದಿಂದಲೂ ಹರಿದು ಜೀವಸಂಕುಲಕ್ಕೆ ಆಶ್ರಯ ನೀಡಿವೆ. ನದಿದಂಡೆಯಲ್ಲಿ ಪವಿತ್ರ ಕ್ಷೇತ್ರಗಳಿವೆ. ಸಣ್ಣಪುಟ್ಟ ಬೆಟ್ಟಗಳು, ಗುಡ್ಡಗಳು, ಹೆಚ್ಚು ಎತ್ತರವಲ್ಲದ ಗಿರಿಶ್ರೇಣಿಗಳು ಕಾಣಬರುತ್ತವೆ. ಇವುಗಳಲ್ಲಿ ಬಸವನ ಬೆಟ್ಟದ ಸಾಲು, ಹುಲಿಕೆರೆ, ಕರಿಘಟ್ಟದ ಸಾಲು, ಕುಂತಿಬೆಟ್ಟ, ಬೇಬಿಬೆಟ್ಟ, ಬೆಳ್ಳಿಬೆಟ್ಟ, ಹೇಮಗಿರಿ, ನಾರಾಯಣದುರ್ಗ, ಗಜರಾಜಗಿರಿ, ಆಲತಿಗಿರಿ, ಅನಂತಗಿರಿ, ಮೇಲುಕೋಟೆ, ಆದಿಚುಂಚನಗಿರಿ, ಅಂತರವಳ್ಳಿ, ಅರೆತಿಪ್ಪೂರು ಬೆಟ್ಟಗಳು ಪ್ರಾಕೃತಿಕ ಸೌಂದರ್ಯವನ್ನು ಹೆಚ್ಚಿಸಿವೆ. ಇವುಗಳಲ್ಲಿ ಅನೇಕವು ಪುರಾಣ ಕಥೆ ಕಾವ್ಯಗಳಿಗೆ ಐತಿಹ್ಯವಾಗಿವೆ. ಪ್ರಾಗೈತಿಹಾಸಿಕ ಕಾಲದಲ್ಲಿ ಜನವಸತಿ ಇದ್ದ ಕುರುಹುಗಳು ಅಲ್ಲಲ್ಲಿ ಕಾಣಬರುತ್ತವೆ. ಇತಿಹಾಸದ ಕಡೆಗೆ ಇಣುಕಿದಾಗ ಕೆರೆಕಟ್ಟೆಗಳನ್ನು ಕಟ್ಟಿಸಿದ, ಬಾವಿಯನ್ನು ತೋಡಿಸಿದ, ನೆಡುತೋಪುಗಳನ್ನು, ಮಠಮಂದಿರಗಳನ್ನು, ದೇವಾಲಯಗಳನ್ನು ನಿರ್ಮಿಸಿದ, ಸೆರೆಯಲ್ಲಿ ಸಿಲುಕಿದವರನ್ನು ಬಿಡಿಸಿದ, ಅಗ್ರಹಾರಗಳನ್ನು ತೆರೆದ, ಪುಷ್ಕರಣಿ, ಉದ್ಯಾನವನಗಳನ್ನು ನಿರ್ಮಿಸಿದ, ಇನ್ನಿತರ ಸತ್ಕಾರ್ಯಗಳನ್ನು ಕೈಗೊಂಡಿದ್ದಕ್ಕೆ ಸಾಕ್ಷಿಯಾಗಿ ಶಾಸನಾಧಾರಗಳಿವೆ. ಈ ಜಿಲ್ಲೆಯಲ್ಲಿ ವಿವಿಧ ದಾನದತ್ತಿಯ ಸುಮಾರು ಒಂದು ಸಾವಿರ ಶಾಸನಗಳು ಕಾಣಬರುತ್ತವೆ.

ಐತಿಹಾಸಿಕವಾಗಿ ಈ ಜಿಲ್ಲೆಯ ವಾಸ್ತುಶಿಲ್ಪ, ಶಿಲ್ಪಗಳ ಬಗ್ಗೆ ಸ್ಥೂಲವಾಗಿ ಹೇಳಬಹುದಾದರೆ ಪ್ರಾಚೀನ ಗಂಗರ ಆಡಳಿತ ಕಾಲದ ನಾಲ್ಕನೇ ಶತಮಾನದಿಂದ ಹತ್ತನೇ ಶತಮಾನದವರೆಗಿನ ಕುರುಹುಗಳು ವಿಶೇಷವಾಗಿ ಸಪ್ತಮಾತೃಕಾ ಶಿಲ್ಪಗಳು ಕಾಣಬರುತ್ತವೆ. ಹನ್ನೊಂದು ಹನ್ನೆರಡನೇ ಶತಮಾನದಲ್ಲಿ ಈ ಭಾಗವನ್ನು ಆಳಿದ ಚೋಳರ ವಾಸ್ತುಶಿಲ್ಪಗಳು ಮಳವಳ್ಳಿ, ಮದ್ದೂರು, ಶ್ರೀರಂಗಪಟ್ಟಣ ತಾಲ್ಲೂಕುಗಳಲ್ಲಿ ಪ್ರಾಧಾನ್ಯತೆಯನ್ನು ಪಡೆದುಕೊಂಡಿವೆ. ಹನ್ನೆರಡು, ಹದಿಮೂರನೇ ಶತಮಾನದಲ್ಲಿ ಅರಳಿದ ಹೊಯ್ಸಳರ ಶೈಲಿಯು ಕೃಷ್ಣರಾಜಪೇಟೆ ತಾಲ್ಲೂಕನ್ನು ತನ್ನ ತೊಟ್ಟಿಲನ್ನಾಗಿ ಮಾಡಿಕೊಂಡಿದೆ. ವಿಶೇಷವಾಗಿ ಈ ಶೈಲಿ ಜಿಲ್ಲೆಯಲ್ಲಿ ವ್ಯಾಪಕವಾಗಿ ಹರಡಿಕೊಂಡಿದೆ. ಹದಿನಾಲ್ಕು, ಹದಿನೈದು, ಹದಿನಾರನೇ ಶತಮಾನದ ವಿಜಯನಗರದರಸರ ಶೈಲಿಯು ಪಾಂಡವಪುರ ಮತ್ತು ಶ್ರೀರಂಗಪಟ್ಟಣ

ತಾಲ್ಲೂಕಿನಲ್ಲಿ ಎದ್ದು ಕಾಣುತ್ತದೆ. ಹೊಯ್ಸಳ ಮತ್ತು ವಿಜಯನಗರ ಶೈಲಿಯ ಸಮ್ಮಿಶ್ರಣಗಳು ನಾಗಮಂಗಲ, ಶ್ರೀರಂಗಪಟ್ಟಣ, ಮದ್ದೂರು, ಪಾಂಡವಪುರ ತಾಲ್ಲೂಕುಗಳಲ್ಲಿ ವಿಶೇಷವಾಗಿ ಕಾಣಬರುತ್ತವೆ. ಅದರಲ್ಲಿಯೂ ಮೇಲುಕೋಟೆ (ಪಾಂಡವಪುರ ತಾ||) ಯ ದೇವಾಲಯಗಳು, ಮಂಟಪಗಳು ಇದಕ್ಕೆ ಸ್ಪಷ್ಟ ನಿದರ್ಶನವಾಗಿವೆ. ವಿಜಯನಗರದರಸರ ಕಾಲದಲ್ಲಿ ಜಿಲ್ಲೆಯ ಅನೇಕ ದೇವಾಲಯಗಳು ಜೀರ್ಣೋದ್ಧಾರಗೊಂಡಿವೆ. ಕೆಲವೆಡೆ ಚೋಳರ ಶೈಲಿಗೆ ಹೊಯ್ಸಳರ ಜೋಡಣೆಯೂ ಆಗಿದೆ. ಮುಂದೆ ಮೈಸೂರು ಅರಸರ ಕಾಲದಲ್ಲಿ ಹೊಸದೇವಾಲಯಗಳನ್ನು ನಿರ್ಮಿಸುವದಕ್ಕಿಂತಲೂ ಹಿಂದಿನ ದೇವಾಲಯಗಳಿಗೆ ಹಲವಷ್ಟು ಜೋಡಣೆ ಮತ್ತು ಅಭಿವೃದ್ಧಿ ಕಾರ್ಯ ನಡೆದಿದೆ ಎಂದು ಗುರುತಿಸಬಹುದಾಗಿದೆ.

ಈ ವಾಸ್ತುವಿನ್ಯಾಸದ ದೇವಾಲಯಗಳೊಂದಿಗೆ ಜನಪದರ ಭಯ ಭಕ್ತಿಯ ಗುಡಿಗಳು ಹಳ್ಳಿಹಳ್ಳಿಗಳಲ್ಲಿ ವ್ಯಾಪಕವಾಗಿ ಕಾಣಬರುತ್ತವೆ. ಇಲ್ಲಿ ಮಾರಮ್ಮ, ಮಸಣಮ್ಮ, ಮಾಸ್ತಮ್ಮ, ರಾಕಾಸಮ್ಮ, ಪಟ್ಟಲದಮ್ಮ ಮುಂತಾದ ಜನಪದರ ದೇವತೆಗಳೊಂದಿಗೆ ತಿಮ್ಮಪ್ಪ, ಬೋರಪ್ಪ, ಹನುಮಂತ, ವೀರಭದ್ರ ಮುಂತಾದ ಶಿಷ್ಟದೇವರುಗಳ ಹೆಸರುಗಳು ಅವರಿಗೆ ಹೊಂದಾಣಿಕೆಯಾಗುವಂತೆ ಕಾಣಿಸಿಕೊಳ್ಳುತ್ತವೆ. ಇಲ್ಲಿ ವಾಸ್ತುಶಿಲ್ಪ, ಶಿಲ್ಪಶೈಲಿಗಿಂತಲೂ ಆಯಾ ದೇವರುಗಳ ಹೆಸರಿನಲ್ಲಿ ಜರುಗುವ ಹಬ್ಬಹರಿದಿನಗಳು, ನಂಬಿಕೆಗಳು, ಸಂಪ್ರದಾಯಗಳು ಮುಖ್ಯವಾಗಿವೆ. ಕೊಂಡ–ಬಂಡಿ, ಸಿಡಿ, ಶೂಲಬಲಿ, ಬಾಯಿಬೀಗ, ಮಡೆ (ಮಡಕೆಯಲ್ಲಿ ಅನ್ನಬೇಯಿಸಿ, ಮೇಲೆ ಚಿತ್ತಾರಬಿಡಿಸಿ, ಬಾಯಿಗೆ ಹೂ ಹೊಂಬಾಳೆ ಮುಡಿಸುವುದು) ಮುಂತಾದ ಕೈಂಕರ್ಯಗಳು ಹೆಚ್ಚಾಗಿರುತ್ತವೆ. ಇವುಗಳ ಅಧ್ಯಯನವೇ ಜನಪದರ ಜೀವನದ ವಿಶ್ವಕೋಶದಂತಿದೆ. ಇಲ್ಲಿಯೂ ಹಲವಾರು ಗುಡಿಗಳಲ್ಲಿ ಕಾಣಬರುವ ಕಂಬ, ಬೋಧಿಗೆ, ಭಾವಣಿಗಳ ಆಧಾರದ ಮೇಲೆ ಕೆಲ ಶೈಲಿಯನ್ನು, ಅದರಲ್ಲಿಯೂ ಪಾಳೇಗಾರರ ಕಾಲದ್ದನ್ನು ಗುರುತಿಸಬಹುದಾಗಿದೆ. (ಇತ್ತೀಚಿಗೆ ಹಲವೆಡೆ ಇಂಥವುಗಳನ್ನು ಭದ್ರಪಡಿಸುವ ಗೋಜಿಗೆ ಹೋಗದೆ, ಉಳಿಸಿಕೊಳ್ಳುವ ಪ್ರಯತ್ನವನ್ನೂ ಮಾಡದೆ ಉರುಳಿಸಿ ಅದೇ ಜಾಗದಲ್ಲಿ ಸಾದಾಸೀದಾ ಕಾಂಕ್ರಿಟ್ ಕಟ್ಟಡವನ್ನು ಕಟ್ಟುತ್ತಿರುವುದು ಪಾರಂಪರಿಕ ಕಲೆಗೆ ಧಕ್ಕೆ ಮಾಡುತ್ತಿದೆ.) ಹಲವೆಡೆ ಸಸ್ಯ, ಹುತ್ತ, ನಾಲ್ಕು ಕಾಲಿನ ಬಯಲು ಮಂಟಪವೇ ಗುಡಿಯಾಗಿರುತ್ತದೆ. ಹೀಗೆ ಜಿಲ್ಲೆಯಲ್ಲಿ ಒಟ್ಟಾರೆ ಸಾವಿರಾರು ಗುಡಿಗಳು ಕಾಣಬರುತ್ತವೆ. ಜಿಲ್ಲಾ ಆಡಳಿತದ ಮುಜರಾಯಿ ಇಲಾಖೆಗೆ ಒಳಪಟ್ಟ ಗುಡಿ, ದೇವಾಲಯಗಳ ಸಂಖ್ಯೆಯೇ ಸರಿಸುಮಾರು ಎರಡುಸಾವಿರದಷ್ಟಿವೆ.

ಮಂಡ್ಯ ಜಿಲ್ಲೆಯ ದೇವಾಲಯಗಳ ವಾಸ್ತುಶಿಲ್ಪ ಮತ್ತು ಶಿಲ್ಪಕಲೆಗಳನ್ನು ಅವಲೋಕಿಸಲು ಸುಲಭಸಾಧ್ಯವಾಗಲು ನಾಲ್ಕು ವಿಭಾಗಗಳಾಗಿ ವಿಂಗಡಿಸ-ಬಹುದಾಗಿದೆ.

೧. ಗಂಗರ ಕಾಲ (ಕ್ರಿ.ಶ. ೩೨೫ ರಿಂದ ೧೦೦೪)

೨. ಚೋಳರ ಕಾಲ (ಕ್ರಿ.ಶ. ೧೦೦೪ ರಿಂದ ೧೧೧೬)

೩. ಹೊಯ್ಸಳ ಕಾಲ (ಕ್ರಿ.ಶ. ೧೧೧೬ ರಿಂದ ೧೩೪೬)

೪. ವಿಜಯನಗರದ ಕಾಲ (ಕ್ರಿ.ಶ. ೧೩೩೬ ರಿಂದ ೧೬೧೦) ಮತ್ತು ಮೈಸೂರು ಅರಸರ ಕೊಡುಗೆ (ಕ್ರಿ.ಶ. ೧೬೧೦ ರಿಂದ ೧೯೪೭)

## ಗಂಗರ ಕಾಲ

ಪಲ್ಲವ ಮತ್ತು ಚಾಲುಕ್ಯ ರಾಜ್ಯಗಳ ನಡುವಣ ಪ್ರದೇಶದಲ್ಲಿ ಎರಡೂ ಸಂಪ್ರದಾಯಗಳ ಪ್ರಭಾವ ಗಂಗರಸರ ಕಲೆಯ ಮೇಲೆ ಕಾಣಿಸಿಕೊಂಡಿದೆ. ಮಂಡ್ಯ ಜಿಲ್ಲೆಯಲ್ಲಿ ಈಗ ಕಾಣಬರುವ ಗಂಗರ ಕಾಲದ ದೇವಾಲಯಗಳು ಸಂಖ್ಯೆಯಲ್ಲಿ ಬಹಳ ಕಡಿಮೆ. ಕಾರಣ ಅವರ ದೇವಾಲಯಗಳು ಪ್ರಾರಂಭದಲ್ಲಿ ಇಟ್ಟಿಗೆ, ಗಾರೆ, ಮರಗಳಿಂದ ನಿರ್ಮಿತವಾಗುತ್ತಿದ್ದವು. ಕಾಲಾನುಕ್ರಮದಲ್ಲಿ ಬಹಳಷ್ಟು ದೇವಾಲಯಗಳು ನಾಶವಾಗಿವೆ. ಅಲ್ಲದೆ ಕಲ್ಲಿನಿಂದ ನಿರ್ಮಿತವಾದ ಇವರ ಕಾಲದ ದೇಗುಲಗಳೂ ಸಹ ಬಹಳಷ್ಟು ಭಗ್ನವಾಗಿವೆ.

ಗಂಗರ ಕಾಲದ ದೇಗುಲಗಳಾಗಲೀ, ಬಸದಿಗಳಾಗಲೀ, ವಾಸ್ತುಲಕ್ಷಣ ರೀತ್ಯಾ ನೋಡಿದಾಗ ಹೆಚ್ಚುಕಡಿಮೆ ಒಂದೇ ರೀತಿಯದ್ದಾಗಿರುತ್ತವೆ. ಇವೆಲ್ಲ ಕುಳ್ಳಾದ ಕಟ್ಟಡಗಳು. ಹೀಗಾಗಿ ಛಾವಣಿ ಬಹಳ ತಗ್ಗಿನಲ್ಲಿರುತ್ತದೆ. ಕಂಬಗಳೂ ಸಹ ಕುಳ್ಳಾಗಿರುತ್ತವೆ. ಸಾಮಾನ್ಯವಾಗಿ ಪೀಠದ ಮೇಲೆ ದಿಂಡು ನಿಲ್ಲಿಸಿರುತ್ತಾರೆ. ದಿಂಡಿನ ತಳಭಾಗ ಚೌಕಟ್ಟಾಗಿದ್ದು, ಮೇಲೆ ದುಂಡಾಗಿರುತ್ತದೆ. ದ್ವಾರಬಂಧಗಳು ಬಹಳ ಸಾಮಾನ್ಯವಾಗಿರುತ್ತವೆ. ನಿರ್ಮಾಣದ ವಾಸ್ತುವಿನಲ್ಲಿ ಧರ್ಮ ಮತ್ತು ನಿರ್ಮಾಣ ಮಾಧ್ಯಮಗಳಾದ ಇಟ್ಟಿಗೆ, ಕಲ್ಲು, ಮರ ಇತ್ಯಾದಿ ಏನೇ ಇರಲಿ ದೇವಾಲಯದ ತಳವಿನ್ಯಾಸ ಒಂದೇ ಆಯದಲ್ಲಿರುತ್ತದೆ. ಗರ್ಭಗೃಹ, ಸುಖನಾಸಿ, ನವರಂಗ, ಮುಖಮಂಟಪ, ಬಲಿಪೀಠ, ಧ್ವಜಸ್ತಂಭ, ವಾಹನಮಂಟಪ, ಪ್ರಾಕಾರ, ಮಹಾದ್ವಾರ ಲಕ್ಷಣಗಳು ಕಾಣಬರುತ್ತವೆ. ಗರ್ಭಗೃಹದಲ್ಲಿ ಲಿಂಗ, ದೇವರ ವಿಗ್ರಹ ಅಥವಾ ಜಿನಬಿಂಬ ಅವರವರ ಮತಕ್ಕನುಸಾರವಾಗಿ ಇರುತ್ತವೆ. (ಗಂಗರ ಕಾಲದಲ್ಲಿ ವಿಷ್ಣುವಿನ ದೇವಾಲಯಗಳು ಅಪರೂಪ) ಶಿವ ದೇವಾಲಯವಾದರೆ ನವರಂಗದ

ಮೇಲ್ಛಾವಣಿಯಲ್ಲಿ ಅಷ್ಟದಿಕ್ಪಾಲಕರಿಂದ ಸುತ್ತುವರೆದ ಶಿವನಟರಾಜ, ಬಸದಿಯಾದರೆ ಶಿವನ ಬದಲು ಜಿನಬಿಂಬ ಕಾಣಬರುತ್ತದೆ.

**ಗುಹಾಂತರ ದೇವಾಲಯ :**

ಗಂಗರ ಕಾಲಕ್ಕೆ ಸೇರಿದ್ದಂತೆ ಮೇಲುಕೋಟೆಯ ನೀಳವಾದ ಒಂದು ಹೆಬ್ಬಂಡೆಯ ಮೊರಡಿಯಲ್ಲಿ ಮೇಲೆ ಹಾಗೂ ಕೆಳಗೆ ಕೊರೆದಿರುವ ಅಪೂರ್ಣವಾದ ಎರಡು ಗವಿಗಳಿವೆ. ಸಾಮ್ರಾಜ್ಯ ಬದಲಾವಣೆಯಿಂದಲೊ ಏನೋ; ನಡೆದ ಕೆಲಸ ಪೂರ್ಣಗೊಳ್ಳಲಿಲ್ಲ. ಅದು ಶೈಲಿ ಮತ್ತು ಸೌಂದರ್ಯ ದೃಷ್ಟಿಯಿಂದ ತೀರ ಸಾಮಾನ್ಯವಾಗಿದೆ. ಯೋಜಿಸಿದ್ದಂತೆ ಪೂರ್ಣಗೊಂಡಿದ್ದರೆ ಅದೊಂದು ದಕ್ಷಿಣ ಕರ್ನಾಟಕದ ಗುಹಾಂತರ ದೇವಾಲಯದ ಬಾದಾಮಿ ಆಗುತ್ತಿತ್ತು. ಇಲ್ಲಿ ಕೊರೆದಿರುವ ಗವಿಗಳು ಗಂಗರಕಾಲಕ್ಕೆ ಸೇರಿರಬಹುದೆಂಬ ಊಹೆಯಿದೆಯಷ್ಟೆ. ಆದರೆ ಗಂಗರ ಕಾಲದಲ್ಲಿ ಗವಿಗಳನ್ನು ಕೊರೆದು ದೇವಾಲಯಗಳನ್ನು ಸ್ಥಾಪಿಸಿದ್ದಕ್ಕೆ ದಾಖಲೆಗಳಿಲ್ಲ. ಇದು ಬಾದಾಮಿ ಗುಹಾಂತರ ದೇವಾಲಯದ ಪ್ರೇರಕ ಶಕ್ತಿಯಾದ ಚಾಲುಕ್ಯರ ಪ್ರಯತ್ನವಿರಬೇಕು. ಇಡೀ ದಕ್ಷಿಣ ದಿಗ್ವಿಜಯವನ್ನು ಸಾಧಿಸಿದ ಎರಡನೆಯ ಪುಲಿಕೇಶಿ ಗಂಗರನ್ನು ಕೆಲಕಾಲ ತನ್ನ ಸಾಮಂತರನ್ನಾಗಿ ಇಟ್ಟುಕೊಂಡಿದ್ದನು. ಹೀಗಾಗಿ ಚಾಲುಕ್ಯರ ಕಣ್ಣು ಬಾದಾಮಿಯಂತೆಯೇ ಮೇಲುಕೋಟೆಯಲ್ಲಿನ ನೀಳವಾದ ಬೆಟ್ಟಗಳತ್ತ ಆಕರ್ಷಿತವಾಗಿರಬೇಕು. ಮೇಲಾಗಿ ಚಾಲುಕ್ಯರು ವಿಷ್ಣುವಿನ ಉಪಾಸಕರು. ಮೇಲುಕೋಟೆಯ ನೀಳವಾದ ಬೆಟ್ಟಗಳತ್ತ ಆಕರ್ಷಿತರಾದ ಚಾಲುಕ್ಯರು ಇಲ್ಲಿಯೂ ಗುಹಾಂತರ ದೇವಾಲಯಗಳ ನಿರ್ಮಾಣಕ್ಕೆ ಕೈಹಾಕಿರಬೇಕು. ಕೆಲಕಾಲಕ್ಕೆ ಪುಲಿಕೇಶಿಯ ಪ್ರಭಾವ ಹಿಂದೆ ಸರಿದು ಗಂಗರು ಮತ್ತೆ ಸ್ವತಂತ್ರರಾದ ಕಾರಣ ನಡೆದ ಕೆಲಸ ಅರ್ಧಕ್ಕೆ ನಿಂತುಹೋಗಿರಬಹುದು. ಒಟ್ಟಾರೆ ಈ ಗವಿಗಳ ಕೊರೆತ ಹಾಗೂ ಕಂಬಗಳು ಬಾದಾಮಿ ಗುಹೆಯ ಮಾದರಿಯನ್ನು ಹೋಲುವುದರಿಂದ ಇದು ಚಾಲುಕ್ಯರ ಪ್ರಯತ್ನ ಎಂದು ಹೇಳುವುದರಲ್ಲಿ ಯಾವ ಅನುಮಾನವೂ ಇಲ್ಲ.

ಕೆಳಗಿನ ಗುಹೆ ಐದು ಅಂಕಣದಿಂದ ಕೂಡಿದ್ದು ಬಂಡೆಗೆ ಸೇರಿಕೊಂಡಂತೆ ೪–೫ ಅಡಿ ಎತ್ತರದ ಎರಡು ಕಂಬಗಳು ಹಾಗೂ ಉಳಿಕೆ ನಾಲ್ಕು ಕಂಬಗಳಿಂದ ರಚಿತಗೊಂಡಿದೆ. ಮೇಲಿನ ಗುಹೆಯಲ್ಲಿ ಸುಮಾರು ೫ ಅಡಿ ಎತ್ತರದ ನಾಲ್ಕು ಕಂಬಗಳಲ್ಲಿ ಎರಡು ಕಂಬಗಳು ಬಂಡೆಗೆ ಸೇರಿಕೊಂಡಿವೆ. ಮೂರು ಅಂಕಣದಿಂದ ಕೂಡಿದ ಈ ಗವಿಯು ಮಧ್ಯ ಅಂಕಣದಲ್ಲಿ ನಾರಾಯಣ ವಿಗ್ರಹವನ್ನು ಸಾಂಕೇತಿಕವಾಗಿ ಇಡಲಾಗಿದೆ. ಕೆಳಗಿನ ಗುಹೆ ಸುಮಾರು ೨೦ ಅಡಿ ಉದ್ದವಿದ್ದರೆ,

ಮೇಲಿನ ಗುಹೆ ಉದ್ದದಲ್ಲಿ ಕೊಂಚ ಚಿಕ್ಕದಾದರೂ ಅಗಲದಲ್ಲಿ ಕೆಳಗಿನ ಗುಹೆಗಿಂತ ದೊಡ್ಡದಾಗಿದೆ. ಈ ಗುಹೆಗಳು ಇರುವ ಸ್ಥಳಕ್ಕೆ ನೈನಾಕ್ಷೇತ್ರ ಎಂಬ ಹೆಸರು ವಾಡಿಕೆಯಲ್ಲಿದೆ.

ಇತ್ತ ರಾಷ್ಟ್ರಕೂಟರ ಕಣ್ಣು ಹಾದಿತ್ತೇ ಎಂದು ಅವಲೋಕಿಸಿದಾಗ, ಕರ್ನಾಟಕದ ಹೊರಗೆ ಅದರಲ್ಲೂ ಬೃಹತ್ ಗುಹಾಂತರ ದೇವಾಲಯಗಳಾದ ಎಲ್ಲೋರ, ಎಲಿಫೆಂಟಾಗಳಲ್ಲಿ ರಾಷ್ಟ್ರಕೂಟರು ತಮ್ಮ ಶಿಲ್ಪಶಕ್ತಿ ಸಾಮರ್ಥ್ಯವನ್ನು ಪ್ರಯೋಗಿಸಿ ಪ್ರಸಿದ್ಧರಾಗಿರುವುದನ್ನು ಗಮನಿಸಬಹುದು. ಆದರೂ ಇಂದು ಕನ್ನಂಬಾಡಿ ಅಣೆಕಟ್ಟೆಯ ನೀರಿನಲ್ಲಿ ಮುಳುಗಡೆಯಾಗಿರುವ, ಹಿಂದೆ ಕಾವೇರಿ ತೀರದಲ್ಲಿದ್ದ ಕಣ್ವೇಶ್ವರ ದೇವಾಲಯವು ಸುಮಾರು ಕ್ರಿಶ. ೮೧೨ ರಲ್ಲಿ ರಾಷ್ಟ್ರಕೂಟ ಮೊದಲನೆಯ ಕೃಷ್ಣನಿಂದ ನಿರ್ಮಿತವಾದುದೆಂಬ ಅಭಿಪ್ರಾಯವಿದೆ. ಇದೇ ಸಮಯದಲ್ಲಿ ಈತ ಮೇಲುಕೋಟೆಯ ಗುಹಾಂತರ ದೇವಾಲಯಕ್ಕೆ ಪ್ರಯತ್ನಿಸಿದ್ದ ಎಂಬುದಕ್ಕೆ ಸರಿಯಾದ ಪುಷ್ಟಿ ಸಿಗುವುದಿಲ್ಲ. ಮೇಲಾಗಿ ರಾಷ್ಟ್ರಕೂಟರ ಗುಹಾಂತರ ಕೆತ್ತನೆಯ ಕಾರ್ಯ ಕರ್ನಾಟಕದಲ್ಲಿ ಕಾಣಲೇ ಇಲ್ಲ. ಇನ್ನು ಕನ್ನಂಬಾಡಿಯ ಕಣ್ವೇಶ್ವರ ದೇವಾಲಯದ ಸನಿಹದಲ್ಲೇ ಇದ್ದ ಮತ್ತೊಂದು ಗೋಪಾಲಕೃಷ್ಣ ದೇವಾಲಯ ದ್ರಾವಿಡ ಮತ್ತು ಚಾಲುಕ್ಯ ವಾಸ್ತುಶೈಲಿಗಳ ಸಮ್ಮಿಶ್ರವಾದ ರಚನೆ. ಈ ಎರಡೂ ದೇವಾಲಯಗಳು ಮುಂದೆ ಹೊಯ್ಸಳರ ಕಾಲದಲ್ಲಿ ಹೊಯ್ಸಳ ಶೈಲಿಯಿಂದ ವಿಜೃಂಭಿಸಿತು. ಈಗ ಗೋಪಾಲಕೃಷ್ಣ ದೇವಾಲಯ ಸ್ಥಳಾಂತರಗೊಂಡಿದೆ. ಮುಂದೆ ಇವುಗಳನ್ನು ಅವಲೋಕಿಸೋಣ.

**ಪ್ರಾಚೀನ ಜಿನಮಂದಿರಗಳು :**

ಸುಮಾರು ಏಳುನೂರು ವರ್ಷಗಳಷ್ಟು ರಾಜ್ಯಭಾರ ಮಾಡಿದ ಗಂಗರಸರ ಗಂಗವಾಡಿ ಪ್ರದೇಶದ ವ್ಯಾಪ್ತಿಯಲ್ಲಿ ಹಲವಾರು ಬಸದಿಗಳು ಅಥವಾ ಜಿನಮಂದಿರಗಳು ಕಾಣಬರುತ್ತವೆ. ಅಂಥ ಎರಡು ಪ್ರಖ್ಯಾತ ಜಿನಮಂದಿರಗಳು ಮಂಡ್ಯ ಜಿಲ್ಲೆಯಲ್ಲಿ ಇವೆ. ಮದ್ದೂರು ತಾಲ್ಲೂಕು ತಿಪ್ಪೂರು ಅಥವಾ ಅರೆತಿಪ್ಪೂರು ಗ್ರಾಮವು ಹಿಂದೆ ಜೈನರ ಯಾತ್ರಾ ಸ್ಥಳವಾಗಿತ್ತು. ಇಲ್ಲಿ ಲಭ್ಯವಿರುವ ಸ್ಮಾರಕಗಳು, ಅವಶೇಷಗಳಿಂದಾಗಿ ಈ ಸ್ಥಳ ಶ್ರವಣಬೆಳಗೊಳಕ್ಕೆ ಸಮನಾದ ಒಂದು ಜೈನ ಕ್ಷೇತ್ರವಾಗಿತ್ತು ಎಂದು ತಿಳಿದುಬರುತ್ತದೆ. ಈ ಊರು ಶ್ರವಣಬೆಳಗೊಳದಂತೆಯೇ ಎರಡು ಬೆಟ್ಟಗಳನ್ನು ಹೊಂದಿದೆ. ಒಂದು ಬೆಟ್ಟಕ್ಕೆ ಕನಕಗಿರಿ ಅಥವಾ ಜಿನಗುಡ್ಡೆ ಎಂತಲೂ, ಮತ್ತೊಂದಕ್ಕೆ ಸವಣಪ್ಪನ ಬೆಟ್ಟ ಎಂದೂ ಕರೆಯಲಾಗಿದೆ. ಕನಕಗಿರಿಯಲ್ಲಿ ನಾಲ್ಕು ಇಟ್ಟಿಗೆಯ ಬಸದಿಗಳ ಅವಶೇಷಗಳಿವೆ. ಇಟ್ಟಿಗೆಯ ರಾಶಿಗಳ

ನಡುವೆ ಬಸದಿಗಳ ತಳಪಾಯವನ್ನು ಗಮನಿಸಬಹುದು. ಇಲ್ಲಿರುವ ಕೊಳ ಅಥವಾ ಕನಕಗಿರಿತೀರ್ಥ ಎಂದು ಶಾಸನದಲ್ಲಿ ಕರೆದಿರುವ ಬಂಡೆಯ ಮೇಲೆ ಕೆಲವು ಜಿನಬಿಂಬಗಳ ಕೆತ್ತನೆಗಳಿವೆ. ಈ ಬಿಂಬಗಳು ಪಾರ್ಶ್ವನಾಥ, ಸುಪಾರ್ಶ್ವನಾಥರ ಬಸದಿಗಳಿದ್ದುದಕ್ಕೆ ಕುರುಹಾಗಿವೆ. ಇದಲ್ಲದೆ ಹಲವು ಬಿಡಿ ಜಿನವಿಗ್ರಹಗಳು ಸಿಗುತ್ತವೆ. ಚಾಮರಧಾರಿ ದ್ವಾರಪಾಲಕರ ನಾಲ್ಕು ಹಾಗೂ ತೀರ್ಥಂಕರರ ಎರಡು ಶಿಲ್ಪಗಳು ಅಲ್ಲಲ್ಲಿ ಬಿದ್ದಿವೆ. ವಿಶೇಷವಾಗಿ ಬಂಡೆಯ ಮೇಲೆ ಇಪ್ಪತ್ತನಾಲ್ಕು ತೀರ್ಥಂಕರರನ್ನು ಕೆತ್ತುವ ಯತ್ನ ಮಾಡಿರುವುದು ಗೋಚರಿಸುತ್ತದೆ. ಈಶಾನ್ಯ ದಿಕ್ಕಿನಲ್ಲಿರುವ ಕನಕಗಿರಿಯಿಂದ ಉತ್ತರಕ್ಕೆ ಸವಣಪ್ಪನ ಬೆಟ್ಟದ ಮೇಲೆ ಸುಮಾರು ಹತ್ತು ಅಡಿ ಎತ್ತರದ ಬಾಹುಬಲಿಅಥವಾ ಗೊಮ್ಮಟಮೂರ್ತಿ ನಿಂತಿದೆ. ಕ್ರಿ.ಶ. ೯೮೧ರಲ್ಲಿ ಶ್ರವಣ ಬೆಳಗೊಳದ ಗೊಮ್ಮಟೇಶ್ವರ ನಿರ್ಮಾಣವಾಗುವುದಕ್ಕೆ ಮುಂಚೆಯೇ ಕ್ರಿ.ಶ. ೯೧೮ ರಲ್ಲಿಯೇ ತಿಪ್ಪೂರು ಗೊಮ್ಮಟ ಮತ್ತು ಜಿನಮಂದಿರಗಳು ಪ್ರಖ್ಯಾತವಾಗಿದ್ದವು ಎನ್ನುವುದಕ್ಕೆ ಶಾಸನಾಧಾರವಿದೆ. ಗೊಮ್ಮಟ ಮೂರ್ತಿಯ ಒಂದು ಭಾಗದ ಮೂಗಿನ ಹೊಳ್ಳೆ ಕೊಂಚ ಚ್ಯುತಿಗೊಂಡಿದೆ. ಒಟ್ಟಾರೆ ಈ ಊರು ಗಂಗರಕಾಲದ ಶಿಲ್ಪಗಳ ಬಯಲು ವಸ್ತುಸಂಗ್ರಹಾಲಯದಂತಿದೆ. ಊರೊಳಗಿರುವ ಜಿನಮ್ಮ ಗುಡಿಯನ್ನು ಆಧುನೀಕರಣಗೊಳಿಸಲಾಗಿದೆ. ಈಗ ಊರಲ್ಲಿ ಒಕ್ಕಲಿಗರ ಸಂಖ್ಯೆ ಅಧಿಕವಾಗಿದ್ದರೂ ಜೈನ ಸಂಪ್ರದಾಯದಂತೆ ಯಾವ ಬಲಿಯನ್ನೂ ಕೊಡುವುದಿಲ್ಲ.

ಇಲ್ಲಿರುವ ಶಾಸನಗಳಲ್ಲಿ ಕ್ರಿ.ಶ. ೧೧೧೭ರ ಶಾಸನವೊಂದು ತಲಕಾಡು ಯುದ್ಧದ ಸಮಗ್ರ ಚಿತ್ರಣವನ್ನು ಕೊಡುತ್ತದೆ. ಚೋಳರ ಸಾಮಂತದೊರೆ ಆದಿಯಮನನ್ನು ಸೋಲಿಸಿ, ಕಂಚಿಯವರೆಗೂ ಅಟ್ಟಿಸಿಕೊಂಡು ಹೋದ ಹೊಯ್ಸಳ ವಿಷ್ಣುವರ್ಧನನ ಮಹಾಪ್ರಧಾನ ಹಾಗೂ ದಂಡನಾಯಕ ಗಂಗರಾಜನು ಯುದ್ಧದಿಂದ ಮರಳಿಬಂದ ಮೇಲೆ ಅಲೌಕಿಕ ಮಾರ್ಗವನ್ನು ಹಿಡಿದು ತನಗೆ ಹಿರಿದಾದ ಹಾಗೂ ಸೇವೆ ಮಾಡಲು ಪ್ರಪಂಚದಲ್ಲಿ ಪವಿತ್ರವೆನಿಸಿದ ತಿಪ್ಪೂರು ಜಿನಕ್ಷೇತ್ರವನ್ನು ಕೇಳಿಕೊಂಡ ನಿದರ್ಶನ ಈ ಶಾಸನದಲ್ಲಿದೆ. ಮತ್ತೊಂದು ಶಾಸನ (ಕ್ರಿ.ಶ. ೧೨೨೦-೧೨೩೮) ಕವಿ ಬಾಲಚಂದ್ರದೇವ ತನ್ನ ತಂದೆ ಹಾಗೂ ಗುರುವಾದ ಕಂದರ್ಪದೇವ ಹಾಗೂ ತಾಯಿ ಸೊನ್ನದೇವಿಯರ ಜ್ಞಾಪಕಾರ್ಥವಾಗಿ ನೆಡಿಸಿರುವಂತದ್ದು. ಈ ಶಾಸನ ಲಾಲಿತ್ಯ ಪೂರ್ಣವಾಗಿ ಸಾಹಿತ್ಯ ದೃಷ್ಟಿಯಿಂದಲೂ ಮನೋಜ್ಞವಾಗಿದೆ.


ಇದೇ ನಿಟ್ಟಿನಲ್ಲಿ ಕೃಷ್ಣರಾಜಪೇಟೆ ತಾಲ್ಲೂಕಿನ ಬಸ್ತಿಹೊಸಕೋಟೆಯ ಗೊಮ್ಮಟ ಮತ್ತು ಜಿನಮಂದಿರಗಳು ಗಂಗರ ಕೊಡುಗೆಯಾಗಿವೆ. ಕಾವೇರಿನದಿಗೆ

ಕನ್ನಂಬಾಡಿ ಅಣೆಕಟ್ಟು ಕಟ್ಟಿದ ಕಾರಣ ಹಿನ್ನೀರಿನಲ್ಲಿ ಮುಳುಗಡೆಯಾಗುತ್ತಿದ್ದ ಬಸ್ತಿಯ ಹದಿನೆಂಟು ಅಡಿ ಎತ್ತರದ ಗೊಮ್ಮಟೇಶ್ವರ ಮತ್ತು ಜಿನಮಂದಿರದ ಸುಂದರ ಕೆತ್ತನೆಯ ಅವಶೇಷಗಳನ್ನು ನೀರಿನ ಅಂಚಿಗೆ ತಂದು ಇರಿಸಿದ್ದಾರೆ. ಮೃದುಕಲ್ಲಿನಿಂದ ಕಡೆದಿರುವ ಗೊಮ್ಮಟೇಶ್ವರದೆತ್ತರಕ್ಕೂ ಗೂಡಿನಂಥ ಒಂದು ರಕ್ಷಣಾ ಗುಡಿಯನ್ನು ಕಟ್ಟಲಾಗಿದೆ. ಮುಖ ಮುದ್ರೆಯಲ್ಲಿ ಯೋಗಿಯ ಲಕ್ಷಣಗಳಿವೆ. ಅಲ್ಲಿಯೇ ಇರುವ ಮಾನಸ್ತಂಬದ ಮೇಲೆ ಕ್ರಿ.ಶ. ೧೧೪೭ರ ಸುಮಾರಿನ ಸೋಮಯ್ಯನ ಶಾಸನವಿದೆ. ಅದೇ ಕಾಲಕ್ಕೆ ಸೇರಿದ ಪುಣಿಸಮಯ್ಯನ ಶಾಸನವಿರುವ ಒಂದು ಬಸದಿಯ ಅವಶೇಷಗಳಿವೆ. ಈ ಜಿನಾಲಯುವಿದ್ದ ಸ್ಥಳವನ್ನು ಮಾಣಿಕ್ಯದೊಡಲು, ಮಾಣಿಕ್ಯದೊಡಲೂರು ಎಂದು ಶಾಸನಗಳಲ್ಲಿ ಉಲ್ಲೇಖಿಸಿದೆ. ವಿಷ್ಣುವರ್ಧನನ ಅಧಿಕಾರಿಗಳಾಗಿದ್ದ ಸೋಮಯ್ಯ ಜಿನಾಲಯಕ್ಕೆ ದತ್ತಿಬಿಟ್ಟಿರುವ ಅಂಶವನ್ನು ತಿಳಿಸಿದರೆ; ಪುಣಿಸಿಮಯ್ಯ ಬಸದಿಯೊಂದನ್ನು ಕಟ್ಟಿಸಿ ದತ್ತಿ (ಮಾವಿನಕೆರೆ) ಬಿಟ್ಟಿರುವ ವಿಚಾರವನ್ನು ತಿಳಿಸುತ್ತದೆ. ಇಲ್ಲಿರುವ ಭಾರೀ ಗಾತ್ರದ ಯಕ್ಷ ಯಕ್ಷಿಯರು ಬಹು ಆಕರ್ಷಣೀಯವಾಗಿವೆ. ಅಷ್ಟದಿಕ್ಪಾಲಕರ ಚಪ್ಪಡಿ, ಕಂಬ, ಬೋದಿಗೆ ಎಲ್ಲೆಂದರಲ್ಲಿ ಬಿದ್ದು ಇದೂ ಸಹ ಬಯಲುವಸ್ತು ಸಂಗ್ರಹಾಲಯದಂತಿದೆ. ಈಗ ಈ ಬಸದಿಗಳ ಅವಶೇಷಗಳಿರುವ ಜಾಗಕ್ಕೆ ಕುರುಬರ ಬಸ್ತಿ ಎಂದು ಹೆಸರಿಸಲಾಗಿದೆ.

ಇದೇ ತಾಲ್ಲೂಕಿನ ಶ್ರವಣನಹಳ್ಳಿಯಲ್ಲಿ ಜಿನಾಲಯಕ್ಕೆ ಸಂಬಂಧಪಟ್ಟ ಶಾಸನ ಮತ್ತು ಜಿನಮಂದಿರದ ಅವಶೇಷಗಳನ್ನು ನೋಡಬಹುದಾಗಿದೆ. ಅಂತೆಯೇ ಮುರುಕನಹಳ್ಳಿ, ಹೊಸಹೊಳಲು ಸ್ಥಳಗಳಲ್ಲಿ ಪ್ರಾಚೀನ ಜಿನಬಿಂಬಗಳ ದರ್ಶನವಾಗುತ್ತದೆ. ಇದೇ ತಾಲ್ಲೂಕಿನ ಸಿಂದಘಟ್ಟದ ಸಂಗಮೇಶ್ವರ ದೇವಾಲಯ ಮೂಲತಃ ಗಂಗರ ಕಾಲದ ಧಾರ್ಮಿಕ ಸ್ಥಿತಿ ಮತ್ತು ವಾಸ್ತುಶಿಲ್ಪ ಕಲೆಯ ಕುರುಹು ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಬಗ್ಗೆ ಇನ್ನಷ್ಟು ಸಂಶೋಧಿಸುವ ಅಗತ್ಯವಿದೆ.

**ಗಿಡ್ಡಕಂಬಗಳು :**


ಅಕ್ಕಿಹೆಬ್ಬಾಳು ಭಾಗದಲ್ಲಿರುವ ಆಲೇನಹಳ್ಳಿಯ ಶಂಭುಲಿಂಗೇಶ್ವರ ಗುಡಿ ಗಂಗರ ಕಾಲಕ್ಕೆ ಸೇರಿದ್ದಾಗಿದೆ. ಸುಮಾರು ೯ನೇ ಶತಮಾನದಲ್ಲಿ ನಿರ್ಮಾಣ-ಗೊಂಡಿರಬಹುದಾದ ಈ ದೇಗುಲ ನವರಂಗದ ಕಂಬಗಳು ಗಿಡ್ಡವಾಗಿದ್ದು ಗಂಗರ ಕಾಲಕ್ಕೆ ಸಾಕ್ಷಿಯಾಗಿವೆ. ಇಲ್ಲಿರುವ ಶಾಸನವು ಗಂಗ ಅರಸ ನೀತಿವಾಕ್ಯ ಪೆರ್ಮಾನಡಿಯ ಕಾಲದಲ್ಲಿ 'ಕಲವುರ ಕಾಳಗ'ದಲ್ಲಿ ಕಾದಾಡಿ ಮಡಿದ ಬಮ್ಮ ಎಂಬುವನ ಕುಟುಂಬಕ್ಕೆ ಕಲ್ನಾಡಾಗಿ ಭೂಮಿಯನ್ನು ನೀಡಿದ ವಿಷಯವನ್ನು ಉಲ್ಲೇಖಿಸುತ್ತದೆ.



ಗುಹಾಂತರ ಪ್ರಯತ್ನ. ಮೇಲುಕೋಟೆ




ಶಾಂತಿನಾಥಮೂರ್ತಿ.
ಕಂಬದಹಳ್ಳಿ.



ಗೊಮ್ಮಟೇಶ್ವರ. ಅರೆತಿಪ್ಪೂರು.



ಜಿನಾಲಯಗಳ ಅವಶೇಷ. ಬಸ್ತಿಹೊಸಕೋಟೆ. (ಕನ್ನಂಬಾಡಿ ಹಿನ್ನೀರಿನಲ್ಲಿ)




ಪಂಚಕೂಟಬಸದಿ. ಸಾಮಾನ್ಯ ನೋಟ. ಕಂಬದಹಳ್ಳಿ.



ಬ್ರಹ್ಮಸ್ತಂಬ. ಕಂಬದಹಳ್ಳಿ.



ಗ್ರೀವ–ಶಿಖರ ನೇಮಿನಾಥ ಬಸದಿ.



ಅದಿಷ್ಠಾನ. ಶಾಂತಿನಾಥ ಬಸದಿ.

ಈ ದೇವಾಲಯವು ಗರ್ಭಗೃಹ, ತೆರೆದ ಸುಖನಾಸಿ, ನವರಂಗಗಳನ್ನು ಹೊಂದಿದ್ದು ಉತ್ತರ ಮತ್ತು ದಕ್ಷಿಣಗಳಿಂದ ನವರಂಗಕ್ಕೆ ಪ್ರವೇಶ ಕಲ್ಪಿಸಲಾಗಿದೆ. ನಂತರದ ಕಾಲದಲ್ಲಿ ಉತ್ತರದ ದ್ವಾರಕ್ಕೆ ಹೊಂದಿಸಿ ಇನ್ನೊಂದು ಗರ್ಭಗೃಹವನ್ನು ಸೇರ್ಪಡೆ ಮಾಡಿ ಅಲ್ಲಿ ಕೇಶವನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಗರುಡಪೀಠದ ಮೇಲೆ ನಾಲ್ಕೂವರೆ ಅಡಿ ಎತ್ತರದ ಸ್ಥಾನಕ ಭಂಗಿಯಲ್ಲಿರುವ ಈ ಶಿಲ್ಪವು ಶಂಖ, ಚಕ್ರ, ಗದಾ, ಪದ್ಮಾಧಾರಿಯಾಗಿ ಆಕರ್ಷಕವಾಗಿದೆ. ಹರಿಹರರನ್ನು ಒಂದೇ ಭಾವನೆಯಲ್ಲಿ ಕಾಣುವ ಉದ್ದೇಶ ಇದಾಗಿದೆ.

ಇನ್ನು ಮೂಲ ಗರ್ಭಗುಡಿಯಲ್ಲಿ ಗಂಗರಕಾಲದ ಶಂಭುಲಿಂಗೇಶ್ವರ ಲಿಂಗವಿದ್ದು ಅದರ ಬಾಗಿಲವಾಡವು ಪಂಚಶಾಕಾಲಂಕೃತವಾಗಿದ್ದು ಮಧ್ಯೆ ಭುವನೇಶ್ವರಿಯಲ್ಲಿ ಕಮಲಾಲಂಕಾರವಿದೆ. ತೆರೆದ ಸುಖನಾಸಿಯಲ್ಲಿ ಗಣಪ ಹಾಗೂ ನಂದಿ ಮೂರ್ತಿಗಳಿವೆ. ದೇವಾಲಯದ ಭಿತ್ತಿಯು ನಿರಾಡಂಬರವಾಗಿದ್ದು ಕಪೋತ ಭಾಗವನ್ನು ಗಾರೆಶಿಲ್ಪ, ಕಿರುಗೂಡುಗಳಿಂದ ಅಲಂಕರಿಸಲಾಗಿದೆ. ಈ ದೇವಾಲಯವನ್ನು ಮೂಲಸ್ವರೂಪದಲ್ಲಿ ಸಂರಕ್ಷಿಸಿಕೊಳ್ಳಬೇಕಾಗಿದೆ.

ಇನ್ನು ಮದ್ದೂರಿನ ದೇಶೇಶ್ವರ ಹಾಗೂ ಇದೇ ತಾಲ್ಲೂಕಿನ ಚಲ್ಲೇಶ್ವರ ಲಿಂಗಮೂರ್ತಿಗಳು ಗಂಗರ ಮೂರ್ತಿಶಿಲ್ಪದ ಕೊಡುಗೆಯಾಗಿವೆ. ಇವರ ಕಾಲದ ಕೆಲವು ದೇವಾಲಯಗಳನ್ನು ಮುಂದೆ ಆಡಳಿತಕ್ಕೆ ಬಂದ ಚೋಳರು ಕಲ್ಲಿನಿಂದ ಪುನಃ ನಿರ್ಮಾಣ ಮಾಡಿರುವುದು ಸ್ಪಷ್ಟವಾಗುತ್ತದೆ. ಕ್ರಿ.ಶ. ೮೯ಳರಲ್ಲಿ ಗಂಗರಸರ ದಂಡನಾಯಕ ತಿರುಮಲಯ್ಯ ಎಂಬಾತನು ಶ್ರೀರಂಗಪಟ್ಟಣದ ಶ್ರೀರಂಗನಾಥನ ವಿಗ್ರಹ ಮತ್ತು ಗುಡಿಯನ್ನು ನಿರ್ಮಿಸಿ ಶ್ರೀರಂಗಪುರ ಎಂದು ನಾಮಕರಣ ಮಾಡಿದನೆಂದು ಹೇಳುತ್ತಾ ಶಿಕಾರಿಪುರ ತಾಲ್ಲೂಕಿನ ಒಂದು ಶಾಸನವನ್ನು ಉಲ್ಲೇಖಿಸಲಾಗುತ್ತದೆ. ಆದರೆ ಆ ಶಾಸನವಿಂದು ಲಭ್ಯವಿಲ್ಲ. ಇದಕ್ಕೂ ಮುನ್ನ ಹಂಬಿ ಎಂಬ ದೇವದಾಸಿ ಕ್ರಿ.ಶ. ೮೧೦ರಲ್ಲಿ ರಂಗನಾಥನ ಗುಡಿಯೊಂದನ್ನು ಕಟ್ಟಿಸಿದಳೆಂದು ಹೇಳಲಾಗುತ್ತದೆಯಾದರೂ ಸಂಶೋಧಿಸುವ ಅಗತ್ಯವಿದೆ.

ಮಳವಳ್ಳಿ ತಾಲ್ಲೂಕು ವೀರಶೈವ ಕ್ಷೇತ್ರವೆನಿಸಿದ ಧನಗೂರಿನ ವೀರಭದ್ರ ಮತ್ತು ಗೌರೀಶ್ವರ ದೇವಾಲಯಗಳು ಗಂಗರ ಕಾಲದಲ್ಲಿ ಆದುವೆಂಬುದಕ್ಕೆ ಶಾಸನಾಧಾರವಿದೆ. ದನುರು (ಧನಗೂರು) ಗ್ರಾಮವನ್ನು 'ಕಲ್ನಾಡಾಗಿ' ದತ್ತಿ ಬಿಟ್ಟ (ಕ್ರಿ.ಶ. ೯೬೦) ವಿಷಯ ತಿಳಿದುಬರುತ್ತದೆ. ಕಲ್ನಾಡೆಂದರೆ ಮರಣಹೊಂದಿದ ವೀರನೊಬ್ಬನ ಗೌರವಾರ್ಥ ಹಾಕಿಸಿದ ನೆನಪಿನ ಕಲ್ಲು ಎಂದರ್ಥ. ಮಂಡ್ಯ ತಾಲ್ಲೂಕು ಬೇಲೂರು ಗ್ರಾಮದ ತಿಬ್ಬಾದೇವಿ ದೇವಾಲಯಕ್ಕೆ ದತ್ತಿಬಿಟ್ಟ

ಶಾಸನವೊಂದು ಗಂಗರ ಕಾಲದ್ದಾಗಿದೆ. ಇದೇ ತಾಲ್ಲೂಕಿನ ಹೊಳಲು ಗ್ರಾಮದ ಹೊರಳಮ್ಮ ಗುಡಿ ಗಮನಸೆಳೆಯುತ್ತದೆ. ಕುಬ್ಜವಾಗಿರುವ ಹಳೆಯ ಗುಡಿಯಲ್ಲಿ ಸಪ್ತಮಾತೃಕೆಯರ ಉಬ್ಬುಶಿಲ್ಪಗಳಲ್ಲಿ 'ಮಾಹೇಶ್ವರಿ' ಯನ್ನು ಹೊರಳಮ್ಮ ಎಂದು ಕರೆಯಲಾಗಿದೆ. ಮಾಹೇಶ್ವರಿಯ ಪತಿ ಮಹೇಶ್ವರ (ಶಿವ) ಹೆಸರಿನ ಇನ್ನೊಂದು ರೂಪ ತಾಂಡವೇಶ್ವರ ದೇವಾಲಯ ಊರಿನ ಮತ್ತೊಂದು ಭಾಗದಲ್ಲಿದೆ.

ಗಂಗರ ಕಾಲದ ಕ್ರಿ.ಶ. ೮೫೫–೯೬೦ರ ತೈಲೂರು ಶಾಸನವು (ಮದ್ದೂರು ತಾಲ್ಲೂಕು) ತೈಲೂರು ಗ್ರಾಮದಲ್ಲಿ ಆದ ದೇವಾಲಯಗಳ ನಿರ್ಮಾಣವನ್ನು ತಿಳಿಸುತ್ತದೆ. ಇಲ್ಲಿ ವಿಶೇಷವಾಗಿ ಕಾಣಬರುವ ವಿಷ್ಣುಸ್ವರೂಪದ ನಾರಾಯಣ (ವೆಂಕಟೇಶ್ವರ) ಹೆಸರಿನ ನಾಲ್ಕುವರೆ ಅಡಿ ಎತ್ತರದ ಚತುರ್ಭುಜಧಾರಿ ಮೂರ್ತಿಯು ತನ್ನ ಎಡಗೈಯೊಂದನ್ನು ಸೊಂಟದ ಕೆಳಗೆ ಇರಿಸಿಕೊಂಡಿರುವುದು ಬಹು ಆಕರ್ಷಣೀಯವಾಗಿದೆ. ಇಂಥ ಶಿಲ್ಪಗಳು ಗಂಗವಾಡಿ ಪ್ರದೇಶದ ತಲಕಾಡು, ಮದ್ದೂರು ಮುಂತಾದೆಡೆ ಸಿಗುತ್ತವೆ. ತೈಲೂರು ಕೆರೆಯ ಏರಿಮೇಲಿರುವ ಮತ್ತೊಂದು ವಿಷ್ಣು (ಬೊಮ್ಮ) ವಿಗ್ರಹ ಮತ್ತು ಸಪ್ತಮಾತೃಕೆಯರ ಮೂರ್ತಿಗಳು ಗಂಗರ ಶಿಲ್ಪಶೈಲಿಗೆ ಸಾಕ್ಷಿಯಾಗಿವೆ. ಇದೇ ಸಾಲಿಗೆ ಕೆಸ್ತೂರು ಕೆರೆ ಏರಿ ಕೆಳಗೆ ಕಾಣಬರುವ ಸಪ್ತಮಾತೃಕೆಯರ ಸಾಲುಶಿಲ್ಪಗಳಲ್ಲಿ ಮುಖ್ಯವಾಗಿ 'ವೈಷ್ಣವಿ' ದೇವಿಯನ್ನು ಬನಶಂಕರಿ ಎಂದು ಹೆಸರಿಸಿ ಬನಶಂಕರಿ ಗುಡಿ ಎಂದಾಗಿದೆ. ಮಂಡ್ಯ ತಾಲ್ಲೂಕಿನ ಹಳೇಬೂದನೂರು ಗ್ರಾಮದ ಹೊರವಲಯದಲ್ಲಿರುವ ಬನಶಂಕರಿ ಗುಡಿ ಇದೇ ತೆರನಾಗಿದೆ. ನೆಲಮಾಳಿಗೆಯ ಈ ಗುಡಿಯ ಒಟ್ಟಾರೆ ಸ್ವರೂಪಕ್ಕೆ 'ಕವಳಿಗೆ ಗುಡಿ' ಎಂದು ಗ್ರಾಮೀಣರು ಹೆಸರಿಸುತ್ತಾರೆ. ಹಿಂದೆ ಕೆರೆ ನಿರ್ಮಾಣವಾದ ನಂತರ ಸಪ್ತಮಾತೃಕೆಯರನ್ನು ರಕ್ಷಣೆಗಾಗಿ ಆಹ್ವಾನಿಸುವುದು ದೇವತಾ ಕೈಂಕರ್ಯದ ಮುಖ್ಯಭಾಗವಾಗಿತ್ತು. ಬ್ರಾಹ್ಮಿ, ಮಾಹೇಶ್ವರಿ, ಕೌಮಾರಿ, ವೈಷ್ಣವಿ, ವಾರಾಹಿ, ಇಂದ್ರಾಣಿ, ಚಾಮುಂಡಿ ಇವರೇ ಸಪ್ತ ಮಾತೃಕೆಯರು. ಬನ ಅಥವಾ ವನ ಸೌಂದರ್ಯಕ್ಕೆ ಬನಶಂಕರಿ ಹೆಸರಿನ ಗುಡಿಗಳೇ ಸಾಕ್ಷಿಯಾಗಿವೆ.

ಮದ್ದೂರು–ಮಳವಳ್ಳಿ ತಾಲ್ಲೂಕು ಅಂಚಿನಲ್ಲಿರುವ ಕಾಡುಕೊತ್ತನಹಳ್ಳಿ ಸಮೀಪದ ಗದ್ದೆಬಯಲಲ್ಲಿ ಇರುವ ಸಾಕುದೇವಮ್ಮ ಗುಡಿಯೊಳಗೆ ಗಂಗರಕಾಲದ ಸಪ್ತಮಾತೃಕೆಯರ ಬಿಡಿ ಶಿಲ್ಪಗಳಿವೆ. ಅಕ್ಕಪಕ್ಕದಲ್ಲಿ ವೀರಭದ್ರ ಮತ್ತು ಗಣಪತಿ ಶಿಲ್ಪಗಳಿವೆ. ಹದಿನಾರು ಕಿರುಕಂಬಗಳನ್ನುಳ್ಳ ಒಂಬತ್ತು ಅಂಕಣದ ಈ ಗುಡಿಯ ಸುತ್ತ ಮಣ್ಣು ತುಂಬಿದೆ. ಇದನ್ನು ಸಂರಕ್ಷಿಸಿಕೊಳ್ಳುವ ಅಗತ್ಯವಿದೆ. ಗುಡಿಯ ಎಡಭಾಗದ ಒಂದಂಕಣದ ಗುಡಿಯಲ್ಲಿ ಭೈರವನ ಮೂರ್ತಿಇದೆ. ಊರಿನ ಕೆರೆಯ

ವಾಯುವ್ಯಕ್ಕೆ ಸ್ವರ್ಗದ ಬಾಗಿಲು ಸೋಮೇಶ್ವರ ಗುಡಿಯ ಹಿಂಭಾಗದಲ್ಲಿ ತ್ರುಟಿತಗೊಂಡ ಶಾಸನವಿದೆ. ಕ್ರಿ.ಶ. ೯೮೬-೮೭ರ ಪ್ರಾಚೀನ ಶಾಸನ ಇದಾಗಿದೆ. (ಊರಲ್ಲಿ ಪ್ರಮುಖವಾಗಿ ವೀರಭದ್ರ ಗುಡಿ ಕಾಣಬರುತ್ತದೆ) ಇದೇ ಮಾದರಿಯ ಗುಡಿಯೊಂದು ಮಂಡ್ಯ ಸಮೀಪದ ಕೊಮ್ಮೇರಹಳ್ಳಿ ಊರಾಚೆ ಹೊಲದಲ್ಲಿರುವ ಹಿರಿಯಮ್ಮನ ಗುಡಿ ಗಂಗರ ಕಾಲಕ್ಕೆ ಸಾಕ್ಷಿಯಾಗಿದೆ.

ನಾಗಮಂಗಲ ತಾಲ್ಲೂಕು ಆರಣಿ ಗ್ರಾಮದಲ್ಲಿ ಕ್ರಿ.ಶ. ೯೩೨ರ ಶಾಸನಾಧಾರದಿಂದ ಇಲ್ಲಿಯ ಗಿಡ್ಡನೆಯ ಕಂಭಗಳು ಹಾಗೂ ಬಳಿಯಲ್ಲಿರುವ ಗಣಪತಿ ವಿಗ್ರಹ ಗಂಗರ ಶಿಲ್ಪ ಎನಿಸಿವೆ. ಇದೇ ತಾಲ್ಲೂಕು ಬೋಗಾದಿ ಗ್ರಾಮದಲ್ಲಿ ಪಾಳು ಬಸದಿಯೊಂದು ಕಾಣಬರುತ್ತದೆ. ಇನ್ನು ಹೊಯ್ಸಳರ ಕಾಲದ ಶಾಸನಗಳಲ್ಲಿ ಉಲ್ಲೇಖಗೊಂಡಿದ್ದರೂ ಹಲವು ಪುರಾತನ ಬಸದಿಗಳು, ತೀರ್ಥಂಕರ ಮೂರ್ತಿಗಳು ಗಂಗರ ಕಾಲದ್ದೆಂದು ಪರಿಗಣಿಸಬಹುದಾಗಿದೆ. ಈ ಜಿಲ್ಲೆಯಲ್ಲಿ ಗಂಗರ ಕಾಲದ ಲಿಪಿ ಶಾಸನಗಳೂ ಸಹ ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಲಭ್ಯವಿರುವ ಶಾಸನಗಳು ಅತ್ಯಮೂಲ್ಯ ಅಂಶಗಳನ್ನು ಹೊರಚೆಲ್ಲುತ್ತವೆ. ಜತೆಗೆ ವೀರಗಲ್ಲುಗಳೂ ಸಹ ಕಾಣಬರುತ್ತವೆ. ಜಿಲ್ಲೆಯಲ್ಲಿಯೇ ಅತಿ ಹಳೆಯ ಶಾಸನವೆಂದರೆ ಶಕ ೬೩೪ರ ಜೇಷ್ಠ ಪೂರ್ಣಿಮೆಯ ದಿನ ಹೊರಡಿಸಿದ ಕ್ರಿ.ಶ. ೭೧೩ರ ಒಂದನೆಯ ಗಂಗರಾಜ ಸಂತತಿಯ ಶಿವಮಾರನ ತಾಮ್ರ ಶಾಸನ. ಮಂಡ್ಯ ತಾಲ್ಲೂಕು ಹಲ್ಲೇಗೆರೆಯಲ್ಲಿ ಕಂಡುಬಂದ ಸಂಸ್ಕೃತ ಲಿಪಿಯ ಆನೆ ಚಿಹ್ನೆಯುಳ್ಳ ಈ ಶಾಸನದಲ್ಲಿ ಸಮೀಪದ ಕೆರಗೋಡು ಮತ್ತು ಇತರೆ ಕೆಲವು ಗ್ರಾಮಗಳನ್ನು ಕೆಲವರಿಗೆ ದಾನವಾಗಿತ್ತ ಸಂಗತಿಯನ್ನು ತಿಳಿಸುತ್ತದೆ. ಪಲ್ಲವ ಯುವರಾಜನ ಮಕ್ಕಳಾದ ಜಯ ಮತ್ತು ವೃದ್ಧಿ ಎಂಬುವವರ ಕೋರಿಕೆಯ ಮೇರೆಗೆ ಈ ದಾನವನ್ನು ನೀಡಲಾಯಿತೆಂದು ಉಲ್ಲೇಖಿಸಿದೆ.

ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿಯಲ್ಲಿ ಗಂಗರಾಜ ಸತ್ಯವಾಕ್ಯ ಪೆರ್ಮನಡಿ ಕಾಲದಲ್ಲಿ ಕಲ್ಲು ಬಸದಿಯೊಂದು ನಿರ್ಮಾಣವಾಗಿದ್ದ ಅಂಶವನ್ನು ತಿಳಿಸುತ್ತದೆ. ಇಲ್ಲಿಗೆ ಸಮೀಪದ ಗೌತಮ ಕ್ಷೇತ್ರದ ಕಾವೇರಿ ತೀರದ ಉತ್ತರದಂಡೆಯಲ್ಲಿರುವ ಶಾಸನವೊಂದು ಇದೇ ರಾಜನ ಕಾಲದ್ದಾಗಿದ್ದು ಶ್ರವಣಬೆಳಗೊಳದ (ಕಲ್ಬಪ್ಪುಗಿರಿ) ಜೈನಗುರು ಮತಿಸಾಗರ ಪಂಡಿತದೇವ ಭಟಾರ ಅವರ ಕೋರಿಕೆ ಮೇರೆಗೆ ನದಿಗೆ ಅಣೆಕಟ್ಟು ಕಟ್ಟುವ ಸಂಬಂಧವನ್ನು ತಿಳಿಸುತ್ತ ಜೈನಮುನಿಗಳಾದ ಭದ್ರಬಾಹು ಮತ್ತು ಚಂದ್ರಗುಪ್ತರು ಶ್ರವಣಬೆಳಗೊಳದಲ್ಲಿ ನೆಲೆಸಿ ಅದನ್ನು ಪವಿತ್ರಗೊಳಿಸಿದರೆಂಬ ವಿಷಯವನ್ನು ತಿಳಿಸುತ್ತದೆ.

ಕೆರೆ ಕಟ್ಟೆಗಳ ನಿರ್ಮಾಣದಲ್ಲಿ ಗಂಗರಸರು ಅಪಾರವಾಗಿ ಶ್ರಮವಹಿಸಿರುವುದು ತಿಳಿದುಬರುತ್ತದೆ. ಮಂಡ್ಯ ತಾಲ್ಲೂಕಿನ ಬೂದನೂರು, ಬೇಲೂರು, ಕೊತ್ತತ್ತಿ, ಕೆರಗೋಡು, ಮದ್ದೂರು ತಾಲ್ಲೂಕಿನ ತೈಲೂರು, ತಿಪ್ಪೂರು, ಆತಗೂರು, ಮಳವಳ್ಳಿ ತಾಲ್ಲೂಕಿನ ಹಲಗೂರು, ಕಲ್ಕುಣಿ, ನಾಗಮಂಗಲ ತಾಲ್ಲೂಕಿನ ಆರಣಿ ಇತ್ಯಾದಿ ಸ್ಥಳಗಳಲ್ಲಿ ಕೆರೆಗಳನ್ನು ನಿರ್ಮಿಸಿದರ ಬಗ್ಗೆ ೯–೧೧ನೇ ಶತಮಾನದ ಶಾಸನಗಳು ಸಿಗುತ್ತವೆ. ಅದೆಷ್ಟೋ ಶಾಸನಗಳು ಕಾಲಗತಿಯಲ್ಲಿ ಮರೆಯಾಗಿ ಹೋಗಿರಬಹುದು. ನೀರಾವರಿ ಸೌಕರ್ಯವನ್ನು ವಿಸ್ತರಿಸುವ ಮೂಲಕ ಖುಷ್ಕಿ ಭೂಮಿಯನ್ನು ತರಿಭೂಮಿಯನ್ನಾಗಿ ಪರಿವರ್ತಿಸಲು ಮುಂದಾದ ಅಂಶ ಗಂಗದೊರೆ ನೀತಿಮಾರ್ಗನ ಶಾಸನವೊಂದು ಮಳವಳ್ಳಿ ತಾಲ್ಲೂಕು ಯಮ್ಮದೂರಿನಲ್ಲಿ ಕಾಣಬರುತ್ತದೆ.

**ಪಂಚಕೂಟ ಬಸದಿ :**

ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿಯ ಪಂಚಕೂಟ ಬಸದಿಯಲ್ಲಿ ಹೆಸರೇ ಹೇಳುವಂತೆ ಐದು ಬಸದಿಗಳಿವೆ. ಮುಖ್ಯ ಬಸದಿ ಮೂಲತಃ ತ್ರಿಕೂಟಾಚಲವಾಗಿದ್ದು ನಂತರದಲ್ಲಿ ಇನ್ನೆರಡು ಬಸದಿಗಳು ನಿರ್ಮಾಣಗೊಂಡಿವೆ. ಉತ್ತರಾಭಿಮುಖವಾಗಿರುವ ಆದಿನಾಥ ಬಸದಿ ತ್ರಿಕೂಟಾಚಲದ ಮುಖ್ಯ ಬಸದಿಯಾಗಿದೆ. ಅದರ ಪೂರ್ವಕ್ಕೆ ಶಾಂತಿನಾಥ ಬಸದಿ, ಪಶ್ಚಿಮಕ್ಕೆ ನೇಮಿನಾಥ ಬಸದಿಗಳಿವೆ. ಈ ಮೂರೂ ಬಸದಿಗಳಿಗೂ ಅದರದೇ ಆದ ಅರ್ಧಮಂಟಪ-ಗಳಿದ್ದು ಅವೆಲ್ಲವೂ ಸರ್ವಸಮವಾದ ಮಹಾಮಂಟಪಕ್ಕೆ ಹೊಂದಿಕೊಂಡಿವೆ. ಆದಿನಾಥ ಬಸದಿಯ ಗ್ರೀವ (ಕತ್ತು ಅಥವಾ ಕೊರಳು) ಶಿಖರವು ಬ್ರಹ್ಮಛಂದ ಶೈಲಿಯ ಚತುಷ್ಕೋನ ಕೃತಿಯಲ್ಲಿ, ಶಾಂತಿನಾಥ ಬಸದಿಯ ಶಿಖರವು ರುದ್ರಛಂದ ಶೈಲಿಯ ವರ್ತುಲಾಕಾರದಲ್ಲಿ, ನೇಮಿನಾಥ ಬಸದಿಯ ಶಿಖರವು ವಿಷ್ಣುಛಂದ ಶೈಲಿಯ ಅಷ್ಟಕೋನಾಕೃತಿಯಲ್ಲಿ ಕಂಗೊಳಿಸುತ್ತವೆ. ಇವು ಹಿಂದೂ ದೇವಾಲಯಗಳ ಶಿಖರಗಳನ್ನು ಹೋಲುತ್ತವೆ. ಸೋಪಾನ ಹಾಗೂ ಮಕರಯಾಳಿಗಳುಳ್ಳ ಸ್ತಂಬಗಳ ತೆರೆದ ಮಹಾಮಂಟಪದ ಎದುರಿಗೆ ತೀರ ಹತ್ತಿರದಲ್ಲಿ ಬಲಿಪೀಠವಿದ್ದು ಅದರ ಅಷ್ಟಕೋನಾಕೃತಿಯ ಸ್ಥರಗಳಲ್ಲಿ ಅಷ್ಟದಿಕ್ಪಾಲಕರನ್ನು ಕೆತ್ತಲಾಗಿದೆ. ಬಲಿಪೀಠದ ಎದುರಿಗೆ ಪೂರ್ವಕ್ಕಾದಂತೆ ಮತ್ತದೇ ಹೆಸರಿನ ನಾಲ್ಕನೇ ಬಸದಿ ಶಾಂತಿನಾಥ ಹಾಗೂ ಐದನೇ ಆದಿನಾಥ ಬಸದಿಗಳಿವೆ. ಈ ಎರಡು ಬಸದಿಗಳಿಗೆ ಎರಡಂತಸ್ತಿನ ಚತುಷ್ಕೋನ ಅಷ್ಟಾಂಗ ನಾಗರ ಶೈಲಿಯ ಶಿಖರಗಳಿದ್ದು, ಅವುಗಳಿಗೂ ಅದರವೇ ಆದ ಅರ್ಧ ಹಾಗೂ ಮಹಾಮಂಟಪಗಳಿವೆ. ಈ ಮಹಾಮಂಟಪಗಳೂ ಸಹ ಸರ್ವಸಮವಾಗಿ ಮುಖಮಂಟಪಕ್ಕೆ ಹೊಂದಿಕೊಂಡಿವೆ. ಒಟ್ಟಾರೆ ಈ ದೇವಾಲಯಗಳ ಸಮೂಹಕ್ಕೆ

ಪಂಚಕೂಟ ಬಸದಿ ಎಂದು ಹೆಸರಾಗಿದೆ. ಈ ಪ್ರಾಕಾರದ ಉತ್ತರಕ್ಕೆ ದ್ವಿಕೂಟಾಚಲವಾದ ಶಾಂತಿನಾಥ ಬಸದಿಯೂ ಇದೆ. ಇವುಗಳನ್ನು ಕ್ರಮವಾಗಿ ಮೂರು ಕಾಲಘಟ್ಟಗಳಲ್ಲಿ ನಿರ್ಮಿಸಲಾಗಿದೆಯೆಂಬುದು ತಜ್ಞರ ಅಭಿಪ್ರಾಯವಾಗಿದೆ. ಇವು ಹಲವಾರು ಬಾರಿ ದುರಸ್ತಿಗೊಂಡಿರುವುದು ತಿಳಿದುಬರುತ್ತದೆ.

ಮುಖ್ಯ ಆದೀಶ್ವರ ಬಸದಿಯಲ್ಲಿ ಗಂಗರ ಕಾಲದ ವಾಸ್ತುಶಿಲ್ಪದ ಪೂರ್ಣ ವಿಕಾಸದೊಂದಿಗೆ ಪಲ್ಲವ ಶೈಲಿಯ ಪ್ರಭಾವವೂ ಕಂಡು ಬರುತ್ತದೆ. ಆದೀಶ್ವರ ಅಥವಾ ಆದಿನಾಥ (ಕ್ರಿ.ಶ. ೯೦೦) ಎಂದು ಕರೆಯಲಾಗುವ ಈ ಬಸದಿ ಮೂರು ಗರ್ಭಗುಡಿಗಳಿರುವ ತ್ರಿಕೂಟಾಚಲವಾಗಿದೆ. ದೇವಾಲಯದ ತಳಭಾಗ ಅಷ್ಟಕೋನಾಕಾರವಾಗಿದ್ದು ಗೋಡೆಯ ಮೇಲುಗಡೆ ಯಕ್ಷ, ಜಿನರ ಲತಾ ಪಟ್ಟಿಕೆಗಳಿವೆ. ಹೊರಗೋಡೆಗಳ ನಡುವೆ ಆಳವಿಲ್ಲದ ಒಂದೊಂದು ಗೂಡು ಮತ್ತು ಅದರ ಎರಡು ಕಡೆಯೂ ಅಲಂಕಾರದ ಅರೆಗಂಬಗಳಿವೆ. ನವರಂಗದ ಕಂಬಗಳು ಅಷ್ಟಕೋನಾಕೃತಿಯಲ್ಲಿದ್ದು ತುದಿಯು ಕಲಶಗಳಂತಿವೆ. ಚಾವಣಿಯ ನಡುವಣ ಅಂಕಣದ ಸುತ್ತಲೂ ಚಾವಣಿಗೆ ಹಾಕಿರುವ ಹಾಸುಗಲ್ಲುಗಳು ಹೊರಭಾಗಕ್ಕೆ ಚಾಚುವಾಗ ಅಗಲವಾಗುತ್ತ ಹೋಗುವುದರಿಂದ ಸುತ್ತಲೂ ಕಿರಣಗಳು ಹರಡಿರುವಂತೆ ತೋರುತ್ತವೆ. ಆದಿನಾಥಮೂರ್ತಿಯು ನಿರಾಭರಣವಾಗಿದ್ದು ತಪೋನಿರತವಾಗಿರುವ ಆತನ ಮುಖದಲ್ಲಿ ಶಾಂತತೆ, ತೇಜಸ್ಸು, ಓಜಸ್ಸು ಹೊಮ್ಮುವಂತೆ ಕಡೆದಿರಿಸಿರುವ ಶಿಲ್ಪ ಮನೋಜ್ಞವಾಗಿದೆ. ಯಕ್ಷ, ಯಕ್ಷಿಯರನ್ನಂತೂ ಭಾವಯುಕ್ತವಾಗಿ ಸುಂದರವಾಗಿ ಕಡೆಯಲಾಗಿದೆ. ಪೂರ್ವ ಪಶ್ಚಿಮದ ಗರ್ಭಗೃಹಗಳಲ್ಲಿ ಕ್ರಮವಾಗಿ ನೇಮಿನಾಥ ಹಾಗೂ ಶಾಂತಿನಾಥ ತೀರ್ಥಂಕರರ ಪದ್ಮಾಸೀನ ಮೂರ್ತಿಗಳಿವೆ. ಗಂಗರ ಸುಧಾರಿತ ಶೈಲಿಗೆ ಶಾಂತಿನಾಥ ಬಸದಿಯು ತಮಿಳುನಾಡಿನ ಮಹಾಬಲಿಪುರಂನಲ್ಲಿರುವ ದ್ರಾವಿಡ ಶೈಲಿಯ ಧರ್ಮರಾಜ ರಥದ ಕಟ್ಟಡವನ್ನು ಹೋಲುತ್ತದೆ. ಕಂಚಿಯ ಪಲ್ಲವ ದೊರೆ ಎರಡನೇ ನರಸಿಂಹವರ್ಮ (ಕ್ರಿ.ಶ. ೭೦೦-೭೨೮)ನ ಕಾಲದಲ್ಲಿ ರಚಿತವಾದ ಮಹಾಬಲಿಪುರದ ಪಾಂಡವರ ಕಲ್ಲು ರಥಗಳು ದ್ರಾವಿಡ ಪದ್ಧತಿಯ ವಿಕಾಸದ ಹಂತಗಳಾಗಿವೆ. ಇದಕ್ಕೂ ಮೊದಲಿನ ದ್ರಾವಿಡ ಶೈಲಿಯ ಮೂಲಮಾದರಿ ಉತ್ತರ ಭಾರತದ ಗುಪ್ತರ ಅಂತಸ್ತುಳ್ಳ ದೇವಾಲಯದಲ್ಲಿತ್ತು. ಈ ಸರಣಿಯಲ್ಲಿ ರಚನೆಯಾದ ಕಂಬದಹಳ್ಳಿಯ ಪ್ರಾರಂಭದ ಬಸದಿಗಳು ಈ ಭಾಗದಲ್ಲಿ ಕಾಣಬರುವ ಪ್ರಥಮ ಹಂತದ ದ್ರಾವಿಡ ಶೈಲಿ ಎಂದು ಪರಿಗಣಿಸಬಹುದಾಗಿದೆ.

ಈ ದೇವಾಲಯ ಸಂಕೀರ್ಣದಿಂದ ೨೦ ಅಡಿ ಅಂತರದಲ್ಲಿ ಉತ್ತರಕ್ಕಿರುವ ಶಾಂತಿನಾಥ ಬಸದಿಯು ಹೊಯ್ಸಳ ಮಾರ್ಗಕ್ಕೆ ಒಳಪಟ್ಟು ಹೊರ ಗೋಡೆಗಳ

ಮೇಲಿನ ಹಲವು ಪ್ರಾಣಿಗಳ ಕೆತ್ತನೆಗಳು ಹಾಗೂ ನವರಂಗದ ನಾಲ್ಕು ಕಂಬಗಳು ವಿಶಿಷ್ಟವಾಗಿವೆ. ಅದರ ಅಧಿಷ್ಠಾನದ ಒಂದು ಪಟ್ಟಿಕೆಯ ಮೇಲೆ ಆನೆ, ಸಿಂಹ, ಕುದುರೆ, ವ್ಯಾಳಿ, ಗೂಳಿಗಳಲ್ಲದೆ ಆನೆ-ಕುದುರೆ, ಆನೆ-ಸಿಂಹಗಳ ನಡುವಣ ಹೋರಾಟ ಯಾವುದೋ ಯುದ್ಧದ ಚಿತ್ರಣದಂತಿದೆ. ಇದನ್ನು ವಿಷ್ಣುವರ್ಧನನ ದಂಡನಾಯಕನಾದ ಗಂಗರಾಜನ ಮಗ ಬೊಪ್ಪನು ದ್ರೋಹಘರಟ್ಟಾಚಾರಿ ಎಂಬ ಶಿಲ್ಪಿಯಿಂದ ಕಟ್ಟಿಸಿದ್ದು ಎಂಬುದಕ್ಕೆ ಶಾಸನಾಧಾರವಿದೆ. ಇಲ್ಲಿರುವ ೧೨ ಅಡಿ ಎತ್ತರದ ಶಾಂತಿನಾಥಮೂರ್ತಿ ಭವ್ಯವಾಗಿದೆ.

ಕಂಬದಹಳ್ಳಿಯ ಪ್ರಮುಖ ವಿಶೇಷವೆಂದರೆ ಪಂಚಕೂಟ ಬಸದಿಯ ಉತ್ತರದಲ್ಲಿರುವ ೫೦ ಅಡಿ ಎತ್ತರದ ಕರಿಕಲ್ಲಿನ 'ಬ್ರಹ್ಮದೇವರ ಕಂಬ'. ಈ ಕಂಬದ ತಳಭಾಗದ ಎಂಟು ಮುಖಗಳ ಮೇಲೂ ಅಷ್ಟದಿಕ್ಪಾಲಕರ ಶಿಲ್ಪಗಳಿದ್ದು ಕಂಬದ ಮೇಲೆ ಪೂರ್ವಾಭಿಮುಖವಾಗಿ ಬ್ರಹ್ಮದೇವರ ಶಿಲ್ಪವಿದೆ. ಈ ಕಂಭದಿಂದಾಗಿ ಈ ಗ್ರಾಮಕ್ಕೆ ಈ ಹೆಸರು ಬಂದಿದೆ. ಪಂಚಕೂಟ ಬಸದಿಯ ಕೆಲ ಯಕ್ಷಿಣಿಯರ ವಿಗ್ರಹಗಳ ಆಕಾರವು ಭಾರೀಗಾತ್ರವಾಗಿದ್ದು ಚೋಳಶೈಲಿಯ ಪ್ರಭಾವವೂ ತಟ್ಟಿದೆ ಎಂಬ ಅಭಿಪ್ರಾಯವಿದೆ. ಇಡೀ ಪಂಚಕೂಟ ಬಸದಿಯನ್ನು ಅದರ ಮೂಲ ಸ್ವರೂಪಕ್ಕೆ ಧಕ್ಕೆಯಾಗದಂತೆ ಭಾರತೀಯ ಪುರಾತತ್ವ ಸರ್ವೇಕ್ಷಣ ಇಲಾಖೆ ಸಂರಕ್ಷಣೆಯಲ್ಲಿ ಸಕ್ರಿಯವಾಗಿದೆ. ಇಲ್ಲಿಗೆ ಸಮೀಪದಲ್ಲಿರುವ ಬಿಂಡಿಗನವಿಲೆಯಲ್ಲಿ ಕ್ರಿ.ಶ. ೯೭೫ರ ಒಂದು ನಿಷಧಿ ಶಾಸನವಿದೆ. ಅಮೃತಬ್ಬೆ ಎಂಬ ಕಂತಿಯು (ಜೈನ ಸನ್ಯಾಸಿನಿ) ಸಮಾಧಿ ಮರಣವನ್ನು ಹೊಂದಿದ ವಿಷಯ ತಿಳಿದು ಬರುತ್ತದೆ. ಅಂತೆಯೇ ಕಂಬದಹಳ್ಳಿಗೆ ಹತ್ತಿರವಿರುವ ಇನ್ನೊಂದು ಊರು ಹೊನ್ನಾವರದ ಲಕ್ಷ್ಮೀಕಾಂತ ಗುಡಿಯ ಬದಿಯಲ್ಲಿ ಶಾಸನವಿರುವ ಸುಪಾರ್ಶ್ವನಾಥನ ಭಗ್ನಗೊಂಡ ಶಿಲ್ಪಾಧಾರದಿಂದ ಇದೂ ಸಹ ಹಿಂದೆ ಜೈನ ಕೇಂದ್ರವಾಗಿತ್ತು ಎಂಬ ಅಂಶ ತಿಳಿದು ಬರುತ್ತದೆ. ಕಂಬದಹಳ್ಳಿಯ ನೈಋತ್ಯಕ್ಕೆ ಇರುವ ಬೋಳಾರೆ ಬೆಟ್ಟವನ್ನು ಈಗಲೂ ಮಹಾವೀರ ಬಸ್ತಿ ಎನ್ನಲಾಗುತ್ತದೆ. ದಕ್ಷಿಣಕ್ಕೆ ಪ್ರಾಕೃತಿಕವಾದ ಆಂಜನೇಯ ಬೆಟ್ಟವಿದೆ.

ಒಟ್ಟಾರೆ ಗಂಗರ ಕಾಲದ ಶಿಲ್ಪಗಳು ಗುಣಮಟ್ಟದಲ್ಲಿ ಉತ್ತಮಕೃತಿಗಳು. ಸಂಖ್ಯೆಯಲ್ಲಿ ಕಮ್ಮಿಯಿದ್ದರೂ ಶ್ರವಣಬೆಳಗೊಳದ ಗೊಮ್ಮಟ ಮೂರ್ತಿ ಎಂಥ ಅದ್ಭುತಕೊಡುಗೆ! ತೆಳು ಉಬ್ಬು ಶಿಲ್ಪಗಳಿಂದ ಹಿಡಿದು ಸಂಪೂರ್ಣ ಬಿಡಿಸಿರುವ ಬಿಡಿ ಶಿಲ್ಪಗಳವರೆಗೆ ಇವುಗಳ ವ್ಯಾಪ್ತಿ ಇದೆ. ಲತಾಪಟ್ಟಿಕೆಗಳು, ಹಂಸ, ವ್ಯಾಳ, ನೀರ್ಗುದುರೆಗಳ ಸಾಲುಗಳು, ಕೋಷ್ಠ ಶಿಲ್ಪಗಳು, ಜಾಲಂಧ್ರ ಶಿಲ್ಪಗಳು, ಕಟ್ಟು ಶಿಲ್ಪಗಳು, ಬಿಡಿ ಶಿಲ್ಪಗಳು ಇತ್ಯಾದಿಯಾಗಿ ವಾಸ್ತುಚೌಕಟ್ಟಿಗೆ ಹೊಂದುವಂತೆ ಹಿತಮಿತವಾದ ಶಿಲ್ಪಾಲಂಕಾರವನ್ನು ಗಂಗ ದೇವಾಲಯಗಳು ಹೊಂದಿರುತ್ತವೆ.

**ಆತಕೂರು ಚಲ್ಲೇಶ್ವರ :**

ಗಂಗರ ಕಾಲದ ಗುಡಿ ಎಂದೇ ಪ್ರಸಿದ್ಧವಾಗಿರುವ ಮದ್ದೂರು ತಾಲ್ಲೂಕು ಆತಕೂರು ಚಲ್ಲೇಶ್ವರ ಗುಡಿ ತರುವಾಯ ಚೋಳರ ತೆಕ್ಕೆಯಲ್ಲಿ ಕಲ್ಲಿನೊಂದಿಗೆ ಮಾರ್ಪಾಡು ಹೊಂದಿತ್ತು. ಅದು ಶಿಥಿಲಗೊಂಡಿತ್ತಾದರೂ ಇತ್ತೀಚಿನ ವರ್ಷಗಳಲ್ಲಿ ಅದು ಯಥಾಸ್ಥಿತಿಯಲ್ಲಿ ಜೀರ್ಣೋದ್ಧಾರಗೊಂಡಿತು. ಗರ್ಭಗುಡಿ, ಸುಖನಾಸಿ, ನವರಂಗ ಹಾಗೂ ಮುಖ ಮಂಟಪಗಳಿಂದ ಕೂಡಿದೆ. ವಿಶೇಷವಾಗಿ ಈ ಗುಡಿಯ ಮುಂದಿದ್ದ 'ಕಾಳಿ' ಎಂಬ ನಾಯಿಯ ಶಾಸನದ ಬಗ್ಗೆ ಹೇಳದಿದ್ದರೆ ವಿಷಯ ಅಪೂರ್ಣ ಎನಿಸುತ್ತದೆ. ಈ ಶಾಸನ ಗಂಗರ ಕಾಲದ್ದಾಗಿದೆ. ಈಗ ಇದನ್ನು ಬೆಂಗಳೂರಿನ ಸರಕಾರಿ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ರಕ್ಷಿಸಲಾಗಿದೆ.

ಕ್ರಿ.ಶ. ೯೫೦ರ ಈ ಶಾಸನ ಕರ್ನಾಟಕದ ಶಾಸನ ಸಂಪತ್ತಿನಲ್ಲಿ ಅಪೂರ್ವವಾಗಿದೆ. ಅದು ಆತಕೂರು ಶಾಸನವೆಂದು ಪ್ರಸಿದ್ಧಿಯಾಗಿದೆ. ಪ್ರೀತಿ ಪಾತ್ರ ಪ್ರಾಣಿಗಳ ನೆನಪಿಗಾಗಿ ಹಾಕಿಸಿದ ಅಪರೂಪದ ದಾಖಲೆಗಳಲ್ಲಿ ಇದೂ ಒಂದಾಗಿದೆ. ಗಂಗವಂಶದ ಇಮ್ಮಡಿಬೂತಗನ ಕೈಳಗೆ ಅಧಿಕಾರಿಯಾದ ಸಗರವಂಶದ ಮಣಲೆರ ಎಂಬಾತ ರಾಷ್ಟ್ರಕೂಟ ಅರಸು ಕಚ್ಚೆಗ ಕೃಷ್ಣರಾಜನು ಮೂವಡಿ ಚೋಳರ ವಿರುದ್ಧ ಹೂಡಿದ ತಕ್ಕೋಲದ ಸಮರದಲ್ಲಿ ಸಾಹಸದಿಂದ ಹೋರಾಡಿದ. ಆತನ ಶೌರ್ಯಕ್ಕೆ ಮೆಚ್ಚಿದ ಅರಸು ಕೃಷ್ಣರಾಜನಿಂದ ಬಳುವಳಿಯಾಗಿ 'ಕಾಳಿ' ಎಂಬ ಹೆಸರಿನ ಬೇಟೆನಾಯಿಯೊಂದನ್ನು ಮಣಲೆರ ಬೇಡಿ ಪಡೆದನೆಂಬ ಸಂಗತಿಯನ್ನು ಆತಕೂರು ಶಾಸನ ತಿಳಿಸುತ್ತದೆ. ಮುಂದೊಮ್ಮೆ ಮಣಲೆರನು ಬೇಟೆಯಾಡುವ ಸಂದರ್ಭದಲ್ಲಿ ಕಾಳಿಯು ಒಂದು ದೊಡ್ಡ ಕಾಡು ಹಂದಿಯೊಂದಿಗೆ ನೆರೆಯ ಬೆಳತೂರು ಎಂಬಲ್ಲಿ ಹೋರಾಡಿ ಅದೂ ಸಹ ಅದರೊಂದಿಗೆ ಪ್ರಾಣಕಳೆದುಕೊಳ್ಳುತ್ತದೆ. ಸ್ವಾಮಿನಿಷ್ಠ ನಾಯಿಗಾಗಿ ಮಣಲೆರನು ದತ್ತಿಬಿಟ್ಟ ಶಾಸನಕಲ್ಲೊಂದನ್ನು ಆತಕೂರಿನ ಚಲ್ಲೇಶ್ವರ ದೇವಸ್ಥಾನದ ಮುಂದೆ ನೆಡಿಸಿದನು. ಈ ವೀರಗಲ್ಲನ್ನು ಪ್ರತಿನಿತ್ಯವೂ ಪೂಜಿಸುವುದಕ್ಕಾಗಿ ಒಬ್ಬ ಗೊರವನನ್ನು ನಿಯಮಿಸಿ ಆತನಿಗೆ ಪಿರಿಯಕೆರೆ ಕೆಳಗೆ ಎರಡು ಖಂಡುಗದ ಭೂಮಿಯನ್ನು ದಾನ ಮಾಡುತ್ತಾನೆ. ಈ ಭೂಮಿಯನ್ನು ಹಾಳು ಮಾಡಿದವರಿಗೆ ಉಂಟಾಗುವ ಪಾಪದ ಬಗ್ಗೆ ಹಾಗೂ ಈ ಭೂಮಿಯನ್ನು ಉಪಯೋಗಿಸಿಕೊಳ್ಳುವ ಅರ್ಚಕನಾದ ಗೊರವ ದೇವಾಲಯ ಮತ್ತು ಶಾಸನಕಲ್ಲನ್ನು ಸರಿಯಾಗಿ ಪೂಜಿಸದೆ, ನೋಡಿಕೊಳ್ಳದೆ ಕೈ ಬಿಟ್ಟರೆ ಆತನಿಗೂ ಅಂಟುವ ಪಾಪದ ಬಗ್ಗೆ ಹೇಳಲಾಗಿದೆ. ಮುಂದೆ ಈ ಶಾಸನದಲ್ಲಿ ಪಾಲ್ಗೊಂಡ ಯುದ್ಧದ ವರ್ಣನೆ ಇದೆ. ಈ ಶಾಸನದಲ್ಲಿ ನಾಯಿಯು ಹಂದಿಯೊಡನೆ ಹೋರಾಡುತ್ತಿರುವ ದೃಶ್ಯವನ್ನು ಚಿತ್ರಿಸಲಾಗಿದೆ. ಅದರ ಸುತ್ತಲೂ ಶಾಸನ ಬರಹವಿದೆ. ಒಟ್ಟಿನಲ್ಲಿ ಇದೊಂದು ಅಪರೂಪದ ಅಪೂರ್ವ

ಶಾಸನವಾಗಿದೆ. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ ಶಾಸನದ ಹಿಂದಿನ ಪಾಠಾಂತರದಲ್ಲಿ ಕಾಳಿ ನಾಯಿಯನ್ನು ಬೂತುಗ ಕೊಟ್ಟನೆಂದು ಹೇಳಲಾಗಿದೆ. ನಂತರ ಅದನ್ನು ತಿದ್ದುಪಡಿ ಮಾಡಿದ ಶಾಸನ ತಜ್ಞರು ಬೇಟೆ ನಾಯಿಯನ್ನು ಕೊಡುಗೆಯಾಗಿ ನೀಡಿದವನು ಅರಸು ಕಚ್ಚೆಗ ಕೃಷರಾಜನೇ ಹೊರತು ಬೂತುಗನಲ್ಲ ಎಂದು ದೃಢಪಡಿಸಿದ್ದಾರೆ. ನಾಗವರ್ಮನ ಕಾವ್ಯಾಲೋಕದ ಪದ್ಯವೊಂದರ ಆಧಾರದ ಮೇಲೆ (ಸಂಖ್ಯೆ ೧೮೩) ಮುಮ್ಮಡಿ ಕೃಷ್ಣ (ರಾಷ್ಟ್ರಕೂಟ) ತನ್ನ ಬಳಿ ಬೇಟೆನಾಯಿಗಳ ಹಿಂಡೊಂದನ್ನು ಇಟ್ಟುಕೊಂಡಿದ್ದ ನೆಂಬ ಸಂಗತಿಯೂ ತಿದ್ದುಪಡಿಗೆ ಪುಷ್ಟಿನೀಡಿದೆ. ಶಾಸನದಲ್ಲಿ ಬೂತುಗನು ಮಣಲೆರನ ಪ್ರಭುವಾಗಿ ಮಾತ್ರ ಕಾಣಿಸಿಕೊಂಡಿದ್ದಾನೆ.

## ಚೋಳರ ಕಾಲ

ಚೋಳರು ಕರ್ನಾಟಕದ ಭಾಗವನ್ನು ಆಕ್ರಮಿಸಿಕೊಂಡ ಕಾಲದಲ್ಲಿ ದೇವಾಲಯಗಳ ನಿರ್ಮಾಣದಲ್ಲಿ ಒಂದು ಉತ್ಕ್ರಾಂತಿಯೇ ನಡೆದಿತ್ತು. ತಮಿಳುನಾಡಿನಲ್ಲಿ ಅದ್ಭುತ ದೇವಾಲಯಗಳು ಅದರಲ್ಲಿಯೂ ತಂಜಾವೂರಿನ ಬೃಹದೇಶ್ವರ ದೇವಾಲಯದ ನಿರ್ಮಾಣ ಆರಂಭವಾಗಿತ್ತು. ಕ್ರಿ.ಶ. ೯೮೦ರ ಹೊತ್ತಿಗೆ ಗಂಗರ ರಾಜಕೀಯ ವ್ಯವಸ್ಥೆ ದುರ್ಬಲವಾಗಿ ಗಂಗವಾಡಿಯ ಆಗ್ನೇಯ ಭಾಗದಲ್ಲಿ ಮಂಡ್ಯ ಜಿಲ್ಲೆಯ ಕೆಲವು ಭಾಗಗಳೂ ಕೂಡ ಚೋಳರ ಆಡಳಿತಕ್ಕೆ ಒಳಪಟ್ಟವು. ಚೋಳದೊರೆ ರಾಜರಾಜನು ಈ ಭಾಗಕ್ಕೆ ಮುಡಿಗೊಂಡ ಚೋಳಮಂಡಲ ಎಂದು ಹೆಸರಿಸಿ ತಲಕಾಡನ್ನು ಪ್ರಾಂತೀಯ ರಾಜಧಾನಿಯನ್ನಾಗಿ ಮಾಡಿಕೊಂಡು ಅಲ್ಲಿ ತೆಲ್ಲಕುಲದ ಅಪ್ರಮೇಯನನ್ನು ತನ್ನ ಪ್ರತಿನಿಧಿಯಾಗಿ ನೇಮಿಸಿದನು. (ಚನ್ನಪಟ್ಟಣ ಬಳಿ ಇರುವ ದೊಡ್ಡಮಳೂರಿನ ಅಪ್ರಮೇಯ ದೇವಾಲಯ ಈತನ ನಿರ್ಮಾಣವಾಗಿದೆ.) ಕಲಾದೃಷ್ಟಿಯಿಂದ ಗಂಗರ ಕಾಲದ ಇಟ್ಟಿಗೆ ಕಟ್ಟಡಗಳನ್ನು ಬದಲಾಯಿಸಿ ಕಲ್ಲಿನ ರೂಪಾಂತರ ಮಾಡಿದರು. ಚೋಳರ ದೇವಾಲಯಗಳ ಬಗ್ಗೆ ಒಂದು ದಂತಕತೆ ಈಗಲೂ ಜೀವಂತವಾಗಿದೆ. 'ರಾತ್ರಿ ಕಳೆದು ಬೆಳಗಾಗುವುದರೊಳಗೆ ಚೋಳರು ಕಟ್ಟಿಸಿದ ಗುಡಿಗಳು ದೇವಾಲಯಗಳು' ಎಂಬ ಮಾತು ಆಯಾ ಊರಿನ ಗುಡಿಗಳ ಮೇಲಿನ ಅಚ್ಚರಿ ಮತ್ತು ಅಭಿಮಾನವನ್ನು ವ್ಯಕ್ತಪಡಿಸುತ್ತದೆ. ಇದು ಗಂಗರಸರ ಕಾಲದ ಇಟ್ಟಿಗೆ ಕಟ್ಟಡಗಳನ್ನು ವ್ಯಾಪಕವಾಗಿ ಕಲ್ಲಿನ ಕಟ್ಟಡಗಳನ್ನಾಗಿ ಬದಲಾಯಿಸಿದ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿತೇನೋ ಎನ್ನಬಹುದು. ಅಥವಾ ನೂರಿಪ್ಪತ್ತು ವರ್ಷದಷ್ಟು ಈ ಭಾಗವನ್ನು ಆಳಿದ ಚೋಳರ ಪ್ರಭಾವದ ಪರಿಣಾಮವೂ ಇರಬಹುದು. ಇವರ ಕಾಲದ ಪಂಚಾಯ್ತಿ ವ್ಯವಸ್ಥೆ ಅಥವಾ ಗ್ರಾಮಾಡಳಿತ ಇವತ್ತಿಗೂ ಅಧ್ಯಯನ ಮಾಡುವಂತದ್ದಾಗಿದೆ. ಇವರು

ಗ್ರಾನೈಟ್ (ಬೆಣಚು ಕಲ್ಲು) ಶಿಲೆಯನ್ನು ದೇವಾಲಯ ನಿರ್ಮಾಣಕ್ಕೆ ಬಳಸಿದರು. ದಪ್ಪವಾದ ದಿಮ್ಮಿಗಳನ್ನು ಕೂಡಿಸಿ ಹೊರಮೈಯನ್ನು ಸರಳವಾಗಿ ನಯಗೊಳಿಸಿ ಅಲಂಕರಿಸಿದರು. ಅವುಗಳ ಮೇಲಿನ ಶಿಲ್ಪವನ್ನು ಸ್ಪಷ್ಟವಾಗಿ ಬಿಡಿಸಿ ಅವು ಎದ್ದು ಕಾಣುವಂತೆ ಕಂಡರಿಸುವುದು ಚೋಳ ಶೈಲಿಯ ವೈಶಿಷ್ಟ್ಯ. ಚೌಕನೆಯ ಗರ್ಭಗೃಹ, ಅಂತರಾಳ (ಸುಖನಾಸಿ), ಮಹಾಮಂಟಪ ಮತ್ತು ಮುಖಭದ್ರ, ಹೊರಗೋಡೆಗಳಲ್ಲಿ ಅಲ್ಲಲ್ಲಿ ಅರೆಗಂಬಗಳು, ನಡುವೆ ಆಳವಿಲ್ಲದ ಗೂಡುಗಳು, ಗೂಡುಗಳಲ್ಲಿ ಕೆಲವೊಮ್ಮೆ ಮೂರ್ತಿಗಳು, ಗುಂಡಾಗಿ ಬಾಗಿರುವ ಲೋವೆಗಳು, ಲೋವೆಗಳ ಕೆಳಗೆ ಹಂಸ ಅಥವಾ ಯಾಳಿಗಳ ಸಾಲು ಗಮನೀಯವಾಗಿರುತ್ತದೆ. ಒಳಭಾಗವೂ ಸಹ ಬಹಳ ಸರಳ ಸಾಮಾನ್ಯವಾಗಿದ್ದು, ನವರಂಗದ ಕಂಭಗಳು ಎತ್ತರವಾಗಿರುತ್ತವೆ. ದಿಂಡು ಮಧ್ಯದಲ್ಲಿ ದಾನಿಯಾಕಾರದ ಮೇಲ್ಮೈಯನ್ನು ಹೊಂದಿರುತ್ತದೆ. ಅಗಲವಾದ 'ಪಲಗೈ ಅಭ್ಯಾಕಸ್' ಅಂದರೆ ದಿಂಬಿನಾಕಾರದ ಬೋದಿಗೆ ಇವುಗಳು ಕಂಭದ ಮೇಲ್ಗಡೆ ಕಾಣಬರುತ್ತವೆ. ಏಕ ಮತ್ತು ದ್ವಿತಲ ವಿಮಾನ, ಒಂದು ಅಥವಾ ಮೂರು ಅಂತಸ್ತಿನಲ್ಲಿ (ಬೆಸ ಸಂಖ್ಯೆಯಲ್ಲಿ) ಮೇಲೇರುವ ಗೋಪುರಗಳು ಇತ್ಯಾದಿ ಮುಖ್ಯ ಲಕ್ಷಣಗಳು. ಒಟ್ಟಾರೆ ಚೋಳರ ಆಳ್ವಿಕೆಯಲ್ಲಿ ದ್ರಾವಿಡ ಶೈಲಿಯು ಒಂದು ವಿಶಿಷ್ಟ ಘಟ್ಟವನ್ನು ಪ್ರವೇಶಿಸಿತು.

### ಮಾರೇಹಳ್ಳಿಯ ಲಕ್ಷ್ಮೀನರಸಿಂಹ :

ಮಂಡ್ಯ ಜಿಲ್ಲೆಯಲ್ಲಿ ಚೋಳರ ಕಾಲದ ಪ್ರಾಚೀನ ಮತ್ತು ವಿಶಿಷ್ಟ ಶೈಲಿಯ ದೇವಾಲಯವೆಂದರೆ ಮಳವಳ್ಳಿಗೆ ಸಮೀಪದಲ್ಲಿರುವ ಕ್ರಿ.ಶ. ೧೦೪೭ರ ಶಾಸನದಲ್ಲಿ ಚೋಳೇಂದ್ರ ಚತುರ್ವೇದಿ ಮಂಗಲ ಎಂದು ಉಲ್ಲೇಖಿಸಿರುವ ಮಾರೇಹಳ್ಳಿಯ ಲಕ್ಷ್ಮೀನರಸಿಂಹ ದೇವಾಲಯ. ಕೆಲವು ಕಂಬಗಳಲ್ಲಿ ವಿಶೇಷವಾದ ಕಲೆಗಾರಿಕೆಯೊಂದಿಗೆ ನೂರೊಂದು ಅಂಕಣದ ಒಂದು ಬೃಹತ್ ದೇವಾಲಯ. ಹಿಂದೆ ಏಳು ದ್ವಾರಗಳು ಇದ್ದವೆಂದು ಪ್ರತೀತಿ ಇದೆ. ಇಲ್ಲಿನ ಒಂದು ಶಾಸನದಲ್ಲಿ 'ರಾಜಾಶ್ರಯ ವಿಣ್ಣಗರಂ' (ರಾಜಾಶ್ರಯ ವಿಷ್ಣುನಗರ) ಎಂದು ಬಣ್ಣಿಸಲಾಗಿದೆ. ರಾಜಾಶ್ರಯ ಎಂಬುದು ಚೋಳದೊರೆ ರಾಜರಾಜನಿಗೆ ಪ್ರಾಪ್ತವಾಗಿದ್ದ ಬಿರುದು. ದೇವಾಲಯದ ಸುಖನಾಸಿಯ ಕುಬ್ಜ ಕಂಬಗಳು ಪ್ರಾರಂಭದ ಚೋಳ ಶೈಲಿ ಎಂದು ಹೇಳಲಾಗುತ್ತದೆ. ಗರ್ಭಗುಡಿಯಲ್ಲಿ ಲಕ್ಷ್ಮೀಸಮೇತನಾದ ನರಸಿಂಹ ಸುಖಾಸೀನದಲ್ಲಿ ಕುಳಿತಿರುವ ಭಂಗಿ ಆಕರ್ಷಕವಾಗಿದೆ. ಅದರ ಬಾಗಿಲುವಾಡವು ಪಂಚಶಾಖಾಲಂಕೃತಗೊಂಡಿದ್ದು ಇನ್ನಷ್ಟು ಇಂಬುಗೊಡುತ್ತದೆ. ದೇವಾಲಯದ ಭಿತ್ತಿಯನ್ನು ಅಲಂಕಾರಿಕ ಸ್ತಂಭಗಳು ಅಪ್ಪಿನಿಂತಿವೆ. ಸುತ್ತಾಲಯದ ಹಿಂತುದಿಯಲ್ಲಿ

ಭೂದೇವಿ ಹಾಗೂ ನೀಳಾದೇವಿಯರ ಕಿರುಗುಡಿಗಳಿದ್ದು, ಗುಡಿಯ ಪ್ರವೇಶದಲ್ಲೇ ಎಡಭಾಗದಲ್ಲಿ ಆಂಜನೇಯ ಗುಡಿಯೂ ಇದೆ. ದೇವಾಲಯದ ಎದುರಿಗಿರುವ ಗರುಡಗಂಬದ ಬಳಿಯಲ್ಲೇ ೧೨ ಕಂಬದ ತೆರೆದ ಮಂಟಪವಿದೆ. ಈ ಗುಡಿಯ ಬಳಿಯುಲ್ಲಿರುವ ಗರುಡಕೊಳ, ಗರುಡಮಂಟಪ ಗಮನಾರ್ಹವಾಗಿವೆ. ದೇವಾಲಯದ ಎಡಮುಂಭಾಗದಲ್ಲಿರುವ ಅಮೃತೇಶ್ವರ ದೇವಾಲಯವು ಗರ್ಭಗೃಹ, ತೆರೆದ ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು, ಮೇಲೆ ಸುಂದರ ಗಾರೆ ಶಿಖರವಿದೆ. ಈ ದೇವಾಲಯವನ್ನು ಕ್ರಿ.ಶ. ೧೫೨೧ ರ ಶಾಸನದಲ್ಲಿ ಮೂಲಸ್ಥಾನ ದೇವರೆಂದು ಕರೆಯಲಾಗಿದೆ. ಒಟ್ಟಾರೆ ಲಕ್ಷ್ಮೀನರಸಿಂಹ ದೇವಾಲಯವು ಮುಂದೆ ಹೊಯ್ಸಳ ಹಾಗೂ ವಿಜಯನಗರ ಕಾಲದಲ್ಲಿ ಹೊಸ ಮಾರ್ಪಾಡಿನೊಂದಿಗೆ ಜೀರ್ಣೋದ್ಧಾರವಾಗಿರುವ ಸಂಗತಿಗಳು ಬೆಳಕಿಗೆ ಬರುತ್ತವೆ. ವಿಶೇಷವಾಗಿ ಇಲ್ಲಿನ ಕೊಳದ ಸಮೀಪದ ಕಂಬಗಳು ಚಾಲುಕ್ಯ ಪೂರ್ವಕಾಲಕ್ಕೆ ಸೇರಿದುವೆಂಬ ಅಭಿಪ್ರಾಯವೂ ಇದೆ. ಈ ದೇವರ ಜಾತ್ರೆಯು ವರ್ಷಂಪ್ರತಿ ಜೇಷ್ಠ ಶುದ್ಧ ದಶಮಿಯಿಂದ ೧೨ ದಿನಗಳ ಕಾಲ ಜರಗುತ್ತದೆ. ಕಡೆಯ ದಿನ ಹರಿಜನರ ಸೊಪ್ಪಿನ ಸೇವೆ ಗಮನಾರ್ಹವಾಗಿದೆ. ರಾಗಿಮುದ್ದೆ, ಕೀರೆಸೊಪ್ಪು ಸಾರಿನ ನೈವೇದ್ಯ ಮತ್ತು ಸಂತರ್ಪಣೆ ಜರುಗುತ್ತದೆ.


### ಭವ್ಯ ಮೂರ್ತಿಯ ಕಲಾ ಸೌಂದರ್ಯ :


ಮದ್ದೂರಿನಲ್ಲಿ ಪ್ರಮುಖವಾಗಿ ದೇಶೇಶ್ವರ, ಉಗ್ರನರಸಿಂಹ ಮತ್ತು ಅಲ್ಲಾಳನಾಥ ಅಥವಾ ವರದರಾಜಸ್ವಾಮಿ ಪ್ರಮುಖವಾದ ಪ್ರಾಚೀನ ಗುಡಿಗಳು, ಗಂಗ–ಚೋಳರ ಆಡಳಿತದಲ್ಲಿ ಚಿಕ್ಕಗಂಗವಾಡಿ ಪ್ರದೇಶದ ಒಂದು ಪ್ರಮುಖ ಸ್ಥಳವೂ ಆಗಿತ್ತು. ಚೋಳರ ಕಾಲದಲ್ಲಿ ಮದ್ದೂರಿಗೆ 'ಶೋಣಿ/ಪಂಚವನ್ ಮಹಾದೇವಿ ಚತುರ್ವೇದಿ ಮಂಗಲ' ಎಂಬ ಹೆಸರಿತ್ತು. ನಂತರ ಹೊಯ್ಸಳರ ಕಾಲಕ್ಕೆ ಅದು 'ನರಸಿಂಹ ಚತುರ್ವೇದಿ ಮಂಗಲ' ಎಂದಾಯಿತು. ಶೈವದಿಂದ ವೈಷ್ಣವಕ್ಕೆ ಬಂದಂತಾಯಿತು. ಹೀಗಾಗಿ ಮದ್ದೂರಿನ ಕಲೆ, ಸಂಸ್ಕೃತಿ, ವಾಸ್ತುಶಿಲ್ಪ, ಶಿಲ್ಪಕಲೆ ಚೋಳ ಹೊಯ್ಸಳ ಸಮ್ಮಿಶ್ರಣ ಕಲೆಯಾಗಿ ಹೊರಹೊಮ್ಮಿತು. ಚೋಳ ವಿಭಾಗದಲ್ಲಿ ಅಧಿಕಾರ ಸೂತ್ರ ಹಿಡಿದ ಹೊಯ್ಸಳರು ತಮ್ಮ ಹಲವು ಶಾಸನಗಳನ್ನು ತಮಿಳು ಭಾಷೆಯಲ್ಲಿಯೇ ಕೆತ್ತಿಸಿಹಾಕಿಸಿದರು.


ಇಲ್ಲಿರುವ ಅಲ್ಲಾಳನಾಥ ಅಥವಾ ವರದರಾಜಸ್ವಾಮಿ ಭವ್ಯ ಮೂರ್ತಿಯ ಗುಡಿ ಉಗ್ರನರಸಿಂಹ ದೇವಾಲಯದ ಪಕ್ಕದಲ್ಲಿ ಉನ್ನತವಾದ ಹಾಗೂ ವಿಸ್ತಾರವಾದ ಕಟ್ಟೆಯ ಮೇಲೆ ನಿರ್ಮಾಣಗೊಂಡಿದೆ. ದೇವಾಲಯದ ವಾಸ್ತು ಸಾಮಾನ್ಯವಾದರೂ

ಪ್ರವೇಶ ಆಕರ್ಷಕವಾಗಿದೆ. ಎತ್ತರವಾದ ಗರ್ಭಗುಡಿಯಲ್ಲಿರುವ ಅಲ್ಲಾಳನಾಥ ಮೂರ್ತಿ ಶಿಲ್ಪಕಲೆಯ ಪರಾಕಾಷ್ಠತೆಯನ್ನು ಮೆರೆದಿದೆ. ಈ ಮೂರ್ತಿಯನ್ನು ಹೊಯ್ಸಳ ಪ್ರಖ್ಯಾತ ದೊರೆ ವಿಷ್ಣುವರ್ಧನ ತನ್ನ ತಾಯಿ ಸಲುವಾಗಿ ನಿರ್ಮಿಸಿದ ಎಂಬ ಪ್ರತೀತಿ ಇದೆ. ದೂರದ ಕಂಚಿಯವರೆಗೆ ಪ್ರಯಾಣ ಬೆಳಸಲಾಗದ ತನ್ನ ತಾಯಿ ಅಪೇಕ್ಷೆಯಂತೆ ಕಂಚಿಯವರದರಾಜನಿಗಿಂತಲೂ ಭವ್ಯವಾದ ಅದೇ ಹೆಸರಿನ ಮೂರ್ತಿಯನ್ನು ಮದ್ದೂರಿನಲ್ಲಿ ಕಡೆಸಿದ ಎಂಬ ದಂತಕಥೆ ಪ್ರಚಲಿತದಲ್ಲಿದೆ. ಇದಕ್ಕೆ ಪೂರಕವಾಗಿ ಮೂರ್ತಿಯ ಕೆತ್ತನೆಯ ಕೆಲಸ ಹೊಯ್ಸಳ ಶೈಲಿಯ ಕುಸುರಿಯಿಂದ ಶೋಭಿತವಾಗಿದ್ದರೂ ಚೋಳ ಶೈಲಿಯ ಅದ್ಭುತ ಆಕಾರವಿದೆ. ಹೀಗಾಗಿ ಇದೊಂದು ರೀತಿಯ ಚೋಳ–ಹೊಯ್ಸಳ ಸಮ್ಮಿಶ್ರಣ ಕಲೆಯಾಗಿ ಹೊರಹೊಮ್ಮಿದೆ. ಈ ದೇವರಿಗೆ ದತ್ತಿಬಿಟ್ಟ ಹಲವು ಶಾಸನಗಳಲ್ಲಿ ಕಂಚಿಯ ಪಾಂಡ್ಯರಾಜ ಕೋನೇರಿನ್ಮೈಕೊಂಡನ್ ತನ್ನ ಪ್ರತಿನಿಧಿಯ ಮೂಲಕ ಪ್ರಸಾದ ಮತ್ತು ಹೂವಿಗಾಗಿ ದತ್ತಿಬಿಟ್ಟ ಶಾಸನ ಕಂಚಿಗೂ ಇಲ್ಲಿಗೂ ಸಂಬಂಧವನ್ನು ಬೆಳಸುತ್ತದೆ.

ಒಟ್ಟಾರೆ ಶಿಲ್ಪಕಲೆಯ ವೈಭವೀಕರಣ ಇಲ್ಲಿ ನೆಲೆನಿಂತಿದೆ. ಸುಮಾರು ಎರಡೂವರೆ ಅಡಿ ಎತ್ತರದ ಪೀಠದ ಮೇಲೆ ಹನ್ನೆರಡು ಅಡಿ ಎತ್ತರದ ಕಸ್ತೂರಿ ಬಣ್ಣದ ಶಿಲಾಮೂರ್ತಿ ಅತ್ಯಾಕರ್ಷಕವಾಗಿದೆ. ಇದನ್ನು ಸಾಲಿಗ್ರಾಮದ ಶಿಲೆ ಎನ್ನುತ್ತಾರೆ. ಅನುಪಮವಾದ ಕುಸುರಿ ಕೆತ್ತನೆಯಲ್ಲಿ ಕಂಡರಿಸಲಾಗಿದೆ. ಮುಡಿಯ ಕಿರೀಟ, ಶಂಖ, ಚಕ್ರ, ಪದ್ಮ, ಗದೆ, ಪೀತಾಂಬರ, ಕೈ ಮತ್ತು ಕಾಲು ಬೆರಳಿನ ವಿವಿಧ ಬಗೆಯ ಉಂಗುರಗಳು, ಯಜ್ಞೋಪವೀತ, ವಕ್ಷಸ್ಥಲದಲ್ಲಿ ಲಕ್ಷ್ಮಿ ಒಟ್ಟಾರೆ ದೃಢವಾಗಿ ಪಾದ ಊರಿನಿಂತ ಚತುರ್ಭುಜಧಾರಿ ವಿಷ್ಣುವಮೂರ್ತಿಯು ನಿಲುವು ಅಮೋಘವಾಗಿದೆ. ಕೈ ಬೆರಳಿನ ಉಗುರನ್ನೂ ಬಿಡಿಸಲಾಗಿದೆ. ಈ ಶಿಲ್ಪದ ವಿಶೇಷವೆಂದರೆ ಹಿಮ್ಮುಖದ ಕೆತ್ತನೆ! ಈ ಕಾರಣ ಕ್ಕಾಗಿಯೇ 'ಎಲ್ಲ ದೇವರ ಮುಂದೆ ನೋಡು, ಮದ್ದೂರು ಅಲ್ಲಾಳನಾಥನ ಹಿಂದೆ ನೋಡು' ಎನ್ನುವ ನಾಣ್ಣುಡಿ ಇದೆ. ಮೂರ್ತಿಯ ಹಿಂದೆ ಕಾಣಬರುವ ಇಳಿಬಿಟ್ಟ ಕೇಶಾಲಂಕಾರ, ಧರಿಸಿದ ಪೀತಾಂಬರ, ಗಾಂಭೀರ್ಯದಲ್ಲಿ ನಿಂತ ದೇಹದ ನಿಲುವು, ಹಿಮ್ಮಡಿಯಿಂದ ಕಾಣುವ ಪಾದ ಹೀಗೆ ಸರ್ವವೂ ಕಣ್ಮನ ಸೆಳೆಯುತ್ತದೆ. ಈ ಮೂರ್ತಿಯ ಮತ್ತೊಂದು ಆಕರ್ಷಣೆಯೆಂದರೆ ಕಣ್ಣು ಅಥವಾ ನೇತ್ರ, ದೈವ ಮೋಹಕವಾದ ಅರಳಿದ ಕಣ್ಣುಗಳು. ಹೀಗಾಗಿ ಈ ಮೂರ್ತಿಗೆ 'ನೇತ್ರನಾರಾಯಣ' ಎಂಬ ಹೆಸರು ಸಹ ಅನ್ವರ್ಥವಾಗಿದೆ. ತಮಿಳಿನಲ್ಲಿ 'ಕಣ್ವರದ ಸ್ವಾಮಿ' ಎನ್ನುತ್ತಾರೆ. ಈ ಮೂರ್ತಿಯನ್ನು ತದೇಕ ಚಿತ್ತದಿಂದ ದರ್ಶನ ಮಾಡಿದರೆ ದೃಷ್ಟಿದೋಷ ಪರಿಹಾರವಾಗುವುದೆಂಬ ನಂಬಿಕೆಯೂ ಇದೆ. ರಾಜ ವಿಷ್ಣುವರ್ಧನನ ತಾಯಿಗೆ ಈ ತೆರನಾದ ದರ್ಶನದಿಂದ ದೃಷ್ಟಿದೋಷ



ಲಕ್ಷ್ಮೀನರಸಿಂಹ ದೇವಾಲಯ ಮಾರೇಹಳ್ಳಿ.


ಪನ್ನೀರು ಮಂಟಪ.



ಜಯ–ವಿಜಯರು.



ವೃತ್ತಾಕಾರದ ದೇವಾಲಯ. ಬೆಳಗೊಳ.



ವರದರಾಜಸ್ವಾಮಿ, ಮದ್ದೂರು.



ಉಗ್ರನರಸಿಂಹ ದೇವಾಲಯ, ಮದ್ದೂರು.

ಪರಿಹಾರವಾಯಿತು ಎಂಬ ಕಥೆಯೂ ಇದರೊಂದಿಗೆ ಬೆಸೆದುಕೊಂಡಿದೆ. ಈ ದೇವಾಲಯದ ಜೀರ್ಣೋದ್ಧಾರ ಕಾರ್ಯ ನಡೆಯುತ್ತಿದ್ದು ಭೂಮಿ ಅಗೆಯುವಾಗ ಏಳು ಅಡಿ ಎತ್ತರ ಮತ್ತು ನಾಲ್ಕು ಅಡಿ ಅಗಲದ ನಾಲ್ಕು ಕಂಬದ ಮಂಟಪ ಹಾಗೂ ಒಂದು ತಮಿಳು ಶಾಸನ ಪತ್ತೆಯಾಯಿತು. ಇದು ಹತ್ತನೆಯ ಶತಮಾನದೆಂದು ಗುರುತಿಸಲಾಗಿದೆ. ವಿಷ್ಣು ಅಂಶದ ಇಡೀ ದೇವಾಲಯವನ್ನು ಗರುಡ ಹೊತ್ತಿರುವಂತೆ ದಿಬ್ಬದ ಕೆಳಗೆ ಗರುಡಮಂಟಪ (ಈಗ ವಿಗ್ರಹ ಇಲ್ಲ)ವಿದೆ. ಈ ಗುಡಿಯ ಆಸುಪಾಸಿನಲ್ಲಿ ಸಿಕ್ಕಿದ ಸೂರ್ಯನಾರಾಯಣ ವಿಗ್ರಹ ಚೋಳ ಶೈಲಿಯಲ್ಲಿ ಕಾಣಬರುತ್ತದೆ. (ಇದು ಈಗ ಶ್ರೀರಂಗಪಟ್ಟಣ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆ.) ಇದೇ ಗುಡಿಯ ಬಲ ಹಿಂಬದಿಯಲ್ಲಿರುವ ಪ್ರಾಚೀನ ಕೈಲಾಸೇಶ್ವರ ಎಂದು ಕರೆಯಲ್ಪಟ್ಟಿದ್ದ ಗುಡಿಯನ್ನು ಇತ್ತೀಚೆಗೆ ಜೀರ್ಣೋದ್ಧಾರಗೊಳಿಸಿ ಶ್ರೀ ರಾಮಚಂದ್ರ ಗುಡಿಯನ್ನಾಗಿ ಮಾಡಲಾಗಿದೆ.

ಉಗ್ರನರಸಿಂಹ :

ಇನ್ನು ಪ್ರಮುಖವಾದ ಉಗ್ರನರಸಿಂಹ ದೇವಾಲಯ ಚೋಳ, ಹೊಯ್ಸಳ, ವಿಜಯನಗರ ಶೈಲಿಗಳ ಸಮ್ಮಿಶ್ರಣವಾಗಿದೆ. ಸಮೀಪದ ವೈದ್ಯನಾಥ ಪುರದ ಕ್ರಿ.ಶ. ೧೧೩೨ರ ಶಾಸನದಲ್ಲಿ 'ನಾರಸಿಂಹ ಚತುರ್ವೇದಿ ಮಂಗಲ' ಎಂಬ ಉಲ್ಲೇಖ ಇರುವುದರಿಂದ ಈ ಹಿಂದೆಯೇ ನರಸಿಂಹಗುಡಿಯು ನಿರ್ಮಾಣವಾಗಿತ್ತು ಎಂದು ತಿಳಿದು ಬರುತ್ತದೆ. ಇದು ಪ್ರಖ್ಯಾತ ಹೊಯ್ಸಳ ದೊರೆ ವಿಷ್ಣುವರ್ಧನನ ಕಾಲ. ಒಟ್ಟಾರೆ ಮೂಲಶಿಲ್ಪ ಮತ್ತು ಹಲವು ರಚನೆಗಳು ಚೋಳರ ಕಾಲದ್ದಾಗಿರಬಹುದು. ಅಥವಾ ಆಗತಾನೆ ಅಧಿಕಾರ ಹಿಡಿದಿದ್ದ ಹೊಯ್ಸಳರೇ ಮಾಡಿಸಿದ್ದರೂ ಚೋಳ ಪ್ರಭಾವದಲ್ಲಿ ಆಗಿರಬಹುದು. ನವರಂಗದ ಕಂಬಗಳಂತೂ ಚಾಲುಕ್ಯ ಪ್ರಭಾವದ ಹೊಯ್ಸಳ ಶೈಲಿಯಲ್ಲಿದೆ. ಒಟ್ಟಾರೆ ಎತ್ತರದ ದ್ವಾರಗೋಪುರ (ವಿಜಯನಗರಕಾಲ) ವಿರುವ ವಿಶಾಲವಾದ ಪ್ರಾಕಾರದೊಳಗೆ ಗರ್ಭಗೃಹ, ಸುಖನಾಸಿ, ನವರಂಗ, ಪಾತಾಳಂಕಣ, ಸಭಾ ಮಂಟಪ ಹಾಗೂ ಸುತ್ತಾಲಯಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿರುವ ಸುಮಾರು ಏಳು ಅಡಿ ಎತ್ತರದ ಉಗ್ರನರಸಿಂಹನ ಮೂರ್ತಿ (ಬ್ರಹ್ಮ ಪ್ರತಿಷ್ಠಾಪನೆ ಎಂಬುದು ಪುರಾಣ ನಂಬಿಕೆ)ಯ ಅಷ್ಟಭುಜಗಳಲ್ಲಿ ನಾಲ್ಕರಲ್ಲಿ ಚಕ್ರ, ಶಂಖ, ದಂತ ಹಾಗೂ ಗದೆಗಳಿದ್ದು; ಎರಡು ಕೈಗಳಿಂದ ತೊಡೆಯ ಮೇಲೆ ಮಲಗಿಸಿಕೊಂಡಿರುವ ಹಿರಣ್ಯಕಶ್ಯಪುವಿನ ಕರುಳನ್ನು ಬಗೆಯುತ್ತಲೂ, ಮತ್ತೆರಡು ಕೈಗಳಲ್ಲಿ ಕರುಳನ್ನು ಮಾಲೆಯಾಗಿ ಹಾಕಿಕೊಳ್ಳುತ್ತಿರುವಂತೆಯೂ ಕೆತ್ತಲಾಗಿದೆ. ಹಿರಣ್ಯಕಶ್ಯಪನ ಸಂಹಾರ ಕಾಲದಲ್ಲಿ ನರಸಿಂಹನಿಗೆ ಮೂರನೇ ಕಣ್ಣು ಉದ್ಭವ

ವಾಯಿತೆಂದು ಪ್ರತೀತಿ ಇದೆ. ವಿಗ್ರಹದಲ್ಲಿಯೂ ಹಾಗೇ ಇದೆ. ಪಾದದ ಬಳಿ ಇರುವ ಪ್ರಹ್ಲಾದನು ನರಸಿಂಹನ ಉಗ್ರತೆಯನ್ನು ಸೌಮ್ಯಗೊಳಿಸಲು, ಕೈ ಮುಗಿದು ನಿಂತು ವಿಷ್ಣುಸ್ತುತಿ ಮಾಡುತ್ತಿರುವಂತೆ ಬಲಭಾಗದಲ್ಲಿ ಕಾಣುತ್ತದೆ. ಎಡಭಾಗದಲ್ಲಿ ಗರುಡನೂ ವಿನಮ್ರವಾಗಿ ಕೈಮುಗಿದು ನಿಂತಿದ್ದಾನೆ. ವಿಗ್ರಹದ ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಯಿದೆ. ಗುಡಿಗಳಲ್ಲಿ ಯಾವುದೇ ದೇವರ ಉಗ್ರರೂಪದ ಆರಾಧನೆ ಆಗಮ ಪ್ರಕಾರ ನಿಷಿದ್ಧವಲ್ಲದಿದ್ದರೂ ಅಷ್ಟಾಗಿ ಕಾಣಸಿಗದು. ಆದರೂ ಇಂತಹ ಒಂದು ಘೋರ ಸಂಹಾರ ಮೂರ್ತಿಗಾಗಿ ದೇವಾಲಯ ನಿರ್ಮಾಣವಾಗಿರುವುದು ವಿಶೇಷವಾಗಿದೆ. ಕಂಬದ ನರಸಿಂಹ, ಯೋಗಾನರಸಿಂಹ, ಲಕ್ಷ್ಮೀನರಸಿಂಹ ಗುಡಿಗಳು ಹೆಚ್ಚು ಕಾಣಬರುತ್ತವೆ. ಉಗ್ರ ಮತ್ತು ಭೋಗ ಮೂರ್ತಿಗಳು ಬಹಳ ಅಪರೂಪವಾಗಿರುತ್ತವೆ. ಮದ್ದೂರಿನ ಉಗ್ರನರಸಿಂಹ ವಿಗ್ರಹ ಸಂಪ್ರದಾಯದ ಪ್ರಕಾರ ಅರ್ಧ ಆಸೀನ, ಅರ್ಧ ಸ್ಥಾನಕ ಭಂಗಿಯಲ್ಲಿದೆ. ಶಿಲ್ಪದ ಪೀಠಕ್ಕೆ ಹೊಸಿಲೆಂದು ಸೂಚಿಸುವ ಒಂದು ಕಲ್ಲಿನ ತೊಲೆಯ ಮೇಲೆ ಶಿಲ್ಪವನ್ನು ಕೆತ್ತಲಾಗಿದೆ. ಹಿರಣ್ಯಕಶ್ಯಪುವಿನ ಸಂಹಾರ ಹೊಸಿಲ ಮೇಲೆ ನಡೆದದ್ದು. ಜನ ಭಯಭಕ್ತಿಯಿಂದ ನಡೆದುಕೊಳ್ಳಲು ಪರಿಣಾಮ ಬೀರುತ್ತದೆ. ಇನ್ನು ದೇವಾಲಯದ ಸುತ್ತಾಲಯದಲ್ಲಿ ಸೌಮ್ಯನಾಯಕಿ ಹಾಗೂ ನರಸಿಂಹನಾಯಕಿಯರ ಕಿರುಗುಡಿಗಳಿವೆ. ದೇವಾಲಯದ ಒಳಪ್ರಾಕಾರದಲ್ಲಿರುವ ಮಣವಾಳ್ ಮಾಮುನಿಹಳ್, ನಮ್ಮಾಳ್ವರ್, ವಿಶ್ವಕ್ಸೇನರ್, ಯಶೋದ ಕೃಷ್ಣ, ಶ್ರೀನಿವಾಸ, ರಾಮಾನುಜಾ ಚಾರ್ಯರು, ದೇಶಿಕಾಚಾರ್ಯರ ಶಿಲ್ಪಗಳಿವೆ. ಬಾಗಿಲ ಅಕ್ಕಪಕ್ಕ ಜಯವಿಜಯರಿದ್ದಾರೆ.

ನವರಂಗದ ಬಾಗಿಲುವಾಡದಲ್ಲಿ ಬಲಕ್ಕೆ ಚಕ್ರ, ಎಡಕ್ಕೆ ಶಂಖ,ನಡುವೆ ಕಾಳಿಂಗಮರ್ಧನ ಕೃಷ್ಣ, ಸಾಲುಗಿಣಿಗಳು, ನಾಗತೋರಣ ಆಕರ್ಷ ಕವಾಗಿದೆ. ಮುಖಮಂಟಪದ ಮುಂದೆ ಧ್ವಜಸ್ತಂಭ, ಬಲಿಪೀಠ, ಅದಕ್ಕೊಂದು ಮಂಟಪ ಭವ್ಯವಾಗಿವೆ. ಮಂಟಪದ ಬಲಕ್ಕೆ ಗರುಡ, ಗಂಡಬೇರುಂಡ, ಕಳಸ, ಹಂಸ, ಆನೆ ಮತ್ತು ಎಡಭಾಗಕ್ಕೆ ಆಂಜನೇಯ, ಕಳಸ ಮುಂತಾದ ಉಬ್ಬು ಶಿಲ್ಪಗಳು ಕಂಬದ ಮೇಲಿವೆ. ಅಕ್ಕ ಪಕ್ಕ ಜಯ–ವಿಜಯರ ಉಬ್ಬು ಶಿಲ್ಪಗಳಿವೆ. ಮಹಾದ್ವಾರದ ಎತ್ತರದ ಎರಡೆರಡು ನಾಲ್ಕು ಕಂಬಗಳಲ್ಲಿ ಬಲಕ್ಕೆ ಲಕ್ಷ್ಮೀನಾರಾಯಣ, ಸೀತಾರಾಮರು ಆಸೀನರಾಗಿ ಲಕ್ಷ್ಮಣ ನಿಂತಿರುವುದು, ಎಡಭಾಗದ ಕಂಬಗಳಲ್ಲಿ ಲಕ್ಷ್ಮೀನರಸಿಂಹ, ಉಗ್ರ ನರಸಿಂಹ ಉಬ್ಬು ಶಿಲ್ಪಗಳಿವೆ. ದೇವಾಲಯದ ಮುಂದೆ ಗರುಡಗಂಬವಿದೆ.

ಎರಡು ದಶಕಗಳ ಹಿಂದಿನವರೆಗೂ ವಿಜಯನಗರ ಶೈಲಿಯ ರಾಜ–ಗೋಪುರ ಇದ್ದುದ್ದನ್ನು ಕೆಡವಿ ಹೊಸಗೋಪುರ ಕಟ್ಟಲಾಗಿದೆ. ಈ ದೇವಾಲಯದ

ಒಳಪ್ರಕಾರದಲ್ಲಿ ಬಲಕ್ಕಾದಂತೆ ಒಂದು ಕೊಠಡಿಯಲ್ಲಿ ಇರುವ ರಾಮ ಪರಿವಾರ ವಿಜಯನಗರ ಕಾಲದ ಶಿಲ್ಪಗಳಾಗಿದ್ದು ಅತ್ಯಾಕರ್ಷಕವಾಗಿವೆ. ರಾಮನ ಮುಂದೆ ಬಾಗಿನಿಂತಿರುವ ದಾಸಭಾವದ ಆಂಜನೇಯ ಅಪರೂಪವಾದದ್ದು. ತನ್ನ ಬಲಹಸ್ತವನ್ನು ಬಾಯಿ ಹತ್ತಿರ ತಂದುಕೊಂಡು, ತನ್ನ ಎಡಗೈಯಿಂದ ಬಾಲ ಹಿಡಿದಂತಾಗಿ, ಆಜ್ಞಾಪಾಲಕನಾಗಿ ಕಣ್ಣುಗಳು ರಾಮನನ್ನೇ ನೋಡುತ್ತಿರುವಂತೆ ಕೆತ್ತಿರುವ ಶಿಲ್ಪಿಗೆ ತಲೆಬಾಗಲೆಬೇಕು. ಈ ಪರಿವಾರ ವೈದ್ಯನಾಥಪುರದವೆಂದು ಹೇಳಲಾಗುತ್ತದೆ. ಈ ಗುಡಿಗೆ ೧೪ನೇ ಶತಮಾನದಲ್ಲಿ ತಿಪ್ಪೆಯೂರನ್ನು (ತಿಪ್ಪೂರು) ದತ್ತಿಬಿಟ್ಟಿದ್ದ ವಿಷಯ ಶಾಸನಾಧಾರವಾಗಿದೆ.

ವೈದ್ಯನಾಥೇಶ್ವರ :

ಮದ್ದೂರಿನಿಂದ ಮೂರು ಕಿಲೋಮೀಟರ್ ದೂರದಲ್ಲಿ ಶಿಂಷಾ ಬಲದಂಡೆ ಮೇಲಿರುವ ವೈದ್ಯನಾಥೇಶ್ವರ ದೇವಾಲಯ ಪ್ರಾಚೀನವಾದದ್ದು. ಉತ್ತರ ದಕ್ಷಿಣವಾಗಿ ಹರಿದಿರುವ ಶಿಂಷಾನದಿಗೆ ಕದಂಬ ನದಿ ಎಂಬ ಹೆಸರೂ ಇದೆ. ಇದು ಕದಂಬ ವೃಕ್ಷ ಅಥವಾ ಕದಂಬ ಋಷಿಗಳಿಂದ ಬಂದ ಹೆಸರು ಎನ್ನಲಾಗಿದೆ. ಕದಂಬರ ಆಶ್ರಮ ಇಲ್ಲಿಯೂ ಇತ್ತೆಂದು ನಂಬಲಾಗಿದೆ. ಇದು ಹಿಂದೆ ಕಾಡು ಪ್ರದೇಶವಾಗಿದ್ದರಿಂದ ಗಿಡಮೂಲಿಕೆಗಳಿಂದ ಔಷಧೋಪಚಾರ ಅಥವಾ ವೈದ್ಯೋಪಚಾರ ನೀಡಲಾಗುತ್ತಿತ್ತು. ಈ ವೈದ್ಯೋಪಚಾರದಿಂದಲೇ ವೈದ್ಯನಾಥೇಶ್ವರ ಗುಡಿ ಹುಟ್ಟಿತೆಂದು ಹೇಳಬಹುದಾಗಿದೆ. ಈಗಲೂ ಗರ್ಭ ಗುಡಿಯಲ್ಲಿ ಸಿಗುವ ಹುತ್ತದ ಮಣ್ಣನ್ನು ಔಷಧಿಯಾಗಿ ಬಳಸಲಾಗುತ್ತದೆ.

ಇಲ್ಲಿನ ಮೂಲಲಿಂಗ (ವೈದ್ಯನಾಥ)ವನ್ನು ಪ್ರಾಚೀನದಲ್ಲಿ ಸಿದ್ಧಪುರುಷರು ಅರ್ಚಿಸಿದ ಲಿಂಗ ಎನ್ನಲಾಗಿದೆ. ಹಿಂದೆ ಈ ಹೆಸರಿನ ಗುಡಿಗಳು ವೈದ್ಯಕೀಯ ಕೇಂದ್ರಗಳಾಗಿದ್ದವು.

ಪ್ರಾಚೀನ ಶಾಸನಗಳಲ್ಲಿ 'ವೈಜನಾಥಪುರ' ಅಥವಾ ಶಿವಪುರ' ಎಂದೆಲ್ಲ ಉಲ್ಲೇಖಿಸಿದೆ. ಇದು ಮದ್ದೂರಿನ ಒಂದು ಭಾಗವಾಗಿತ್ತು ಎಂದು ದಾಖಲಾಗಿದೆ. ಗಂಗ, ಚೋಳ, ಹೊಯ್ಸಳ ಹಾಗೂ ವಿಜಯನಗರ ಕಾಲದ ಶಾಸನಗಳು ಈ ದೇವರಿಗೆ ದತ್ತಿಬಿಟ್ಟ ವಿಷಯವನ್ನು ತಿಳಿಸುತ್ತವೆ. ಕನ್ನಡ ಶಾಸನಗಳೊಂದಿಗೆ ತಮಿಳು ಶಾಸನಗಳು ಇಲ್ಲಿ ಕಾಣಬರುತ್ತವೆ.

ನದಿ ದಂಡೆಮೇಲೆ ಪೂರ್ವಾಭಿಮುಖವಾಗಿ ನಿಂತಿರುವ ವೈದ್ಯನಾಥೇಶ್ವರ ದೇವಾಲಯಕ್ಕೆ ಗರ್ಭಗೃಹ, ನವರಂಗ, ಸಭಾಮಂಟಪ ಹಾಗೂ ದಕ್ಷಿಣ ಮುಖಮಂಟಪವುಳ್ಳ ಪ್ರಾಕಾರವಿದೆ. (ಇತ್ತೀಚೆಗೆ ಉತ್ತರದಲ್ಲೂ ದ್ವಾರವನ್ನು

ಮಾಡಲಾಗಿದೆ) ಗರ್ಭಗೃಹದಲ್ಲಿ ಪ್ರಾಚೀನ ಲಿಂಗವಿದ್ದು, ನವರಂಗದ ಬಾಗಿಲವಾಡವು ಚತುರ್ ಶಾಖಾಲಂಕೃತವಾಗಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಇದೆ. ನವರಂಗದ ಕಂಬಗಳಂತೂ ಚಾಲುಕ್ಯ ಶೈಲಿಯಲ್ಲಿವೆ. ಈ ಆವರಣದಲ್ಲಿರುವ ಲಕ್ಷ್ಮಿ, ಭೈರವ, ಪರಶುರಾಮ (ಚೋಳಶೈಲಿ) ಎಡಹರಿ ಶಿವಲಿಂಗ(೨) ಬಲಹರಿ ಶಿವಲಿಂಗ(೨), ಮಹಿಷಮರ್ಧಿನಿ, ಸರಸ್ವತಿ, ಉಮಾಮಹೇಶ್ವರ ಶಿಲ್ಪಗಳಲ್ಲಿ ಗಂಗ-ಚೋಳ ಲಕ್ಷಣಗಳನ್ನು ಹೊಂದಿವೆ. ವಿಜಯನಗರ ಕಾಲದಲ್ಲಿ ದುರಸ್ತಿ ಆಗಿದೆ. ನವರಂಗದ ಗೋಡೆ ಮತ್ತು ಛಾವಣಿಗಳಲ್ಲಿ ಶಾಸನಗಳು ಕಾಣ ಬರುತ್ತವೆ. ಇತ್ತೀಚೆಗೆ ಇದನ್ನು ಆಧುನಿಕವಾಗಿ ಜೀರ್ಣೋದ್ಧಾರ ಮಾಡಲಾಗಿದೆ. ಹೀಗಾಗಿ ಹಲವಷ್ಟು ಭಾಗ ಮುಚ್ಚಿಹೋಗಿದೆ. ಅಲ್ಲಲ್ಲಿ ಮೂಲ ಸ್ವರೂಪ ಉಳಿದುಕೊಂಡಿದೆ. ಗುಡಿಯ ಆವರಣದಲ್ಲಿ ಚಂಡಿಕಾ, ಸೂರ್ಯನಾರಾಯಣ, ಪಾರ್ವತಿ, ನವಗ್ರಹ ಗುಡಿಗಳಿವೆ. ಇದೇ ಆವರಣದಲ್ಲಿ ಗಂಗರ ಕಾಲದ (ಸಿಂಹಗಳು ಹೊತ್ತಿರುವ) ಕಂಬಗಳು, ಭೈರವ ಮತ್ತು ದೇವಿಶಿಲ್ಪಗಳೊಂದಿಗೆ ಇರುವ ನಾಲ್ಕಾರು ವೀರಗಲ್ಲುಗಳಲ್ಲಿ ಎಡಗೈಯೋಧನ ಅಪರೂಪದ ವೀರಗಲ್ಲು ಇದೆ. ಇಂದಿಗೂ ಗರ್ಭಗುಡಿಯ ಹುತ್ತದ ಮಣ್ಣು ಚರ್ಮವ್ಯಾಧಿ ನಿವಾರಣೆಗೆ ಬಳಕೆಯಾಗುತ್ತಿದೆ. ಇಲ್ಲಿನ ಕ್ರಿ.ಶ. ೧೧೩೨ರ ಶಾಸನವೊಂದರಲ್ಲಿ ಸ್ಥಳೀಯರಾದ ಆದಪ್ಪ ಮತ್ತು ರಾಜಪ್ಪ ಎಂಬುವರ ಕೋರಿಕೆ ಮೇರೆಗೆ ಹೊಯ್ಸಳ ಚಕ್ರವರ್ತಿ ವಿಷ್ಣುವರ್ಧನನು ಹಿಂದೆ ಗಂಗದೊರೆ ಶಿವಮಾರಸಿಂಹನು ಸರ್ವ ಮಾನ್ಯವಾಗಿ ನೀಡಿದ್ದ ಹಲಗೂರು ಗ್ರಾಮವನ್ನು ದೇವರ ನೈವೇದ್ಯ, ನಂದಾದೀವಿಗೆ ಹಾಗೂ ಪರಿಚಾರಿಕೆ ಸೇವೆಗಳಿಗೆಂದು ಪುನಃ ಒಪ್ಪಿಸಿಕೊಟ್ಟಿರುವ ವಿಷಯ ತಿಳಿದುಬರುತ್ತದೆ.

ಮದ್ದೂರು ಎಂಬ ಹೆಸರು ಮದ್ದು (ಔಷಧ) ಕೊಡುವ ಹೆಸರಿನಿಂದಲೇ ಬಂದಿದೆ. ದ್ವಾಪರದಲ್ಲಿ ಕೃಷ್ಣನ ಅಪ್ಪಣೆಯಂತೆ ಅರ್ಜುನ ಇಲ್ಲಿಗೆ ಬಂದು ನರಸಿಂಹನನ್ನು ಅರ್ಚಿಸಿದ್ದರಿಂದ ಅರ್ಜುನಪುರಿ ಎಂಬ ಹೆಸರೂ ಉಲ್ಲೇಖ-ಗೊಂಡಿದೆ. ಕನ್ನಡ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯೆನಿಸಿದ 'ಗೋವಿನ ಹಾಡು' ರಚಿಸಿದ ಅಜ್ಞಾತ ಕವಿ ಇಲ್ಲಿಯವನೆಂದು ಹೇಳಲಾಗಿದೆ. ಈತ ರಚಿಸಿದ ನೀತಿಬೋಧಕ ಹಾಡು ಕನ್ನಡದ ಮಕ್ಕಳ ನಾಲಿಗೆ ಮೇಲೆ ನಲಿದಾಡುತ್ತಿದೆ. ಈತ ಇಲ್ಲಿಯವನೇ ಎಂದು ಹೇಳಲು ಈತ ತಾನು ರಚಿಸಿದ ಕಾವ್ಯವನ್ನು ಮದ್ದೂರು ಉಗ್ರನರಸಿಂಹನಿಗೆ ಸಮರ್ಪಿಸಿದ್ದಾನೆ.

ಪದ್ಮನಾಭನೆ ಪರಂಧಾಮನೆ
ಮದ್ದೂರ ಶ್ರೀ ನಾರಸಿಂಹನೆ

ಮುದ್ದುವರಗಳ ಕೊಡುವ ನಿಮಗೆಯು
ನಮೋ ನಮೋ ಮಂಗಳಂ

**ನೀಲಿನಕ್ಷೆ ಗುಡಿಗಳು :**

ಮದ್ದೂರು ತಾಲ್ಲೂಕು ಮಾದನಾಯಕನಹಳ್ಳಿ ಕೆರೆ ಏರಿಯ ತಳಭಾಗದಲ್ಲಿ ಈಶ್ವರ ಅಂಕಿತ ಎರಡು ಪ್ರಾಚೀನ ಶಿಥಿಲಗೊಂಡ ದೇವಾಲಯಗಳಿವೆ. ಇವು ಕುಬ್ಜ ಗುಡಿಗಳಾಗಿದ್ದು ಅವಳಿ-ಜವಳಿಯಂತೆ ಅಕ್ಕ-ಪಕ್ಕದಲ್ಲಿ ಕಾಣಬರುತ್ತವೆ. ಒಂದು ಮಹಾಬಲೇಶ್ವರ ಹೆಸರಿನ ಗುಡಿ ಗಾತ್ರದಲ್ಲಿ ಸ್ವಲ್ಪ ದೊಡ್ಡದಾಗಿದ್ದು; ಮತ್ತೊಂದು ಮಲ್ಲಿಕಾರ್ಜುನ ಗುಡಿ ಚಿಕ್ಕದಾಗಿದೆ. ಇವು ಸುಧಾರಿತ ಗಂಗರ ದೇವಾಲಯಗಳಂತಿದ್ದರೂ; ಚೋಳರ ಬೃಹತ್ ದೇವಾಲಯಗಳಿಗೆ ನೀಲಿನಕ್ಷೆಯಂತೆ ಕಾಣಬರುತ್ತವೆ. ಗುಡಿಯ ನಿರ್ಮಾಣಕ್ಕೆ ಬಾರೀ ಗಾತ್ರದ ಕಲ್ಲುಗಳನ್ನು ಬಳಸಲಾಗಿದೆ. ಮಹಾಬಲೇಶ್ವರ ಗುಡಿಯು ಗರ್ಭಗುಡಿ, ಸುಖನಾಸಿ, ನವರಂಗ ಮುಖಮಂಟಪಗಳಿಂದ ಕೂಡಿ ಲಕ್ಷಣವಾಗಿದೆ. (ಪಕ್ಕದ ಗುಡಿಯಲ್ಲಿ ಸುಖನಾಸಿ ಕಾಣಬರುವುದಿಲ್ಲ) ಗುಡಿಯ ನವರಂಗದಲ್ಲಿ ಸಪ್ತಮಾತೃಕಾ ಶಿಲ್ಪಗಳು, ಗಣಪ, ಭೈರವ ಮತ್ತಿತರ ಚ್ಯುತಿಗೊಂಡ ಮೂರ್ತಿಗಳಿವೆ. ಮುಖಮಂಟಪದ ಬಾರೀ ಗಾತ್ರದ ದುಂಡನೆಯ ಕಲ್ಲುಗಳು ಬಹು ಆಕರ್ಷಕವಾಗಿವೆ. ನವರಂಗದ ಮಧ್ಯದ ಛಾವಣಿಯಲ್ಲಿ ಕಮಲದ ಕೆತ್ತನೆಯ ಅಲಂಕಾರವಿದೆ. ಈ ಗುಡಿಯ ಗರ್ಭಗುಡಿಯಲ್ಲಿ ವಿಶಾಲ ಪಾಣಿಪೀಠವಿದ್ದು ಲಿಂಗವಿಲ್ಲ. ಆದರೆ ಪಕ್ಕದ ಮಲ್ಲಿಕಾರ್ಜುನ ಲಿಂಗ ಯಥಾಸ್ಥಿತಿಯಲ್ಲಿದೆ. ಗಂಗರಸರ-ಚೋಳರ ನಡುವಣ ಕಾಲದ ಈ ಗುಡಿಗಳು ನಿಜಕ್ಕೂ ಸಂರಕ್ಷಿತಗೊಳ್ಳಬೇಕಾಗಿದೆ. ಅದಕ್ಕಾಗಿ ಪ್ರಯತ್ನಗಳು ನಡೆದಿವೆ.

ಈ ಗುಡಿಗಳ ಅನತಿಯಲ್ಲಿ ಗದ್ದೆಮಾಳದಲ್ಲಿ ಶಿಥಿಲಗೊಂಡ ಮಂಟಪದಲ್ಲಿದ್ದ ನಾರಾಯಣಸ್ವಾಮಿ (ವೆಂಕಟೇಶ್ವರ)ಯನ್ನು ಗದ್ದೆಸ್ವಾಮಿ ಎಂದು ಕರೆಯಲಾಗುತ್ತದೆ. ಮೂಲಮೂರ್ತಿ ಬೇರೆಡೆ ಸ್ಥಳಾಂತರಗೊಂಡಿದೆ ಎನ್ನಲಾಗಿದೆ. ಕ್ರಿ.ಶ. ೧೮೫೧ರಲ್ಲಿ ಈ ಗುಡಿಗೆ ದತ್ತಿಬಿಟ್ಟಿರುವ ಅಂಶ ಕೆರೆ ತೂಬಿನ ಮಂಟಪದಲ್ಲಿ ಉಲ್ಲೇಖಗೊಂಡಿದೆ.

**ಆದಿಮಾಧವ :**

ಮದ್ದೂರಿನಿಂದ ೧೨ ಕಿ.ಮೀ. ದೂರ (ಮದ್ದೂರು-ಮಳವಳ್ಳಿ ಮಾರ್ಗದಲ್ಲಿ ಬಲಕ್ಕೆ)ದಲ್ಲಿರುವ ದೊಡ್ಡ ಅರಸಿನಕೆರೆ ಗ್ರಾಮದ ಆದಿಮಾಧವ (ತಮಿಳು ಶಾಸನದಲ್ಲಿ ಮಾಧವ ಪೆರುಮಾಳ್) ದೇವಾಲಯವು ಮುಮ್ಮಡಿ ರಾಜೇಂದ್ರ ಚೋಳನ ಕಾಲದ್ದಾಗಿದೆ. ಇದನ್ನು ಗುಡಿಯ ಭಿತ್ತಿಯ ಮೇಲಿರುವ ಶಾಸನವೂ ಸೇರಿದಂತೆ ಐದು ಶಾಸನಗಳು ತಿಳಿಸುತ್ತವೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ

ವಿಶಾಲವಾದ ಸಭಾಮಂಟಪವಿದೆ. ದೇವಾಲಯ ಶಿಥಿಲಾವಸ್ಥೆ ತಲುಪಿದ್ದು ಜೀರ್ಣೋದ್ಧಾರ ಕಾರ್ಯ ನಡೆದರೆ ಅದೊಂದು ಅಮೂಲ್ಯ ಸಂಸ್ಕೃತಿಯನ್ನು ಉಳಿಸಿಕೊಂಡಂತಾಗುತ್ತದೆ. ಶಾಸನಗಳಲ್ಲಿ ಹಿರಿಯರಸಿನಕೆರೆ ಎಂದು ಉಲ್ಲೇಖಿಸಿದೆ. ಈ ಊರಿಗೆ ಸಮೀಪದಲ್ಲಿರುವ ಚಿಕ್ಕಅರಸಿನಕೆರೆ, ಕ್ಯಾತಘಟ್ಟಗಳಲ್ಲಿ ಚೋಳ, ಹೊಯ್ಸಳ, ವಿಜಯನಗರದ ಹಲವು ಅವಶೇಷ (ವೀರಗಲ್ಲುಗಳು)ಗಳು ಕಾಣಬರುತ್ತವೆ. ಈ ಭಾಗದಲ್ಲಿದ್ದ ಪ್ರಾಚೀನ ಹರಿಹರೇಶ್ವರ ಗುಡಿಯ ಮೂಲಸ್ವರೂಪ ಬದಲಾವಣೆಯಾಗಿದೆ. ಚಿಕ್ಕಅರಸಿನಕೆರೆಯಲ್ಲಿ ಪ್ರಾಚೀನವಾದ ಕಾಲಭೈರವೇಶ್ವರ ಗುಡಿ ಇಂದಿಗೂ ಪ್ರಸಿದ್ಧವಾಗಿದೆ.

**ಜನಾರ್ದನ ಸ್ವಾಮಿ ಮತ್ತು ವೃತ್ತಾಕಾರದ ದೇವಾಲಯ :**

ಶ್ರೀರಂಗಪಟ್ಟಣದಿಂದ ಪಶ್ಚಿಮಕ್ಕೆ ಕನ್ನಂಬಾಡಿಕಟ್ಟೆ ಮಾರ್ಗದಲ್ಲಿರುವ ಬೆಳಗೊಳ ಚೋಳ ಶೈಲಿ ದೇವಾಲಯಗಳಿಗೆ ಹೆಸರುವಾಸಿ. ಇಲ್ಲಿರುವ ಜನಾರ್ದನ ಸ್ವಾಮಿ ದೇವಾಲಯದ ವಿನ್ಯಾಸ ಸರಳವಾಗಿದ್ದು ಕಟ್ಟಡ ಕಣಶಿಲೆಯಿಂದ ಕೂಡಿದೆ. ಗರ್ಭಗೃಹದ ಸುತ್ತಲೂ ವೃತ್ತಾಕಾರದ ಪ್ರಕಾರವಿದೆ. ಅಂತರಾಳ, ಕೈಸಾಲೆ ಮಂಟಪ ಹಾಗೂ ಸಭಾ ಮಂಟಪಗಳಿವೆ. ಗೋಪುರಗಳ ವಿನ್ಯಾಸ ಬಿಲ್ಲಿನಂತೆ ಕಮಾನಾಗಿದ್ದು ಕಲಶಗಳನ್ನು ಹೊಂದಿವೆ. ಒಳಗೆ ಆಳೆತ್ತರದ ಜನಾರ್ದನಸ್ವಾಮಿ ನಿಂತ ಭಂಗಿಯ ಶಿಲ್ಪ ಬಹುಸುಂದರವಾಗಿದೆ. ಶಂಖ, ಚಕ್ರ, ಅಭಯ ಹಸ್ತಗಳಿಂದ ಕಂಗೊಳಿಸಿರುವ ಚತುರ್ಭುಜಧಾರಿ ಮೂರ್ತಿಯ ಎಡಭಾಗದ ಒಂದು ಕೈಯನ್ನು ಸೊಂಟದ ಕೆಳಗೆ ಇರಿಸಲಾಗಿದೆ. ಅಂತರಾಳದ ಬಾಗಿಲು ವಾಡದ ಲಲಾಟದಲ್ಲಿ ಗಜಲಕ್ಷ್ಮಿ ಕೆತ್ತನೆಯಿದೆ. ಈ ಗುಡಿಯ ಎಡಭಾಗದಲ್ಲಿ ಮಹಾಲಕ್ಷ್ಮಿ ಗುಡಿಯಿದೆ. ಇಲ್ಲಿಯೂ ವೃತ್ತಾಕಾರದ ಪ್ರಾಕಾರವಿದೆ. ಅಂತರಾಳ ಮತ್ತು ವಿಶಾಲವಾದ ನವರಂಗಗಳಿವೆ. ಗರ್ಭಗುಡಿಯಲ್ಲಿ ಪದ್ಮಾಸನದಲ್ಲಿ ಅಭಯ ಹಸ್ತದೊಂದಿಗೆ ಮಹಾಲಕ್ಷ್ಮಿ ವಿಗ್ರಹವಿದೆ. ಮೇಲಿನ ಎರಡೂ ಗುಡಿಗಳಲ್ಲಿರುವ ವಿಗ್ರಹಗಳು ಚ್ಯುತಿಗೊಂಡು ದೇವಾಲಯಗಳು ಜೀರ್ಣಾವಸ್ಥೆ ತಲುಪಿದ್ದವು. ಇದೀಗ ಅದರ ಜೀರ್ಣೋದ್ಧಾರ ಕೆಲಸ ರಾಜ್ಯ ಪುರಾತತ್ವ ಇಲಾಖೆಯಿಂದ ನಡೆಯುತ್ತಿದೆ. ಒಟ್ಟಾರೆ ಈ ದೇವಾಲಯಗಳನ್ನು ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಚೋಳ ಶೈಲಿಯಲ್ಲಿ ನಿರ್ಮಿಸಲಾಯಿತು ಎಂಬ ಅಭಿಪ್ರಾಯವೂ ಇದೆ. 'ಕೊಂಗುಕೊಂಡ ಶ್ರೀ ವಿಷ್ಣುವರ್ಧನ ಪೊಸಳದೇವ ಚತುರ್ವೇದಿ ಮಂಗಲ' ಎಂಬ ಉಲ್ಲೇಖದಿಂದ ಬೆಳಗೊಳವು ವಿಷ್ಣುವರ್ಧನನ ಕಾಲದಲ್ಲಿ ಅಗ್ರಹಾರವಾಗಿ ಮಾರ್ಪಟ್ಟಿದ್ದು ತಿಳಿದುಬರುತ್ತದೆ. ಇಲ್ಲಿಗೆ ಸಮೀಪದಲ್ಲಿರುವ ಬಸ್ತಿ ದಿಬ್ಬದಲ್ಲಿ ಪಾರ್ಶ್ವನಾಥನ ಬಸದಿಯೊಂದು ಪಾಳುಬಿದ್ದಿದೆ.


ಜನಾರ್ದನ ದೇವಾಲಯದ ಹಿಂಬದಿಯ ಎಡಭಾಗಕ್ಕೆ ಭಕ್ತವತ್ಸಲ ಎಂಬ ಗುಡಿ ವಿಶಿಷ್ಟವಾಗಿದೆ. ದಕ್ಷಿಣ ಭಾರತದಲ್ಲಿಯೇ ಇಂಥ ರಚನೆಯ ವಾಸ್ತು ಸಿಗುವುದು ಬಹು ಅಪರೂಪ. ಒಂದು ನಿರ್ದಿಷ್ಟ ಪ್ರಮಾಣದ ಎತ್ತರ ಮತ್ತು ದುಂಡನೆಯ ವೃತ್ತಾಕಾರದ ತಳವಿನ್ಯಾಸದ ಜೋಡಣೆಯಾಗಿ ಕಟ್ಟಲ್ಪಟ್ಟಿರುವ ಈ ಗುಡಿ ವಾಸ್ತುಶಿಲ್ಪಕ್ಕೆ ಒಂದು ಸವಾಲಾಗಿದೆ. ಹಿಂದೆ ಇದರೊಳಗಿದ್ದ ಹತ್ತು ಅಡಿ ಉದ್ದ, ಆರು ಅಡಿ ಸುತ್ತಳತೆಯ ಭಕ್ತವತ್ಸಲ ವಿಗ್ರಹದೊಂದಿಗೆ ಅಳತೆಮಾನದ ಕೊಳಗ ಆಕಾರದ ಕಿರೀಟವನ್ನು ಧರಿಸಿ ಆಸೀನಳಾಗಿದ್ದ ಲಕ್ಷ್ಮಿಯ ವಿಗ್ರಹ ಮತ್ತು ಅಪೂರ್ವ ನಾಗರ ಪ್ರತಿಮೆಗಳು ಚೋಳ ಶಿಲ್ಪದ ಕೈಗನ್ನಡಿಯಂತಿದ್ದವು. ಇತ್ತೀಚಿನ ದಶಕಗಳಲ್ಲಿ ಅವು ಕಣ್ಮರೆಯಾಗಿರುವುದು ದುರದೃಷ್ಟಕರ. ವಿಶ್ವದ ಯಾವುದಾದರೂ ಪ್ರದರ್ಶನಾಲಯಗಳಲ್ಲಿ ಇರಬಹುದೇನೋ!

**ಭೋಗಾನರಸಿಂಹ :**

ಬೆಳಗೊಳದ ಬಳಿ ಇರುವ ಶ್ರೀನಿವಾಸ ಕ್ಷೇತ್ರದ ಗುಡಿ ಮೂಲತಃ ಚೋಳರ ಕಾಲದ್ದು. ಮುಂದೆ ಹೊಯ್ಸಳ ಮತ್ತು ವಿಜಯನಗರ ಕಾಲದಲ್ಲಿ ವಿಸ್ತರಿಸಲಾಗಿದೆ. ದ್ವಿಕೂಟಾಚಲವಾಗಿರುವ ಈ ಗುಡಿಯಲ್ಲಿ ಪ್ರಧಾನ ದೇವರು ಶ್ರೀನಿವಾಸನಾಗಿದ್ದು; ಉತ್ತರದಲ್ಲಿ ಭೋಗಾನರಸಿಂಹನಿಗಾಗಿ ಒಂದು ಗುಡಿಯನ್ನು ನಿರ್ಮಿಸಲಾಗಿದೆ. ಮೂಲತಃ ಇದು ಚೋಳರ ಭೋಗಾನರಸಿಂಹ ಗುಡಿ ಎಂದೇ ಹೆಸರಿಸಲಾಗಿದೆ. ಪೀಠದ ಮೇಲೆ ಚತುರ್ಬಾಹುವಾಗಿ ಸುಖಾಸೀನದಲ್ಲಿ ಕುಳಿತಿರುವ ಮೂರ್ತಿಯ ಹಾವ, ಭಾವ, ಭವ್ಯತೆ ಬಹು ಸುಂದರವಾಗಿದೆ.

**ಬಲಮುರಿ :**

ಬೆಳಗೊಳಕ್ಕೆ ಸಮೀಪವಾಗಿರುವ ಕಾವೇರಿ ತೀರದ ಬಲಮುರಿ ಕ್ಷೇತ್ರ ಒಂದು ಪುಣ್ಯ ಕ್ಷೇತ್ರ, ಇಲ್ಲಿಯ ಅಗಸ್ತ್ಯೇಶ್ವರ ದೇವಾಲಯ ಚೋಳರ ಪೂರ್ವ ಕಾಲದ್ದು ಎನ್ನಲಾಗಿದೆ. ಗುಡಿಯ ನವರಂಗದ ನಾಲ್ಕು ಕಂಬಗಳು ಗಂಗರ ಕಾಲದ್ದು ಎಂದು ಹೇಳಬಹುದು. ಒಂದನೆಯ ರಾಜರಾಜ ಚೋಳನ ಕ್ರಿ.ಶ. ೧೦೧೩ರ ಶಾಸನವು ಈ ದೇವಾಲಯಕ್ಕೆ ದತ್ತಿಬಿಟ್ಟ ವಿಷಯವನ್ನು ಹೇಳಿದೆ. ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮೊಗಸಾಲೆಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಪ್ರಾಚೀನವಾದ ಲಿಂಗವಿದೆ. ನವರಂಗದಲ್ಲಿ ಸೂರ್ಯ, ಕೇಶವ, ರಾಮಾನುಜ ಶಿಲ್ಪಗಳಿವೆ. ಕ್ರಿ.ಶ. ೧೪೦೩ ರಲ್ಲಿ ಜೀರ್ಣೋದ್ಧಾರಗೊಂಡಿರುವ ವಿಷಯವನ್ನು ತಿಳಿಸುತ್ತದೆ. ಇದರ ಬಲಕ್ಕೆ ಇರುವ ನಾರಾಯಣ ಗುಡಿಯೂ ಅಗಸ್ತ್ಯೇಶ್ವರ ಗುಡಿಯ ಮಾದರಿಯಲ್ಲಿದ್ದು, ಗರ್ಭಗೃಹದಲ್ಲಿ ಎತ್ತರದ ಪೀಠದ ಮೇಲೆ ಕೇಶವ ಶಿಲ್ಪವಿದ್ದು, ನವರಂಗದಲ್ಲಿ



ಸೂರ್ಯನಾರಾಯಣ
ವಸ್ತುಸಂಗ್ರಹಾಲಯ.
ಶ್ರೀರಂಗಪಟ್ಟಣ.
(ಮೂಲಸ್ಥಳ, ಮದ್ದೂರು)



ಪರಶುರಾಮ,
ವೈದ್ಯನಾಥಪುರ.




ನಾರಾಯಣ. ತೈಲೂರು.



ನಾಯಿ ಹಂದಿ ಹೋರಾಟ. ಆತಕೂರು ಶಾಸನ.




ತೀರ್ಥಂಕರ ಶಿಲ್ಪ, ಕಂಬದಹಳ್ಳಿ.



ತ್ರಿಕೂಟ ಬಸದಿ. ಸೂರನಹಳ್ಳಿ.



ಉಗ್ರನರಸಿಂಹಸ್ವಾಮಿ. ಮದ್ದೂರು.



ಬಲಮುರಿ ದೇವಾಲಯ. ಬೆಳಗೊಳ.

ಗಣಪತಿ ಹಾಗೂ ಸೂರ್ಯನ ಶಿಲ್ಪಗಳಿವೆ. ಹೊರಭಾಗದ ಭಾರಿ ಕಂಭಗಳಲ್ಲಿ ಉಬ್ಬು ಶಿಲ್ಪಗಳಿವೆ. ಪುಂಗಿ, ಶಂಖ, ಜಾಗಟೆ, ಚಕ್ರಾದಿಬಳೆಗಳಂಥ ವಾದ್ಯ ಪರಿಕರಗಳು, ತುತ್ತೂರಿ, ಬಾಂಕಿ ಊದುವ ಶಿಲ್ಪಗಳು, ಕೊಳಲು ಕೃಷ್ಣ, ಅಷ್ಟದಲೆಗಳ ಉಬ್ಬು ಶಿಲ್ಪವನ್ನು ಕೆತ್ತಲಾಗಿದೆ. ಈ ಎರಡೂ ಗುಡಿಗಳ ಹಿಂಭಾಗದಲ್ಲಿದ್ದ ಖಾಲಿ ಸ್ಥಳವನ್ನು ಸೇರಿಸಿ ನೂತನ ಗುಡಿಯೊಂದನ್ನು ಮೈಸೂರು ಪ್ರಧಾನ ಸುಬ್ಬಾ ಪಂಡಿತರು ಕ್ರಿ.ಶ. ೧೭೩೪ರಲ್ಲಿ ನಿರ್ಮಿಸಿದ ಅಂಶವನ್ನು ಕಂಬದ ಮೇಲಿನ ಬರೆಹ ತಿಳಿಸುತ್ತದೆ. ಇಲ್ಲಿರುವ ಪಾರ್ವತಿಗುಡಿಯನ್ನು ಸುಬ್ಬಾಪಂಡಿತರೇ ನಿರ್ಮಿಸಿರುವುದು ಆ ಬರೆಹದಿಂದ ತಿಳಿದು ಬರುತ್ತದೆ. ಇಲ್ಲಿಯೇ ಹಳೆಯ ಆಂಜನೇಯ ಗುಡಿಯಲ್ಲಿ ಹೊಸ ಆಂಜನೇಯ ಮೂರ್ತಿ ಪ್ರತಿಷ್ಠಾಪನೆಗೊಂಡಿದೆ. ಇದೇ ತಾಲ್ಲೂಕು ಮೇಳಾಪುರದ ಕಾವೇರಿ ತೀರದಲ್ಲಿರುವ ಜೀರ್ಣಾವಸ್ಥೆಯಲ್ಲಿರುವ ಕಾಶಿವಿಶ್ವನಾಥ ದೇವಾಲಯ ಚೋಳ ಕಾಲಕ್ಕೆ ಸೇರಿದ್ದಾಗಿದೆ.

ನಾಗಮಂಗಲ ತಾಲ್ಲೂಕು ದಡಗ ಗ್ರಾಮದ ಯೋಗ ಮುದ್ರೆಯಲ್ಲಿರುವ ಯೋಗಾನರಸಿಂಹ ಗುಡಿಯು ೧೧ನೇ ಶತಮಾನದ ಚೋಳರ ಕಾಲದ್ದು. ಮುಖಮಂಟಪದ ಕಂಬಗಳು ಸುಧಾರಿತ ಚೋಳ ಶೈಲಿಯಿಂದ ಕೂಡಿವೆ. ಕಂಬಗಳನ್ನು ಅಷ್ಟಕೋನಾಕೃತಿಯಲ್ಲಿ ಕಂಡರಿಸಲಾಗಿದೆ. ಒಂದು ಕಂಬದ ತಳಭಾಗ ಕೀರ್ತಿಮುಖದಿಂದ ಕೂಡಿದೆ. ನವರಂಗದ ಮಧ್ಯದಲ್ಲಿರುವ ಭುವನೇಶ್ವರಿಯು ಪದ್ಮದಳದಿಂದ ಶೋಭಿಸಿದೆ. ಇನ್ನುಳಿದ ದೇವಾಲಯಗಳ ಬಗ್ಗೆ ಮುಂದೆ ಅವಲೋಕಿಸೋಣ.

**ಮೋದೂರು ರಾಮಲಿಂಗೇಶ್ವರ :**

ಕೃಷ್ಣರಾಜಪೇಟೆ ತಾಲ್ಲೂಕಿನ ಮೋದೂರು ಗ್ರಾಮದ ರಾಮಲಿಂಗೇಶ್ವರ ದೇವಾಲಯ ಆದಿಯಲ್ಲಿ ಚೋಳ ರಚನೆಯಾದರೂ ಮುಂದೆ ವಿಜಯನಗರ ಶೈಲಿ ಸೇರ್ಪಡೆಗೊಂಡಿದೆ. ಪೂರ್ವಾಭಿ ಮುಖವಾಗಿರುವ ಈ ದೇವಾಲಯ ಗರ್ಭಗೃಹ, ಸುಖನಾಸಿ, ವಿಶಾಲವಾದ ನವರಂಗ, ಮುಖಮಂಟಪ, ಮಹಾದ್ವಾರಗಳಿಂದ ಕೂಡಿದೆ. ಗರ್ಭಗುಡಿಯಲ್ಲಿ ಮಧುಬಣ್ಣದ ಎತ್ತರವಾದ ಲಿಂಗ, ವಿಶಾಲವಾದ ಸೋಮಸೂತ್ರ, ನವರಂಗದಲ್ಲಿರುವ ನಂದಿಗಳು ಚೋಳರ ಕಾಲದ್ದಾಗಿವೆ. ಮಹಾದ್ವಾರದ ಒಂದು ಕಂಬದಲ್ಲಿ ಕೈ ಮುಗಿದು ನಿಂತಿರುವ ವ್ಯಕ್ತಿ ಚೋಳರಾಜ ಎಂದು ಹೇಳಲಾಗುತ್ತದೆ. ಈ ಬಗ್ಗೆ ಸಂಶೋಧನೆ ಆಗಬೇಕಾಗಿದೆ. ನಂತರದಲ್ಲಿ ವಿಜಯನಗರ ಅಥವಾ ಅವರ ಕಾಲದ ಪಾಳೇಗಾರರು ಇಡೀ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿರುವುದು ಕಂಡುಬರುತ್ತದೆ. ಇದಕ್ಕೆ ಪುಷ್ಟಿಕೊಡುವಂತೆ

ಗುಡಿಯ ಆವರಣದಲ್ಲಿರುವ ವಿಜಯನಗರ ಕಾಲದ ೧೪ನೇ ಶತಮಾನದ ಆಕಳು ಮತ್ತು ಕರುವಿನ ಚಿತ್ರಗಲ್ಲು ಕಾಣಬರುತ್ತದೆ. ಈ ಊರು ಗೋಸಂಪತ್ತಿಗೆ ಮತ್ತು ಗೋಮಾಳಕ್ಕೆ ಪ್ರಸಿದ್ಧಿಯಾಗಿತ್ತು ಎಂದಾದರೂ; ವಿಶೇಷವಾಗಿ ಈ ಕಲ್ಲಿಗೂ ಮತ್ತು ಸಮೀಪದಲ್ಲಿರುವ 'ವಿಭೂತಿ ಪಾಳು' ಎಂಬ ಭೂಮಿಗೂ ಸಂಬಂಧವಿರುವಂತೆ ಗೋಚರಿಸುತ್ತದೆ. ಈ ವಿಭೂತಿ ಪಾಳು ಬೂದಿ ಮಿಶ್ರಿತ ಬಿಳಿಮಣ್ಣಿನಿಂದ ಕೂಡಿದ್ದು ಇಲ್ಲಿ ವಿಭೂತಿ ಗಟ್ಟಿ ತಯಾರಿಸುತ್ತಿದ್ದರು ಎನ್ನಲಾಗಿದೆ. ವಿಭೂತಿ ತಯಾರಿಸಲು ಸುಟ್ಟಸಗಣಿ ಅಗತ್ಯ ಪೂರಕ ವಸ್ತುವಾಗಿದ್ದರಿಂದ ಇಲ್ಲಿ ಯಥೇಚ್ಛ ಗೋಸಂಪತ್ತು ಇತ್ತು ಎಂಬುದಕ್ಕೆ ಆಧಾರಸಿಗುತ್ತದೆ.

ಇನ್ನು ದೇವಾಲಯದ ಎಡಭಾಗದಲ್ಲಿ ಪಾರ್ವತಿ ಗುಡಿಯಿದೆ. ಚತುರ್ಭುಜೆಯಾಗಿ ನಿಂತಿರುವ ನಿಲುವು ಆಕಾರದಲ್ಲಿ ಚಿಕ್ಕದಾದರೂ ತಂಜಾವೂರು ಬೃಹದೀಶ್ವರ ದೇವಾಲಯದಲ್ಲಿರುವ ದೊಡ್ಡ ಆಕಾರದ ಪಾರ್ವತಿಮೂರ್ತಿಯನ್ನು ಹೋಲುತ್ತದೆ. ದೇವಾಲಯದ ಪ್ರಾಕಾರದಲ್ಲಿ ಪಾಕಶಾಲೆ, ಯಾಗಶಾಲೆ, ಆಗ್ನೇಯ ಮೂಲೆಯಲ್ಲಿ ಕ್ಷೇತ್ರಪಾಲ ಭೈರವ, ನೈಋತ್ಯ ಭಾಗದಲ್ಲಿ ಸುಮಾರು ೪೦ ಅಡಿ ಎತ್ತರದ ನಂದಿಕಂಬ ಶೋಭಿಸಿದೆ. ಈ ನಂದಿ ಕಂಬದ ಮಗ್ಗುಲಿಗೆ ಪ್ರತ್ಯೇಕ ಆಂಜನೇಯ ಗುಡಿ ಇದೆ.

ತ್ರೇತಾಯುಗದಲ್ಲಿ ಈ ಸ್ಥಳಕ್ಕೆ ಆಗಮಿಸಿದ ಶ್ರೀರಾಮ ಪರಿವಾರ ಕೆಲ ಕಾಲ ಇಲ್ಲಿ ತಂಗಿದ್ದು ಯಾಗವನ್ನು ನಡೆಸಿ ಸ್ವತಃ ಶ್ರೀರಾಮನೇ ಲಿಂಗವನ್ನು ಪ್ರತಿಷ್ಠಾಪಿಸಿದ್ದರಿಂದ ಈ ಲಿಂಗಕ್ಕೆ ರಾಮಲಿಂಗೇಶ್ವರ ಎಂದೂ; ಆ ಕಾರಣ ರಾಮಭಂಟ ಹನುಮಂತ (ಗುಡಿಯೂ ಇದೆ) ಇಲ್ಲಿ ಕಾದುನಿಂತಿದ್ದಾನೆ ಎಂಬ ನಂಬಿಕೆ ಇಲ್ಲಿನ ಜನರಲ್ಲಿದೆ. ಯಾಗಮಾಡಿದ ಸ್ಥಳವೇ ವಿಭೂತಿ ಮಾಳ ಎನ್ನುತ್ತಾರೆ.

ಇಷ್ಟೆಲ್ಲ ಇತಿಹಾಸವಿದ್ದ ಭವ್ಯ ದೇಗುಲಕ್ಕೆ ಇತ್ತೀಚಿನ ವರ್ಷಗಳಲ್ಲಿ ಪ್ರಾಚೀನ ಕಲ್ಲುಗೋಡೆ, ನೆಲಕ್ಕೆಲ್ಲ ಅಭಿವೃದ್ಧಿಯ ಹೆಸರಿನಲ್ಲಿ ಥಳುಕಿನ ಬಣ್ಣ, ಗ್ರಾನೈಟ್‌ಗಳಿಂದ ಮುಚ್ಚಿರುವುದು ಇತಿಹಾಸದ ಪರಂಪರೆಯನ್ನು ಮುಚ್ಚಿ ಹಾಕಿದಂತಿದೆ. ನವರಂಗದ ಆಗ್ನೇಯ ಮೂಲೆಯಲ್ಲಿದ್ದ 'ಸರ್ಪದ ಮನೆ' ಎಂಬ ಭಾಗವನ್ನು ತೆಗೆದುಹಾಕಲಾಗಿದೆ.

ದೇವಾಲಯದ ಬಲಕ್ಕಾದಂತೆ ವೀರಗಲ್ಲು ಮತ್ತು ಮಾಸ್ತಿಕಲ್ಲುಗಳ ಸಮೂಹವೇ ಕಾಣಬರುತ್ತವೆ. ಹೊಯ್ಸಳರ ಕಾಲದಲ್ಲಿ ಮೋದೂರನಾಡ ಎಪ್ಪತ್ತು ಎಂಬುದಾಗಿ ಒಂದು ಆಡಳಿತ ಕೇಂದ್ರವಿತ್ತು.

**ಚೋಳಗಂಬ :**

ಚೋಳ ಸಾಮ್ರಾಜ್ಯ ಎಲ್ಲೆಯನ್ನು ಗುರುತಿಸುವಂತಹ ಒಂದು ಐತಿಹ್ಯವಾಗಿ ಆದಿಚುಂಚನಗಿರಿಯ ಒಂದು ಶಿಖರದ ಮೇಲೆ 'ಚೋಳಗಂಬ' ಎನ್ನುವ ಒಂದು ಕಲ್ಲಿನ ಕಂಬವಿದೆ. ಇದು ಚೋಳ ಮತ್ತು ಹೊಯ್ಸಳ ನಡುವಿನ ಸಾಮ್ರಾಜ್ಯದ ಗಡಿಯಾಗಿತ್ತೆಂದು ಪ್ರತೀತಿ ಇದೆ. ಒಟ್ಟಾರೆ ಜಿಲ್ಲೆಯಲ್ಲಿನ ಹಳ್ಳಿಗಳಲ್ಲಿ ಪ್ರಾಚೀನ ವಾಸ್ತು ಪದ್ಧತಿಯ ಪಳೆಯುಳಿಕೆಗಳಂತೆ ಕಾಣಬರುತ್ತಿರುವ ಸಣ್ಣಪುಟ್ಟ ಗುಡಿಗಳನ್ನು ನಮ್ಮ ಜನರು ಸಾರಸಗಟಾಗಿ ಚೋಳರು ಕಟ್ಟಿದ ಗುಡಿಗಳು ಎನ್ನುತ್ತಾರೆ. ಹೊಯ್ಸಳರ ಹಲವಾರು ಗುಡಿಗಳಲ್ಲಿ ಚೋಳ ಶೈಲಿಯ ಶಿಲ್ಪಗಳನ್ನು ಕಾಣಬಹುದು. ಇಷ್ಟಾದರೂ ಚೋಳರು ತಮಿಳುನಾಡಿನಲ್ಲಿ ಕಟ್ಟಿದಂತೆ ಬೃಹತ್ ದೇವಾಲಯಗಳನ್ನು ಈ ಭಾಗದಲ್ಲಿ ಕಟ್ಟದಿರುವುದು ಆಶ್ಚರ್ಯ ಸಂಗತಿಯಾಗಿದೆ. ಬಹುಶಃ ಹೊಯ್ಸಳರ ಆಕ್ರಮಣ ಆಗಾಗ್ಗೆ ನಡೆಯುತ್ತಿದ್ದ ಕಾರಣವನ್ನು ಅಲ್ಲಗಳೆಯುವಂತಿಲ್ಲ.

## ಹೊಯ್ಸಳರ ಕಾಲ

ಕಲ್ಯಾಣ ಚಾಳುಕ್ಯರ ವಿಶಿಷ್ಟ ವಾಸ್ತುಶೈಲಿಯನ್ನು ಹೊಯ್ಸಳರು ಅಳವಡಿಸಿಕೊಂಡು ಮುಂದೆ ಅದನ್ನು ವೈವಿಧ್ಯಮಯವಾಗಿ ಹೊಸ ವಿನ್ಯಾಸಗಳೊಡನೆ ಅಲಂಕಾರಗೊಳಿಸಿ ತಮ್ಮ ಶೈಲಿಯನ್ನು ವಿಜೃಂಭಿಸಿದರು. ಇವರ ಕಾಲದಲ್ಲಿ ಶೈವ, ವೈಷ್ಣವ, ಜೈನಧರ್ಮದ ದೇವಾಲಯಗಳು ನಿರ್ಮಾಣಗೊಂಡವು. ಹಿಂದೆ ನಿರ್ಮಾಣವಾಗಿದ್ದ ಬಹುತೇಕ ದೇವಾಲಯಗಳಿಗೆ ಜೀರ್ಣೋದ್ಧಾರ ಹಾಗೂ ಜೋಡಣೆ ಕೆಲಸಗಳೂ ಆದವು. ವಿಶೇಷವಾಗಿ ನವರಂಗದ ಕಂಬಗಳನ್ನು ಕುಸುರಿಕೆತ್ತನೆಯಲ್ಲಿ ತಮ್ಮ ಶೈಲಿಯ ಸ್ತಂಭಗಳನ್ನಾಗಿ ಮಾಡಿಕೊಂಡರು. ಹೊಯ್ಸಳ ದೇವಾಲಯಗಳ ಮುಖ್ಯ ಲಕ್ಷಣವೆಂದರೆ ಎತ್ತರವಾದ ಜಗತಿಯ ಮೇಲೆ ದೇವಾಲಯಗಳನ್ನು ಕಟ್ಟಿದರೂ, ದೇವಾಲಯಗಳು ಹೆಚ್ಚು ಎತ್ತರವಿರುವುದಿಲ್ಲ. ಇವುಗಳ ತಲವಿನ್ಯಾಸ ಹೆಚ್ಚು ಸಂಕೀರ್ಣವಾದದ್ದು, ಅಷ್ಟಭದ್ರಾಕಾರದಲ್ಲಿರಬಹುದು ಅಥವಾ ಅಷ್ಟಭದ್ರಾ ಹಾಗೂ ಅಷ್ಟಕೋನ ನಕ್ಷತ್ರಗಳ ಸಂಕೀರ್ಣವಾಗಿರಬಹುದು. ಇಲ್ಲವೇ ಹದಿನಾರು ಮೂಲೆಗಳ ನಕ್ಷತ್ರಾಕಾರವಾಗಿರಬಹುದು. ಕೆಲವೆಡೆ ಜಗತಿಗಳೇ ಪ್ರದಕ್ಷಿಣಾ ಪಥವಾಗಿಯೂ ಇರುತ್ತವೆ. ಗೋಡೆಗಳನ್ನು ಹಲವು ಮುಖಗಳಾಗಿ ವಿಭಾಗಿಸುವುದರಿಂದ ರೂವಾರಿಗಳ ಕೌಶಲ್ಯಪೂರ್ಣ ಕೆತ್ತನೆಗೆ ಅವಕಾಶ ಸಿಕ್ಕುತ್ತದೆ. ಇದಲ್ಲದೆ ಶಿಲ್ಪಗಳ ಮೇಲೆ ನೆರಳು ಬೆಳಕುಗಳ ಛಾಯೆಯೂ ಬೀಳುತ್ತದೆ.

ಇದಕ್ಕಾಗಿಯೇ ದೇವಾಲಯದ ಅಡಿಯಿಂದ ಮುಡಿಯವರೆಗೂ ಕುಸುರಿ ಕೆತ್ತನೆಯಿಂದ ಅಲಂಕಾರಗೊಳಿಸುತ್ತಾರೆ. ಜಗತಿಯ ಮೇಲಿನ ತಳಹದಿ ಹಲವಾರು

ಅಡ್ಡ ಪಟ್ಟಿಕೆಗಳಾಗಿ ವಿಂಗಡಣೆಗೊಂಡು ಪ್ರತಿ ಪಟ್ಟಿಕೆಯಲ್ಲೂ ಕ್ರಮವಾಗಿ ಆನೆಸಾಲು, ಕುದುರೆಸಾಲು, ಸಿಂಹಸಾಲು, ಸಾಲುಹಂಸ, ಬಳ್ಳಿಯ ಸುರುಳಿ, ರಾಮಾಯಣ, ಭಾರತ, ಭಾಗವತ ಸರಣಿಯ ಶಿಲ್ಪಗಳ ಕೆತ್ತನೆಗಳಿರುತ್ತವೆ. ವಿವಿಧ ಭಂಗಿಯ ಮೂರ್ತಿಶಿಲ್ಪಗಳು ಸಾಲುಗೋಡೆಯನ್ನು ಅಲಂಕರಿಸಿರುತ್ತವೆ. ಗಾಳಿ ಬೆಳಕಿನ ವ್ಯವಸ್ಥೆಗಾಗಿ ಮಾಡಿಕೊಂಡಿರುವ ಜಾಲಂಧ್ರಗಳುಶಿಲ್ಪಚಾತುರ್ಯದಿಂದ ಕಂಗೊಳಿಸುತ್ತವೆ. ತಲವಿನ್ಯಾಸವನ್ನೆ ಅನುಸರಿಸಿ ಮೇಲಿನ ಶಿಖರಗಳು ಸರ್ವಾಲಂಕೃತಗೊಂಡಿರುತ್ತವೆ. ಬಾಗಿಲವಾಡಗಳು ಅಲಂಕಾರ ಪಟ್ಟಿಕೆಗಳಿಂದ ಕೂಡಿದ್ದು ಅದರಲ್ಲಿ ಸುಂದರವಾದ ಮೂರ್ತಿಗಳನ್ನು ಕಂಡರಿಸಿರುತ್ತಾರೆ. ನವರಂಗದಲ್ಲಿ ವಿಶಿಷ್ಟವಾದ ತಿರುಗಣೆಯಲ್ಲಿ ಕಂಡರಿಸಿದ ಕಂಬಗಳಿರುತ್ತವೆ. ಭುವನೇಶ್ವರಿಗಳು ಆಳವಾಗಿದ್ದು ಮನಮೋಹಕ ಶಿಲ್ಪ ಚಾತುರ್ಯದಿಂದ ಕೂಡಿರುತ್ತವೆ. ಕೆಲವೆಡೆ ಕಂಬಗಳಿಗೂ ಬೋದಿಗೆಗಳಿಗೂ ನಡುವೆ ಸುಂದರ ಮದನಿಕೆ ವಿಗ್ರಹಗಳಿದ್ದು, ತೊಲೆಗಳ ಮೇಲೂ ಅಲಂಕೃತ ಶಿಲ್ಪಸಾಲು ಇರುತ್ತವೆ.

ಸಾಮಾನ್ಯವಾಗಿ ಹೊಯ್ಸಳ ದೇವಾಲಯುಗಳು ಏಕಕೂಟಾಚಲ, ದ್ವಿಕೂಟಾಚಲ, ತ್ರಿಕೂಟಾಚಲವಾಗಿರುತ್ತವೆ. ಏಕಕೂಟಾಚಲದಲ್ಲಿ ಒಂದು ಗರ್ಭಗೃಹ, ಅದರ ಮುಂದೆ ಸುಖನಾಸಿ ಮತ್ತು ನವರಂಗವಿದ್ದು; ನವರಂಗದ ಮುಂದೆ ಒಂದಂಕಣದ ಮುಖಭದ್ರ ಇರುತ್ತದೆ. ಇದೇ ರೀತಿಯ ಜೋಡಿ ದೇವಾಲಯಗಳನ್ನು ಒಂದರ ಪಕ್ಕ ಒಂದು ಕಟ್ಟುವುದೂ ಉಂಟು. ಇಂಥ ಎರಡೂ ದೇವಾಲಯಗಳನ್ನು ಒಂದೇ ಹಜಾರದಿಂದ ಕೂಡಿಸುವುದೂ ಉಂಟು. ನವರಂಗದ ಮೂರು ಕಡೆ ಮೂರು ಗರ್ಭಗೃಹಗಳಿದ್ದು ನಾಲ್ಕನೆಯ ಕಡೆ ಮುಖಭದ್ರ ಪ್ರವೇಶ ದ್ವಾರಗಳಿರುವ ತ್ರಿಕೂಟಾಚಲಗಳು ಕಾಣಬರುತ್ತವೆ. ಈ ಮೂರು ಗರ್ಭಗೃಹಗಳ ಮೇಲೆ ಒಂದೇ ಬಗೆಯ ಗೋಪುರವಿರಬಹುದು ಅಥವಾ ಮಧ್ಯ ಗರ್ಭಗೃಹದ ಮೇಲೆ ಮಾತ್ರ ಇರಬಹುದು. ಹೊಯ್ಸಳ ರೂವಾರಿಗಳು ತಮ್ಮ ಕೆತ್ತನೆಯ ಮೂರ್ತಿ ಶಿಲ್ಪಗಳಿಗೆ ಕಿರೀಟ, ಮಣಿಹಾರ, ವಡ್ಯಾಣ, ಬಳೆ, ಉಂಗುರ, ಪಾಡಗ ಮುಂತಾದ ಆಭರಣಗಳ ಸುರಿಮಳೆಗೈದು ಪ್ರದರ್ಶನಕ್ಕಿಟ್ಟಿರುವಂತಿರುತ್ತವೆ.

ಒಟ್ಟಾರೆ ಹೊಯ್ಸಳರು ಕರ್ನಾಟಕದ ಸಾಂಸ್ಕೃತಿಕ ಪರಂಪರೆಗೆ ಅದರಲ್ಲಿಯೂ ವಾಸ್ತು ಮತ್ತು ಶಿಲ್ಪ ಕಲೆಗೆ ಒಂದು ಹೊಸ ಆಯಾಮವನ್ನು ಸೃಷ್ಟಿಸಿಕೊಟ್ಟರು. ದಾಕ್ಷಿಣಾತ್ಯ ಮತ್ತು ಔತ್ತರೇಯವೆಂಬ ವಿಭಿನ್ನವಾಸ್ತು ಶೈಲಿಗಳ ಮುಖ್ಯ ಅಂಶಗಳನ್ನು ಗುರುತಿಸಿ, ಸೂಕ್ತರೀತಿಯಲ್ಲಿ ಸಂಮಿಶ್ರಣ ಮಾಡಿ, ವೇಸರಶೈಲಿ ಎಂಬ ವಿನೂತನ ತಳಿಯನ್ನು ಕರ್ನಾಟಕದಲ್ಲಿ ಸೃಷ್ಟಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

ವಿಶೇಷವಾಗಿ ಶಿಲ್ಪಿಗಳಿಗೆ ಸ್ಫೂರ್ತಿ, ಪ್ರೋತ್ಸಾಹ, ಚೈತನ್ಯ ನೀಡಿದಂತಾಯಿತು. ಇದು ಅವರಿಗೆ ಶ್ರದ್ಧೆ, ಭಕ್ತಿಗಳಿಂದ ಕೂಡಿದ ಒಂದು ಉದ್ಯಮವೂ ಆಯಿತು. ರಾಜರಾಣಿಯರು, ಮಂತ್ರಿಗಳು, ದಂಡನಾಯಕರು, ಅಧಿಕಾರಿಗಳು, ವರ್ತಕರು, ಶ್ರೀಮಂತರು, ಕಡೆಗೆ ಸಾಮಾನ್ಯ ಜನರೂ ಸಹ ದೇವಾಲಯ ನಿರ್ಮಾಣ ಕಾರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ ಹೇರಳವಾಗಿ ಧನ, ಧಾನ್ಯಾದಿ ಸಹಾಯಗಳನ್ನು ನೀಡಿದರು.

ಹೊಯ್ಸಳರು ದೇವಾಲಯಗಳನ್ನು ನಿರ್ಮಿಸಲು, ಕೆಲವು ಅಪವಾದಗಳನ್ನು ಬಿಟ್ಟು ವ್ಯಾಪಕವಾಗಿ ಬಳಪದ ಕಲ್ಲನ್ನು ಬಳಸಿದರು. ಈ ಕಲ್ಲು ಬಹಳ ಮೃದುವಾದ, ಸೂಕ್ಷ್ಮಕಣಗಳನ್ನುಳ್ಳದ್ದಾಗಿರುವುದರಿಂದ ಸುಲಭವಾಗಿ ಕೊರೆದು, ಕಡೆದು ಕೆತ್ತಬಹುದಾಗಿತ್ತು. ಈ ಶಿಲೆಯ ಲಕ್ಷಣವೇ ಹೊಯ್ಸಳರ ವಾಸ್ತುಶಿಲ್ಪದ ವಿಶೇಷತೆಗೆ ನಾಂದಿಯಾಯಿತು. ಸರಳವಾದ ಅಲಂಕರಣವನ್ನು ಹೊಂದಿರುತ್ತಿದ್ದ ಗ್ರಾನೈಟ್ ಶಿಲ್ಪಗಳಿಗೆ ಪ್ರತಿಸ್ಪರ್ಧಿಯಾಗಿ ಸೂಕ್ಷ್ಮವಾದ, ನವಿರಾದ, ಅತ್ಯಂತ ವೈಭವೀಕರಿಸಿದ ಶಿಲ್ಪಗಳು ಬಳಕೆಗೆ ಬಂದವು. ಇವರು ಬಳಸುವ ಶಿಲೆಗಳ ಮತ್ತೊಂದು ಗುಣವಿಶೇಷವೆಂದರೆ, ಇದು ತನ್ನಲ್ಲಿರುವ ತೇವಾಂಶದಿಂದ ಶಿಲ್ಪಿಗಳ ಕೆಲಸಕ್ಕೆ ಸುಲಭವಾಗಿ ಮೈಯೊಡ್ಡಿ ಕ್ರಮೇಣ ತನ್ನ ತೇವಾಂಶವನ್ನು ಕಳೆದುಕೊಂಡು ಗಟ್ಟಿಯಾಗುತ್ತದೆ. ಹಾಗೂ ನಸು ಹಸಿರು ಬಣ್ಣಕ್ಕೆ (Green Chloratic Cyst) ತಿರುಗುತ್ತದೆ.

ಹೊಯ್ಸಳರ ಎಲ್ಲಾ ದೇವಾಲಯಗಳೂ ಈ ವಿಜೃಂಭಿತ ಶೈಲಿಯಲ್ಲಿವೆ ಎಂದು ಹೇಳಲಾಗುವುದಿಲ್ಲ. ದೇವಾಲಯದ ನಿರ್ಮಾತೃವಿನ ಅಭಿರುಚಿ, ಧರ್ಮ, ನಂಬಿಕೆ, ಸಾಮರ್ಥ್ಯ, ಆರ್ಥಿಕ ಪರಿಸ್ಥಿತಿ ಈ ಎಲ್ಲದರ ಅನುಗುಣವಾಗಿ ಅವುಗಳ ವಿಸ್ತೀರ್ಣ, ವಿಜೃಂಭಣೆ ನಿರ್ಣಯವಾಗುತ್ತಿತ್ತು. ಹೀಗಾಗಿ ಸರಳವಾದ, ಹೆಚ್ಚಿನ ವೈಭವವಿಲ್ಲದ ಅನೇಕ ಹೊಯ್ಸಳ ದೇವಾಲಯಗಳು ನಿರ್ಮಾಣವಾಗಿವೆ. ಈ ಹಿಂದೆ ಬಳಕೆಯಲ್ಲಿದ್ದ ದ್ರಾವಿಡ ಶೈಲಿಯಲ್ಲೂ ಸಹ ಅನೇಕ ಹೊಯ್ಸಳ ದೇವಾಲಯಗಳು ನಿರ್ಮಾಣಗೊಂಡಿವೆ. ಮಂಡ್ಯ ಜಿಲ್ಲೆಯ ಉತ್ತರ ಮತ್ತು ವಾಯವ್ಯ ಭಾಗಗಳಲ್ಲಿ ಅಂದರೆ ಹೊಯ್ಸಳರ ಕೇಂದ್ರ ಬೀಡಾದ ಹಳೇಬೀಡು, ಬೇಲೂರುಗಳಿರುವ ಹಾಸನ ಜಿಲ್ಲೆಗೆ ಹೊಂದಿಕೊಂಡಿರುವ ಅಥವಾ ಸನಿಹವಾದ ಭಾಗಗಳಲ್ಲಿ ಹೆಚ್ಚು ವಿಜೃಂಭಿತ ದೇವಾಲಯಗಳು ಕಾಣಬರುತ್ತವೆ. ಜಿಲ್ಲೆಯ ದಕ್ಷಿಣ ಮತ್ತು ಆಗ್ನೇಯ ದಿಕ್ಕಿಗೆ ಸಾಗಿದಂತೆ ಸರಳವಾದ ಹೊಯ್ಸಳ ವಾಸ್ತುಶಿಲ್ಪವನ್ನು ಕಾಣಬಹುದಾಗಿದೆ.

ಮಂಡ್ಯ ಜಿಲ್ಲೆ ಹೊಯ್ಸಳ ರಾಜ್ಯದ ಮಧ್ಯಭಾಗದಲ್ಲಿತ್ತು. ಇದರಿಂದ ಹೊಯ್ಸಳರ ಆಡಳಿತ ಕೇಂದ್ರವಾಗಿದ್ದ ಹಾಸನ ಜಿಲ್ಲೆಯನ್ನು ಬಿಟ್ಟರೆ ಮಂಡ್ಯ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹೊಯ್ಸಳ ದೇವಾಲಯಗಳನ್ನು ಕಾಣಬಹುದಾಗಿದೆ. ಅದರಲ್ಲೂ ಕೃಷ್ಣರಾಜಪೇಟೆ ತಾಲ್ಲೂಕು ಹಾಸನ ಜಿಲ್ಲೆಗೆ ಸೆರಗು ಆಗಿದ್ದು ಹೊಯ್ಸಳ ಕಲೆಯ 'ತವರು' ಎನಿಸಿದೆ. ಈ ತಾಲ್ಲೂಕಿನ ಹೊಸಹೊಳಲು, ಹರಿಹರಪುರ, ಅಕ್ಕಿಹೆಬ್ಬಾಳು, ವರಾಹನಾಥಕಲ್ಲಹಳ್ಳಿ, ಕಿಕ್ಕೇರಿ, ಗೋವಿಂದನಹಳ್ಳಿ, ಸಾಸಲು, ಅಘಲಯ, ಸಂತೆಬಾಚಹಳ್ಳಿ, ಮಂಚಿ ಬೀಡು, ಹಳೇಮಾದಾಪುರ, ಅಗ್ರಹಾರಬಾಚಹಳ್ಳಿ, ಸಿಂದಘಟ್ಟ, ನಾಗರಘಟ್ಟ, ತೆಂಗಿನಘಟ್ಟ, ತೊಣಚಿ ಹೀಗೆ ಇನ್ನೂ ಹಲವಾರು ಗ್ರಾಮಗಳಲ್ಲಿ ಹಾಗೂ ಇನ್ನಿತರ ತಾಲ್ಲೂಕುಗಳಲ್ಲಿ ಪ್ರಮುಖವಾಗಿ ನಾಗಮಂಗಲ ತಾಲ್ಲೂಕಿನ, ಮಾಚಲಘಟ್ಟ, ನಾಗಮಂಗಲ, ದೇವಲಾಪುರ, ಹಟ್ಟಣ, ಕೆಳಗೆರೆ, ಕಸಲಗೆರೆ, ಲಾಳನಕೆರೆ, ಬೆಳ್ಳೂರು, ಅಳೀಸಂದ್ರ, ಬಿಂಡಿಗನವಿಲೆ, ಕಂಬದಹಳ್ಳಿ; ಪಾಂಡವಪುರ ತಾಲ್ಲೂಕಿನ ಮೇಲುಕೋಟೆ, ಕೆರೆತೊಣ್ಣೂರು, ಸುಂಕಾತೊಣ್ಣೂರು, ಕನ್ನಂಬಾಡಿ, ಹಳೇಬೀಡು, ಹೊಸಕೋಟೆ; ಶ್ರೀರಂಗಪಟ್ಟಣ ತಾಲ್ಲೂಕಿನ ಶ್ರೀರಂಗಪಟ್ಟಣ, ಬೆಳಗೊಳ, ಅರಕೆರೆ; ಮಂಡ್ಯ ತಾಲ್ಲೂಕಿನ ಬಸರಾಳು, ಹೊಸಬೂದನೂರು, ಜೀಗುಂಡಿ ಪಟ್ಟಣ, ಗುತ್ತಲು, ಬೇಲೂರು, ದುದ್ದ; ಮದ್ದೂರು ತಾಲ್ಲೂಕಿನ ಮದ್ದೂರು, ವೈದ್ಯನಾಥಪುರ, ಬೆಳತೂರು, ಕ್ಯಾತಘಟ್ಟ; ಮಳವಳ್ಳಿ ತಾಲ್ಲೂಕಿನಲ್ಲಿ ಮಳವಳ್ಳಿ, ಸೋಮನಹಳ್ಳಿ, ಸರಗೂರು, ಚಿಕ್ಕಬಾಗಿಲು ಹೀಗೆ ಇನ್ನೂ ಮುಂತಾದ ಕಡೆ ಹೊಯ್ಸಳರ ಸ್ಮಾರಕಗಳನ್ನು ಕಾಣಬಹುದು. ಕೆಲವೆಡೆ ಮೂಲದೇಗುಲ ಬದಲಾವಣೆ ಕಂಡರೂ ಮೂಲ ಶಿಲ್ಪಗಳು ಹಾಗೇ ಉಳಿದುಕೊಂಡಿವೆ.

**ಹೊಯ್ಸಳ ಶೈಲಿಗೆ ಕಿರೀಟಪ್ರಾಯ :**

ಕೃಷ್ಣರಾಜಪೇಟೆ ತಾಲ್ಲೂಕು ಹೊಸಹೊಳಲಿನ ಲಕ್ಷ್ಮೀನಾರಾಯಣ ದೇವಾಲಯ ಹೊಯ್ಸಳ ಶೈಲಿಯ ಕೌಶಲ್ಯಕ್ಕೆ ಕಿರೀಟ ಪ್ರಾಯವಾಗಿದೆ. ದಾಕ್ಷಿಣಾತ್ಯ ಮತ್ತು ಔತ್ತರೇಯ ಎಂಬ ವಿಭಿನ್ನ ವಾಸ್ತುಶೈಲಿಗಳ ಸಮ್ಮಿಶ್ರಣದಲ್ಲಿ ಹೊರತಂದ 'ವೇಸರ' ಶೈಲಿಗೆ ಕನ್ನಡಿ ಹಿಡಿದಂತಿದೆ. ನಿರ್ಮಾಣ ಕಾಲ ನಿಖರವಾಗಿ ತಿಳಿಯಲಾಗದಿದ್ದರೂ ಹಲವು ಸಮಾನಂತರ ರಚನೆಗಳಲ್ಲಿ ಹೋಲಬಹುದಾದ ನುಗ್ಗೆಹಳ್ಳಿ, ಜಾವಗಲ್ಲು ದೇವಾಲಯಗಳ ನಿರ್ಮಾಣದ ಅವಧಿಯಲ್ಲಿ ಇದೂ ಆಗಿರಬಹುದೆಂದು ಊಹಿಸಲಾಗಿದೆ. ಸುಮಾರು ೧೩ನೇ ಶತಮಾನದ ಮಧ್ಯ ಭಾಗದಲ್ಲಿ ನಿರ್ಮಾಣ ಆಗಿರಬಹುದು. ಆರು ಪಟ್ಟಿಕೆಯನ್ನುಳ್ಳ ಮೂರು ಅಡಿ ಎತ್ತರದ ಜಗತಿಯ ಮೇಲೆ ಪೂರ್ವಾಭಿಮುಖವಾಗಿ ನಿಂತಿರುವ, ಬಹುಕೋನಾಕಾರದ ತಳವಿನ್ಯಾಸವನ್ನು ಹೊಂದಿರುವ ಇದು ಮೂರು ಗರ್ಭ ಗೃಹವುಳ್ಳ ತ್ರಿಕೂಟಾಚಲ

ರಚನೆಯಾಗಿದೆ. ಪ್ರಧಾನ ಗರ್ಭಗೃಹಕ್ಕಷ್ಟೇ ಅಂತರಾಳವಿದ್ದು, ಎಲ್ಲವನ್ನೂ ನಡುವೆ ಇರುವ ಒಂದೇ ನವರಂಗವು ಒಗ್ಗೂಡಿಸಿದೆ. ಪ್ರಧಾನ ಗರ್ಭಗೃಹದ ಬಾಗಿಲವಾಡವು ಸಪ್ತಶಾಖಾಲಂಕೃತವಾಗಿದ್ದು, ಆಕರ್ಷಕವಾಗಿದೆ. ಒಳಗೆ ಸ್ಥಾನಕ ಭಂಗಿಯಲ್ಲಿರುವ ಪದ್ಮಾ, ಗದಾ, ಶಂಖ, ಚಕ್ರಧಾರಿ ಶ್ರೀವಿಷ್ಣು, ಶ್ರೀದೇವಿ-ಭೂದೇವಿಯರ ಶಿಲ್ಪಗಳಿವೆ. ಉತ್ಸವ ಮೂರ್ತಿಗಳೂ ಸಹ ಆಕರ್ಷಕವಾಗಿವೆ. ನವರಂಗದ ಉತ್ತರಕ್ಕಿರುವ ಗರ್ಭಗೃಹದಲ್ಲಿ ಲಕ್ಷ್ಮೀನಾರಾಯಣಮೂರ್ತಿ ಇದ್ದರೆ, ದಕ್ಷಿಣದ ಗರ್ಭಗೃಹದಲ್ಲಿ ವೇಣುಗೋಪಾಲ ಮೂರ್ತಿಗಳಿವೆ. (ಈ ವೇಣುಗೋಪಾಲ ಮೂರ್ತಿಯು ಬದಲಾದ ವಿಗ್ರಹ ಎಂಬ ಅಭಿಪ್ರಾಯವಿದೆ) ಪ್ರಧಾನ ಗರ್ಭಗೃಹಕ್ಕೆ ಆಕರ್ಷಕವಾದ ದ್ರಾವಿಡ ಶಿಖರವಿದೆ. ನವರಂಗವನ್ನು ಹೊತ್ತುನಿಂತಿರುವ ಬೃಹದಾಕಾರದ ಚರಕಿಕಂಬಗಳು ಕಲಾತ್ಮಕವಾಗಿದ್ದು, ಬೋದಿಗೆಯಲ್ಲಿ ಅಲ್ಲಲ್ಲಿ ಮದನಿಕೆಯರ ಸುಂದರ ಶಿಲ್ಪಗಳಿವೆ. ಕಮಲಾಲಂಕೃತ ಛತ್ತಿನ ನಡುವೆ ಕಾಳಿಂಗಮರ್ಧನ ಕೃಷ್ಣನನ್ನು ಕೆತ್ತಲಾಗಿದೆ. ಮುಂಭಾಗದ ಒಂದು ಕಂಬವೊಂದರ ಬೋದಿಗೆಯಲ್ಲಿರುವ 'ಹೆಬ್ಬೆಟ್ಟು ಆಂಜನೇಯ' ಧೀರನಾಗಿ ಕುಳಿತು ಎಳನೀರು ಕುಡಿಯುತ್ತಿರುವುದು ಶಿಲ್ಪಿಯ ಕುಸುರಿತನ ತೋರ್ಪಡಿಸಿದೆ. ನವರಂಗದ ದೇವಕೋಷ್ಠಗಳಲ್ಲಿ ಗಣಪತಿ ಮತ್ತು ಮಹಿಷಮರ್ಧಿನಿಯರ ಸುಂದರ ಶಿಲ್ಪಗಳಿವೆ. ನವರಂಗದ ಹೊರಮುಂಬದಿಯಲ್ಲಿ ವಿಶಾಲವಾದ ಸಭಾಮಂಟಪ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಇದು ೧೬ನೇ ಶತಮಾನದಲ್ಲಿ ನಿರ್ಮಾಣಗೊಂಡಿದೆ ಎಂಬ ಅಭಿಪ್ರಾಯ ಹೊಂದಿದೆ.

ದೇವಾಲಯದ ಅಧಿಷ್ಠಾನವನ್ನು ಆನೆ, ಕುದುರೆ, ಲತೆ, ಪೌರಾಣಿಕ ಕಥನ, ಮಕರ, ಹಂಸ ಹಾಗೂ ಬಳ್ಳಿಯ ಅಲಂಕಾರಿಕ ಕೆತ್ತನೆಯುಳ್ಳ ಪಟ್ಟಿಕೆಗಳಿಂದ ಅಲಂಕರಿಸಲಾಗಿದೆ. ಅನೇಕಾನೇಕ ಶಿಲ್ಪಗಳೊಂದಿಗೆ ಮಹಾಭಾರತ, ರಾಮಾಯಣ ಹಾಗೂ ಭಾಗವತ ಕಥನ ಶಿಲ್ಪಗಳ ಪಟ್ಟಿಯನ್ನೆ ಕೆತ್ತಲಾಗಿದೆ. ದೇವಾಲಯದ ಎಡ ಕಕ್ಷಾಸನ ಭಾಗದ ಹಿಂಬದಿಯಲ್ಲಿ ವಿಷ್ಣುವಿನ ದಶಾವತಾರ ಶಿಲ್ಪಗಳನ್ನು ಬಹು ಸುಂದರವಾಗಿ ಕೆತ್ತಲಾಗಿದೆ. ಅಲ್ಲಲ್ಲಿ ಮಿಥುನ ಶಿಲ್ಪಗಳು ರಾರಾಜಿಸಿವೆ. ಒಟ್ಟಾರೆ ದೇವಾಲಯ ಪೂರ್ವಾಭಿಮುಖವಾಗಿದ್ದು, ಉತ್ತರ ಮತ್ತು ದಕ್ಷಿಣದ ಗರ್ಭಗುಡಿಗಳು ಚತುರಸ್ರವಾಗಿಯೂ, ಪಶ್ಚಿಮದ ಗರ್ಭಗೃಹ ೧೬ ಮೂಲೆಯುಳ್ಳ ನಕ್ಷತ್ರಾಕಾರವಾಗಿಯೂ ಇದೆ. ಈ ದೇವಾಲಯದ ಬಗ್ಗೆ ಒಂದು ನಾಣ್ಣುಡಿ ಬಳಕೆಯಲ್ಲಿದೆ. "ಬೇಲೂರು ದೇವಾಲಯದ ಒಳಗೆ ನೋಡು, ಹಳೇಬೀಡು ದೇವಾಲಯದ ಹೊರಗೆನೋಡು, ಹೊಸಹೊಳಲು ದೇವಾಲಯವನ್ನು ಒಳಗೂ ನೋಡು, ಹೊರಗೂ ನೋಡು" ವಿಶೇಷವಾಗಿ ಇಲ್ಲಿನ ಪಾರ್ಶ್ವನಾಥ ಬಸದಿಯೂ ಹೊಯ್ಸಳರ ಕೊಡುಗೆಯಾಗಿದೆ.

**ಹರಿಹರೇಶ್ವರ :**

ಹೊಸಹೊಳಲು–ಅಕ್ಕಿಹೆಬ್ಬಾಳು ರಸ್ತೆಯಲ್ಲಿ ಸಿಗುವ ಹರಿಹರಪುರದ ಹಳೇ ಊರಿನ ಭಾಗದಲ್ಲಿ ಪೂರ್ವಾಭಿಮುಖವಾಗಿರುವ ಹರಿಹರೇಶ್ವರ ದೇವಾಲಯವು ದ್ವಿಕೂಟಚಲವಾಗಿದ್ದು, ಒಂದೇ ಸಾಲಿನಲ್ಲಿ ಎರಡು ಪ್ರತ್ಯೇಕ ಗರ್ಭಗೃಹ ಹಾಗೂ ಸುಖನಾಸಿಗಳಿದ್ದು ಎರಡಕ್ಕೂ ಸೇರಿದಂತೆ ಇರುವ ಒಂದೇ ನವರಂಗಕ್ಕೆ ಎರಡು ಪ್ರತ್ಯೇಕ ದ್ವಾರಗಳಿವೆ. ಗುಡಿಯ ಬಲಭಾಗದ ಗರ್ಭಗೃಹದಲ್ಲಿ ಹರಿಹರೇಶ್ವರ ಸುಂದರ ಶಿಲ್ಪವಿದೆ. ಮತ್ತೊಂದರಲ್ಲಿ ಲಿಂಗವಿದ್ದು ಸುಖನಾಸಿಯ ಬಾಗಿಲುವಾಡಗಳು ಪಂಚಶಾಖಾಲಂಕೃತ ಗೊಂಡಿವೆ. ನವರಂಗದ ನಡುವಣ ಭುವನೇಶ್ವರಿ ಕಮಲಾಲಂಕಾರದಿಂದ ಕೂಡಿದೆ. ಇದಕ್ಕೆ ಅನತಿ ದೂರದಲ್ಲೇ ಇರುವ ನಾರಾಯಣಗುಡಿಯೂ ಪೂರ್ವಾಭಿಮುಖವಾಗಿದ್ದು, ಗರ್ಭಗೃಹ ಸುಖನಾಸಿ ಮತ್ತು ನವರಂಗಗಳನ್ನು ಹೊಂದಿದೆ.

**ಕೊಂಕಣೇಶ್ವರ :**

ಅಕ್ಕಿಹೆಬ್ಬಾಳು ಹಳೇ ಊರು ಇದ್ದ ಸ್ಥಳದಲ್ಲಿ ಕೊಂಕಣೇಶ್ವರ (ಕೊಂಗಳೇಶ್ವರ ಎಂದು ಶಾಸನ ಉಕ್ತಿಯಲ್ಲಿದೆ.) ದೇವಾಲಯವು ದ್ವಿಕೂಟಚಲವಾಗಿದ್ದು ಅಕ್ಕಪಕ್ಕಕ್ಕಿರುವ ಎರಡು ಪ್ರತ್ಯೇಕ ಗರ್ಭಗೃಹ ಹಾಗೂ ತೆರೆದ ಅಂತರಾಳಗಳಿಗೆ ಸೇರಿದಂತೆ, ಮುಂದೆ ವಿಶಾಲವಾದ ಒಂದೇ ನವರಂಗವಿದ್ದು, ಹೊರಗಿರುವ ಹಜಾರ ನಂತರದ ಸೇರ್ಪಡೆಯಾಗಿದ್ದು ನವರಂಗಕ್ಕೆ ಎರಡು ಪ್ರವೇಶದ್ವಾರಗಳಿವೆ. ನವರಂಗದ ಕಂಬಗಳು ಸರಳವಾಗಿದ್ದು ಭುವನೇಶ್ವರಿಗಳಲ್ಲಿ ಕಮಲಗಳಿಂದ ಅಲಂಕರಿಸಲಾಗಿದೆ. ಈ ಗುಡಿಯ ಪಕ್ಕದಲ್ಲಿಯೇ ಇರುವ ಲಕ್ಷ್ಮೀನರಸಿಂಹ ದೇವಾಲಯದ ಭವ್ಯ ಪ್ರಾಣ ಮೂರ್ತಿಯು ಗರುಡಪೀಠದ ಮೇಲೆ ಆಸೀನ ಭಂಗಿಯಲ್ಲಿದ್ದು, ಚತುರ್ಭುಜ ಧಾರಿ ನರಸಿಂಹನ ಎಡತೊಡೆಯ ಮೇಲೆ ದ್ವಿಭುಜಧಾರಿ ಲಕ್ಷ್ಮಿಯು ಆಲಿಂಗನ ಭಂಗಿಯಲ್ಲಿ ಆಸೀನಳಾಗಿದ್ದು, ಎಡಗೈಯಲ್ಲಿ ಅಮೃತ ಕಳಶ ಹಿಡಿದಿದ್ದಾಳೆ. ಅತ್ಯಂತ ಆಕರ್ಷಕವಾಗಿರುವ ಈ ಶಿಲ್ಪ ಹೊಯ್ಸಳ ಶೈಲಿಯಲ್ಲಿದೆ. ದೇವಾಲಯದ ಇತರ ಪ್ರಾಕಾರಗಳು ವಿಜಯನಗರ ಅಥವಾ ವಿಜಯನಗರೋತ್ತರ ಕಾಲದ್ದಾಗಿರಬಹುದು. ಮೇಲಿನ ಎರಡು ದೇವಾಲಯಗಳು ಜೀರ್ಣೋದ್ಧಾರಗೊಂಡಿವೆ. ಈ ದೇವಾಲಯದ ಎಡಕ್ಕೆ ಚನ್ನಕೇಶವ ದೇವಾಲಯವಿದೆ. ಈ ಊರಿಗೆ ಸಮೀಪದಲ್ಲಿರುವ ಮಂಚಿಬೀಡು ಎಂಬಲ್ಲಿ ಹೊಯ್ಸಳ ಕಾಲದ ಈಶ್ವರ ದೇವಾಲಯವಿದೆ.

**ಭವ್ಯವರಾಹನಾಥ :**

ಕೃಷ್ಣರಾಜ ಪೇಟೆಯಿಂದ ನೈಋತ್ಯಕ್ಕೆ ೧೮ ಕಿಲೋಮೀಟರ್ ದೂರದಲ್ಲಿ

ಹೇಮಾವತಿ ಎಡದಂಡೆ ಮೇಲಿರುವ ಕಲ್ಲಹಳ್ಳಿಯ ಲಕ್ಷ್ಮೀ ವರಾಹನಾಥ ವಿಗ್ರಹವು ಕರ್ನಾಟಕದ ಶಿಲ್ಪಕಲೆಗೆ ಅಮೂಲ್ಯ ಕೊಡುಗೆಯಾಗಿದೆ. ಇದನ್ನು ಭೂವರಾಹನಾಥ ಎಂತಲೂ ಕರೆಯುತ್ತಾರೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು ವಿಶಾಲವಾದ ಗರ್ಭಗೃಹ ಹಾಗೂ ಸಭಾಮಂಟಪಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿ ಎತ್ತರದ ಪೀಠದ ಮೇಲೆ ಲಲಿತಾಸೀನ ಚತುರ್ಭುಜಧಾರಿ ವರಾಹನಾಥನ ಎಡತೊಡೆಯ ಮೇಲೆ ಭೂದೇವಿ (ಲಕ್ಷ್ಮಿ)ಯು ಆಸೀನಳಾಗಿದ್ದು, ಅವಳ ನಡು ಅಥವಾ ಸೊಂಟವನ್ನು ವರಾಹನಾಥನು ತನ್ನ ಎಡತೋಳಿನಿಂದ ಬಳಸಿಕೊಂಡಿರುವುದು ಹಾಗೂ ಬಲಗಾಲನ್ನು ಕೆಳಗಿನ ಪೀಠದ ಮೇಲೆ ಇಳಿಬಿಟ್ಟು ಪಾದವನ್ನು ಅದರ ಮೇಲೆ ಊರಿರುವುದು ಅದಕ್ಕೆ ಹೊಂದಿಕೊಂಡಂತೆ ಪದ್ಮದ ಅಭಯಹಸ್ತ ದೇದೀಪ್ಯಮಾನವಾಗಿದೆ. ಒಟ್ಟಾರೆ ಶಿಲ್ಪದ ಎತ್ತರ ಸುಮಾರು ೧೨-೧೩ ಅಡಿ ಇರಬಹುದು. ವಿಶೇಷವಾಗಿ ಕಾಂತಿಯುತವಾದ ವರಾಹಮುಖದ ಕಣ್ಣುಗಳು, ಕಿವಿಗಳು, ಚತುರ್ಭುಜಗಳು, ತಲೆಯ ಕಿರೀಟ ನೋಡುಗರಲ್ಲಿ ಭಕ್ತಿಭಾವ ಆನಂದವನ್ನು ಮೂಡಿಸುತ್ತದೆ. ಭವ್ಯ ಮೂರ್ತಿಯ ಸೌಂದರ್ಯ, ಗಾಂಭೀರ್ಯತೆ, ಕೆತ್ತನೆಯ ಶ್ರೀಮಂತಿಕೆ ಬೆರಗುಗೊಳಿಸುತ್ತದೆ. ಇಂತಹ ಅದ್ಭುತ ಶಿಲ್ಪಕ್ಕೆ ಸಾಟಿಯಾಗಿ ಮತ್ತೊಂದು ವರದರಾಜಸ್ವಾಮಿ ಭವ್ಯಶಿಲ್ಪ ಮದ್ದೂರಿನಲ್ಲಿದೆ.

ಕನ್ನಂಬಾಡಿ ಅಣೆಕಟ್ಟು ಭರ್ತಿಯಾದಾಗ ಅದರ ಹಿನ್ನೀರಿನಲ್ಲಿ ಕಾವೇರಿ - ಹೇಮಾವತಿಯ ವಿಶಾಲ ಜಲಾಶಯದ ಹಿನ್ನೆಲೆಯಲ್ಲಿ ಈ ಗುಡಿ ಎದ್ದು ಕಾಣುತ್ತದೆ. ಕ್ರಿ.ಶ. ೧೩೩೪ರ ಹೊಯ್ಸಳ ಮುಮ್ಮಡಿ ಬಲ್ಲಾಳನ ಒಂದು ಶಾಸನ ಗುಡಿಯ ಮುಂದಿದೆ. ಶಾಸನದ ನಾಂದಿ ಶ್ಲೋಕದಲ್ಲಿ ಬರುವ ವರಾಹಸ್ತುತಿಯಿಂದ ಈ ವರಾಹಗುಡಿ ಈತನ ಕಾಲದ ನಿರ್ಮಾಣವೋ ಅಥವಾ ಇದಕ್ಕೂ ಮುಂಚೆಯೇ ಇತ್ತೋ ಎಂಬುದು ಜಿಜ್ಞಾಸೆಯಾಗಿದೆ. ಚಕ್ರವರ್ತಿ ಮುಮ್ಮಡಿ ಬಲ್ಲಾಳ ಕಲ್ಲಹಳ್ಳಿ ಗ್ರಾಮವನ್ನು ಅಗ್ರಹಾರವನ್ನಾಗಿಸಿ, ರಾಣಿ ದೇಮಲಾದೇವಿ ಹೆಸರಿನಲ್ಲಿ ರಾಜಗುರು ಗುಮ್ಮಟದೇವನಿಗೆ ದಾನ ನೀಡಿದ್ದನ್ನು ಹೇಳುತ್ತದೆ. ಈ ಶಾಸನದ ಶಿರೋಭಾಗದಲ್ಲಿ ಸೂರ್ಯ ಚಂದ್ರರ ಚಿಹ್ನೆ, ಕಮಂಡಲ, ದೀಪಮಾಲೆ ಕಂಬ, ಶಬರ ಬೇರುಂಡ ಹಾಗೂ ಹಿಂಗಾಲ ಮೇಲೆ ಕುಳಿತು ಬಲ ಮುಂಗಾಲಿನ ಪಂಜವನ್ನು ಮೇಲೆತ್ತಿ ಘರ್ಜಿಸುತ್ತಿರುವ ಹುಲಿಯ ಕೆತ್ತನೆ ಮನೋಜ್ಞವಾಗಿದೆ.

**ಕಿಕ್ಕೇರಿಯ ಮದನಿಕೆಯರು :**

ಕಿಕ್ಕೇರಿಯ ಬ್ರಹ್ಮೇಶ್ವರ ದೇವಾಲಯು ಹೊಯ್ಸಳ ಮಾರ್ಗದ ಹಲವು ವಿಶಿಷ್ಟ ಲಕ್ಷಣಗಳಿಂದ ಕೂಡಿದೆ. ದೇವಾಲಯದ ತಳಹದಿ 'ಆಮೆ' ದೇಹದ ರಚನೆಯನ್ನು

ಹೋಲುತ್ತದೆ. ಹೊರಮೈ ಉಬ್ಬಿದ್ದು ಒಳಾಂಗಣದ ವಿಸ್ತೀರ್ಣ ತಳಪಾಯದ ಆಚೆಗೂ ಹರಡಿ ಹೊಯ್ಸಳ ಶೈಲಿಯ ವಿಸ್ಮಯವನ್ನು ಕಾಣಬಹುದು. ಗರ್ಭಗೃಹ, ಸುಖನಾಸಿ, ನವರಂಗ, ಮುಖಮಂಟಪ ಹಾಗೂ ನಂದಿಮಂಟಪಗಳನ್ನು ಹೊಂದಿರುವ, ಅಪೂರ್ವ ಶಿಲ್ಪ ಕೆತ್ತನೆಗಳಿಂದ ಕೂಡಿರುವ ಈ ದೇವಾಲಯದ ಗರ್ಭಗೃಹಕ್ಕೆ ದ್ರಾವಿಡ ಶಿಖರವಿದೆ. ಇದರ ಅಧಿಷ್ಠಾನ ಭಾಗವು ಚಿತ್ರಪಟ್ಟಿಕೆಗಳನ್ನು ಒಳಗೊಂಡಿಲ್ಲ. ಭಿತ್ತಿಯಲ್ಲಿ ಕಿರು ಪ್ರಮಾಣದ ಬ್ರಹ್ಮ, ಶಿವತಾಂಡವ, ಕಾಲಭೈರವ, ಗೋಪಾಲಕೃಷ್ಣ, ವಾಮನ, ಮತ್ಸ್ಯಯಂತ್ರ ಭೇದಿಸುತ್ತಿರುವ ಅರ್ಜುನ, ಗೋವರ್ಧನಧಾರಿ ಕೃಷ್ಣ, ನಟರಾಜ, ಹರಿಹರ, ಬ್ರಹ್ಮ, ಸರಸ್ವತಿ, ಲಕ್ಷ್ಮೀನಾರಾಯಣ, ಗಜಚರ್ಮಾಂಬರಧಾರಿ ಶಿವ ಮುಂತಾದ ಉಬ್ಬು ಶಿಲ್ಪಗಳಿವೆ. ಇದರೊಂದಿಗೆ ದರ್ಪಣಾ ಸುಂದರಿಯರ ಶಿಲ್ಪಗಳೂ ರಾರಾಜಿಸಿವೆ.

ಗರ್ಭಗೃಹದಲ್ಲಿ ಬ್ರಹ್ಮೇಶ್ವರ ಲಿಂಗವಿದ್ದು, ಅದರ ಪಂಚ ಶಾಖಾಲಂಕೃತ ಬಾಗಿಲವಾಡವು ಆಕರ್ಷಕವಾಗಿದ್ದು, ಶೈವ ದ್ವಾರಪಾಲಕರಿದ್ದಾರೆ. ಪ್ರವೇಶದ್ವಾರದ ಇಕ್ಕೆಲಗಳಲ್ಲಿ ಜಾಲಂಧ್ರಗಳಿದ್ದು, ಹೊಯ್ಸಳ ಲಾಂಛನವನ್ನೂ ಕಾಣಬಹುದಾಗಿದೆ. ನವರಂಗದ ಚಿತ್ತಾಕರ್ಷಕ ಕಂಬಗಳ ಬೋದಿಗೆಯಲ್ಲಿ ವಿವಿಧ ಭಂಗಿಯ ಸುಂದರ ಮದನಿಕಾ ಅಥವಾ ಶೃಂಗಾರ ಶಿಲ್ಪಗಳಿದ್ದು, ಬೇಲೂರಿನ ಮದನಿಕೆಯರನ್ನು ನೆನಪಿಸುತ್ತದೆ. ಕಂಬಕ್ಕೆ ನಾಲ್ಕರಂತೆ ನಾಲ್ಕುಕಂಬಗಳಿಂದ ಹದಿನಾರು ವಿವಿಧ ಭಂಗಿಯ ಮದನಿಕೆಯರು ರಾರಾಜಿಸಿದ್ದು; ಅವುಗಳಲ್ಲಿ ಐದು ಮದನಿಕೆಯರು ದುರದೃಷ್ಟವಶಾತ್ ಕಣ್ಮರೆಯಾಗಿದ್ದಾರೆ. ಆಕರ್ಷಕ ಕೆತ್ತನೆಯ ಒಂಭತ್ತು ಭುವನೇಶ್ವರಿಗಳಲ್ಲಿ ಆ ಕಾಲದ ಗಿಡಮೂಲಿಕೆ ಬಣ್ಣವು ಮಾಸಲಾಗಿ ಕಾಣುತ್ತದೆ. ನವರಂಗದ ದಕ್ಷಿಣ–ಉತ್ತರ ಭಾಗದ ಕಿರುಗರ್ಭ ಗೃಹಗಳಲ್ಲಿ ಶಿವಲಿಂಗ ಮತ್ತು ಕೇಶವ ಶಿಲ್ಪಗಳಿದ್ದು, ದೇವಕೋಷ್ಠಗಳಲ್ಲಿ ಕೇಶವ, ಗಣಪ, ಬ್ರಹ್ಮ, ವೀರಭದ್ರ ಹಾಗೂ ಮಹಿಷಮರ್ಧಿನಿ ಶಿಲ್ಪಗಳಿವೆ. ವಿಶೇಷವಾಗಿ ನಂದಿಮಂಟಪದಲ್ಲಿರುವ ಬೃಹದಾಕಾರದ ನಂದಿ ಜೀವಕಳೆಯಿಂದ ಕೂಡಿರುವುದು ಶಿಲ್ಪಿಯ ಕಲಾನೈಪುಣ್ಯವನ್ನು ಎತ್ತಿ ತೋರಿಸುತ್ತದೆ. ಅದರ ಮೈಮೇಲಿರುವ ಗಂಟೆಸರ, ತೋರಣಸಾಲು, ಕಾಲಿನಗೆಜ್ಜೆ ಇತ್ಯಾದಿ ಅಲಂಕಾರ ಸಾಧನಗಳು ಹಾಗೇ ಕಟ್ಟಿದಂತಿವೆ. ಬ್ರಹ್ಮೇಶ್ವರ ಗುಡಿಯ ಎಡಭಾಗದಲ್ಲಿ ಪಾರ್ವತಿ ಗುಡಿಯೂ ಇದೆ. ಬಲಮುಂಭಾಗದಲ್ಲಿ ಹೊಯ್ಸಳರ ಕಾಲದ ನಾಲ್ಕಾರು ಸುಂದರ ನಾಗಶಿಲ್ಪಗಳಿದ್ದು, ಪ್ರಾಕಾರದ ದ್ವಾರಮಂಟಪವೂ ಜೀರ್ಣೋದ್ಧಾರಗೊಂಡಿದ್ದು, ಎಡಮೂಲೆಯಲ್ಲಿ ಪುಷ್ಕರಣಿ ಮತ್ತು ಚಂಡಿಕೇಶ್ವರ ಗುಡಿಗಳಿವೆ. ಈ ದೇವಾಲಯವನ್ನು ಕ್ರಿ.ಶ. ೧೧೭೧ರಲ್ಲಿ ಒಂದನೆಯ ನರಸಿಂಹನರ್ಧಾಂಗಿ ಲಕ್ಷ್ಮಿಯೆನಿಸಿದ ಬಮ್ಮವ್ವೆನಾಯಕಿತಿ ಕಟ್ಟಿಸಿರುವುದಕ್ಕೆ ಶಾಸನಾಧಾರವಿದೆ.

ಊರ ನಡುವೆ ಇರುವ ಲಕ್ಷ್ಮೀನರಸಿಂಹ ಮತ್ತು ಯೋಗಾನರಸಿಂಹ ಗುಡಿಗಳು ಹೊಯ್ಸಳರ ಕಾಲದ್ದೇ ಆಗಿವೆ. ಯೋಗಾನರಸಿಂಹ ಮೂರ್ತಿಯು ನಾಗಮಂಗಲ ತಾಲ್ಲೂಕಿನ ಕಾಳಿಂಗನಹಳ್ಳಿಯ ಶಿಲ್ಪ ಎನ್ನಲಾಗಿದೆ. ಆಕರ್ಷಕವಾಗಿರುವ ಜನಾರ್ದನ ಗುಡಿಯು ಗರ್ಭಗೃಹ, ಸುಖನಾಸಿ, ನವರಂಗಗಳನ್ನುಳ್ಳ ಇನ್ನೊಂದು ಹೊಯ್ಸಳ ರಚನೆಯಾಗಿದೆ. ಆಕಾರದಲ್ಲಿ ಕಿರಿದಾದರೂ ಭಿತ್ತಿಯ ಮೇಲಿನ ಸುಂದರ ಉಬ್ಬು ಕೆತ್ತನೆಗಳು ಗಮನಾರ್ಹವಾಗಿದೆ. ಈ ಊರಿನ ಗ್ರಾಮ ದೇವತೆ ಕಿಕ್ಕೇರಮ್ಮನ ಜಾತ್ರೆ ಬಹು ವಿಶಿಷ್ಟವಾಗಿ ಜರುಗುತ್ತದೆ. ಜನಪದರ ಹಲವು ಗುಡಿಗಳನ್ನು ರಾಜಮಹಾರಾಜರು ಸಹ ಕಟ್ಟಿಸಿಕೊಡುತ್ತಿದ್ದರು ಎನ್ನುವುದಕ್ಕೆ ಕಿಕ್ಕೇರಮ್ಮನ ಗುಡಿ ಸಾಕ್ಷಿಯಾಗಿದೆ. ವಿಜಯನಗರದ ದೊರೆಗಳಾದ ೧ನೆಯ ಹರಿಹರ ಮತ್ತು ಆತನ ತಮ್ಮ ೧ನೆಯ ಬುಕ್ಕರಾಯನ ಕಾಲದಲ್ಲಿ ಇದು ನಿರ್ಮಾಣಗೊಂಡಿದೆ. ನಂತರದಲ್ಲಿ ಜೀರ್ಣೋದ್ಧಾರಗೊಂಡಿರುವ ದ್ರಾವಿಡ ಶೈಲಿಯ ಈ ದೇವಾಲಯ ಪೂರ್ವಾಭಿಮುಖವಾಗಿದ್ದು ಸುಂದರ ಕಟ್ಟಡವನ್ನು ಹೊಂದಿದೆ. ಕಲ್ಲು, ಇಟ್ಟಿಗೆ ಮತ್ತು ಗಾರೆಯನ್ನು ಉಪಯೋಗಿಸಿ ಕಟ್ಟಲಾಗಿದೆ.

**ಪಂಚಕೂಟ ದೇವಾಲಯ :**


ಕೃಷ್ಣರಾಜ ಪೇಟೆಯಿಂದ ೨೦ ಕಿ.ಮೀ. ವಾಯುವ್ಯಕ್ಕಿರುವ ಗೋವಿಂದನಹಳ್ಳಿಯ ಪಂಚಲಿಂಗೇಶ್ವರ ದೇವಾಲಯ ಹೊಯ್ಸಳ ಶೈಲಿಯ ವಿನೂತನವಾದ ಕೃತಿ. ಗುಡಿ ಪಂಚಕೂಟ ರೀತಿಯದು. ಐದು ಗರ್ಭಗುಡಿಗಳ ಶಿಖರಗಳು ಸಾಲಂಕೃತ ರಥಗಳಂತೆ ತೋರುತ್ತವೆ. ಇದು ಶಿಲ್ಪಿಗಳ ವಿನ್ಯಾಸ ಪ್ರಜ್ಞೆಗೆ ಸಾಕ್ಷಿಯಾಗಿದೆ. ದ್ರಾವಿಡ ಸಂಪ್ರದಾಯವನ್ನು ಅನುಸರಿಸಿರುವ ಹೊಯ್ಸಳ ರಚನೆಯಾಗಿದೆ. ಕ್ರಿ.ಶ. ೧೩ನೇ ಶತಮಾನದ ಆದಿಭಾಗದಲ್ಲಿ ಇದರ ರಚನೆ ಆಗಿದ್ದಿರಬೇಕು. ಪ್ರಸಿದ್ಧ ರೂವಾರಿ ಮಲ್ಲಿತಮ್ಮನು ಈ ದೇವಾಲಯ ನಿರ್ಮಾಣದಲ್ಲಿ ಪಾಲ್ಗೊಂಡಿದ್ದನೆಂಬುದಕ್ಕೆ ಶಾಸನಾಧಾರವಿದೆ. ಒಂದೇ ಸಾಲಲ್ಲಿರುವ ಐದು ಗರ್ಭಗೃಹಗಳಿಗೆ ಪ್ರತ್ಯೇಕ ಅಂತರಾಳವಿದ್ದು, ಎಲ್ಲಕ್ಕೂ ಸೇರಿದಂತೆ ವಿಶಾಲವಾದ ಒಂದೇ ನವರಂಗವಿದೆ. ಉತ್ತರಾಭಿಮುಖವಾಗಿರುವ ಇದರ ಪ್ರಧಾನ ದ್ವಾರಗಳೆರಡಕ್ಕೂ ಮುಖಮಂಟಪಗಳಿದ್ದು, ಎದುರಲ್ಲಿ ನಂದಿಮಂಟಪಗಳಿವೆ. ಜಗಲಿರಹಿತವಾಗಿದ್ದರೂ ಪ್ರಮಾಣಬದ್ಧವಾದ ದ್ರಾವಿಡ ಶಿಖರಗಳಿಂದ ಅಲಂಕೃತವಾಗಿರುವ ಈ ದೇವಾಲಯದ ಐದು ಗರ್ಭಗೃಹಗಳಲ್ಲೂ ವಿವಿಧ ನಾಮಾಂಕಿತ ಲಿಂಗಗಳಿವೆ. ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಎಂಬ ಪಂಚನಾಮಗಳಿಂದ ಇವುಗಳು ಕರೆಯಲ್ಪಟ್ಟಿವೆ. ದ್ವಾರಬಂಧಗಳು

ಆಕರ್ಷಕವಾಗಿದ್ದು, ಜಾಲಂಧ್ರಗಳಿವೆ. ನವರಂಗದ ಭುವನೇಶ್ವರಿ ಹಾಗೂ ತಿರುಗಣೆ ಕಂಬಗಳು ಚಿತ್ತಾಕರ್ಷಕವಾಗಿವೆ. ದೇವಕೋಷ್ಠಗಳಲ್ಲಿ ಗಣಪ, ಷಣ್ಮುಖ, ಸಪ್ತಮಾತೃಕಾ, ಮಹಿಷಮರ್ದಿನಿ, ಸರಸ್ವತಿ, ವೀರಭದ್ರ ಹಾಗೂ ಉಮಾಮಹೇಶ್ವರರ ಸುಂದರ ಶಿಲ್ಪಗಳಿವೆ. ದೇವಾಲಯದ ಭಿತ್ತಿಯ ಕಿರುದೇವಕೋಷ್ಠಗಳಲ್ಲಿ ಕೇಶವ, ನಾರಾಯಣ, ಮಾಧವ, ಗೋವಿಂದ, ಶ್ರೀವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷಿಕೇಶ, ಪದ್ಮನಾಭ, ದಾಮೋದರ, ಪರವಾಸುದೇವ, ವರಾಹ, ಸರಸ್ವತಿ, ಇಂದ್ರ–ಸಚಿದೇವಿ ಮುಂತಾದ ದೇವತಾ ಮೂರ್ತಿಗಳಿವೆ. ಪೌರಾಣಿಕ ಹಾಗೂ ಧಾರ್ಮಿಕ ಉಬ್ಬು ಶಿಲ್ಪಗಳಿಂದ ಭಿತ್ತಿಯ ಮೇಲೆ ದೇವಲೋಕವನ್ನೆ ಸೃಷ್ಟಿಸಲಾಗಿದೆ. ಮೂಲತಃ ಈಶ್ವರ ದೇವಾಲಯವಾದರೂ ಭಿತ್ತಿಶಿಲ್ಪಗಳ ಕೆಳಗಿರುವ ಏಕಪದ ಬರಹಗಳು, ವಿಷ್ಣುವಿನ ೨೪ ರೂಪಗಳಲ್ಲಿ ೧೨ ರೂಪಗಳನ್ನು ಹೆಸರಿಸಿರುವುದು ಆಯಾ ಉಬ್ಬುಶಿಲ್ಪಗಳನ್ನು ಗುರುತಿಸಲು ನೆರವಾಗುತ್ತದೆ. ಒಟ್ಟಾರೆ ಈ ದೇವಾಲಯದ ಮುಖಮಂಟಪ ಮತ್ತು ನಂದಿಮಂಟಪವನ್ನು ಒಳಗೊಂಡಂತೆ ೧೪೦ ಅಡಿ ಉದ್ದ; ೬೩ ಅಡಿ ಅಗಲವಿದೆ. ಒಳಾಂಗಣ ೧೮ ಅಂಕಣದಿಂದ ಕೂಡಿ ಒಂದು ದೊಡ್ಡ ಹಜಾರದಂತಿದೆ.

ಊರಿನ ಹೆಸರು ಗೋವಿಂದನಹಳ್ಳಿ ಎಂಬುದಕ್ಕೆ ಪೂರಕವಾಗಿ ಊರೊಳಗೆ ಇರುವ ಗೋವಿಂದ (ಕೃಷ್ಣ)ನ ಹೆಸರಿನ ಪುಟ್ಟ ಗುಡಿಯಲ್ಲಿರುವ ಗೋವಿಂದಮೂರ್ತಿ ಬಹುಸುಂದರವಾಗಿದೆ. ಪಶುಸಂಗೋಪನೆಗೆ ಹೆಸರುವಾಸಿಯಾದ ಊರು. ಕಿಕ್ಕೇರಿ ಮತ್ತು ಗೋವಿಂದನಹಳ್ಳಿ ದಾರಿ ಕ್ರಮಿಸಲು ಅಂಥ ದೂರವಿಲ್ಲ. ಗೋವಿಂದನಹಳ್ಳಿಯ ನೆರೆಯ ಗ್ರಾಮವಾದ ಮಾರ್ಗೋನಹಳ್ಳಿಯಲ್ಲಿ ಹೊಯ್ಸಳ ಶೈಲಿಯ ಈಶ್ವರ ದೇವಾಲಯವಿದೆ. ಇನ್ನು ಸಮೀಪದ ಮಾದಾಪುರದ ತ್ರಿಯಂಬಕೇಶ್ವರ ದೇವಾಲಯವು ದಿಬ್ಬವೊಂದರಲ್ಲಿ ಬಹುಪಾಲು ಮುಚ್ಚಿಹೋಗಿದೆ. ಇದು ಊರಾಚೆ ಹೇಮಾವತಿ ಎಡದಂಡೆ ಮೇಲಿದೆ. ಇದು ಹಳೇಮಾದಾಪುರದ ಜಾಗ. ಗರ್ಭಗೃಹ, ಸುಖನಾಸಿ, ನವರಂಗಗಳಿದ್ದು, ಭುವನೇಶ್ವರಿಗಳಲ್ಲಿರುವ ಕೆತ್ತನೆ ಸುಂದರವಾಗಿದೆ. ಊರಲ್ಲಿರುವ ಮಹಾಲಿಂಗೇಶ್ವರ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗಗಳಿದ್ದು, ಅದರ ಪಾರ್ಶ್ವದ್ವಾರಕ್ಕೆ ಮುಖಮಂಟಪವಿದೆ. ಇತ್ತೀಚೆಗೆ ಇದು ಜೀರ್ಣೋದ್ಧಾರ ಕಂಡಿದೆ. ಗರ್ಭಗೃಹದಲ್ಲಿ ಮಹಾಲಿಂಗೇಶ್ವರ ಲಿಂಗ, ನವರಂಗದ ದೇವಕೋಷ್ಠಗಳಲ್ಲಿ ಗಣಪತಿ ಮತ್ತು ಭೈರವ ಶಿಲ್ಪಗಳಿದ್ದು, ನಡುವಣ ಭುವನೇಶ್ವರಿಯಲ್ಲಿ ತ್ರಿದಳ ಕಮಲವಿದೆ. ಗರ್ಭಗೃಹಕ್ಕೆ ಶಿಖರವಿದ್ದು, ಭಿತ್ತಿಯ ಹೊರಮೈಯನ್ನು ಅಲಂಕಾರಿಕ ಸ್ತಂಭಗಳು ಅಪ್ಪಿನಿಂತಿವೆ. ಗುಡಿಯ ಆವರಣದಲ್ಲಿ ವೀರಗಲ್ಲು ಮತ್ತು ಸಪ್ತಮಾತೃಕಾ ಶಿಲ್ಪಗಳಿವೆ.




ಲಕ್ಷ್ಮೀನಾರಾಯಣ ದೇವಾಲಯ, ಹೊಸಹೊಳಲು.




ಪಂಚಕೂಟ (ಪಂಚಲಿಂಗೇಶ್ವರ) ದೇವಾಲಯ. ಗೋವಿಂದನಹಳ್ಳಿ.



ಬ್ರಹ್ಮೇಶ್ವರ ದೇವಾಲಯ. ಕಿಕ್ಕೇರಿ.



ಸಂಗಮೇಶ್ವರ ದೇವಾಲಯ. ಸಿಂಧಘಟ್ಟ.



ಕುಸುರಿಕಂಬ.
ಸಂಗಮೇಶ್ವರ ದೇವಾಲಯ.



ಚರಕಿಕಂಬ. ಹೊಸಹೊಳಲು.

ಮಾದಾಪುರದ ಸಮೀಪದಲ್ಲಿ ಹೇಮಾವತಿ ಎಡದಂಡೆ ಮೇಲಿರುವ ಕಡೆಹೆಮ್ಮಿಗೆ ಊರಿನ ಈಶ್ವರ ಗುಡಿ ಹೊಯ್ಸಳ ರಚನೆಯಾಗಿದ್ದು ಶಿಥಿಲಗೊಂಡಿದೆ. ಈ ದೇವಾಲಯದ ಬಳಿ ಇರುವ 'ವಿಭೂತಿ ಕುಪ್ಪೆ' ಹಿಂದೆ ವಿಭೂತಿ ತಯರಿಕಾ ಘಟಕವಾಗಿತ್ತೆಂದು ಹೇಳಲಾಗುತ್ತದೆ.

**ತೆಂಗಿನಘಟ್ಟದ ಹೊಯ್ಸಳೇಶ್ವರ :**

ಕೃಷ್ಣರಾಜಪೇಟೆಗೆ ವಾಯವ್ಯಕ್ಕೆ ೧೫ ಕಿ.ಮೀ. ದೂರದಲ್ಲಿರುವ ಇದನ್ನು ತೆಂಗಿನಘಟ್ಟ ಶಾಸನದಲ್ಲಿ 'ತೆಂಗಿನಕಟ್ಟ' ಎಂದೇ ಉಲ್ಲೇಖಿಸಲಾಗಿದೆ. ಇಲ್ಲಿರುವ ಈಶ್ವರ (ಶಾಸನದಲ್ಲಿ ಹೊಯ್ಸಳೇಶ್ವರ) ದೇವಾಲಯವು ಆಕಾರದಲ್ಲಿ ಕಿರಿದಾದರೂ ಆಕರ್ಷಕವಾಗಿದ್ದು, ಶಿಥಿಲಾವಸ್ಥೆಯಲ್ಲಿದೆ. ಗರ್ಭಗೃಹ, ತೆರೆದ ಸುಖನಾಸಿ ಅಥವಾ ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿರುವ ಈ ಗುಡಿಯ ಗರ್ಭಗೃಹದಲ್ಲಿ ಈಶ್ವರ ಲಿಂಗವಿದ್ದು, ಬಾಗಿಲವಾಡವು ಕುಸುರಿಕೆತ್ತನೆಯಿಂದ ಸುಂದರವಾಗಿದೆ. ಆಕರ್ಷಕ ಭುವನೇಶ್ವರಿಗಳನ್ನುಳ್ಳ ಅಂತರಾಳದಲ್ಲಿರುವ ಲಲಿತಾಸೀನ ಶಿವನ ಎಡತೊಡೆಯಮೇಲೆ ಆಸೀನಳಾಗಿರುವ ಪಾರ್ವತಿಯ ಶಿರವನ್ನು ಶಿವನು ತನ್ನ ಎಡಗೈಯಲ್ಲಿ ಬಳಸಿ ಹಿಡಿದಿದ್ದಾನೆ. ಈ ಪಾರ್ವತಿ–ಪರಮೇಶ್ವರ ಶಿಲ್ಪದ ಪೀಠದಲ್ಲಿ ನಂದಿ, ಷಣ್ಮುಖ, ಗಣಪ ಹಾಗೂ ಉಡಗಳನ್ನು ಬಿಡಿಸಲಾಗಿದೆ. ನವರಂಗದ ಕುಂಭಾಕಾರದ ಕಂಬಗಳು ನಾಜೂಕಾಗಿದ್ದು, ಅಲ್ಲಿ ಸಪ್ತಮಾತೃಕಾ, ಉಮಾಮಹೇಶ್ವರ ಹಾಗೂ ಭೈರವ ಶಿಲ್ಪಗಳಿದ್ದು, ಛತ್ತಲ್ಲಿ ಸಿಂಹಾವೃತ್ತ ಕಮಲದ ಮೊಗ್ಗಿನಿಂದ ಅಲಂಕೃತವಾದ ಭುವನೇಶ್ವರಿ ಇದೆ. ಗರ್ಭಗೃಹ ಹಾಗೂ ನವರಂಗದ ಬಾಗಿಲವಾಡಗಳು ಪಂಚಶಾಖಾಲಂಕೃತವಾಗಿದ್ದು, ಪಂಚಶಿಖರಗಳಿಂದ ಅಲಂಕರಿಸಲ್ಪಟ್ಟಿದೆ. ಕದಂಬನಾಗರ ಶಿಖರವನ್ನು ಹೊಂದಿರುವ ಈ ಗುಡಿಯ ಭಿತ್ತಿಯಲ್ಲಿ ಅಲಂಕಾರಿಕ ಕಂಬ, ಸ್ತಂಭ ಶಿಖರಗಳಿದ್ದು, ಚಜ್ಜವನ್ನು ಶಿಖರಮಾದರಿಯಲ್ಲೇ ಅಲಂಕರಿಸಲಾಗಿದೆ. ಗುಡಿಯ ಎಡಭಾಗದಲ್ಲಿ ಕ್ಷೇತ್ರಪಾಲಭೈರವನ ಕಿರುಗುಡಿಯಿದೆ. ಮೂರ್ತಿ ಚ್ಯುತಿಗೊಂಡಿದೆ. ಕ್ರಿ.ಶ. ೧೧೩೩ರ ಶಾಸನವು ಹೊಯ್ಸಳ ಒಂದನೆಯ ನರಸಿಂಹದೇವನಾಗಿದ್ದು ಹೊಯ್ಸಳೇಶ್ವರ ದೇವಾಲಯ ಮತ್ತು ಕೆರೆಯನ್ನು ನಿರ್ಮಿಸಿದ ವಿವರಣೆಯಿದೆ. ಈ ದೇವಾಲಯವನ್ನು ನಿರ್ಮಿಸಿರಬಹುದಾದ ಶಿಲ್ಪಿ, ಕಿಕ್ಕೇರಿಯ ಹಾಲೋಜನ ಮಗ ಬಮ್ಮೋಜ ಎಂದು ತಿಳಿಯಬಹುದಾಗಿದೆ. ದೇವರ ಸೇವೆಗೆಂದು ಪದ್ಮರಾಸಿ ಪಂಡಿತರಿಗೆ ದಾನಬಿಟ್ಟ ವಿಷಯದ ವಿವರಣೆಯಿದೆ.

**ಅಘಲಯದ ಮಲ್ಲೇಶ್ವರ :**

ಈ ದೇವಾಲಯು ತ್ರಿಕೂಟಾಚಲರಚನೆಯಿಂದ ಕೂಡಿದೆ. ಇದು ಗೋವಿಂದನಹಳ್ಳಿಯ ಪಂಚಲಿಂಗೇಶ್ವರ ದೇವಾಲಯವನ್ನು ಹೋಲುತ್ತದೆ.

ಒಳಾಂಗಣ ವಿಶಾಲವಾಗಿದ್ದು ೩೦ ಕಂಬಗಳುಳ್ಳ ನವರಂಗವು ೧೦೦ ಅಡಿ ಉದ್ದ ಮತ್ತು ೨೫ ಅಡಿ ಅಗಲವಿದೆ. ಒಂದೇ ಸಾಲಿನಲ್ಲಿ ಮೂರು ಪ್ರತ್ಯೇಕ ಗರ್ಭ ಗೃಹ ಹಾಗೂ ಸುಖನಾಸಿಗಳನ್ನು ಹೊಂದಿದ್ದು, ಎಲ್ಲದಕ್ಕೂ ಸೇರಿದಂತೆ ಇರುವ ವಿಶಾಲ ನವರಂಗದ ದ್ವಾರಕ್ಕೆ ಎರಡಂಕಣದ ಮುಖಮಂಟಪವಿದೆ. ಮೂರೂ ಗರ್ಭಗೃಹಗಳ ಬಾಗಿಲವಾಡಗಳ ಲಲಾಟದಲ್ಲಿ ಗಜಲಕ್ಷ್ಮಿ, ತೋಲೆಯಲ್ಲಿ ತಾಂಡವೇಶ್ವರ ಹಾಗೂ ಇಕ್ಕೆಲದಲ್ಲಿ ಅಲಂಕೃತ ಜಾಲಂಧ್ರಗಳಿದ್ದು, ಚಿತ್ತಾಕರ್ಷಕವಾಗಿವೆ. ಗರ್ಭಗುಡಿಯೊಳಗೆ ಚಂದ್ರಮೌಳೇಶ್ವರ, ಮಲ್ಲಿಕಾರ್ಜುನ ಹಾಗೂ ಸಿದ್ಧಲಿಂಗೇಶ್ವರ ನಾಮಾಂಕಿತ ಲಿಂಗಗಳಿವೆ. ಸುಖನಾಸಿಯ ಬಾಗಿಲವಾಡದ ಲಲಾಟದಲ್ಲಿ ಉಮಾಮಹೇಶ್ವರ ಕೆತ್ತನೆ ಇದ್ದು, ಕೆಳಗೆ ದ್ವಾರಪಾಲಕರಿದ್ದಾರೆ. ಕಮಲಾಲಂಕೃತ ಛತ್ತಿರುವ ನವರಂಗದಲ್ಲಿ ೩೦ ಆಕರ್ಷಕ ಕಂಬಗಳಿದ್ದು, ಅಲ್ಲಿಯ ಏಳು ದೇವಕೋಷ್ಠಗಳಲ್ಲಿ ದ್ವಾದಶಾದಿತ್ಯ ಆವೃತ ಪ್ರಭಾವಳಿಯುಳ್ಳ ಸೂರ್ಯ, ವೀರಭದ್ರ, ಸಪ್ತಮಾತೃಕಾ, ನಾಗಾರ್ಜುನ, ಷಣ್ಮುಖನ ಎರಡು, ಗಣಪತಿಯ ಮೂರು, ಮಹಿಷಮರ್ಧಿನಿಯ ಎರಡು, ನಾಗಶಿಲ್ಪ, ಸರಸ್ವತಿ, ಉಮಾಮಹೇಶ್ವರ, ಕೇಶವ ಶಿಲ್ಪಗಳ ಜೊತೆಗೆ ನಂದಿಯ ಮೂರು ವಿಗ್ರಹಗಳಿವೆ. ನವರಂಗದಲ್ಲಿ ಕಕ್ಷಾಸನವಿದೆ. ಪ್ರಧಾನ ಭುವನೇಶ್ವರಿಯಲ್ಲಿ ಚಿನ್ಮಯ ಮುದ್ರೆಯಲ್ಲಿರುವ ಬುದ್ಧ ಮತ್ತು ಕತ್ತಿ ಗುರಾಣಿಯನ್ನು ಹಿಡಿದು ಕುದುರೆ ಸವಾರಿಯಲ್ಲಿರುವ ಕಲ್ಕಿ ಆಕರ್ಷಕವಾಗಿವೆ. ಹೊರಗೋಡೆಯ ಮೇಲೆ ಕಡೆದಿರುವ ವಿವಿಧ ಶಿಲ್ಪಗಳು ಎಂದಿನಂತೆ ಮನಮೋಹಕವಾಗಿವೆ. ವಿಶಾಲವಾದ ಜಾಲಂಧ್ರ, ಅಲಂಕಾರಿಕ ಸ್ತಂಭಗಳೊಂದಿಗೆ ಮತ್ಸ್ಯಕೂರ್ಮ, ವರಾಹ, ನರಸಿಂಹ, ರಾಮ, ಬಲರಾಮ, ಕೃಷ್ಣ, ವಿಷ್ಣು, ಬುದ್ಧ, ಕಲ್ಕಿ, ಶಿವ ಪಾರ್ವತಿ ಮುಂತಾದ ಶಿಲ್ಪಗಳಿವೆ. ಹೊಯ್ಸಳ ಮೂರನೇ ನರಸಿಂಹ (ಕ್ರಿ.ಶ. ೧೨೬೦)ನ ಕಾಲದಲ್ಲಿ ನಿರ್ಮಾಣವಾದದ್ದಕ್ಕೆ ಶಾಸನಾಧಾರವಿದೆ. ಶಿಥಿಲವಾಗಿದ್ದ ದೇವಾಲಯ ಇದೀಗ ಜೀರ್ಣೋದ್ಧಾರ ಗೊಂಡಿದೆ. ಭೂಮಿಗೆ ಎತ್ತರದಲ್ಲಿ ವಿಶಾಲವಾದ ಸಮತಟ್ಟು ಪ್ರದೇಶದಲ್ಲಿ ದೇವಾಲಯ ನಿರ್ಮಾಣ ವಾಗಿರುವುದರಿಂದ ಅದರ ಭವ್ಯತೆ ಇಮ್ಮಡಿಸಿದೆ.

**ಅಗ್ರಹಾರ ಸಿಂದಘಟ್ಟದ ಕಲಾ ಸೌಂದರ್ಯ :**

ಅಗ್ರಹಾರಗಳನ್ನು ಸೃಷ್ಟಿಸಿ ಬ್ರಾಹ್ಮಣರಿಗೆ ದಾನಕೊಡುವುದು ಭಾರತದಲ್ಲಿ ಹಿಂದೆ ನಡೆದು ಬರುತ್ತಿದ್ದ ಒಂದು ವಿಶಿಷ್ಟ ಸಂಪ್ರದಾಯ. ಅಗ್ರಹಾರದಮುಖ್ಯ ಉದ್ದೇಶವೆಂದರೆ ಮಹಾಜನರು ಮಾಡಬೇಕಾಗಿದ್ದ ಷಟ್ಕರ್ಮಗಳಲ್ಲಿ ಅಧ್ಯಯನ ಮತ್ತು ಅಧ್ಯಾಪನಗಳು ಸುಗಮವಾಗಿ ನಡೆದು ವಿದ್ಯಾಪ್ರಸಾರದ ಆಧ್ಯಾತ್ಮಿಕ ಕೇಂದ್ರವಾಗಿ ಕೆಲಸಮಾಡಬೇಕಾಗಿತ್ತು. ಇಂಥ ಸ್ಥಳಗಳಿಗೆ ಅಥವಾ ಗ್ರಾಮಗಳಿಗೆ ಚತುರ್ವೇದಿ ಮಂಗಲಂ ಅಥವಾ ಶ್ರೋತ್ರಿಯ ಗ್ರಾಮ ಎಂದು ಶಾಸನಗಳಲ್ಲಿ

ಉಲ್ಲೇಖಿಸಲಾಗಿದೆ. ನಾನಾ ಗೋತ್ರಗಳಿಗೆ, ಪ್ರವರಗಳಿಗೆ, ಶಾಖೆಗಳಿಗೆ ಸೇರಿದ ನಿರ್ದಿಷ್ಟ ಸಂಖ್ಯೆಯ ಬ್ರಾಹ್ಮಣರಿಗೆ ಅವರು ಗೃಹಸ್ಥಾಶ್ರಮ ನೀತಿನಿಯಮಗಳನ್ನು ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹ ಎಂಬ ಸ್ಮೃತಿ ಸಿದ್ಧವಾದ ಕಾರ್ಯಗಳನ್ನು ನೆರವೇರಿಸಿಕೊಂಡು ಹೋಗಬೇಕಾಗಿತ್ತು. ಇಲ್ಲಿ ಬ್ರಾಹ್ಮಣೇತರರೂ ಅದರಲ್ಲೂ ಪಾರಂಪರ್ಯ ಕಸುಬುದಾರರು ತಮ್ಮಗಳ ಕೇರಿಯಲ್ಲಿ ವಾಸಿಸುತ್ತಿದ್ದರೂ ಅಲ್ಲಿನ ಸಾಗುವಳಿ ಭೂಮಿಯ ಒಡೆತನ ಸರ್ವ ಸ್ವಾಮ್ಯವಾಗಿ ಬ್ರಾಹ್ಮಣರದೇ ಆಗಿತ್ತು.

ಪಟ್ಟಣದಲ್ಲಿ ಇಂಥ ಬ್ರಾಹ್ಮಣರ ವಾಸಕ್ಕೆಂದು ಮೀಸಲಿರಿಸುತ್ತಿದ್ದ ಕೇರಿಗಳಿಗೆ 'ಬ್ರಹ್ಮಪುರಿ' ಎಂದು ಕರೆಯಲಾಗುತ್ತಿತು. ಇಂಥ ಹಲವು ಅಗ್ರಹಾರಗಳಲ್ಲಿ ಮಹಾಜನರು ಋಗ್ಯಜುಸ್ಸಾಮಾಥರ್ವಣವೇದಾರ್ಥ ತತ್ತ್ವಜ್ಞರು, ನಾಟಕ, ಇತಿಹಾಸ, ಮೀಮಾಂಸಾ, ವಾತ್ಸಾಯನ, ಭರತಗಣಿತ ಇತ್ಯಾದಿ ಶಾಸ್ತ್ರಗಳಲ್ಲಿ ಪ್ರವೀಣರಾಗಿದ್ದರೆಂದು ತಿಳಿದುಬರುತ್ತದೆ. ಇದಲ್ಲದೆ ಶೈವಧರ್ಮಾವಲಂಬಿಗಳು ಅದರಲ್ಲೂ ಮುಖ್ಯವಾಗಿ ವೀರಶೈವರ ವಾಸಕ್ಕೆಂದು ಸೃಷ್ಟಿಸಲಾದ ಅಗ್ರಹಾರಗಳನ್ನು 'ಶಿವಪುರ' ಗಳೆಂದು ಕರೆಯುತ್ತಿದ್ದರು.

ಅಗ್ರಹಾರದ ರಚನೆಯಲ್ಲಿ ದೇವಾಲಯಗಳಿಗೆ ಸಂಬಂಧಿಸಿದಂತೆ ಊರಿನ ನಡುವೆ ಪೂರ್ವಾಭಿಮುಖವಾಗಿ ಒಂದು ವಿಷ್ಣುದೇವಾಲಯ, ಈಶಾನ್ಯಕ್ಕೆ ಶಿವದೇವಾಲಯ, ಶಿವಾಲಯದ ಮುಂದೆ ಅಥವಾ ಬದಿಗೆ ತಟಾಕ ಅಥವಾ ಜಲಾಶಯ ನಿರ್ಮಾಣವಾಗಿರಬೇಕು. ಇಲ್ಲಿ ಲೌಕಿಕ ಮತ್ತು ಅಲೌಕಿಕದ ಪರಸ್ಪರ ಸಂಬಂಧವಿರುತ್ತದೆ. ಇಂಥ ಹಲವಾರು ಅಗ್ರಹಾರಗಳಲ್ಲಿ ಸಿಂದಘಟ್ಟವೂ ಒಂದು ಗ್ರಾಮವಾಗಿತ್ತು. ಆಧ್ಯಾತ್ಮಿಕ ಪ್ರತೀಕವಾಗಿ ಇಲ್ಲಿ ಹಲವಾರು ಗುಡಿಗಳಿದ್ದರೂ; ಪ್ರಮುಖವಾಗಿ ಊರೊಳಗೆ ಇರುವ ಲಕ್ಷ್ಮೀನಾರಾಯಣ ದೇವಾಲಯ, ಮತ್ತೊಂದು ಈಶಾನ್ಯಕ್ಕಿರುವ ಸಂಗಮೇಶ್ವರ ದೇವಾಲಯ. ಕಲ್ಯಾಣ ಚಾಲುಕ್ಯರ ವಾಸ್ತು ಶೈಲಿಯನ್ನು ಮತ್ತಷ್ಟು ಕಲಾತ್ಮಕವಾಗಿ ವಿಜೃಂಭಿಸಿದ ಹೊಯ್ಸಳ ದೇವಾಲಯಗಳಲ್ಲಿ ಕೆಲವು ಒಳಗೂ ಹೊರಗೂ ವಿಜೃಂಭಿಸಿದರೆ, ಕೆಲವಷ್ಟು ಒಳಾಂಗಣದಲ್ಲಿ ವಿಜೃಂಭಿಸಿವೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಸಂಗಮೇಶ್ವರ ದೇವಾಲಯ ಒಂದು ಉದಾಹರಣೆಯಾಗಿದೆ. ಹೊರಭಾಗ ಹಳೆಯ ಚಾಲುಕ್ಯ ಹಾಗೂ ದಾಕ್ಷಿಣಾತ್ಯ ಶೈಲಿಯನ್ನು ಹೋಲುತ್ತದೆ.

ಇನ್ನೊಂದು ಲಕ್ಷ್ಮೀನಾರಾಯಣ ದೇವಾಲಯ ನಕ್ಷತ್ರಾಕಾರದ ಎತ್ತರದ ಜಗತಿಯ ಮೇಲೆ ವಿಶಿಷ್ಟ ಹೊಯ್ಸಳ ಶೈಲಿಯಲ್ಲಿ ನಿರ್ಮಿಸಿದರೂ ಹೊರಭಾಗದಲ್ಲಿ ಉಬ್ಬು ಶಿಲ್ಪಗಳ ಅಲಂಕರಣೆ ನಡೆದಿಲ್ಲ. ಒಳಭಾಗ ನವರಂಗದ ಕಂಬಗಳು, ಮತ್ತು

ಭುವನೇಶ್ವರಿಗಳಿಂದ ಶೋಭಿಸಿದ್ದರೂ ಸಂಗಮೇಶ್ವರ ದೇವಾಲಯಕ್ಕೆ ಸಾಟಿಯಾಗಿ ನಿಲ್ಲುವುದಿಲ್ಲ. ಈ ದೇವಾಲಯಗಳು ಕ್ರಿ.ಶ. ೧೧೭೯ರ ಹೊತ್ತಿಗೆ ನಿರ್ಮಾಣವಾಗಿರುವ ಸ್ಪಷ್ಟಸೂಚನೆಗೆ ಇದೇ ಲಕ್ಷ್ಮೀನಾರಾಯಣ ದೇವಾಲಯದ ಒಂದು ಭುವನೇಶ್ವರಿಯ ಮೇಲಿನ ಶಾಸನಲಿಪಿ ಆಧಾರವಾಗಿದೆ.

ಸಂಗಮೇಶ್ವರ ದೇವಾಲಯ ಗಾತ್ರದಲ್ಲಿ ಚಿಕ್ಕದಾದರೂ ಸೋಮನಾಥಪುರ, ಗೋವಿಂದನಹಳ್ಳಿಯ ಪಂಚಲಿಂಗೇಶ್ವರ ದೇವಾಲಯಗಳ ಮಾದರಿಯನ್ನು ಅನುಕ್ರಮಿಸಿದೆ. ಇವು ದ್ರಾವಿಡ ಸಂಪ್ರದಾಯದ ಪ್ರಭಾವವನ್ನುಳ್ಳ ಹೊಯ್ಸಳ ರಚನೆಯಾಗಿದೆ. ಅಲ್ಲಿನ ಪಂಚಕೂಟ ಬದಲಾಗಿ ಇಲ್ಲಿ ದ್ವಿಕೂಟಾಚಲವಾಗಿದೆ. ಗರ್ಭಗುಡಿಯ ಮೇಲಿನ ಶಿಖರಗಳು ಇಲ್ಲಿ ಕಾಣಸಿಗುವುದಿಲ್ಲ. ಇಡೀ ದೇವಾಲಯದ ಸೊಬಗು ಇರುವುದು ನವರಂಗದ ಕಂಬಗಳಲ್ಲಿ ಹಾಗೂ ಮೇಲ್ಛಾವಣಿಯ ಭುವನೇಶ್ವರಿಗಳಲ್ಲಿ. ಇದು ಕಟ್ಟಿಸಿದಾತನ ಅಭಿರುಚಿ ಮತ್ತು ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಕಟ್ಟಡದ ನಿರ್ಮಾಣದಲ್ಲಿ ಹೊರಮೈಯಲ್ಲಿ ಗ್ರಾನೈಟ್ ಶಿಲೆ ಕಂಡುಬಂದರೂ ಉಳಿದಭಾಗ ಕುಸುರಿ ಕೆತ್ತನೆಗೆ ಅನುವಾಗುವಂತಹ ನಸುಹಸುರಿನ ಛಾಯೆಯುಳ್ಳ ಮೃದುವಾದ ಕಲ್ಲನ್ನು ಹೊಂದಿದೆ.

ಈ ದೇವಾಲಯ ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳಿಂದ ರಚಿತವಾಗಿದೆ. ಸುಖನಾಸಿಯ ದ್ವಾರಗಳಲ್ಲಿ ಕಾಣುವ ಚಿತ್ರಶಿಲ್ಪಗಳು ಅತ್ಯುತ್ತಮವಾಗಿವೆ. ದ್ವಿಕೂಟಾಚಲವಾದ ಈ ದೇವಾಲಯದ ಅಕ್ಕ ಪಕ್ಕದ ಗರ್ಭಗುಡಿಗಳಲ್ಲಿ ಸಂಗಮೇಶ್ವರ-ಜಂಗಮೇಶ್ವರ (ಜಂನ್ನೇಶ್ವರ) ಹೆಸರಿನ ಲಿಂಗಗಳಿವೆ. ಆಯಾ ಲಿಂಗಗಳಿಗೆ ಎದುರಾಗಿ ನವರಂಗ ಮತ್ತು ಮುಖ ಮಂಟಪಗಳ ನಡುವೆ ಎರಡು ಆಕರ್ಷಕವಾದ ನಂದಿವಿಗ್ರಹಗಳಿವೆ. ದೇವಾಲಯಕ್ಕೆ ಎರಡು ದ್ವಾರಮಂಟಪಗಳಿದ್ದು; ನವರಂಗದ ಹನ್ನೆರಡು ತಿರುಗಣೆಯ ಕಂಬಗಳಲ್ಲಿ ನಾಲ್ಕುಕಂಬಗಳು ಹೊಯ್ಸಳ ಶೈಲಿಯ ಕೆತ್ತನೆಯ ಪರಾಕಾಷ್ಠೆಗೆ ಸಾಕ್ಷಿಯಾಗಿವೆ. ಇಪ್ಪತ್ತೊಂದು ಅಂಕಣದ ನವರಂಗದ ಮೇಲ್ಛಾವಣಿಯಲ್ಲಿ ಅಷ್ಟೇ ಸಂಖ್ಯೆಯ ವಿವಿಧಾಕೃತಿಯ ಭುವನೇಶ್ವರಿಗಳ ಕೆತ್ತನೆ ಮನಮೋಹಕವಾಗಿವೆ. ವಿವಿಧ ಹಂತದ ಬೆಳವಣಿಗೆಯಲ್ಲಿ ಬಾಳೆಯ ಮೋತೆಗಳು, ಅರಳಿದ-ಅರಳುತ್ತಿರುವ ಕಮಲಗಳು ಜೀವಂತ ಕೆತ್ತನೆಯನ್ನು ಪಡೆದುಕೊಂಡಿವೆ. ಮುಖಮಂಟಪಗಳಲ್ಲಿ ಭದ್ರಾಸನವಿದ್ದು ಅವುಗಳ ಮೇಲ್ಛಾವಣಿಯೂ ಆಕರ್ಷಕ ಕೆತ್ತನೆಗಳಿಂದ ಕೂಡಿದೆ. ಇದು ಕುಸುರಿ ಶಿಲ್ಪಿಗಳ ವಾಸ್ತು ನಿರ್ಮಾಣವಾದಂತಿದೆ. ಅದೇ ನವರಂಗದಲ್ಲಿ ಕಾಣಬರುವ ವಿವಿಧಾಕೃತಿಯ ನಾಲ್ಕು ಗಣಪತಿಗಳ ರಚನೆ ಕುತೂಹಲ ಮೂಡಿಸುತ್ತವೆ. ಜತೆಗೆ

ವಿಷ್ಣು, ಸುಬ್ರಹ್ಮಣ್ಯ, ಸೂರ್ಯ, ಸಪ್ತಮಾತೃಕೆಯರ ಶಿಲ್ಪಗಳು ಆಕರ್ಷಕವಾಗಿವೆ. ಈ ಎರಡೂ ದೇವಾಲಯಗಳು ಜೀರ್ಣೋದ್ಧಾರ ಕಂಡಿವೆ. ಲಕ್ಷ್ಮೀನಾರಾಯಣ ದೇವಾಲಯ ಕೇಂದ್ರ ಪ್ರಾಚ್ಯ ವಸ್ತು ಇಲಾಖೆಗೆ ಒಳಪಟ್ಟಿದ್ದರೆ ಸಂಗಮೇಶ್ವರ ರಾಜ್ಯ ಪುರಾತತ್ವ ಇಲಾಖೆಗೆ ಸೇರಿದೆ.

'ಸಿಂದಘಟ್ಟದ ತಿಮ್ಮಪ್ಪ ತಿರುಗ ಮುರುಗ ಅಥವಾ ಸಿಂದಘಟ್ಟದ ದೇವರು ಹಿಂದುಮುಂದಾದ್ದು' ಎಂಬ ನಾಣ್ಣುಡಿಗೆ ಹೆಸರಾಗಿರುವ ಇಲ್ಲಿಯ ತಿಮ್ಮಪ್ಪನ ಗುಡಿಯ ಬಗ್ಗೆ ಇಲ್ಲಿ ಹೇಳಿಬಿಡುವುದೇ ಸೂಕ್ತ. ಊರಿಗೆ ಸಮೀಪವಾಗಿರುವ ತಿರುಮಲೆ ದೇವರ ಗುಡ್ಡಕ್ಕೂ ಎದುರಿನ ಮುದಿಬೆಟ್ಟಕ್ಕೂ ನಡುವೆ ಶಿಥಿಲವಾದ ಒಂದು ಕಲ್ಲಿನ ಗುಡಿ ಇದೆ. ಒಳಗೆ ಸಡಿಲವಾದ ಪೀಠದ ಮೇಲೆ ಭಗ್ನವಾಗಿರುವ ಒಂದು ವಿಗ್ರಹವಿದೆ. ಇದು ಹಿಂದುಮುಂದಾದಕ್ಕೆ ಒಂದು ದಂತಕತೆಯಿದೆ. ಇದು ಕಾಡು ಪ್ರದೇಶವಾಗಿದ್ದು ಅದೊಂದು ರಾತ್ರಿ ಒಂದು ಮುಳ್ಳುಹಂದಿ ಗುಡಿಯೊಳಕ್ಕೆ ನುಗ್ಗಿ ತನ್ನ ಮೈ ಕೆರೆತದ ಶಮನಕ್ಕಾಗಿ ದೇವರ ಮೂರ್ತಿಯನ್ನೇ ಬಳಸಿಕೊಂಡಿತು. ಮೂರ್ತಿ ಅಥವಾ ವಿಗ್ರಹ ಹಿಂದುಮುಂದಾಗುವವರೆಗೂ ತನ್ನ ಮೈ ಉಜ್ಜಿಕೊಂಡಿತು. ಬೆಳಗಾಗಿ ಎದ್ದು ಬಂದ ಪೂಜಾರಿ ದೇವರ ಸ್ಥಿತಿಯನ್ನು ಕಂಡು ಹೌಹಾರಿ ಊರಿಗೆ ಸುದ್ದಿ ಮುಟ್ಟಿಸಿದ್ದೇ ತಡ ಸುದ್ದಿ ಸುತ್ತಲ ಸೀಮೆಗೆಲ್ಲ ಹರಡಿಕೊಂಡಿತು. ಹೀಗಾಗಿ ಈ ಭಾಗದಲ್ಲಿ ಸಿಂದಘಟ್ಟ ಎಂದರೆ ಸಾಕು 'ಸಿಂದಘಟ್ಟದ ದೇವರು ಹಿಂದುಮುಂದಾದ್ದು' ಎಂದು ಸೂಕ್ತಿ ನುಡಿದಂತೆ ಹೇಳುತ್ತಾರೆ. (ಇದು ವಿಗ್ರಹ ಚೋರರ ದಾಳಿಯೂ ಆಗಿರಬಹುದು.) ಊರಿನ ಬೋರೆಯಲ್ಲಿರುವ ವಿಜಯದಶಮಿ ಮಂಟಪ ಸ್ಥಳೀಯ ಸಾಂಸ್ಕೃತಿಕ ಪರಂಪರೆಗೆ ಸಾಕ್ಷಿಯಾಗಿದೆ.

### ಧರ್ಮ ಸಾಮರಸ್ಯ :

ಧರ್ಮಸಾಮರಸ್ಯಕ್ಕೆ ಕ್ರಿ.ಶ. ೧೫೩೭ರ ವಿಜಯನಗರ ಕಾಲದ ಸಿಂದಘಟ್ಟದ ಶಾಸನವೊಂದು ನಿದರ್ಶನವಾಗಿದೆ. ಸಿಂದಘಟ್ಟದ ಬಾಬು ಸೆಟ್ಟಿ ಎಂಬುವನು ಒಳಕೇರಿಯಲ್ಲಿ ಕಲ್ಲಿನ ಮಸೀದಿಯೊಂದನ್ನು ಕಟ್ಟಿಸಿದನು. ಅದಕ್ಕೆ ರಂಗೈನಾಯಕನು ಶಿವಪುರ ಗ್ರಾಮದಲ್ಲಿ ಹಬೀಬನಿಗಾಗಿ ಒಂದು ಮನೆಯನ್ನು ೧೪ ಗದ್ಯಾಣಗಳು (ಚಿನ್ನದ ನಾಣ್ಯಗಳು) ಹಾಗೂ ಅದರ ಮೇಲಣ ಕಾಣಿಕೆಯನ್ನು ಸರ್ವಮಾನ್ಯವಾಗಿ ಬಿಟ್ಟನು. ಮಸೀದಿಯನ್ನು ಕಲ್ಲುಮ ಸೀತೆಯ ದೇವಸ್ಥಾನವೆಂದು ಕರೆಯಲಾಗಿದೆ. ಶಾಸನ ಪ್ರಕಟವಾದ ಕಾಲದಲ್ಲಿ ವಿಜಯನಗರ ಹಾಗೂ ಬಹಮನಿ ಸುಲ್ತಾನರ ನಡುವಣ ವೈಷಮ್ಯ ಉತ್ಕಟಾವಸ್ಥೆಗೇರಿ ಮುಂದೆ ಎಂಟು ವರ್ಷಗಳ ತರುವಾಯ

ವಿಜಯನಗರದ ವಿನಾಶದ ಕದನವಾಯಿತು. ಆದರೂ ಇಲ್ಲಿ ಸಾಮಾನ್ಯ ಪ್ರಜೆಗಳ ಧರ್ಮ ಸಾಮರಸ್ಯವನ್ನು ಕಾಣಬಹುದಾಗಿದೆ.

**ಅಗ್ರಹಾರಬಾಚಹಳ್ಳಿ :**

ಕೃಷ್ಣರಾಜಪೇಟೆಗೆ ಈಶಾನ್ಯಕ್ಕೆ ಆರು ಕಿ.ಮೀ. ದೂರವಿರುವ ಗ್ರಾಮ. ಹೆಸರೇ ಸೂಚಿಸುವಂತೆ ಇದೂ ಒಂದು ಅಗ್ರಹಾರವೇ ಆಗಿತ್ತು. ಹೊಯ್ಸಳ ಕಾಲದ ಈಶ್ವರ (ಎರಡು), ಚನ್ನಕೇಶವ ದೇವಾಲಯಗಳಿವೆ. ಊರಿನ ನಡುವೆ ಎತ್ತರವಾದ ಸ್ಥಳದಲ್ಲಿ ಇರುವ ಈಶ್ವರ ದೇವಾಲಯದ ಸಮೀಪದಲ್ಲಿ ಹಿಂದೆ ಅಲ್ಲಿ ಹೆಮ್ಮರವಾಗಿ ಬೆಳೆದಿದ್ದ ಹುಣಸೆ ಮರದಿಂದಾಗಿ ಅದನ್ನು ಹುಣಸೇಶ್ವರ ಗುಡಿ ಎಂದೇ ಕರೆಯಲಾಗುತ್ತದೆ. ಗರ್ಭಗೃಹ, ಸುಖನಾಸಿ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಲಿಂಗದ ಮುಂದೆ ಯಥಾ ಪ್ರಕಾರ ನಂದಿ ಇದೆ. ಗರ್ಭಗೃಹಕ್ಕೆ ದ್ರಾವಿಡ ಶೈಲಿಯ ಶಿಖರವಿದೆ. ನವರಂಗದ ಭುವನೇಶ್ವರಿಗಳು ಹಾಗೂ ಮುಖ್ಯದ್ವಾರಗಳು ಆಕರ್ಷಕವಾಗಿವೆ. ನವರಂಗದ ಹೊರಬಿತ್ತಿಯಲ್ಲಿ ದೇವಕೋಷ್ಠಗಳಿದ್ದು, ಮುಖಮಂಟಪಕ್ಕೆ ಮೂರು ಕಡೆಗಳಿಂದಲೂ ಪ್ರವೇಶದ ಸೋಪಾನಗಳಿವೆ. ಇತ್ತೀಚೆಗಷ್ಟೆ ದೇವಾಲಯ ಮತ್ತು ಆಸುಪಾಸು ಜೀರ್ಣೋದ್ಧಾರಗೊಂಡಿದೆ. ಈ ದೇವಾಲಯ ಪ್ರಸಿದ್ಧಿಯಾಗಿರುವುದು ತನ್ನ ಆವರಣದಲ್ಲಿರುವ ವೀರಗಲ್ಲುಗಳು ಮತ್ತು ಸ್ತೂಪಗಳಿಂದ. ಹೊಯ್ಸಳರ ಕಾಲದಲ್ಲಿ ಪ್ರಚಲಿತವಿದ್ದ ಗರುಡ-ಲೆಂಕರ ಸಂಪ್ರದಾಯವನ್ನು ಬಿಂಬಿಸುವ ಆತ್ಮಾಹುತಿ ಸಾಕ್ಷಿಗೆ ಇವು ಕನ್ನಡಿ ಹಿಡಿದಂತಿವೆ. ಈ ಬಗ್ಗೆ ಕ್ರಿ.ಶ. ೧೨೪೪, ಕ್ರಿ.ಶ. ೧೨೫೬ ಹಾಗೂ ಕ್ರಿ.ಶ. ೧೨೮೧ರ ಕಾಲದ ವಿವರಣಾತ್ಮಕ ಶಾಸನಗಳು ಸ್ಥಳದಲ್ಲಿ ಲಭ್ಯವಾಗುತ್ತವೆ.

**ಗರುಡರ ಕಂಬಗಳು :**

ಈ ಗರುಡರ ಕಂಬಗಳು ಕರ್ನಾಟಕದ ಸ್ಮಾರಕ ವಿನ್ಯಾಸದಲ್ಲಿ ವಿಶಿಷ್ಟ ಬಗೆಯದಾಗಿವೆ. ಒಂದು ರೀತಿಯಲ್ಲಿ ಜೈನಸ್ತೂಪಗಳಂತಿವೆ. ಸುಮಾರು ೧೫ ಅಡಿ ಎತ್ತರದ ಮೂರು ಕಂಬಗಳು ನೋಡುಗರ ಕುತೂಹಲವನ್ನು ಕೆರಳಿಸುತ್ತವೆ. ಈ ಕಂಬಗಳ ಕೆಳಭಾಗದಲ್ಲಿ ಹಾಗೂ ಐದು ವೀರಗಲ್ಲುಗಳ ಮೇಲೆ ಕೆತ್ತಿರುವ ಶಾಸನಗಳಲ್ಲಿ ಹೊಯ್ಸಳ ಕಾಲದಲ್ಲಿ ಪ್ರಚಲಿತವಾಗಿದ್ದ ಗರುಡ ಸಂಪ್ರದಾಯದ ಬಗ್ಗೆ ವಿವರಗಳನ್ನು ಒದಗಿಸುತ್ತವೆ. 'ಗರುಡ' ಎಂಬ ದೀಕ್ಷೆ ತೆಗೆದುಕೊಂಡು ಕಡಗ ತೊಟ್ಟ ಮೇಲೆ ವೀರರು ಸ್ವಾಮಿನಿಷ್ಠರಾಗಿ ಇರುತ್ತಿದ್ದರು. ತಮ್ಮ ದೊರೆ ಯುದ್ಧ ಅಥವಾ ಯಾವುದೇ ಕಾರಣಕ್ಕಾದರೂ ಮೃತನಾದರೆ ಗರುಡರು ಪ್ರಾಣಾರ್ಪಣೆ ಮಾಡಿಕೊಳ್ಳುತ್ತಿದ್ದರು. ಇದು ಗರುಡರ ಪ್ರತಿಜ್ಞೆ ಅಥವಾ ಭಾಷೆಯೂ ಹೌದಾಗಿತ್ತು.

ಇಲ್ಲಿನ ಶಾಸನದಲ್ಲಿ ಕಂಡು ಬರುವ ವೀರರೆಲ್ಲ ಮುಗಿಲ ಕುಲಕ್ಕೆ ಸೇರಿದವರು. ಈ ಮನೆತನದಲ್ಲಿ ಲಭ್ಯವಿರುವ ಮೊದಲ ಹೆಸರು ಗಂಡನಾರಾಯಣ ಸೆಟ್ಟಿಯದು. ಈತ ಮತ್ತು ಇವನ ಹೆಂಡತಿ ಮಾರವ್ವೆನಾಯಕಿತಿ, ತಮ್ಮ ಇತರ ಐವರು ಲೆಂಕರೊಡನೆ ದೊರೆ ಎರೆಯಂಗನಿಗಾಗಿ ಗರುಡವನ್ನಪ್ಪಿದರು. ಇವರೀರ್ವರ ಮಗ ಹೊಯ್ಸಳಸೆಟ್ಟಿ, ಸೊಸೆ ಮಾಚವ್ವ, ಬಿಟ್ಟಿದೇವ (ವಿಷ್ಣುವರ್ಧನ) ನಿಗಾಗಿ ಪ್ರಾಣತೆತ್ತರು. ಮುಂದೆ ಇವರೀರ್ವರ ಮಗ ಕೂರೆಯನಾಯಕನು ತನ್ನ ಇಬ್ಬರು ಪತ್ನಿಯರಾದ ಮಾರವ್ವೆ ಮತ್ತು ಚಿಕ್ಕಮಾರವ್ವೆಯರೂ ಸೇರಿದಂತೆ ತಮ್ಮ ಇತರ ಏಳು ಲೆಂಕರೊಡನೆ ಒಂದನೇ ನರಸಿಂಹನಿಗಾಗಿ ಗರುಡರಾದರು. ಹೀಗೆ ಸಾಗಿದ ಗರುಡ ವ್ಯಕ್ತಿಗಳು ವಂಶಪಾರಂಪರ್ಯವಾಗಿ ದೊರೆಗಳ ಸೇವೆಯಲ್ಲಿದ್ದಂತೆ ತೋರುತ್ತದೆ. ಇಲ್ಲಿ ವಿಶೇಷವೆಂದರೆ ಕಂಬದ ಮೇಲೆ ಮಟ್ಟಸ ಚಪ್ಪಡಿಗಳಿದ್ದು ಅವುಗಳ ಮೇಲೆ ಸುಮಾರು ಎರಡು ಅಡಿ ಎತ್ತರದ ಆನೆಯ ಶಿಲ್ಪಗಳಿವೆ. ಮಧ್ಯದ ಕಂಬದ ಆನೆಯ ಮೇಲೆ ಒಬ್ಬ ಪುರುಷ ಮತ್ತು ಅವನ ಹಿಂದೆ ಒಬ್ಬ ಸ್ತ್ರೀ ಕುಳಿತಿರುವಂತೆಯೂ; ಉಳಿದೆರಡು ಕಂಬಗಳ ಮೇಲೆ ಒಬ್ಬರ ಹಿಂದೆ ಒಬ್ಬರಂತೆ ಮೂವರು ಪುರುಷರು ಕುಳಿತಿರುವ ಶಿಲ್ಪಾಕೃತಿಗಳಿವೆ. ಇಲ್ಲಿ ಗಮನಿಸಬಹುದಾದ ಒಂದು ಅಂಶವೆಂದರೆ ಪ್ರತಿ ಕಂಬದ ಮೇಲಿನ ಮುಂದುಗಡೆ ಇರುವ ವೀರನು ಆನೆಯ ಗಂಡಸ್ಥಳದ ಮೇಲೆ ಕುಳಿತಿರುವ ಗರುಡಾಕೃತಿಯೊಡನೆ ಹೋರಾಡುತ್ತಿರುವಂತೆ ತೋರಿಸಲಾಗಿದೆ. ಇದರ ಸಂಕೇತ ಸ್ವಾಮಿನಿಷ್ಠೆಯಲ್ಲಿ ಸಾಮಾನ್ಯ ಮಾನವರಾದರೂ ಗರುಡರು ವಿಷ್ಣುವಿನ ವಾಹನ ಗರುಡನಿಗಿಂತ ಕಡಿಮೆಯಿಲ್ಲ ಎಂಬ ಮನೋಭಾವವನ್ನು ಹೊತ್ತು ಗರುಡನೊಂದಿಗೆ ಹೋರಾಡುತ್ತಿರುವ ಶಿಲ್ಪ ರಚನೆಗಳು ಮನಮಿಡಿಯುವಂತಿವೆ.

**ಸಂತೆಬಾಚಹಳ್ಳಿ ಹೊಯ್ಸಳ ದೇವಾಲಯಗಳು :**

ಕೃಷ್ಣರಾಜಪೇಟೆಯಿಂದ ವಾಯುವ್ಯಕ್ಕೆ ೨೪ ಕಿ.ಮೀ. ದೂರವಿರುವ ಸಂತೆಬಾಚಹಳ್ಳಿ ಹೊಯ್ಸಳರ ಕಾಲದಲ್ಲಿ ಇದೂ ಒಂದು ಅಗ್ರಹಾರವಾಗಿತ್ತು. ಊರಿನ ಕೆರೆ ಬಳಿ ಇರುವ ಮಹಾಲಿಂಗೇಶ್ವರ ಗುಡಿಯು ಹೊಯ್ಸಳ ಶೈಲಿಯ ಗರ್ಭಗೃಹ, ಸುಖನಾಸಿ, ನವರಂಗಗಳಿಂದ ಶೋಭಿಸಿದೆ. ಕಪ್ಪು ಕಲ್ಲಿನಿಂದ ನಿರ್ಮಿತವಾದ ಶಿಖರದಲ್ಲಿ ಮೂರು ಹಂತಗಳಿವೆ. ಇವುಗಳಲ್ಲಿ ಸುಂದರವಾದ ಕೀರ್ತಿಮುಖಗಳು ಮತ್ತು ಶಿಲ್ಪಗಳಿವೆ. ಉಗ್ರನರಸಿಂಹ, ವೇಣುಗೋಪಾಲ, ತ್ರಿಪುರದಹನ, ತಾಂಡವೇಶ್ವರ, ಉಮಾಮಹೇಶ್ವರ, ಹುಲಿಯನ್ನು ಕೊಲ್ಲುತ್ತಿರುವ ಸಳ, ಭೈರವ ಮುಂತಾದ ವಿಗ್ರಹಗಳಿವೆ. ನವರಂಗದ ಒಂಬತ್ತು ಭುವನೇಶ್ವರಿಗಳು ವೈವಿಧ್ಯಮಯವಾಗಿವೆ. ವೃತ್ತಾಕಾರದ ಇಲ್ಲವೆ ಚತುರಸ್ರಾಕಾರದ, ಇಲ್ಲವೆ

ಅಷ್ಟಭುಜಾಕೃತಿಯ ಭುವನೇಶ್ವರಿಗಳಿವೆ. ನವರಂಗದ ಕಂಬಗಳು ಸುಂದರ ಹಾಗೂ ನುಣುಪಾಗಿವೆ. ಇಲ್ಲಿರುವ ನಾಲ್ಕು ದೇವಕೋಷ್ಠಗಳಲ್ಲಿ ಎರಡರಲ್ಲಿ ಬ್ರಹ್ಮ ಮತ್ತು ನಿಂತಿರುವ ವಿಷ್ಣು ಮುಖ್ಯವಾದವು. ಸುಖನಾಸಿಯ ದ್ವಾರದಲ್ಲಿ ದ್ವಾರಪಾಲಕರು, ನರ್ತಕಿಯರು ಮತ್ತು ಜಾಲಂಧ್ರಗಳಿವೆ. ಸುಖನಾಸಿಯ ಚಾವಣಿಯಲ್ಲಿ ಅಷ್ಟದಿಕ್ಪಾಲಕರು, ಶಿವ, ಗಣೇಶ ಮುಂತಾದ ಶಿಲ್ಪಗಳಿವೆ. ಗರ್ಭಗೃಹದ ದ್ವಾರದ ಮೇಲೆ ಗಜಲಕ್ಷ್ಮಿ ಇದ್ದಾಳೆ. ಈ ಗುಡಿಯ ಪಕ್ಕದಲ್ಲಿ ಪಾರ್ವತಿ ಗುಡಿಯಿದೆ. ಇಲ್ಲಿ ಕಾಣಬರುವ ನವರಂಗದ ಕಂಬಗಳು ಹೊಯ್ಸಳ ಪೂರ್ವ ಕಾಲದ್ದಾಗಿ ಕಾಣಿಸುತ್ತವೆ. ಸಮೀಪದಲ್ಲಿರುವ ನಾರಾಯಣ ದೇವಾಲಯವೂ ಸಹ ಉತ್ತರ ಹೊಯ್ಸಳ ಕಾಲದ್ದು. ಇಲ್ಲಿರುವ ನಾರಾಯಣ ವಿಗ್ರಹ ಏಳು ಅಡಿ ಎತ್ತರವಿದ್ದು ಸಾಲಿಗ್ರಾಮ ಶಿಲೆಯಲ್ಲಿ ಸುಂದರವಾಗಿ ಕಡೆಯಲಾಗಿದೆ. ಇದರ ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರ ಚಿತ್ರಗಳಿವೆ.

**ಮಾಳಗೂರು ಹರಿಹರ ದೇವಾಲಯ :**

ಸಂತೆಬಾಚಹಳ್ಳಿ ಭಾಗದಲ್ಲಿರುವ ಮಾಳಗೂರಿನಲ್ಲಿ ಐದು ದೇವಾಲಯಗಳಿವೆ. ಇಲ್ಲಿಯ ೧೨ನೇ ಶತಮಾನದ ಹರಿಹರ ದೇವಾಲಯ ಗಮನಾರ್ಹವಾಗಿದೆ. ದೇವಾಲಯವು ಸರಳವಾಗಿದ್ದು, ಗರ್ಭಗೃಹದಲ್ಲಿರುವ ಐದು ಅಡಿ ಎತ್ತರದ ಆಕರ್ಷಕ ಹರಿಹರ ಮೂರ್ತಿಯಿರುವ ಗರುಡ-ನಂದಿ ಪೀಠದ ಮೇಲಿರುವ ನಾಲ್ಕು ಸಾಲಿನ ಶಾಸನದಿಂದ ಅದನ್ನು ರಾಣಿ ಶಾಂತಲೆಯ ಮೈದುನ ಬಲ್ಲೆಯನಾಯಕನು ಪ್ರತಿಷ್ಠಾಪಿಸಿದ ಅಂಶ ತಿಳಿದುಬರುತ್ತದೆ. ಹರಿಹರರನ್ನು ಗುರುತಿಸುವಂತೆ ಶಿವಭಾಗದ ಪ್ರಭಾವಳಿಯಲ್ಲಿ ಏಕಾದಶ ರುದ್ರರ ಕೆತ್ತನೆಯಿದ್ದರೆ, ವಿಷ್ಣು ಭಾಗದಲ್ಲಿ ದಶಾವತಾರ ಕೆತ್ತನೆಯಿದೆ. ಅಂತರಾಳದ ಬಾಗಿಲವಾಡಕ್ಕೆ ಜಾಲಂಧ್ರವಿದ್ದು, ನವರಂಗದ ಕಂಬಗಳು ಸುಂದರವಾಗಿವೆ. ಈ ಗುಡಿಯಲ್ಲಿ ರಾಜ ವಿಷ್ಣುವರ್ಧನ, ರಾಣಿ ಶಾಂತಲೆ, ಮೈದುನ ಬಲ್ಲೆಯನಾಯಕ ಈ ಮೂವರು ಒಟ್ಟಿಗೆ ನಿಂತಿರುವ ಮೂರ್ತಿಗಳಿವೆ. ನಾಟ್ಯರಾಣಿ ಶಾಂತಲೆಗೂ ಈ ಊರಿಗೂ ನಿಕಟಸಂಬಂಧವಿತ್ತು ಎನ್ನಲಾಗಿದೆ.

ಇನ್ನೊಂದು ಶಿಥಿಲಗೊಂಡಿರುವ ಕಮ್ಮಟೇಶ್ವರ (ಈಶ್ವರ) ಗುಡಿಯು ಗರ್ಭಗೃಹ, ಸುಖನಾಸಿ, ನವರಂಗಗಳನ್ನು ಹೊಂದಿದ್ದು ಗರ್ಭಗೃಹದ ಮೇಲೆ ಕದಂಬನಾಗರ ಶಿಖರವಿದೆ. ಇದು ವಿಶ್ವಕರ್ಮಾಚಾರಿಗಳಿಗೆ ಸೇರಿದ ದೇವರಾಗಿದ್ದು ಕ್ರಿ.ಶ. ೧೧೧೭ರ ವಿಷ್ಣುವರ್ಧನನ ಶಾಸನವೊಂದರಲ್ಲಿ ಬಲ್ಲೆಯ ನಾಯಕ ಸೇರಿದಂತೆ ಹಲವರು ದತ್ತಿಬಿಟ್ಟಿರುವ ವಿಚಾರ ತಿಳಿದುಬರುತ್ತದೆ. ಉಳಿದಂತೆ ಕಲ್ಲೇಶ್ವರ, ವೀರಭದ್ರ ಇನ್ನಿತರ ಗುಡಿಗಳು ಕಾಣಬರುತ್ತವೆ. ಕ್ರಿ.ಶ. ೧೬೬೩ರ ಮೈಸೂರು ಅರಸರ


ಕಾಲದಲ್ಲಿ ದೇವರಾಜ ಒಡೆಯರ ಹೆಸರಿನಲ್ಲಿ 'ಅಗ್ರಹಾರ ದೇವರಾಜಪುರ' ಎಂಬ ಪ್ರತಿನಾಮಧೇಯವನ್ನು ಈ ಊರು ಹೊಂದಿತ್ತು.

**ಶೀಳನೆರೆ ಈಶ್ವರ ಗುಡಿ ಮತ್ತು ರಾಶಿಕಲ್ಲು :**

ಕೃಷ್ಣರಾಜಪೇಟೆಯಿಂದ ವಾಯವ್ಯಕ್ಕೆ ೧೦ ಕಿ.ಮೀ. ಆಗ್ನೇಯಕ್ಕಿರುವ ಶೀಳನೆರೆ ಕೆರೆದಂಡೆಯಲ್ಲಿರುವ ಈಶ್ವರ ದೇವಾಲಯ ಹೊಯ್ಸಳ ಶಿಲ್ಪಕಲೆಯ ಪ್ರಾರಂಭ ಶೈಲಿಯಲ್ಲಿದೆ. ಶಿಥಿಲಗೊಂಡಿರುವ ಈ ದೇವಾಲಯದ ಹೊರಗೋಡೆಗೆ ಎಂದೋ ಕೆಳಗೆ ಬೀಳದಂತೆ ಸುತ್ತಲೂ ಮಣ್ಣಿನ ದಿಬ್ಬ ಪೇರಿಸಲಾಗಿದೆ. ಪೂರ್ವಕ್ಕೆ ಮುಖಮಾಡಿರುವ ಈ ಗುಡಿ ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳಿಂದ ಕೂಡಿದ್ದು ನವರಂಗದ ನಡುವಣ ಛತ್ತು ಕಮಲದಿಂದ ಶೋಭಿಸಿದೆ. ನವರಂಗದ ಕಂಬಗಳು ದುಂಡಗೆ ಸಾಧಾರಣವಾಗಿದ್ದು ಆಕರ್ಷಕ ಗಣಪತಿ, ನಂದಿವಿಗ್ರಹಗಳಿವೆ. ಗುಡಿಯ ಮೇಲೆ ಕಲ್ಲಿನ ಕದಂಬನಾಗರ ಶಿಖರ ಹಾಗೂ ಕಳಸ ಚಾಲುಕ್ಯ ಶೈಲಿಯನ್ನು ನೆನಪಿಸುತ್ತದೆ. ಈ ದೇವಾಲಯವನ್ನು ಸಂರಕ್ಷಣೆ ಮಾಡಿಕೊಳ್ಳುವ ಕೆಲಸ ಅಗತ್ಯವಾಗಿದೆ. ಗುಡಿಯ ಎಡಭಾಗದಲ್ಲಿ ಭೈರವನ ಗುಡಿ ಇದೆ. ಪ್ರಮುಖ ಗುಡಿಯ ಮುಂದೆ ಕೆರೆಯಲ್ಲಿ ಬಿದ್ದಿರುವ ರಾಶಿಚಕ್ರಕಲ್ಲು ವಿಶಿಷ್ಟವಾಗಿದೆ. ಚೌಕಾಕಾರದ ಪೀಠದ ಮೇಲೆ ವೃತ್ತಾಕಾರದಲ್ಲಿರುವ ಇದರ ಮಧ್ಯದಲ್ಲಿ ಸೂರ್ಯನಿದ್ದು, ಒಳಭಾಗದಂಚಿನಲ್ಲಿ ಕಮಲದ ೧೨ ದಳಗಳ ಮೇಲೆ ದ್ವಾದಶ (೧೨) ಆದಿತ್ಯರ ಕಿರುಕೆತ್ತನೆಗಳಿದ್ದು, ಹೊರಭಾಗದಲ್ಲಿ ಮೇಷದಿಂದ ಮೀನ ರಾಶಿಯವರೆಗೆ ಎಲ್ಲಾ ೧೨ ರಾಶಿ ಚಿಹ್ನೆಗಳನ್ನು ಕ್ರಮವಾಗಿ ಎಡದಿಂದ ಬಲಕ್ಕೆ ಕೆತ್ತಲಾಗಿದ್ದು, ಮುಂಭಾಗದಲ್ಲಿ ಸಪ್ತಾಶ್ವಗಳೊಂದಿಗೆ ಅರುಣನನ್ನು ಬಿಡಿಸಲಾಗಿದ್ದು, ಕಿರಣಸ್ಥಂಭವೆಂದು ಕರೆಯಲ್ಪಡುವ ಈ ರಾಶಿಕಲ್ಲು ಪ್ರಕೃತಿ ನಿಯಮವನ್ನು ಸೂಚಿಸುತ್ತಿತ್ತಂತೆ. ಮಳೆ-ಬೆಳೆ, ಪಶುಪಾಲನೆ, ರಾಜ್ಯಸೂತ್ರ ಮುಂತಾದ ವಿಷಯಗಳ ಮುನ್ಸೂಚನೆ ಕೊಡುತ್ತಿತ್ತಂತೆ. ಯುಗಾದಿ ಹಬ್ಬದಂದು ಈ ರಾಶಿ ಕಲ್ಲಿನಿಂದ ರಾಶಿಫಲ ಕೇಳುತ್ತಿದ್ದ ಸಂಪ್ರದಾಯವಿತ್ತು ಎನ್ನಲಾಗಿದೆ.

**ಸುಂದರ ಶಿಲ್ಪ :**


ಇದೇ ತಾಲ್ಲೂಕಿನ ಭಾರತೀಪುರ ಸಹ ಒಂದು ಅಗ್ರಹಾರವಾಗಿತ್ತು ಎಂಬುದಕ್ಕೆ ಪೂರಕವಾಗಿದೆ. ಇಲ್ಲಿರುವ ರಾಮಕೃಷ್ಣ (ನಾರಾಯಣ) ಮತ್ತು ಈಶ್ವರ ದೇವಾಲಯಗಳು ಹೊಯ್ಸಳ-ವಿಜಯನಗರ ಶೈಲಿಗಳಿಂದ ಸಮ್ಮಿಶ್ರಣಗೊಂಡಿವೆ. ನಾರಾಯಣ ಅಥವಾ ರಾಮಕೃಷ್ಣ ದೇವಾಲಯ ಜೀರ್ಣೋದ್ಧಾರಗೊಂಡಿದೆ. ಇದೂ ಸಹ ಗರ್ಭಗುಡಿ, ಸುಖನಾಸಿ, ನವರಂಗ, ಮುಖಮಂಟಪಗಳಿಂದ ಶೋಭಿಸಿದೆ. ಗರ್ಭ ಗುಡಿಯಲ್ಲಿರುವ ಮೂಲಮೂರ್ತಿ ಚತುರ್ಭುಜಧಾರಿಯಾಗಿ



ಮಲ್ಲೇಶ್ವರ ದೇವಾಲಯ. ಅಘಲಯ.



ನಾರಾಯಣ (ರಾಮಕೃಷ್ಣ) ಶಿಲ್ಪ.
ಭಾರತೀಪುರ.




ನವರಂಗ.
ಮಲ್ಲೇಶ್ವರ ದೇವಾಲಯ.




ನೃತ್ಯ ಪ್ರವೀಣೆ.



ಮದನಿಕೆಯರು. ಕಿಕ್ಕೇರಿ.




ಮಹಾಲಿಂಗೇಶ್ವರ ದೇವಾಲಯ. ಸಂತೇಬಾಚಹಳ್ಳಿ.



ವೀರಗರುಡ ಕಂಬಗಳು.
ಅಗ್ರಹಾರಬಾಚಹಳ್ಳಿ.



ಲಕ್ಷ್ಮೀವರಹನಾಥ. ಕಲ್ಲಹಳ್ಳಿ.



ಲಕ್ಷ್ಮೀನಾರಾಯಣ ದೇವಾಲಯ. ಸಿಂಧಘಟ್ಟ.

ಬಹುಸುಂದರವಾಗಿದೆ. ಅಭಯ ಹಸ್ತದಲ್ಲಿ ಶಂಖ, ಚಕ್ರ, ಗದಾಧಾರಿಯಾಗಿದ್ದು, ಕಂಠಮಾಲೆ, ಮೋಹನ ಮಾಲೆ, ಕೌಸ್ತುಭಹಾರ, ಪದ್ಮಮಾಲೆ, ಯಜ್ಞೋಪವೀತ, ತೋಳಿಗೆ ನಾಗಾಭರಣ, ಮಕರ ಕುಂಡಲ, ಕಿರೀಟಗಳಿಂದ ಶೋಭಿತವಾದ ಮೂರ್ತಿ ಕಟ್ಟುಮಸ್ತಾಗಿದೆ. ಅಕ್ಕಪಕ್ಕದಲ್ಲಿ ಶ್ರೀದೇವಿ ಭೂದೇವಿಯರನ್ನು ಪ್ರಭಾವಳಿಯಲ್ಲಿ ಮೂಡಿಸಲಾಗಿದೆ. ಮುಖಮಂಟಪದಲ್ಲಿ ಭದ್ರಾಸನವಿದ್ದು; ನವರಂಗದ ಕಂಭಗಳಲ್ಲಿ ಉಬ್ಬುಶಿಲ್ಪಗಳಿವೆ. ಈ ದೇವರನ್ನು ರತ್ನೇಶ್ವರ ಲಕ್ಷ್ಮೀನಾರಾಯಣ ಎಂದೂ ಸಹ ಕರೆಯಲಾಗಿದೆ. ರತ್ನೇಶ್ವರ ಎನ್ನುವುದು ಹಿಂದೆ ಇದೊಂದು ಜಿನ ದೇವಾಲಯ ಎನ್ನುವುದಕ್ಕೆ ನವರಂಗದ ಬಾಗಿಲವಾಡದಲ್ಲಿರುವ ಜಿನ ಬಿಂಬವೇ ಸಾಕ್ಷಿಯಾಗಿದೆ. ರಾಮಾನುಜರ ಶ್ರೀವೈಷ್ಣವ ಧರ್ಮ ಪ್ರಚಾರದಲ್ಲಿ ಈ ದೇವಾಲಯ ವೈಷ್ಣವ ದೇವಾಲಯವಾಗಿ ಪರಿವರ್ತನೆಯಾಗಿರುವ ಸಾಧ್ಯತೆಯೇ ಹೆಚ್ಚು ಎಂದು ಹೇಳಬಹುದಾಗಿದೆ. ಭೂಮಿಗೆ ಎತ್ತರದಲ್ಲಿ ಸಮತಟ್ಟು *(Mat Footing)* ಮಾಡಿಕೊಂಡು ದೇವಾಲಯ ಕಟ್ಟಲಾಗಿದೆ.

ಈಶಾನ್ಯ ದಿಕ್ಕಿನಲ್ಲಿರುವ ಈಶ್ವರ ದೇವಾಲಯ ಪೂರ್ವಾಭಿಮುಖವಾಗಿದ್ದು ಹೊಯ್ಸಳ ಶೈಲಿಯಿಂದ ಕೂಡಿದೆ. ಉತ್ತರಕ್ಕೆ ದ್ವಾರವಿದ್ದು ಸಂಕ್ರಾಂತಿ, ರಥಸಪ್ತಮಿ ದಿನಗಳಲ್ಲಿ ಸೂರ್ಯನ ಕಿರಣ ಪೂರ್ವದಲ್ಲಿರುವ ಕಿಂಡಿಯಲ್ಲಿ ಹರಿದು ನವರಂಗ -ವನ್ನು ಹಾದು ಲಿಂಗದ ಮೇಲೆ ಬೀಳುತ್ತದೆ ಎಂದು ಸ್ಥಳೀಯವಾಗಿ ಹೇಳುತ್ತಾರೆ. ಶಿಥಿಲಗೊಂಡಿರುವ ಈ ದೇವಾಲಯ ಪ್ರಾಚೀನ ವಾಸ್ತುಶೈಲಿಗೆ ಧಕ್ಕೆಯಾಗದಂತೆ ಜೀರ್ಣೋದ್ಧಾರ ಗೊಳ್ಳಲಿದೆ ಎಂಬ ವಿಷಯ ಸ್ವಾಗತಾರ್ಹವಾಗಿದೆ.

**ಭೈರಾಪುರದ ಭೈರಮೇಶ್ವರ :**

ಭಾರತೀಪುರಕ್ಕೆ ಹತ್ತಿರದಲ್ಲಿರುವ ಈ ಊರಿನ ಈಶ್ವರ ದೇವಾಲಯವನ್ನು ಶಾಸನದಲ್ಲಿ ಭೈರಮೇಶ್ವರ ಎಂದು ಉಲ್ಲೇಖಿಸಲಾಗಿದೆ. ಹೊಯ್ಸಳರ ಈ ದೇವಾಲಯ ಗರ್ಭಗೃಹ, ಸುಖನಾಸಿ, ನವರಂಗ ಹಾಗೂ ಮುಖಮಂಟಪಗಳಿಂದ ಶೋಭಿಸಿದೆ. ಗರ್ಭಗುಡಿಯುಲ್ಲಿ ಲಿಂಗವಿದ್ದು ನವರಂಗದಲ್ಲಿ ಗಣಪ, ಮಹಿಷಮರ್ಧಿನಿ, ಸಪ್ತಮಾತೃಕಾ ಸಾಲು, ಕೇಶವ ಹಾಗೂ ಭೈರವ ಶಿಲ್ಪಗಳಿವೆ. ಮಧ್ಯದ ಭುವನೇಶ್ವರಿ ಆಕರ್ಷಕವಾಗಿದ್ದು ಶಿಖರವು ಕದಂಬನಾಗರ ಶೈಲಿಯಲ್ಲಿದೆ. ಈ ಗುಡಿಯ ಭಿತ್ತಿಯಲ್ಲಿ ತ್ರಿದಳ ಕಮಲ, ಸ್ತಂಬಶಿಖರಗಳಿದ್ದು, ಬಾಗಿಲವಾಡಗಳು ಪಂಚಶಾಖಾಲಂಕಾರಗಳಿಂದ ಕೂಡಿದೆ. ಕ್ರಿ.ಶ. ೧೨೬೭ರ ಹೊಯ್ಸಳ ಮುಮ್ಮಡಿನರಸಿಂಹನ ಶಾಸನವೊಂದರಲ್ಲಿ ರೇಕವ್ವೆ ಎಂಬ ದಂಡನಾಯಕಿತಿಯು ಈ ಸ್ಥಳವನ್ನು ಅಗ್ರಹಾರವನ್ನಾಗಿ ಮಾಡಿದ ವಿಷಯ ತಿಳಿದುಬರುತ್ತದೆ.

ಈ ಗುಡಿಯ ಬಲ ಅಧಿಷ್ಠಾನದ ಮೇಲೆ 'ಅರೆಗಳೆ' ಎಂಬ ಲಿಪಿ ಕಾಣಸಿಗು-ತ್ತದೆ. ಹತ್ತುಮೊಳದ ಅಂತರದಲ್ಲಿ '+' ಚಿಹ್ನೆಯನ್ನು ಚಿತ್ರಿಸುವ ಮೂಲಕ ಗೆರೆಗಳನ್ನು ಎಳೆಯಲಾಗಿದೆ. ಇದು ಅಂದಿನ ದಿನಗಳಲ್ಲಿ ಭೂಮಾಪನಕ್ಕೆ ಬಳಸಲ್ಪಡುತ್ತಿದ್ದ ಅಳತೆಗೋಲಾಗಿದ್ದು ಸದರೀ ಜಾಗವನ್ನು ಅಳತೆ ಮಾಡಿ ಹಾಕಿರುವ ಗೆರೆ ಎನ್ನಲಾಗಿದೆ. ಅಗ್ರಹಾರದ ರಚನೆಯಂತೆ ಊರಿನ ನಡುವೆ ಚನ್ನಕೇಶವ ಗುಡಿಯಿದೆ.

**ಸಾಸಲು :**

ಪ್ರಮುಖ ಶೈವಕ್ಷೇತ್ರವಾದ ಸಾಸಲು ಊರಾಚೆ ತೋಪಿನಲ್ಲಿರುವ ಶಂಭುಲಿಂಗೇಶ್ವರವೇ ಶಾಸನೋಕ್ತ ಭೋಗೇಶ್ವರ ಗುಡಿಯಾಗಿದೆ. ಹೊಯ್ಸಳದೊರೆ ವಿಷ್ಣುವರ್ಧನನ ಕ್ರಿ.ಶ. ೧೧೨೧ರ ದತ್ತಿಶಾಸನ ಇದಕ್ಕೆ ಗರ್ಭಗೃಹ, ಸುಖನಾಸಿ, ನವರಂಗಗಳಿದ್ದು, ಮುಂದೆ ಅವುಗಳಿಗೆ ತೆರದ ಅರ್ಧಮಂಟಪ ಪ್ರಾಕಾರಗಳನ್ನು ಸೇರಿಸಿ ವಿಸ್ತರಿಸಲಾಗಿದೆ. ಗುಡಿಯ ಮುಂದೆ ದೀಪಮಾಲೆ ಕಂಬ ಆಕರ್ಷಕವಾಗಿದೆ. ಅದರ ಬಳಿಯಿರುವ ಕಲ್ಗಾಣದಿಂದ ಜಾತ್ರೆ ಸಂದರ್ಭದಲ್ಲಿ ಭಕ್ತರೇ ಸೇರಿ ಗಾಣ ಎಳೆದು ಎಣ್ಣೆ ತೆಗೆದು ದೀಪ ಬೆಳಗಿಸುತ್ತಾರೆ. ಊರಲ್ಲಿರುವ ಸೋಮೇಶ್ವರ ಗುಡಿ ಈಗ ಪ್ರಮುಖವಾಗಿದ್ದು ಹಲವು ಆಚರಣೆಗಳು ಜರುಗುತ್ತವೆ. ವಿಷನಿವಾರಕವಾಗಿ ಈ ಗುಡಿಯನ್ನು ಬಳಸುತ್ತಾರೆ. ದೇವಾಲಯದಲ್ಲಿ ನಂದಿ ಹಾಗೂ ಪುರಾತನರ ಹಲವು ಶಿಲ್ಪಗಳಿವೆ. ಮುಂದೆ ನಂದಿ ಸ್ತಂಭವಿದೆ. ಪ್ರತೀವರ್ಷ ಕಾರ್ತಿಕ ಮಾಸದ ಸೋಮವಾರದಂದು ಜರುಗುವ 'ಮಾನಿಗಸೆಟ್ಟಿ ಮೆರವಣಿಗೆ' ಹಿಂದೆ ಯಾವುದೋ ಧಾರ್ಮಿಕ ಸಂಘರ್ಷದ ಸಾಂಕೇತಿಕ ಆಚರಣೆಯಾಗಿ ತೋರುತ್ತದೆ. ಪರಸ್ಥಳದವನಾದ ಭೈರವರಾಜ ಹಾಗೂ ಸ್ಥಳೀಕನಾದ ಸೋಮೇಶ್ವರರ ನಡುವೆ ಹಿಂದೆ ಯಾವಾಗಲೋ ಯಾವ ಕಾರಣಕ್ಕೋ ವೈಮನಸ್ಯ ಉಂಟಾಯಿತು. ಇಬ್ಬರಲ್ಲೂ ತಾನು ಹೆಚ್ಚು, ನಾನು ಹೆಚ್ಚು ಎಂಬ ಅಹಂಕಾರ ಬೆಳೆಯಿತು. ಇಬ್ಬರೂ ತಮ್ಮದೇ ಆದ ಗುಂಪನ್ನು ಕಟ್ಟಿಕೊಂಡು ಎಡಿದಾಡಿದರು. ಭೈರವನ ಗುಂಪಿನಲ್ಲಿ ಕುರುಬರು ಇದ್ದರೆ; ಸೋಮೇಶ್ವರನಿಗೆ ಲಿಂಗಾಯಿತರಿದ್ದರು. ಇದನ್ನು ಹೀಗೆ ಬಿಟ್ಟರೆ ಮುಂದೆ ಆಗಬಹುದಾದ ಪರಿಣಾಮಗಳನ್ನು ಯೋಚಿಸಿದ ಹಿರಿಯರು 'ಜನ ಕಿತ್ತಾಡುವುದು ಬೇಡ, ಭೈರವ ಮತ್ತು ಸೋಮೇಶ್ವರ ಇವರಿಬ್ಬರೇ ಮುಷ್ಠಿ ಕಾಳಗ ನಡೆಸಲಿ. ಯಾರೇ ಸೋತರೂ ಆತ ಕತ್ತೆ ಮೇಲೆ ಕುಳಿತು ಊರ ಬೀದಿಗಳಲ್ಲಿ ಮೆರವಣಿಗೆ ಬರಬೇಕು' ಎಂಬ ಪಂಥ ಹಾಕಿದರು. ಅದೇ ಪ್ರಕಾರ ಕಾಳಗ ನಡೆದು ಕಡೆಗೆ ಸ್ಥಳದಲ್ಲಿ ಹುಟ್ಟಿ ಬೆಳೆದ ಸೋಮೇಶ್ವರನೇ ಕತ್ತೆ ಮೇಲೆ ಕೂರುವಂತಾಯಿತು. ಈ ಘಟನೆಯಿಂದ ಜುಗುಪ್ಸೆಗೊಂಡ ಭೈರವರಾಜನು ಕಾಯ ಸಹಿತ ಕೈಲಾಸ ಸೇರಿದನೆಂದು ಹೇಳಲಾಗುತ್ತದೆ. ಆತ ಪುನಃ ಸೋಮೇಶ್ವರನನ್ನು ಕರೆದೊಯ್ಯಲು

ಭೂಮಿಗೆ ಇಳಿದು ಬರುತ್ತಾನೆಂಬ ನಿರೀಕ್ಷೆಯಲ್ಲಿ ಮುಗಿಲತ್ತ ಮುಖಮಾಡಿ-ಕೊಂಡಿರುವ ಬಸವನ (ನಂದಿ) ಮೂರ್ತಿ ಆಕರ್ಷಕವಾಗಿದೆ.

ಈಗಲೂ ಮೊದಲ ಕಾರ್ತಿಕ ಸೋಮವಾರದಂದು ಭೈರವರಾಜ-ಸೋಮೇಶ್ವರರ ನಡುವಣ ಪಂಥದ ನೆನಪಿಗಾಗಿ ಸಗಣಿಯೋಕಳಿ ಆಟ ಮತ್ತು ಗಾರ್ದಭ (ಕತ್ತೆ) ಉತ್ಸವ ಬಹು ಮನರಂಜನೀಯವಾಗಿ ಜರುಗುತ್ತದೆ. ಭೈರವ ಮತ್ತು ಸೋಮೇಶ್ವರ ಗುಂಪಿನವರ ಪರಸ್ಪರ ತಿಕ್ಕಾಟದ ಸಗಣಿಯೋಕಳಿ ಆಟ ನಡೆದು ಸಗಣಿಯ ಉಂಡೆ ಮಾಡಿಕೊಂಡು ಪರಸ್ಪರ ಎಸೆದಾಡುತ್ತಾರೆ. ಈಗಲೂ ಸಂಪ್ರದಾಯ ಬದ್ಧವಾಗಿ ಭೈರವನ ಕಡೆಯವರಿಗೇ ಜಯದೊರೆತಂತಾಗುತ್ತದೆ. ಸೋಮೇಶ್ವರ ದೇವರ ಅರ್ಚಕರ ಕಡೆಯವರೊಬ್ಬರು ತಲೆ ಬೋಳಿಸಿಕೊಂಡು ಮಾನಿಗಸೆಟ್ಟಿ ಎಂಬ ಹೆಸರಿನ ಕತ್ತೆ ಮೇಲೆ ಕುಳಿತು ಹೊರಟ ಮೆರವಣಿಗೆ ಬೀದಿಗಳಲ್ಲಿ ಹಾದು ರಂಗದಲ್ಲಿ ಅಂತ್ಯವಾಗುತ್ತದೆ. ಈಗ ಇದೆಲ್ಲ ಉಲ್ಲಾಸ ಮತ್ತು ಆತ್ಮೀಯ ವಾತಾವರಣದಲ್ಲಿ ಜರುಗುತ್ತದೆ. ಸಗಣಿಯೊಂದಿಗೆ ನಡೆಸಿದ ಸರಸ ಆಟದಿಂದಾಗಿ ಯಾವುದೇ ಚರ್ಮರೋಗ ಹತ್ತಿರ ಸುಳಿಯುವುದಿಲ್ಲ ಎಂಬ ನಂಬಿಕೆ ಇದೆ.

**ಜೋಡಿ ಗುಡಿಗಳು :**

ಕೃಷ್ಣರಾಜಪೇಟೆಗೆ ಆಗ್ನೇಯ ೧೪ ಕಿ.ಮೀ. ದೂರವಿರುವ ದೊಡ್ಡಗಾಡಿಗನ -ಹಳ್ಳಿಯ ಜೋಡಿಲಿಂಗದ ಗುಡಿಗಳಿಂದಾಗಿ ಹೆಸರು ವಾಸಿಯಾಗಿದೆ. ಊರಾಚೆ ಹೊಲದಲ್ಲಿ ಪೂರ್ವಾಭಿಮುಖವಾಗಿರುವ ಈ ಜೋಡಿ ದೇವಾಲಯವು ಎರಡು ಪ್ರತ್ಯೇಕ ಗರ್ಭಗೃಹ, ತೆರೆದ ಸುಖನಾಸಿ ಹಾಗೂ ನವರಂಗಗಳನ್ನು ಹೊಂದಿದ್ದು ವಿಷ್ಣುವರ್ಧನನ ಕಾಲದಲ್ಲಿ ನಿರ್ಮಾಣಗೊಂಡ ಎಡಭಾಗದ ದೇವಾಲಯವು ಅಚ್ಚುಕಟ್ಟಾಗಿದ್ದು, ನವರಂಗದ ಭುವನೇಶ್ವರಿಗಳು ಆಕರ್ಷಕವಾಗಿವೆ. ಬಲಭಾಗದ ದೇವಾಲಯವನ್ನು ನಂತರದ ಸೇರ್ಪಡೆ ಎಂದು ಊಹಿಸಬಹುದಾಗಿದೆ. ಎರಡರಲ್ಲೂ ಸಾಕಷ್ಟು ಕುರುಹುಗಳ ವ್ಯತ್ಯಾಸ ಕಾಣಬರುತ್ತದೆ. ಮೂಲಗುಡಿಯ ನವರಂಗದಲ್ಲಿ ಸಪ್ತಮಾತೃಕಾದ ನಾಲ್ಕು ಶಿಲ್ಪಗಳು, ಎರಡು ಸೂರ್ಯಶಿಲ್ಪಗಳೊಂದಿಗೆ ನಂದಿಯೂ ಇದೆ. ನವರಂಗದ ತ್ರಿಶಾಖಾಲಂಕೃತ ಪ್ರಧಾನದ್ವಾರದ ಲಲಾಟದಲ್ಲಿ ಗಜಲಕ್ಷ್ಮಿ ಇದ್ದು, ಮೇಲೆ ಪಂಚ ಶಿಖರಾಲಂಕಾರವಿದೆ. ದೇವಾಲಯದ ಎಡಭಾಗದ ಕಿರುಗುಡಿಯಲ್ಲಿ ಭೈರವನ ಶಿಲ್ಪವಿದೆ. ಹಿಂಬದಿಯಲ್ಲಿ ಕಲ್ಯಾಣವಿದೆ.

ಊರಿನ ವಿಚಾರಕ್ಕೆ ಬಂದಾಗ ಗಾಡಿಗ>ಗಾರುಡಿಗ. ಇಂದ್ರಜಾಲ ಅಥವಾ ಮೋಡಿ ಮಾಡುವವರು ಈಗಲೂ ಈ ಊರಿನಲ್ಲಿ ವಾಸಿಸುತ್ತಾರೆ. ಇಲ್ಲಿ ಹೊಯ್ಸಳ ಪ್ರಖ್ಯಾತ ದೊರೆ ವಿಷ್ಣುವರ್ಧನನ ಕಾಲದ ಶಾಸನವಿದೆ.

**ತೊಳಸಿಯ ದೇವಾಲಯಗಳು :**

ಈ ಊರನ್ನು ಶಾಸನಗಳಲ್ಲಿ ತೊಳಂಜೆ, ತೊಳಚೆ ಎಂದೆಲ್ಲ ಉಲ್ಲೇಖಿಸಿದೆ. ಇದು ತೊಳಸಿ ಅಥವಾ ತುಳಸಿ ಮೆಳೆಯಿಂದಾಗಿ ಬಂದಂಥ ಹೆಸರಾಗಿದೆ. ಇಲ್ಲಿರುವ ಎರಡು ಚಿಕ್ಕ ಶಿವಾಲಯಗಳು ಹೊಯ್ಸಳ ವಾಸ್ತುಶಿಲ್ಪದ ಮೊದಲ ಘಟ್ಟದ ಮಾದರಿಗಳಂತಿವೆ. ಅಂತೆಯೇ ಇಲ್ಲಿರುವ ಹಲವಾರು ಶಾಸನಗಳಲ್ಲಿ ಹೊಯ್ಸಳರ ಆದಿದೊರೆ ವಿನಯಾದಿತ್ಯನ ದತ್ತಿ ಶಾಸನವೊಂದು ಬಸವೇಶ್ವರ ದೇವಾಲಯದಲ್ಲಿದೆ. ಶಾಸನದಲ್ಲಿ ಈ ಗುಡಿಯನ್ನು ಅಂಕಕಾರ ನಗರೇಶ್ವರ ಎಂದು ಉಲ್ಲೇಖಿಸಿದೆ. ಪ್ರಧಾನ ಗರ್ಭಗೃಹ ಪೂರ್ವಾಭಿ ಮುಖವಾಗಿದ್ದು ಕದಂಬ ನಾಗರ ಶಿಖರವಿದೆ. ಮತ್ತೊಂದು ದಕ್ಷಿಣಾಭಿಮುಖವಾಗಿದ್ದು ಎದುರಿನಲ್ಲಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಈ ದೇವಾಲಯಕ್ಕೆ ಪಾರ್ಶ್ವ ಪ್ರವೇಶದ್ವಾರವಿದ್ದು ನವರಂಗದ ಭುವನೇಶ್ವರಿಯಲ್ಲಿ ಆಕರ್ಷಕ ಕೆತ್ತನೆಯಿದೆ. ಭಿತ್ತಿಗಳು ನಿರಾಡಂಬರವಾಗಿವೆ. ದೇಗುಲದ ಆವರಣದಲ್ಲಿ ಸುಮಾರು ಹದಿನೆಂಟು ಅಡಿ ಎತ್ತರದ ನಂದಿಕಂಬವಿದೆ. ಇಲ್ಲಿರುವ ಸೂರ್ಯ, ಚಲುವನಾರಾಯಣ, ಸಪ್ತಮಾತೃಕಾ ಶಿಲ್ಪಗಳು ಆಕರ್ಷಕವಾಗಿವೆ. ಬಲಭಾಗಕ್ಕೆ ಇರುವ ಈಶ್ವರ ದೇವಾಲಯವೇ ಅಲ್ಲಿರುವ ಶಾಸನದಿಂದ ಅದು ಸಿದ್ದನಾಥ ದೇವಾಲಯವೆಂದು ತಿಳಿದುಬರುತ್ತದೆ.

ಹೀಗೆ ಹೊಯ್ಸಳರ ಕಲಾಕೃತಿಗಳು ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿ ವ್ಯಾಪಕವಾಗಿ ಹರಡಿಕೊಂಡಿವೆ. ಮಂದಗೆರೆಯ ಆಕರ್ಷಕ ಚನ್ನಕೇಶವ ಮತ್ತು ಸೋಮೇಶ್ವರ ದೇವಾಲಯಗಳು, ಸೋಮನಾಥಪುರದ ಸೋಮೇಶ್ವರ, ಮಡುವಿನಕೋಡಿಯ ರಾಮೇಶ್ವರ, ಚಿಕ್ಕಳಲೆ–ಹಿರಿಕಳಲೆ ಗ್ರಾಮಗಳ ನಡುವಿನಲ್ಲಿರುವ ಅರ್ಕೇಶ್ವರ, ನಾಗರಘಟ್ಟದ ಮಲ್ಲೇಶ್ವರ, ಗುಡುಗನಹಳ್ಳಿ, ಕುಂದನಹಳ್ಳಿ, ಹಾದನೂರು ಗ್ರಾಮಗಳ ಈಶ್ವರ ದೇವಾಲಯಗಳಲ್ಲದೆ ಇನ್ನೂ ಹಲವೆಡೆ ವೀಕ್ಷಿಸಬಹುದು. ಇವುಗಳಲ್ಲಿ ಕೆಲವು ಶಿಥಿಲಗೊಂಡಿದ್ದು ಪುನಃ ಸಂರಕ್ಷಿಸಿಕೊಳ್ಳುವ ಅವಕಾಶಗಳೂ ಇವೆ.

## ನಾಗಮಂಗಲದ ಕಲಾಸಂಸ್ಕೃತಿ

'ಮಂಗಲ' ಎಂದರೆ ಶುಭ, ಭಾಗ್ಯ, ಕಲ್ಯಾಣಕರವಾದದ್ದು ಎಂಬ ನಾನಾ ಅರ್ಥಗಳಿವೆ. ಸ್ಥಳನಾಮ ಅನ್ವಯ ಹಲವಾರು ಊರುಗಳ ಹೆಸರುಗಳ ಕೊನೆಯಲ್ಲಿ ಸೇರುವ ಪದವಾಗಿದೆ. ಅಂತೆಯೇ 'ನಾಗ' ಎಂಬುದು ಸಮೃದ್ಧದ ಸಂಕೇತ. ಹೀಗಾಗಿ ನಾಗಮಂಗಲಕ್ಕೆ ಒಂದು ವಿಶಿಷ್ಟ ಸ್ಥಾನ ದೊರಕಿದೆ. ಬೆಟ್ಟಗುಡ್ಡಗಳ ಮತ್ತು ಫಲವತ್ತಾದ ಭೂಮಿಯಿಂದಲೋ ಏನೋ ನಾಗಮಂಗಲ ರಾಜಪ್ರತಿನಿಧಿಗಳ

ಕೇಂದ್ರವೂ ಆಗಿತ್ತು. ಊರಿನ ನಾಲ್ಕು ದಿಕ್ಕುಗಳಲ್ಲೂ ಕೆರೆಗಳಿವೆ. ಈ ತಾಲ್ಲೂಕಿನ ಒಂದು ಭಾಗ ಹಾಸನ ಜಿಲ್ಲೆಗೆ ತಾಗಿಕೊಂಡಿದ್ದು ಈ ಭಾಗದಲ್ಲಿಯೂ ಹೆಚ್ಚಾಗಿ ಹೊಯ್ಸಳ ಶೈಲಿ ಅರಳಿ ನಿಂತಿದೆ. ನಾಗಮಂಗಲ ಎಂದಾಗ ಇಲ್ಲಿಯ ಸೌಮ್ಯ ಕೇಶವ ದೇವಾಲಯ ಪ್ರಸಿದ್ಧವಾದದ್ದು. ಮೂಲತಃ ಹೊಯ್ಸಳರ ಕಾಲದ್ದು. ನಂತರದಲ್ಲಿ ವಿಜಯನಗರ ಕಾಲದ ಜೋಡಣೆಗಳಾಗಿವೆ. ಸುಮಾರು ನಾಲ್ಕುವರೆ ಅಡಿ ಎತ್ತರದ ನಕ್ಷತ್ರಾಕಾರದ ಜಗತಿಯ ಮೇಲಿರುವ ತ್ರಿಕೂಟಾಚಲ. ಪ್ರಧಾನ ಗರ್ಭಗುಡಿಯಲ್ಲಿ ಗರುಡಪೀಠದ ಮೇಲೆ ಸುಮಾರು ಆರು ಅಡಿ ಎತ್ತರದ ಸೌಮ್ಯಕೇಶವನ ಸುಂದರ ಶಿಲ್ಪವಿದೆ. ಶಿಲ್ಪದ ಇಕ್ಕೆಲಗಳಲ್ಲಿ ಶ್ರೀದೇವಿ-ಭೂದೇವಿಯರಿದ್ದು, ಸರ್ಪತೋರಣಯುಕ್ತ ಪ್ರಭಾವಳಿಯಲ್ಲಿ ವಿಷ್ಣುವಿನ ದಶಾವತಾರಗಳಿವೆ. ಶಿಲ್ಪದ ಮುಖಭಾವದಲ್ಲಿ ಶಾಂತಿ, ಸೌಮ್ಯತೆಯ ಮಂದಹಾಸ ಕಾಣುವುದರಿಂದ ಶಾಸನೋಕ್ತ ಚನ್ನಕೇಶವನನ್ನು ಸೌಮ್ಯಕೇಶವನೆಂದು ಕರೆಯುತ್ತಾರೆ. ಚತುರ್ಭುಜಧಾರಿಯಾಗಿರುವ ಈ ಮೂರ್ತಿಯ ಬಲಭಾಗದ ಕೈಗಳಲ್ಲಿ ಶಂಖ ಮತ್ತು ಪದ್ಮಗಳಿದ್ದರೆ, ಎಡಭಾಗದ ಕೈಗಳಲ್ಲಿ ಚಕ್ರ ಮತ್ತು ಗದೆಗಳಿವೆ.

ಹೊಯ್ಸಳ ಶೈಲಿಯ ಪ್ರಧಾನ ಗರ್ಭಗೃಹ, ಅಂತರಾಳ ಅಥವಾ ಸುಖನಾಸಿ ಮತ್ತು ನವರಂಗಗಳಿದ್ದು, ನವರಂಗದ ಮುಂಭಾಗದಲ್ಲಿ ಅರ್ಧಮಂಟಪವನ್ನು ರಚಿಸಲಾಗಿದೆ. ನಂತರದಲ್ಲಿ ನವರಂಗಕ್ಕೆ ಮೂರು ಅಂಕಣದ ಮುಖಮಂಟಪವನ್ನೂ ಸೇರಿಸಲಾಗಿದ್ದು, ಇವಿಷ್ಟಕ್ಕೂ ಎತ್ತರದ ಜಗತಿ ಇದೆ. ವಿಜಯನಗರ ಕಾಲದಲ್ಲಿ ಪಾತಾಳಂಕಣ, ಪ್ರಾಕಾರಕ್ಕೆ ಹೊಂದಿಕೊಂಡಂತಿರುವ ಸುತ್ತಾಲಯ ಮಂಟಪ, ಮಹಾದ್ವಾರ, ಗೋಪುರ, ಗರುಡಗಂಬಗಳನ್ನು ಸೇರಿಸುವುದರೊಂದಿಗೆ ದೇವಾಲಯ ಗಣನೀಯವಾಗಿ ವಿಸ್ತಾರಗೊಂಡಿದೆ.

ಗರ್ಭಗೃಹ ಮತ್ತು ಸುಖನಾಸಿಯ ಬಾಗಿಲವಾಡಗಳಿಗೆ ದ್ವಾರಪಾಲಕರನ್ನು ಇರಿಸಲಾಗಿದೆ. ಉತ್ತರ ಮತ್ತು ದಕ್ಷಿಣ ಗರ್ಭಗೃಹಗಳಲ್ಲಿ ಲಕ್ಷ್ಮೀನರಸಿಂಹ ಮತ್ತು ವೇಣುಗೋಪಾಲರ ಸುಂದರ ಶಿಲ್ಪಗಳಿವೆ. ಇವು ವಿಜಯನಗರ ಕಾಲದ ಲಕ್ಷಣಗಳನ್ನು ಹೊಂದಿವೆ. ನವರಂಗಕ್ಕೆ ಬಹುಕೋನಾಕಾರವಾದ, ಮುಖ್ಯವಾಗಿ ಮೂವತ್ತೆರಡು ಮೂಲೆಯ ವೈವಿಧ್ಯಮಯ ಕಂಬಗಳಿದ್ದು, ಭುವನೇಶ್ವರಿಗಳಲ್ಲಿ ಅಲಂಕೃತ ಕಮಲ, ನಕ್ಷತ್ರಗಳಿಂದ ಕಂಗೊಳಿಸಿವೆ. ಪ್ರಧಾನ ಭುವನೇಶ್ವರಿ ಹದಿನಾರು ಸುತ್ತಿನಲ್ಲಿ ನೂರೆಂಟಕ್ಕೂ ಮೀರಿದ ಬಲಮುರಿ ಶಂಖಗಳಿಂದ ಕೂಡಿ ಅಷ್ಟದಿಕ್ಪಾಲಕರಿಂದ ಆವೃತವಾದ ಕಮಲಾಲಂಕಾರವನ್ನು ಹೊಂದಿದೆ. ಶಂಖವೇ ಕಮಲದ ಮೊಗ್ಗಾಗಿ ಅದನ್ನು ಬಳಸಿ ಹೆಡೆಎತ್ತಿರುವ ಮಂಡಲಾಕೃತಿ ಸರ್ಪದ ಅಥವಾ ಆದಿಶೇಷನ ಶಿಲ್ಪ

ಮನೋಜ್ಞವಾಗಿದೆ. ಇದು ನಾಗಮಂಗಲದ ಸ್ಥಳನಾಮ ಅನ್ವಯ ನಾಗರಗಳಿಂದಾಗಿ ಬಂದಿದೆ ಎನ್ನುವುದಕ್ಕೂ ಸಂಕೇತಿಸುವಂತಿದೆ. ನವರಂಗದಲ್ಲಿರುವ ನಾಗಶಿಲ್ಪಗಳೂ ಇದಕ್ಕೆ ಪೂರಕವಾಗಿದ್ದು ನಾಗ ಪೂಜೆಯೂ ಇಲ್ಲಿ ಜರುಗುತ್ತದೆ. ನವರಂಗವು ಹನ್ನೆರಡು ಅಂಕಣಗಳಿಂದ ಕೂಡಿದ್ದು ಲಲಾಟದಲ್ಲಿ ಗಜಲಕ್ಷ್ಮಿ ಚಿತ್ರ ಆಕರ್ಷಕವಾಗಿದೆ. ನವರಂಗದ ಹನ್ನೆರಡು ಭುವನೇಶ್ವರಿಗಳಲ್ಲಿ ನಾಲ್ಕು ಭುವನೇಶ್ವರಿ ಅಥವಾ ಭಾವಣಿಗಳನ್ನು ಬೆಳಕಿಗಾಗಿ ತೆಗೆಯಲಾಗಿದೆ. ಮಧ್ಯೆ ಭುವನೇಶ್ವರಿಯ ನಾಲ್ಕು ಚರಕಿಕಂಬಗಳು ಭವ್ಯವಾಗಿವೆ. ಪ್ರಾಕಾರದ ಗೋಡೆಯು ಸರಳವಾಗಿದ್ದು ಪಾತಾಳಂಕಣದಲ್ಲಿ ಶ್ರೀವೈಷ್ಣವ ಸಂಪ್ರದಾಯದ ದೇವರುಗಳು ಮತ್ತು ಆಳ್ವಾರರುಗಳ ಗುಡಿಗಳಿವೆ. ನೈಋತ್ಯಕ್ಕೆ ಮಡಪಲ್ಲಿ ನಾಚಾರ್, ವೈಕುಂಠ ನಾರಾಯಣ, ಸುದರ್ಶನಾಳ್ವಾರ್, ಹನುಮಂತ, ವಾಯವ್ಯಕ್ಕೆ ಸೌಮ್ಯನಾಯಕಿ ಅಲ್ಲಿಯೇ ಗೋದಾದೇವಿ, ಈಶಾನ್ಯಕ್ಕೆ ರಾಮಾನುಜ ಗುಡಿಗಳಿವೆ. ನವರಂಗದಲ್ಲಿ ವಿಶ್ವಕ್ಸೇನರ ಪ್ರತಿಮೆಯೂ ಇದೆ.

**ಅಪೂರ್ವ ಉಬ್ಬುಶಿಲ್ಪಗಳು :**

ದೇವಾಲಯದ ಪ್ರಾಕಾರದಲ್ಲಿರುವ ಕಂಬಗಳ ಮೇಲಿನ ಉಬ್ಬುಶಿಲ್ಪಗಳಲ್ಲಿ ಹೆಚ್ಚಿನವು ನೃತ್ಯ ಮತ್ತು ಮಲ್ಲಯುದ್ಧಕ್ಕೆ ಸಂಬಂಧಪಟ್ಟಿವೆ. ಇದು ಈ ಪ್ರದೇಶದ ಸಂಸ್ಕೃತಿಗೆ ಕನ್ನಡಿ ಹಿಡಿದಂತಿದೆ. ಸೌಮ್ಯನಾಯಕಿ ಅಮ್ಮನವರ ಗುಡಿಯ ಮುಂದಿನ ಪ್ರಾಂಗಣದ ಕಂಬಗಳಲ್ಲಿನ ಹಲವು ಉಬ್ಬುಶಿಲ್ಪಗಳಲ್ಲಿ ಮಮತೆ ತುಂಬಿದ ಸ್ತ್ರೀಯೋರ್ವಳು ಎಳೆಗರುವಿಗೆ ತನ್ನ ಎದೆಹಾಲು ಕುಡಿಸುತ್ತಿರುವುದು ಮಾನವೀಯತೆಯ ದ್ಯೋತಕವಾಗಿದೆ. ಕೆಳಗೆ ಬಾಗಿದ, ಹಿಂದೆತಿರುಗಿದ, ಮುಂದೆ -ದೃಷ್ಟಿಸಿರುವ ಮೂರು ತಲೆಯ ಜಿಂಕೆಗೆ ಒಂದೇ ಶರೀರದ ಸಂಯೋಜನೆ, ವೃಷಭ ಮತ್ತು ಆನೆಗಳ ಶಿಲ್ಪ ಸಂಯೋಜನೆ, ಒಂದೇ ಶಿಲ್ಪದಲ್ಲಿ ಸ್ತ್ರೀಪುರುಷಾಕಾರದ ಸಂಯೋಜನೆ, ಪದ್ಮಾಸನದಲ್ಲಿ ತಲೆಕೆಳಕಾಗಿರುವ ಭಂಗಿ, ಮಿಥುನ ಶಿಲ್ಪಗಳು, ಗಣಪ, ವ್ಯಾಳಿ, ಅಂಬೆಗಾಲು ಕೃಷ್ಣ, ಗೋವರ್ಧನಗಿರಿಧಾರಿ ಹೀಗೆ ಇನ್ನಿತರ ಶಿಲ್ಪಗಳು ಆಕರ್ಷಣೀಯ ವಾಗಿವೆ.

ಮಹಾದ್ವಾರದ ಕಂಬಗಳಲ್ಲಿ ವೇಣುಗೋಪಾಲ, ಕಾಳಿಂಗಮರ್ಧನ ಶಿಲ್ಪಗಳಲ್ಲದೆ ನೃತ್ಯ ವಿಶೇಷಗಳಲ್ಲಿ ಒಬ್ಬ ನೃತ್ಯಗಾರ್ತಿ ತನ್ನ ಎಡಪಾದವನ್ನು ತನ್ನ ತಲೆಮೇಲೆ ಇಟ್ಟುಕೊಂಡಿರುವ ಭಂಗಿ ಇತರ ನೃತ್ಯಗಾರ್ತಿಯರಿಗೆ ಸವಾಲು ಹಾಕಿದಂತೆ ಕಾಣುತ್ತದೆ.

ಇನ್ನು ಮುಖಮಂಟಪದ ಕಂಬಗಳಲ್ಲಿರುವ ಶಿಲ್ಪಗಳಲ್ಲಿ ಮಲ್ಲಯುದ್ಧದಲ್ಲಿ ಚಕ್ರವ್ಯೂಹ ಚಮತ್ಕಾರ ರೋಮಾಂಚನವಾಗಿದೆ. ಸ್ತ್ರೀಯೋರ್ವಳ ಉದ್ದ ಜಡೆಯ

ತುದಿಯನ್ನು ಹಂಸಪಕ್ಷಿ ತನ್ನ ಕೊಕ್ಕಿನಿಂದ ಹಿಡಿದಿರುವುದು ಮತ್ತು ಕೋಡಂಗಿ ವೇಷಧಾರಿ ಮನಸೆಳೆಯುವಂತಿದೆ. ಇದೇ ಮಂಟಪದಲ್ಲಿ ಕಾಣುವ ವ್ಯಾಳಿಗಳ ಮೇಲೆ ನಾಗಗಳಿವೆ. ರಾಮಾನುಜ ಸನ್ನಿಧಿಯ ಕಂಬಗಳಲ್ಲಿ ಶಾರದೆ ಮತ್ತು ಸರಸ್ವತಿಯರ ಶಿಲ್ಪಗಳು ಮನೋಜ್ಞವಾಗಿವೆ.

ದೇವಾಲಯದ ಮಹಾದ್ವಾರವು ವಿಜಯನಗರದ ಭವ್ಯತೆಯಲ್ಲಿದೆ. ಅದರ ಮೇಲೆ ದ್ರಾವಿಡ ಶೈಲಿಯ ಏಳು ಅಂತಸ್ತಿನ ಗೋಪುರವಿದೆ. ದೇವಾಲಯದ ಹೊರ ಭಿತ್ತಿಯ ಮೇಲೆ ಅರೆಗಂಬಗಳ ಅಲಂಕರಣವಿದೆ. ಗುಡಿಯ ಎಡಭಾಗದಲ್ಲಿ ವಿಶಾಲವಾದ ಸಭಾಮಂಟಪವಿದೆ. ದೇವಾಲಯದ ಮುಂಭಾಗದಲ್ಲಿರುವ ೫೦ ಅಡಿ ಎತ್ತರದ ಗರುಡಗಂಬ ಒಂದು ಉತ್ತಮ ಕಲಾಕೃತಿಯಾಗಿ ನಿಂತಿದೆ. ಇದರ ಮೇಲೂ ಪಶ್ಚಿಮಕ್ಕೆ ಗರುಡ, ಉತ್ತರಕ್ಕೆ ಆಂಜನೇಯ, ದಕ್ಷಿಣಕ್ಕೆ ವ್ಯಾಳ, ಪೂರ್ವಕ್ಕೆ ಶಂಖ, ಚಕ್ರ, ನಾಮದ ಉಬ್ಬುಶಿಲ್ಪಗಳು ಭಕ್ತಿಭಾವವನ್ನು ಹುಟ್ಟಿಸುವಂತಿವೆ. ಗೋಪುರ ಮತ್ತು ಕಂಬವನ್ನು ನಿರ್ಮಾಣ ಮಾಡಿಸಿದವನು ಪಾಳೆಗಾರ ಜಗದೇವರಾಯ ಎಂದು ಪ್ರತೀತಿ ಇದೆ. ದೇವಾಲಯದ ಬಲಭಾಗದಲ್ಲಿರುವ ಸುಗ್ರೀವಗುಡಿಯನ್ನು ವಿಜಯನಗರ ಪ್ರತಿನಿಧಿ ನಾಗಮಂಗಲದ ತಿಮ್ಮಣ್ಣ ದಂಡನಾಯಕ ತನ್ನ ಅರಸರ ಮೇಲಿದ್ದ ನಿಷ್ಠೆಗೆ ಕಟ್ಟಿಸಿದ ಎಂಬ ಮಾತಿದೆ. ಮಹಾದ್ವಾರದ ಬಲಪಾರ್ಶ್ವದಲ್ಲಿ ಗಣಪತಿ ವಿಗ್ರಹದ ಕಿರುಗುಡಿ ಇದೆ.

**ಯೋಗಾನರಸಿಂಹ ಮತ್ತು ಹಂಗರಮರ :**

ಈ ದೇವಾಲಯದ ಪಶ್ಚಿಮಕ್ಕೆ ಸ್ವಲ್ಪ ಅಂತರದಲ್ಲಿ ಹಿಂಭಾಗಕ್ಕೆ ಆದಂತೆ ಇರುವ ಯೋಗಾನರಸಿಂಹ ದೇವಾಲಯವು ಇಲ್ಲಿಯ ಮತ್ತೊಂದು ಪ್ರಾಚೀನ ದೇವಾಲಯವಾಗಿದೆ. ಗರ್ಭಗೃಹ, ಪ್ರದಕ್ಷಿಣಾಪಥ, ಅಂತರಾಳ, ನವರಂಗ, ಮುಖಮಂಟಪ, ಪಾತಾಳಂಕಣ, ಒಳಕೈಸಾಲೆ ಮಂಟಪವಿರುವ ಪ್ರಾಕಾರ, ಹಾಗೂ ಮಹಾದ್ವಾರಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಯೋಗಾನರಸಿಂಹ, ನವರಂಗದಲ್ಲಿ ಆದಿಶೇಷ ಮತ್ತು ವಿಶ್ವಕ್ಸೇನ ಶಿಲ್ಪಗಳಿವೆ. ಆದಿಶೇಷ ಶಿಲ್ಪದ ಬಳಿಯಿರುವ ಪೊಟರೆಯ ಅನಂತ ತೀರ್ಥ ನಾಗಸರ್ಪದ ವಾಸಸ್ಥಾನವಾಗಿದ್ದು; ಹಿಂದೆ ಅಲ್ಲಿದ್ದ ಹಂಗರಮರದ ಸುಮಾರು ೪೦ ಅಡಿ ಉದ್ದದ ಕಾಂಡವನ್ನು ಮಲಗಿಸಲಾಗಿದೆ. ಇದು ಹಲವು ಶತಮಾನಗಳ ಹಳೆಯ ಮರವಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ದಂತಕತೆ ಇದ್ದು ಈ ದೇವಾಲಯವನ್ನು ನೆರೆಯ ಮೊದಲಹಳ್ಳಿಯ ನರಸಿಂಹನಾಯಕ ಮತ್ತು ತಿಮ್ಮಣ್ಣನಾಯಕರು ಕಟ್ಟಿಸಿದರು ಎಂಬ ಮಾತಿದೆ. ಹಂಗರಮರವಿದ್ದ ಜಾಗದಲ್ಲಿ ನರಸಿಂಹ ವಿಗ್ರಹ ಇತ್ತೆಂದು ನಂಬಿಕೆಯಿದೆ.

ನಾಗಮಂಗಲದ ಭುವನೇಶ್ವರ ದೇವಾಲಯವು ಅತ್ಯಂತ ಪ್ರಾಚೀನವಾಗಿದ್ದು ಕ್ರಿ.ಶ. ೧೧೩೪ರ ಶಾಸನವು ಹೊಯ್ಸಳ ವಿಷ್ಣುವರ್ಧನನ ಪಟ್ಟದರಸಿ ಬಮ್ಮಲಾದೇವಿಯು ಶಂಕರನಾರಾಯಣ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಿದ ಸಂಗತಿ ತಿಳಿದುಬರುತ್ತದೆ. ಈ ಗುಡಿಯು ಗರ್ಭಗೃಹ, ಅಂತರಾಳ ಮತ್ತು ನವರಂಗಗಳನ್ನು ಹೊಂದಿದೆ. ಇದರ ಅಧಿಷ್ಠಾನದ ಎರಡು ಪಟ್ಟಿಕೆಗಳು ಗೋಚರಿಸುತ್ತಿದ್ದು, ಭಿತ್ತಿಯು ಅರೆಕಂಬಗಳನ್ನು ಹೊಂದಿದ್ದು; ಗರ್ಭಗೃಹಕ್ಕಿದ್ದ ಕದಂಬನಾಗರ ಶಿಖರ ಹಾಳಾಗಿದೆ. ನವರಂಗದ ಕಂಬಗಳು ಆಕರ್ಷಕವಾಗಿದ್ದು ನಡುವಣ ಛತ್ತಲ್ಲಿ ಕಮಲಾಕೃತಿಯಿದೆ. ಇಲ್ಲಿ ಪ್ರಾಚೀನವಾದ ನಾರಾಯಣ, ಸೂರ್ಯ, ಸರಸ್ವತಿ, ಅರ್ಧನಾರೀಶ್ವರ, ಗಣೇಶ, ಷಣ್ಮುಖ, ಮಹಿಷಮರ್ಧಿನಿ, ನಂದಿ, ಚಂಡೀಕೇಶ್ವರ ಹಾಗೂ ದುರ್ಗಿಯ ಎರಡು ಶಿಲ್ಪಗಳು ಇದ್ದು ಅವುಗಳ ಕೆತ್ತನೆ ಮನೋಹರವಾಗಿವೆ. ಗರ್ಭಗುಡಿಯಲ್ಲಿ ಲಿಂಗವಿದೆ.

ನಾಗಮಂಗಲದಲ್ಲಿ ಹಲವಾರು ದೇವಾಲಯಗಳಿದ್ದು ಇದನ್ನು ಮಂಡ್ಯ ಜಿಲ್ಲೆಯ ಕುಂಭಕೋಣಂ ಎನ್ನಬಹುದಾಗಿದೆ. ಕೊಳ, ಕಲ್ಯಾಣಿ, ಗುಡಿಗಳ ನೆಲೆಯೆ ಆಗಿದೆ. ಪ್ರಾಚೀನವಾದ ವೀರಭದ್ರ, ಭದ್ರಕಾಳಿ, ಬಡಗೋಡಮ್ಮ, ಕಾಳಮ್ಮ ಹೀಗೆ ಆಗಿನ ಕಸುಬಾಧಾರಿತ ಜನಾಂಗಗಳಿಗೆ ಸೇರಿದ ಗುಡಿಗಳಿವೆ. ಕ್ರಿ.ಶ. ೧೧೭೧ರ ಇಮ್ಮಡಿ ಬಲ್ಲಾಳನ ಒಂದು ಶಾಸನ ಸೌಮ್ಯಕೇಶವ ದೇವರಿಗೆ ಬಿಟ್ಟ ಭೂದಾನದ ಅಂಶವನ್ನು ದಾಖಲಿಸಿದೆ. (ಇದು ಗರ್ಭಗೃಹದ ಗೋಡೆಯ ಮೇಲೆ ಕಾಣಿಸುತ್ತದೆ) ಈ ಶಾಸನದಲ್ಲಿ ಸಾಂದರ್ಭಿಕವಾಗಿ ಮಹಾದೇವರ ಗುಡಿಯ ಜತೆಗೆ ಜನಪದ ದೇವತೆಗಳಾದ ಸುಸಗಲ ಗುಡಿ, ಗುಂಡಗಲ್ಲಗುಡಿ, ಗೊರವರ ಗುಡಿಗಳನ್ನು ಹೆಸರಿಸುತ್ತದೆ.

ಪ್ರಮುಖವಾಗಿ ಕಾಣಬರುವ ಮತ್ತೊಂದು ಇಲ್ಲಿಯ ವೀರಭದ್ರನ ಗುಡಿ ವಿಜಯನಗರ ಕಾಲದ್ದಾಗಿದೆ. ವಿಶಾಲವಾದ ಪ್ರಾಕಾರದಲ್ಲಿರುವ ಈ ಗುಡಿಯ ಗರ್ಭಗೃಹದಲ್ಲಿ ವೀರಭದ್ರನ ಕಿರುಮೂರ್ತಿ ಮತ್ತು ದಕ್ಷಿಣಾಮೂರ್ತಿಯ ಲೋಹದ ಶಿಲ್ಪಗಳಿವೆ. ಎಡಭಾಗದ ಪ್ರತ್ಯೇಕ ಗರ್ಭಗೃಹದಲ್ಲಿ ಭದ್ರಕಾಳಿಯ ಶಿಲ್ಪವಿದೆ. ಕ್ರಿ.ಶ. ೧೫೧೧ರ ಶಾಸನವೊಂದು ಗಂಧಗೋಡಿ ಮಂಟಪವನ್ನು ಗುಮ್ಮಳಾಪುರದ ಹೊನ್ನಿಸೆಟ್ಟಿ ನಿರ್ಮಿಸಿದ ವಿಷಯವನ್ನು ಹೇಳಿದೆ. ಹಿಂದಿನಿಂದಲೂ ನಾಗಮಂಗಲ ಪಂಚಲೋಹದ ಕಲಾಕುಸುರಿ ಕೆಲಸಕ್ಕೆ ಹೆಸರಾಗಿದ್ದು; ಇಲ್ಲಿನ ದೇವಾಲಯಗಳಲ್ಲಿರುವ ವಿವಿಧ ಪಂಚಲೋಹದ ಮೂರ್ತಿಗಳು ಸ್ಥಳೀಯ ಶಿಲ್ಪಿಗಳದ್ದು ಎನ್ನಲಾಗಿದೆ.


**ಬೆಳ್ಳೂರು ಆದಿಮಾಧವ :**

ಬೆಳ್ಳೂರು ನಾಗಮಂಗಲ ತಾಲ್ಲೂಕಿನ ಒಂದು ಹೋಬಳಿ ಕೇಂದ್ರ, ಇಲ್ಲಿ ಹಲವಾರು ಪ್ರಾಚೀನ ದೇವಾಲಯಗಳಿವೆ. ಇಲ್ಲಿರುವ ಗೌರೇಶ್ವರ, ಮೂಲೆಸಿಂದೇಶ್ವರ, ಮಾಧವರಾಯಸ್ವಾಮಿ ದೇವಾಲಯಗಳು ಹೊಯ್ಸಳ ಮಾರ್ಗದಲ್ಲಿವೆ.


ಊರಾಚೆ ಗೌರಿಕೊಳ್ಳದ ದಕ್ಷಿಣದಂಡೆಯ ಮೇಲಿರುವ ಗೌರೇಶ್ವರ ಗುಡಿಯು ಗರ್ಭಗೃಹ, ಸುಖನಾಸಿ, ಅಂತರಾಳ, ದಕ್ಷಿಣ ಪಾರ್ಶ್ವದ್ವಾರವಿರುವ ನವರಂಗ ಹಾಗೂ ಅರ್ಧಮಂಟಪಗಳನ್ನು ಹೊಂದಿದೆ. ಸುಖನಾಸಿ ಮತ್ತು ನವರಂಗದ ಭುವನೇಶ್ವರಿಗಳು ಸುಂದರ ಕೃತಿಗಳು. ಗೋಪುರದ ಮೇಲೆ ಹುಲಿಯೊಂದಿಗೆ ಹೋರಾಡುತ್ತಿರುವ ಸಳನ ಶಿಲ್ಪವಿದೆ. ಗರ್ಭಗೃಹದಲ್ಲಿ ಲಿಂಗವಿದ್ದು, ಸುಖನಾಸಿಯ ಬಾಗಿಲವಾಡಕ್ಕೆ ಜಾಲಂಧ್ರ ಅಲಂಕಾರವಿದ್ದು, ನವರಂಗದಲ್ಲಿ ಹಲವು ದೇವತಾ ಶಿಲ್ಪಗಳಿವೆ. ದೇವಾಲಯದ ಭಿತ್ತಿ ಶಿಖರವನ್ನು ನವೀಕರಿಸಲಾಗಿದೆ. ಜೀರ್ಣೋದ್ಧಾರ ಸಂದರ್ಭದಲ್ಲಿ ಅದರ ದಕ್ಷಿಣ ದ್ವಾರವನ್ನು ಮುಚ್ಚಿ, ಪೂರ್ವದ್ವಾರವನ್ನು ಕಲ್ಪಿಸಿ, ವಿಶಾಲಮಂಟಪವನ್ನು ಸೇರಿಸಲಾಗಿದೆ. ಈ ದೇವಾಲಯವನ್ನು ಮಂಡಲಸ್ವಾಮಿ ಎಂಬುವವನು ಕ್ರಿಶ. ೧೧೯೯ರಲ್ಲಿ ಕಟ್ಟಿಸಿದ್ದಾನೆ.

ಗೌರಿಕೊಳ್ಳದ ಪೂರ್ವದಂಡೆಯ ಮೇಲೆ ಪೂರ್ವಾಭಿಮುಖವಾಗಿ ನಿಂತಿರುವ ಮೂಲೆಸಿಂದೇಶ್ವರ ತ್ರಿಕೂಟಾಚಲವಾಗಿದೆ. (ಶಾಸನೋಕ್ತ ಸಿಂದೇಶ್ವರ, ಲಕ್ಷ್ಮೀನಾರಾಯಣ ಹಾಗೂ ಗೋಪಾಲ) ಈ ದೇವಾಲಯವನ್ನು ಕ್ರಿ.ಶ. ೧೨೨೪ರಲ್ಲಿ ಕಾಚಿದೇವನು ನಿರ್ಮಿಸಿದ್ದಾನೆ. ನವರಂಗದ ಪಶ್ಚಿಮ, ದಕ್ಷಿಣ ಹಾಗೂ ಉತ್ತರ ಭಾಗದಲ್ಲಿ ಕದಂಬನಾಗರ ಶಿಖರವನ್ನುಳ್ಳ ಒಂದೊಂದು ಪ್ರತ್ಯೇಕ ಗರ್ಭಗೃಹ ಹಾಗೂ ಸುಖನಾಸಿಗಳನ್ನು ಹೊಂದಿದ್ದು, ಪೂರ್ವಭಾಗದಲ್ಲಿ ತೆರೆದ ಮುಖಮಂಟಪವನ್ನು ಹೊಂದಿದೆ. ಅದರ ಮೇಲೆ ಹುಲಿಯೊಂದಿಗೆ ಹೋರಾಡುತ್ತಿರುವ ಹೊಯ್ಸಳ ಲಾಂಛನವಿದೆ. ಗುಡಿಯ ಮುಂದಿರುವ ಶಾಸನಗಳು ಲಾಲಿತ್ಯ ಪೂರ್ಣವಾಗಿವೆ. ಈ ಗುಡಿಯಲ್ಲಿ ಕುತೂಹಲ ಮೂಡಿಸುವುದೆಂದರೆ ಅಭಿಷೇಕ ಪ್ರಿಯನಾದ ಈಶ್ವರನಿಗೆ ಗೌರಿಕೊಳದ ಅಥವಾ ಕೊಳದ ನೀರು ಗರ್ಭಗುಡಿಯ ಲಿಂಗದ ಮುಂದೆಯೇ ಬಂದು ನಿಲ್ಲುವಂತೆ ಮಾಡಿರುವುದು ಆಗಿನ ತಾಂತ್ರಿಕ ಪದ್ಧತಿಯನ್ನು ಅಥವಾ ಕೌಶಲ್ಯವನ್ನು ತೋರ್ಪಡಿಸಿದೆ. ಈ ಗುಡಿ ಈಶಾನ್ಯ ಮೂಲೆಯಲ್ಲಿರುವುದರಿಂದ ಮೂಲೆಸಿಂದೇಶ್ವರ ಎಂಬ ಹೆಸರು ಬಂದಿದೆ.

ಇನ್ನು ಇಲ್ಲಿ ಪ್ರಸಿದ್ಧವಾಗಿರುವ ಆದಿಮಾಧವರಾಯ ದೇವಾಲಯ ತ್ರಿಕೂಟಾಚಲ ರಚನೆಯಿಂದ ಕೂಡಿದೆ. ಮೂಲ ಗುಡಿಯು ಐದು ಸ್ತರದ ಜಗತಿಯ



ಸೌಮ್ಯಕೇಶವ ದೇವಾಲಯ. ನಾಗಮಂಗಲ.




ಆದಿಮಾಧವರಾಯಸ್ವಾಮಿ ದೇವಾಲಯ. ಬೆಳ್ಳೂರು.



ಮೂಲೆಸಿಂದೇಶ್ವರ ದೇವಾಲಯ. ಬೆಳ್ಳೂರು.



ಹೊಯ್ಸಳ ಲಾಂಛನ. ಬೆಳ್ಳೂರು.



ಹೊಯ್ಸಳ ಕೆತ್ತನೆಗಳು.



ಕೃಷ್ಣ ಶಿಲ್ಪ, ಹೊಯ್ಸಳ ಶೈಲಿ. ಬೆಳ್ಳೂರು.



ಲಕ್ಷ್ಮೀನಾರಾಯಣ ಶಿಲ್ಪ ಬೆಳ್ಳೂರು.

ಮೇಲೆ ನಿಂತಿದ್ದು, ಪ್ರಧಾನ ಗರ್ಭಗೃಹ, ಅಂತರಾಳ, ಉತ್ತರ-ದಕ್ಷಿಣದ ಗರ್ಭಗೃಹಗಳನ್ನು ಒಗ್ಗೂಡಿಸುವ ನವರಂಗ ಹಾಗೂ ಆರಂಕಣದ ತೆರೆದ ಅರ್ಧಮಂಟಪವನ್ನು ಹೊಂದಿದೆ. ಅದರ ಮುಂದಿರುವ ರಂಗಮಂಟಪ, ಸೌಮ್ಯನಾಯಕಿ ಮತ್ತು ರಂಗನಾಯಕಿ ಅಥವಾ ವಸಂತನಾಯಕಿ ದೇವಾಲಯ, ಪ್ರಾಕಾರ, ಮಹಾದ್ವಾರ ಹಾಗೂ ದೀಪಸ್ತಂಭಗಳು ವಿಜಯನಗರ ಕಾಲದ ಸೇರ್ಪಡೆಗಳಾಗಿವೆ. ಪ್ರಧಾನ ಗರ್ಭಗೃಹದಲ್ಲಿ ಚತುರ್ಭುಜಧಾರಿ ಮಾಧವನ ಅತ್ಯಾಕರ್ಷಕ ಶಿಲ್ಪವಿದೆ. ಬಲಭಾಗದ ಕೈಗಳಲ್ಲಿ ಚಕ್ರ, ಗದೆ, ಎಡಭಾಗದ ಕೈಗಳಲ್ಲಿ ಶಂಖ, ಪದ್ಮಹಿಡಿದ ಅಭಯ ಹಸ್ತವಿರುವುದು ವಿಶೇಷವಾಗಿದೆ. ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಗಳಿವೆ. ಉಳಿದೆರಡರಲ್ಲಿರುವ ಗೋಪಾಲ ಅಥವಾ ವೇಣುಗೋಪಾಲ ತ್ರಿಭಂಗಿಯಲ್ಲಿದ್ದು ಅದರ ಪ್ರಭಾವಳಿಯ ಕೆತ್ತನೆಯೂ ಬಹು ಸುಂದರವಾಗಿದೆ. ಇನ್ನು ಜನಾರ್ದನ ಅಥವಾ ವರದರಾಜ ಶಿಲ್ಪವೂ ಲಕ್ಷಣವಾಗಿದೆ. ನವರಂಗದ ಕಂಬ, ಭಿತ್ತುಗಳು ಆಕರ್ಷಕವಾಗಿದ್ದು; ರಾಮಾನುಜ, ಆಳ್ವಾರರು, ಗಣಪತಿ ಶಿಲ್ಪಗಳು ಸಹ ಇವೆ. ಈ ದೇವಾಲಯದ ಬಾಗಿಲವಾಡಗಳ ಲಲಾಟದಲ್ಲಿ ಗಜಲಕ್ಷ್ಮಿಯರಿದ್ದು; ಕೆಳಗೆ ಅಕ್ಕಪಕ್ಕ ದ್ವಾರಪಾಲಕರಿದ್ದಾರೆ. ಪ್ರಾಕಾರದೊಳಗೆ ಪ್ರಧಾನಗುಡಿಯ ಎಡಕ್ಕೆ ಸೌಮ್ಯನಾಯಕಿ ಮತ್ತು ರಂಗಮಂಟಪದ ಬಲಕ್ಕೆ ರಂಗನಾಯಕಿಯರ ಪ್ರತ್ಯೇಕ ಗುಡಿಗಳಿದ್ದು ಒಳಗೆ ವಿಜಯನಗರ ಕಾಲದ ದೇವಿ ಶಿಲ್ಪಗಳಿವೆ. ಪ್ರಧಾನ ಗರ್ಭಗೃಹವು ಬಹುಕೋನಾಕಾರದ (೩೨) ತಳ ವಿನ್ಯಾಸವನ್ನು ಹೊಂದಿದ್ದು, ಭಿತ್ತಿಯಲ್ಲಿ ಅಲಂಕಾರಿಕ ಅರೆಕಂಬ ಕಿರುಶಿಖರ ಮಾದರಿಗಳಿದ್ದರೂ ನಿರಾಡಂಬರವಾಗಿದ್ದು, ಮೇಲೆ ದ್ರಾವಿಡ ಶಿಖರವಿದೆ. ಈ ದೇವಾಲಯದಲ್ಲಿ ವಿಶೇಷ ಆಕರ್ಷಣೆಯಾಗಿ ಇರುವ ಶೃಂಗಾರ ಭಂಗಿಯ ಶ್ರೀಕೃಷ್ಣ ವಿಗ್ರಹ ಕೆತ್ತನೆಯಲ್ಲಿ ಪರಿಪೂರ್ಣ ಶಿಲ್ಪಶಾಸ್ತ್ರದ ಪ್ರತಿನಿಧಿಯಂತಿದ್ದು ನೋಡುಗರಿಗೆ ಆನಂದವೀಯುತ್ತದೆ. ಮೂಲಮೂರ್ತಿ ಮಾಧವನಾದರೆ ಉತ್ಸವ ಮೂರ್ತಿ ಕೇಶವ ರೂಪದಲ್ಲಿರುವುದು ಇಲ್ಲಿಯ ವಿಶೇಷವಾಗಿದೆ. ಈ ದೇವಾಲಯ ಕ್ರಿ.ಶ. ೧೨೬೮ ರಿಂದ ಕ್ರಿ.ಶ. ೧೨೮೪ ರೊಳಗೆ ನಿರ್ಮಾಣವಾಗಿದ್ದ ಅಂಶ ಶಾಸನಗಳಿಂದ ತಿಳಿದು ಬರುತ್ತದೆ.

ಬೆಳ್ಳೂರು ಕ್ರಾಸ್ ಕಡೆಗೆ ಹೋಗುವ ರಸ್ತೆಬದಿಯಲ್ಲಿರುವ ಕಲ್ಲೇಶ್ವರ ಗುಡಿಯು ಹೊಯ್ಸಳ ರಚನೆಯಾಗಿದ್ದು ಬಹಳ ಶಿಥಿಲಗೊಂಡಿದೆ. ಗರ್ಭಗೃಹ, ಅಂತರಾಳ, ೨೪ ಅಂಕಣದ ವಿಶಾಲವಾದ ನವರಂಗ ಹಾಗೂ ಅರ್ಧಮಂಟಪಗಳಿವೆ. ಒಳಗೆ ಲಿಂಗವಿದ್ದು, ಮುಂಭಾಗದಲ್ಲಿ ನಂದಿಕಂಬವಿದೆ. ಎಡಭಾಗದಲ್ಲಿರುವ ದೇವಿಗುಡಿಯಲ್ಲಿ ನಾಗರಕಲ್ಲು ಇಡಲಾಗಿದೆ. ಈ ದೇವಾಲಯವು ಕ್ರಿ.ಶ. ೧೨೬೮ರಲ್ಲಿ ಹೊಯ್ಸಳ ಮುಮ್ಮಡಿ ನರಸಿಂಹನ ಕಾಲದಲ್ಲಿ

ನಿರ್ಮಾಣವಾಗಿದೆ. ಗುಡಿಯ ಮುಂಭಾಗದಲ್ಲಿ ಹುಲಿಬೇಟೆಯ ವೀರಗಲ್ಲು ಹಾಗೂ ಮಾಸ್ತಿಕಲ್ಲುಗಳಿವೆ. ಊರೊಳಗೆ ಇರುವ ವೀರಭದ್ರ ಗುಡಿಯೂ ಶಿಥಿಲಾವಸ್ಥೆಯಲ್ಲಿದೆ. ಇಲ್ಲಿರುವ ವಿಮಲನಾಥ ಬಸದಿಯೂ ಹೊಯ್ಸಳ ಕಾಲದ್ದಾಗಿದೆ. ಬೆಳ್ಳೂರಿನ ಮಂಡಲಸ್ವಾಮಿ ಬೆಳ್ಳೂರಿನಲ್ಲಿ ಮಂಡಲೇಶ್ವರ ದೇವಾಲಯವನ್ನು ಕಟ್ಟಿಸಿದಲ್ಲದೆ ಸಮೀಪದ ಆರಣಿಯಲ್ಲಿ ಮರಗಳ ತೋಪು ಬೆಳೆಸಿ ಸಂತೆ ನಡೆಯಲು ವ್ಯವಸ್ಥೆ ಮಾಡಿದ ಬಗ್ಗೆ ಶಾಸನವಿದೆ. ಕೆರೆಗಳನ್ನು ಸಂರಕ್ಷಿಸಿಕೊಳ್ಳುವ ಬಗ್ಗೆ ಇಲ್ಲಿಯ ಶಾಸನವೊಂದು ಗಮನಾರ್ಹವಾಗಿದೆ. ಹಾಳು ಮಾಡಿದರೆ ಎಂತೆಂಥ ಪಾಪಗಳು ಬರುವುದೆಂದು ಉಲ್ಲೇಖಿಸಿದೆ. ಇದೇ ತಾಲ್ಲೂಕಿನ ಸುಕದೊರೆ ಗ್ರಾಮದ ಶಾಸನವು ಬೋಕಿಸೆಟ್ಟಿ ಎಂಬಾತ ತನ್ನ ತಂದೆ ತಾಯಿಯರ ಹೆಸರಿನಲ್ಲಿ ಕೆರೆಗಳನ್ನು ನಿರ್ಮಿಸಿದ ವಿಚಾರವನ್ನು ಹೇಳುತ್ತದೆ.

**ತ್ರಿಕೂಟ ಜಿನಾಲಯ :**

ಬೆಳ್ಳೂರು–ನಾಗಮಂಗಲ ರಸ್ತೆಯಲ್ಲಿ ಚೋಳಸಂದ್ರದ ಬಳಿ ಎಡಕ್ಕಾದಂತೆ ಎತ್ತರದ ಬಂಡೆಯ ಮೇಲೆ ಶಿಥಿಲಾವಸ್ಥೆಯ ತ್ರಿಕೂಟಾಚಲ ಜಿನ ಬಸದಿಯೊಂದು ಕಾಣಬರುತ್ತದೆ. ಇದು ಹೊಯ್ಸಳ ಒಂದನೆಯ ನರಸಿಂಹನ ಆಳ್ವಿಕೆಯಲ್ಲಿ ಮಹಾಪ್ರಧಾನ ಹಾಗೂ ಅವನ ಪತ್ನಿ ಕಾಮಲದೇವಿಯರು 'ರಾಜ–ರಾಷ್ಟ್ರ–ಯಶೋ–ಧನ' ವೃದ್ಧಿಗಾಗಿ ಈ ಪಾರ್ಶ್ವನಾಥ ಜಿನಾಲಯವನ್ನು ನಿರ್ಮಿಸಿ, ಪೂಜಾವಿಧಿಗೆಂದು ಸೂರನಹಳ್ಳಿಯನ್ನು ಸ್ಥಾನಾಚಾರ್ಯ ಮುನಿಚಂದ್ರ ದೇವರಿಗೆ ದಾನ ನೀಡಿದ ವಿಷಯ ಉಲ್ಲೇಖಿಸಲಾಗಿದೆ. ಈ ಜಿನಾಲಯ ಗರ್ಭಗೃಹ, ಅಂತರಾಳ ಭಾಗಗಳಷ್ಟೆ ಉಳಿದುಕೊಂಡಿವೆ. ಗರ್ಭಗೃಹಗಳ ಬಾಗಿಲವಾಡಗಳು ರೇಖಾಲಂಕಾರದಿಂದ ಕೂಡಿದ್ದು, ಲಲಾಟದಲ್ಲಿ ತೀರ್ಥಂಕರ ಕೆತ್ತನೆಯಿದೆ. ಭಿತ್ತಿಯಲ್ಲಿ ಕಿರುದೇವಕೋಷ್ಠ ಹಾಗೂ ಅಲಂಕಾರಿಕ ಕಂಬಗಳಿವೆ.

**ಆರಣಿ :**

ಬೆಳ್ಳೂರು ಬಳಿ ಇರುವ 'ಆರಣಿ' ಎಂಬುದು ಒಂದು ಪ್ರಾಚೀನ ಸ್ಥಳನಾಮ ಘಟಕ. ಆರಣಿ=ಬೆಂಕಿ ಕಡೆಯುವುದು ಎಂದರ್ಥ. ಚಾರಿತ್ರಿಕವಾಗಿ ಇದು ಯಜ್ಞಯಾಗಾದಿಗಳು ನಡೆಯುತ್ತಿದ್ದ ಸ್ಥಳ ಎಂದು ತಿಳಿದುಬರುತ್ತದೆ. ಹೊಯ್ಸಳ ದೊರೆ ನರಸಿಂಹನ ಬೆಳ್ಳೂರಿನ ಒಂದು ಶಾಸನದಲ್ಲಿ ಇಂದ್ರಪೂಜೆ ಮತ್ತು ಆರಣ ಪೂಜೆ ಬಗ್ಗೆ ಪ್ರಸ್ತಾಪವಿದೆ. ಊರಕೆರೆಗೆ ಹೋಗುವ ದಾರಿಯಲ್ಲಿ ಸಿಗುವ ಗೋಪಾಲಕೃಷ್ಣ ದೇವಾಲಯ ಸಮುಚ್ಚಯವು ಪ್ರಾಚೀನವಾಗಿದೆ. ಪೂರ್ವಾಭಿಮುಖವಾಗಿರುವ ಇಲ್ಲಿಯ ಗರ್ಭಗೃಹದಲ್ಲಿ ಸುಮಾರು ಐದೂವರೆ

ಅಡಿ ಎತ್ತರದ ಗೋಪಾಲಕೃಷ್ಣನ ಸುಂದರಮೂರ್ತಿ, ವಿಶಾಲವಾದ ನವರಂಗದ ದೇವಕೋಷ್ಠಗಳಲ್ಲಿ ಗಣಪತಿ ಹಾಗೂ ಮಹಿಷಮರ್ಧಿನಿ ಶಿಲ್ಪಗಳಿವೆ. ನವರಂಗದ ಛತ್ತು ಕಮಲಾಲಂಕೃತವಾಗಿದ್ದು, ಬಾಗಿಲವಾಡದಲ್ಲಿ ಪೂರ್ಣಕುಂಭ, ಲಲಾಟದಲ್ಲಿ ಬಾಲಕೃಷ್ಣನ ಕಿರುಕೆತ್ತನೆಗಳಿವೆ. ಮುಂದಕ್ಕಾದಂತೆ ಇರುವ ವಿಶಾಲವಾದ ಮುಖಮಂಟಪದ ಬಳಿ ದ್ವಾರಪಾಲಕರ ಶಿಲ್ಪಗಳಿವೆ. ಈ ಜೋಡಣೆಗಳು ವಿಜಯನಗರ ಕಾಲದ್ದಾಗಿವೆ. ಗುಡಿಯ ಬಲಕ್ಕಿರುವ ದೇವಿಗುಡಿಯ ಗರ್ಭಗೃಹ ಮತ್ತು ಸುಖನಾಸಿಗಳಷ್ಟೇ ಉಳಿದಿದ್ದು ಕೇಶವ, ಗರುಡ, ಬಾಲಗೋಪಾಲ, ಮಹಿಷಮರ್ಧಿನಿ ಮುಂತಾದ ಶಿಲ್ಪಗಳಿವೆ. ಗುಡಿಯ ಮುಂದೆ ಸುಮಾರು ೧೫ ಅಡಿ ಎತ್ತರದ ಗರುಡಗಂಬವಿದೆ.

ಬೆಳ್ಳೂರಿಗೆ ಸಮೀಪವಿರುವ ಶ್ರೀರಂಗಪುರ, ಸೂರನ ಹಳ್ಳಿಗಳಲ್ಲೂ ಹೊಯ್ಸಳರ ಕುರುಹುಗಳು ಉಳಿದುಕೊಂಡಿವೆ. ಶ್ರೀರಂಗಪುರವೂ ಒಂದು ಅಗ್ರಹಾರವಾಗಿದ್ದು, ದೇವಾಲಯ ಹಾಗೂ ಕೆರೆಗಳನ್ನು ಕಟ್ಟಿಸಿದ ಶಾಸನಗಳಿವೆ. ಸೂರನಹಳ್ಳಿಯಲ್ಲಿ ತ್ರಿಕೂಟ ಪಾರ್ಶ್ವಜಿನಾಲಯ ನಿರ್ಮಿಸಿದ ಬಗ್ಗೆ ದಾಖಲೆಯಿದ್ದು, ಬಸದಿಯ ಅವಶೇಷವನ್ನು ನೋಡಬಹುದಾಗಿದೆ.

**ದೊಡ್ಡಜಟಕಾದ ದೇವಾಲಯಗಳು :**

ಈ ಊರಿಗೆ ಸ್ವಲ್ಪ ದೂರದಲ್ಲಿ ಚಿಕ್ಕಜಟಕ ಎಂಬ ಮತ್ತೊಂದು ಊರಿದೆ. ಹಿರಿಜಟ್ಟಿಗ (ಅಣ್ಣ) ಹಾಗೂ ಚಿಕ್ಕಜಟ್ಟಿಗ (ತಮ್ಮ) ಎಂದು ಅನ್ವಯಿಸುವಂತೆ ಹೊಯ್ಸಳ ಮತ್ತು ವಿಜಯನಗರ ಕಾಲದ ಶಾಸನಗಳಲ್ಲಿ ಜೆಟ್ಟಿ, ಜಟ್ಟಿ ಎಂದು ಉಲ್ಲೇಖಿಸಿದೆ. ಇಲ್ಲಿರುವ ಸೋಮೇಶ್ವರ (ಶಾಸನೋಕ್ತ ಹೆಮ್ಮೇಶ್ವರ) ಗುಡಿಯು ಎತ್ತರವಾದ ಜಾಗದಲ್ಲಿ ನಿರ್ಮಾಣಗೊಂಡಿದ್ದು ಇದಕ್ಕೆ ಗರ್ಭಗೃಹ, ತೆರೆದ ಅಂತರಾಳ, ನವರಂಗಗಳಿವೆ. ನವರಂಗಕ್ಕೆ ಪಾರ್ಶ್ವದ್ವಾರವಿದೆ. ಒಳಗೆ ಲಿಂಗವಿದ್ದು ಅಂತರಾಳದಲ್ಲಿ ನಂದಿ ಶಿಲ್ಪವಿದ್ದು, ನವರಂಗದ ಪೂರ್ವಕ್ಕೆ ಜಾಲಂಧ್ರವಿದೆ. ನವರಂಗದ ಭುವನೇಶ್ವರಿಗಳು ಕಮಲಗಳಿಂದ ಶೋಭಿಸಿವೆ (ಗುಡಿ ಬಾಗಿಲಲ್ಲಿ ಫಕೀರಸ್ವಾಮಿ ಗದ್ದುಗೆ ಇದೆ.) ಈ ದೇವಾಲಯ ಕ್ರಿ.ಶ. ೧೧೭೪ರಲ್ಲಿ ನಿರ್ಮಾಣಗೊಂಡಿದೆ. ಇದೀಗ ಇದು ಜೀರ್ಣೋದ್ಧಾರಗೊಂಡಿದೆ.

ಊರನಡುವೆ ಇರುವ ಚನ್ನಕೇಶವ (ವಿಷ್ಣು) ದೇವಾಲಯ ವಿಜಯ ನಗರ ಶೈಲಿಯಲ್ಲಿದೆ. ಈ ಶೈಲಿಯ ಬಗ್ಗೆ ಮುಂದೆ ಹೇಳಲಾಗುತ್ತದೆ. ಕ್ರಿ.ಶ. ೧೫೧೨ರ ತಾಮ್ರ ಶಾಸನದಲ್ಲಿ ಇದನ್ನು ವಿಷ್ಣುದೇವಾಲಯ ಎಂದು ಉಲ್ಲೇಖಿಸಿದೆ. ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದ್ದು; ಮುಂದಿನ

ಸಭಾಮಂಟಪ ಗುಡಿಯ ಭವ್ಯತೆಯನ್ನು ಹೆಚ್ಚಿಸಿದೆ. ಮೂಲ ಕೇಶವ ಅಥವಾ ವಿಷ್ಣು ಶಿಲ್ಪ ಆಕರ್ಷಕವಾಗಿದೆ. ಇತ್ತೀಚೆಗೆ ದೇವಾಲಯ ಜೀರ್ಣೋದ್ಧಾರಗೊಂಡಿದೆ.

ಇಲ್ಲಿಗೆ ಸಮೀಪದ ಹಟ್ಟಣ ಗ್ರಾಮದಲ್ಲಿ ಹೊಯ್ಸಳ ಕಾಲದಲ್ಲಿ ಪಾರ್ಶ್ವಜಿನಾಲಯ ಹಾಗೂ ಮೂರು ತಟಾಕಗಳನ್ನು ನಿರ್ಮಿಸಿದ ಬಗ್ಗೆ ದಾಖಲೆ ಇದೆ. ಶಿಥಿಲಾವಸ್ಥೆಯಲ್ಲಿರುವ ವೀರಭದ್ರನ ಗುಡಿಯೇ ಹೊಯ್ಸಳ ಕಾಲದ ಜೈನಬಸದಿಯಾಗಿದೆ.

**ದಡಗದ ಚನ್ನಿಗರಾಯ :**

ನಾಗಮಂಗಲದಿಂದ ವಾಯವ್ಯಕ್ಕೆ ೨೨ ಕಿ.ಮೀ. ದೂರವಿರುವ ದಡಗ ಅಥವಾ ದಡಿಗ ಎಂಬ ಗ್ರಾಮ ಶಾಸನದಲ್ಲಿ ದಡಿಗನಕೆರೆ ಎಂದು ಉಲ್ಲೇಖಿತಗೊಂಡಿದೆ. ಈ ಗ್ರಾಮದಲ್ಲಿ ಗಂಗ, ಚೋಳ, ಹೊಯ್ಸಳ, ವಿಜಯನಗರ ಕಾಲದ ಕುರುಹುಗಳೆಲ್ಲ ಕಾಣಬರುತ್ತವೆ. ಇಲ್ಲಿರುವ ಯೋಗಾನರಸಿಂಹ ಗುಡಿ ಚೋಳರ (ಕ್ರಿ.ಶ. ೧೦೨೦) ಕಾಲಕ್ಕೆ ಸೇರಿದ್ದಾಗಿದೆ. ಅನತಿ ದೂರದಲ್ಲಿ ಹೊಯ್ಸಳ ಕಾಲಕ್ಕೆ ಸೇರಿದ ಸೋಮೇಶ್ವರ ಗುಡಿ ಸಾಕಷ್ಟು ಶಿಥಿಲಗೊಂಡಿದೆ. ಊರಲ್ಲಿರುವ ಜಿನಬಿಂಬವೂ ಹೊಯ್ಸಳ ಕಾಲದ್ದಾಗಿದೆ. ಇನ್ನು ಚನ್ನಿಗರಾಯ ಮೂಲಶಿಲ್ಪ ಹೊಯ್ಸಳ ಎನ್ನಬಹುದಾದರೂ; ದೇವಾಲಯದ ಮುಖ್ಯ ರಚನೆಗಳೆಲ್ಲ ವಿಜಯನಗರ ಕಾಲದ್ದಾಗಿದೆ. ಗರ್ಭಗೃಹ, ಅಂತರಾಳ, ಹಾಗೂ ೨೪ ಕಂಬಗಳ ವಿಶಾಲವಾದ ನವರಂಗವಿದ್ದು; ಮುಂದೆ ಕೈಸಾಲೆ ಮಂಟಪವಿದೆ. ಅಂತರಾಳದಲ್ಲಿ ರಾಮಾನುಜ ಶಿಲ್ಪವಿದ್ದು ತೋರಣದಲ್ಲಿ ಕಿರುಶಿಲ್ಪಗಳಿವೆ. ಈ ದೇವಾಲಯ ಶಿಥಿಲಗೊಂಡಿದ್ದು ಗರ್ಭಗುಡಿಯಲ್ಲಿದ್ದ ಮೂಲ ಮೂರ್ತಿಯನ್ನು ಎತ್ತಿ ತಂದು ಕೆರೆಯ ಅಂಚಿನ ಒಂದು ಮಂಟಪದಲ್ಲಿ ಇರಿಸಿದ್ದಾರೆ. ಇದು ಶುದ್ಧ ಶಿಲ್ಪಶಾಸ್ತ್ರ ರಚನೆಯಲ್ಲಿ ಕಡೆದಿದ್ದು ಕೆರೆ ಹಿನ್ನೆಲೆಯಲ್ಲಿ ಬಹು ಸುಂದರವಾಗಿ ಕಾಣಿಸುತ್ತದೆ. ಈ ಊರು ದೇವಾಲಯಗಳ ಅಧ್ಯಯನಕ್ಕೆ ಹೇಳಿ ಮಾಡಿಸಿದಂತಿದ್ದರೂ, ದೇವಾಲಯಗಳ ಸಂರಕ್ಷಣೆ ಕಾರ್ಯ ತುರ್ತು ಆಗಬೇಕಾಗಿದೆ.

**ಕಸಲಗೆರೆ ಕಲ್ಲೇಶ್ವರ :**

ಹೋಬಳಿ ಕೇಂದ್ರ ದೇವಲಾಪುರದ ಸಮೀಪವಿರುವ ಕಸಲಗೆರೆಯ ಹೊರಭಾಗದಲ್ಲಿರುವ ಕಲ್ಲೇಶ್ವರ ಗುಡಿಯು, ಗರ್ಭಗೃಹ, ಸುಖನಾಸಿ ಹಾಗೂ ನವರಂಗಗಳನ್ನು ಹೊಂದಿರುವ ಹೊಯ್ಸಳರ ಸರಳ ರಚನೆಯಾಗಿದ್ದು ಶಿಥಿಲಾವಸ್ಥೆಯಲ್ಲಿದೆ. ಗರ್ಭಗೃಹದಲ್ಲಿ ಲಿಂಗವಿದ್ದು, ಭುವನೇಶ್ವರಿಯಲ್ಲಿ

ಕಮಲಾಲಂಕಾರವಿದ್ದು, ಬಾಗಿಲವಾಡವು ನಿರಾಡಂಬರವಾಗಿದೆ. ಈ ದೇವಾಲಯದ ಭಿತ್ತಿಯ ಹೊರಮೈ, ಬಾಗಿಲವಾಡ ಮುಂತಾದವು ಕಣ್ಮರೆಯಾಗಿವೆ. ನವರಂಗದ ಒಂದು ಮೂಲೆಯಲ್ಲಿ ಜೈನಶಾಸನ ಹಾಗೂ ಸೂರ್ಯ ಶಿಲ್ಪಗಳಿವೆ. ಒಳಗಿರುವ ಕ್ರಿ.ಶ. ೧೧೪೨ರ ಜೈನಶಾಸನ ಸೂಚಿಸುವ ಪಾರ್ಶ್ವನಾಥನಿದ್ದ ಉತ್ತುಂಗ ಚೈತ್ಯಾಲಯ ಇದೇ ಆಗಿದ್ದು, ನಂತರದಲ್ಲಿ ಆಗಿರಬಹುದಾದ ಧಾರ್ಮಿಕ ಬದಲಾವಣೆಯಲ್ಲಿ ಎಕ್ಕೋಟಿ ಜಿನಾಯಲವೆಂದು ಪ್ರಸಿದ್ಧಿಯಾಗಿದ್ದ ಇದು ಕ್ರಿ.ಶ. ೧೧೯೦ ರ ಹೊತ್ತಿಗೆ ಶಾಸನೋಕ್ತ ಕಲಿದೇವರ ಅಥವಾ ಕಲ್ಲೇಶ್ವರ ಗುಡಿಯಾಗಿರುವ ಸಾಧ್ಯತೆಗಳೇ ಹೆಚ್ಚು. ಗುಡಿಯ ಹೊರಭಾಗದಲ್ಲಿರುವ ಕ್ರಿ.ಶ. ೧೧೯೦ರ ಶಾಸನದೊಂದಿಗೆ ಇನ್ನೊಂದು ಶಾಸನವೂ ಇದ್ದು ಉತ್ತುಂಗ ಚೈತ್ಯಾಲಯವನ್ನು ನಿರ್ಮಿಸಿ, ಪಾರ್ಶ್ವದೇವರನ್ನು ಪ್ರತಿಷ್ಠಾಪಿಸಿ ದಾನಬಿಟ್ಟ ವಿಷಯಗಳನ್ನು ಹೇಳುತ್ತದೆ. ಇಲ್ಲಿ ಕಾಣಸಿಗುವ ಎರಡು ವೀರಗಲ್ಲುಗಳಲ್ಲಿ ಒಂದರಲ್ಲಿ ವೇದಿಕೆಯ ಮೇಲ್ತುದಿಯಲ್ಲಿ ಮುಕ್ಕೊಡೆ (ಜಿನಕ್ಕೆ ಸಂಬಂಧಿಸಿದಂತೆ ಒಂದು ಲಾಂಛನ) ಇದ್ದು, ಬಹುಶಃ ಇದು ಆತ್ಮಾಹುತಿಯನ್ನು ಸೂಚಿಸುತ್ತದೆ. ಈ ಊರಿಗೆ ಸಮೀಪವಿರುವ ಭೀಮನಹಳ್ಳಿಯ ಸೋಮೇಶ್ವರ ಗುಡಿ ಹೊಯ್ಸಳರ ಕಾಲದ್ದು.

**ನಾನಲಕೆರೆ :**

ನಾಗಮಂಗಲದಿಂದ ವಾಯವ್ಯಕ್ಕೆ ೨೪ ಕಿ.ಮೀ. ದೂರದಲ್ಲಿರುವ ಲಾಳನಕೆರೆ ಶಾಸನಗಳಲ್ಲಿ 'ನಾನಲಕೆರೆ' ಎಂದು ಉಲ್ಲೇಖಿಸಿದೆ. ನಾನಲ ಅಥವಾ ನಾನಲು ಎನ್ನುವುದು ಸಸ್ಯರೂಪದಲ್ಲಿ ಕಾಡಿನಲ್ಲಿ ಬೆಳೆಯುವಂಥ ಕಡ್ಡಿಯೆ ಸ್ಥಳನಾಮವಾಗಿ ಬಂದಿದೆ. ಸುಂದರ ಶಾಸನಗಳೊಟ್ಟಿಗೆ ಇರುವ ದೇವಾಲಯ ಸಮುಚ್ಚಯದಲ್ಲಿ ಮೊದಲಿರುವ ಮಲ್ಲೇಶ್ವರ ಅಥವಾ ಮಲ್ಲಿಕಾರ್ಜುನ ಗುಡಿಯು ಮೂಲತಃ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಅದಕ್ಕೆ ಇತ್ತೀಚೆಗೆ ತೆರೆದ ಮಂಟಪವನ್ನು ಸೇರಿಸಲಾಗಿದೆ. ಕ್ರಿ.ಶ. ೧೧೩೮ ಹಾಗೂ ಕ್ರಿ.ಶ. ೧೨೧೮ ರ ಶಾಸನಗಳು ಈ ದೇವರಿಗೆ ಬಿಟ್ಟ ದತ್ತಿ ಶಾಸನಗಳಾಗಿವೆ. ಈ ಗುಡಿಯ ಗರ್ಭಗೃಹದಲ್ಲಿ ಲಿಂಗವಿದ್ದು, ಅಂತರಾಳದ ಬಾಗಿಲವಾಡವು ಜಾಲಂಧ್ರದಿಂದ ಕೂಡಿದ್ದು, ನವರಂಗದ ಭುವನೇಶ್ವರಿಯೂ ಆಕರ್ಷಕವಾಗಿದೆ. ಗುಡಿಯ ಶಿಖರ ಕದಂಬನಾಗರ ಶೈಲಿಯಲ್ಲಿದ್ದು, ಭಿತ್ತಿಯು ನಿರಾಡಂಬರವಾಗಿದೆ. ಎದುರಿಗೆ ನಂದಿಕಂಬವಿದೆ. ಈ ಗುಡಿಯ ಎಡಭಾಗದಲ್ಲಿರುವ ಮಾದೇಶ್ವರ ಅಥವಾ ಶಿವರಮ್ಮ ಮಧುಕೇಶ್ವರ ಗುಡಿಯನ್ನು ಶಿವದೇವನು ನಿರ್ಮಿಸಿ, ಮಧುಕರಾಶಿ ಪಂಡಿತರಿಗೆ ದತ್ತಿಬಿಟ್ಟ ವಿಷಯವನ್ನು ಕ್ರಿ.ಶ. ೧೧೬೫ರ ಶಾಸನವೊಂದು ಹೇಳುತ್ತದೆ.

ಎದುರುಬದುರಾಗಿ ಪ್ರತ್ಯೇಕ ಗರ್ಭಗೃಹ, ಸುಖನಾಸಿ ಹಾಗೂ ನವರಂಗಗಳನ್ನು ಹೊಂದಿರುವ ಜೋಡಿ ದೇಗುಲಗಳು. ಒಂದರಲ್ಲಿ ಲಿಂಗವಿದ್ದರೆ, ಇನ್ನೊಂದರಲ್ಲಿ ನಂದಿ ಇದೆ. ಕ್ರಿ.ಶ. ೧೨೧೮ರ ಶಾಸನದಲ್ಲಿ ಬರುವ 'ಗಂಡರ ಮೂಕುತಿಗಳುಂ' ಮತ್ತು 'ನಾಸಾಭರಣ ಮೂಗುತಿ' ಯನ್ನು ಸೂಚಿಸಿರುವ ಅಪರೂಪದ ಉಲ್ಲೇಖಗಳಿವೆ. ಊರ ಅಗಸಿ ಬಳಿ ಇರುವ ಸಿಡಿ ಸೇವೆಯ ಚಟ್ಟನಹಳ್ಳಿ ಅಮ್ಮ (ಅಚಲ ಪರಮೇಶ್ವರಿ)ನ ಹೆಸರಿನಲ್ಲಿ ನೆಟ್ಟಿರುವ ಎರಡು ಅಡಕೆ ಮರಗಳು ಮೈನವಿರೇಳಿಸುತ್ತವೆ. ಊರಾಚೆ ಇದ್ದ ವಿಜಯನಗರ ಶೈಲಿಯ ಕೋಡಿಲಿಂಗೇಶ್ವರ ನವೀನಾವಸ್ಥೆಯಲ್ಲಿ ಜೀರ್ಣೋದ್ಧಾರಗೊಂಡಿದೆ.

**ಬಿಂಡಿಗನವಿಲೆ ಚನ್ನಕೇಶವ :**

ಕಂಬದಹಳ್ಳಿ ಬಸದಿಗಳ ಬಗ್ಗೆ ಈ ಹಿಂದೆಯೇ ಹೇಳಲಾಗಿದೆ. ಇಲ್ಲಿಗೆ ಸಮೀಪವಿರುವ ಬಿಂಡಿಗನವಿಲೆ ಸ್ಥಳಪುರಾಣದಲ್ಲಿ 'ಮಯೂರ ಪುರ' ಎಂದು ಕರೆಯಲಾಗಿದೆ. ಇಲ್ಲಿ ಒಂದು ಕಾಲಕ್ಕೆ ನವಿಲುಗಳದೇ ಸಾಮ್ರಾಜ್ಯವಾಗಿತ್ತು. ಗಂಗರ ಕಾಲದಲ್ಲಿ ಕಂಬದಹಳ್ಳಿಗೆ ಹೊಂದಿಕೊಂಡಂತೆ 'ಬಿಂಡಿಗನವಿಲೆ ತೀರ್ಥ' ಎಂದು ಜೈನ ಕ್ಷೇತ್ರವಾಗಿತ್ತು. ನಂತರದಲ್ಲಿ ಚನ್ನಕೇಶವ ದೇವಾಲಯ ನಿರ್ಮಾಣವಾಯಿತು. ರಾಮಾನುಜಾಚಾರ್ಯರು ಇಲ್ಲಿ ದೇವರ ದರ್ಶನ ಪಡೆದು ವಿಷ್ಣುವರ್ಧನನನಿಂದ ದೇವಾಲಯವನ್ನು ಅಭಿವೃದ್ಧಿಪಡಿಸಿದರೆಂದು ಪ್ರತೀತಿ ಇದೆ. ಈ ದೇವಾಲಯದ ಪ್ರಮುಖ ಆಕರ್ಷಣೆಯೆಂದರೆ ಶ್ರೀಗಂಧದ ಮರದಿಂದ ಮಾಡಿದ ಗರುಡಮೂರ್ತಿ. ಹೊಳಪಾದ ಕಣ್ಣುಗಳೊಂದಿಗೆ ಬೆಳ್ಳಿಯ ಕೋರೆ, ನಾಮುವನ್ನು ಧರಿಸಿ ಮಂಡಿಯೂರಿ, ಎರಡೂ ಕೈಗಳನ್ನು ನೀಡಿ ಕುಳಿತಂತಿರುವ ಆಳೆತ್ತರದ ಭಂಗಿ ನಿಜಕ್ಕೂ ರೋಮಾಂಚನ. ವಿಶೇಷವೆಂದರೆ ತಲೆಯಲ್ಲಿ ಕಿರೀಟವನ್ನು ಹಾಕಿದಂತೆ ಕೊರೆದಿದ್ದಾರೆ. ಚನ್ನಕೇಶವನಿಗೆ ಈ ಗರುಡ ಲಭ್ಯವಾದ ಒಂದು ದಂತಕಥೆ ಪ್ರಚಲಿತದಲ್ಲಿದೆ. ದೇವಾಲಯದ ಅಂತರಾಳದ ಒಂದಂಕಣದಲ್ಲಿ ಈ ಮರದ ಗರುಡ ಮತ್ತು ಆಂಜನೇಯ ಶಿಲ್ಪಗಳಿದ್ದರೆ, ಇನ್ನೊಂದರಲ್ಲಿ ವಿಜಯನಗರ ಕಾಲದ ಸೌಮ್ಯನಾಯಕಿ ಶಿಲ್ಪವಿದೆ.

ಒಟ್ಟಾರೆ ಈ ದೇವಾಲಯ ಹೊಯ್ಸಳ ಮತ್ತು ವಿಜಯನಗರದ ಸಮ್ಮಿಶ್ರಣವಾಗಿದೆ. ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ, ಪ್ರಾಕಾರ ಹಾಗೂ ಮಹಾದ್ವಾರಗಳು ವಿಜಯನಗರ ಕಾಲದ್ದಾದರೆ; ಬಾಗಿಲವಾಡವು ಹೊಯ್ಸಳರ ಕಾಲದ್ದಾಗಿದೆ. ಈಗಿನ ಚನ್ನಕೇಶವ ಮೂರ್ತಿಯೂ ಬದಲಾದ ವಿಜಯನಗರ ಶೈಲಿಯ ಶಿಲ್ಪವೆಂದು ಹೇಳಲಾಗುತ್ತದೆ. ಪಾತಾಳಂಕಣದಲ್ಲಿರುವ

ರಾಮಾನುಜರ ಗುಡಿಯ ಗರ್ಭಗೃಹ ಮತ್ತು ಅಂತರಾಳ ಭಾಗದ ಭಿತ್ತಿಯು ಹೊಯ್ಸಳ ಲಕ್ಷಣದಿಂದ ಕೂಡಿದ್ದು ನವರಂಗ ಹಾಗೂ ಉಳಿದ ಭಾಗಗಳು ವಿಜಯನಗರ ಶೈಲಿಯಲ್ಲಿವೆ.

ಇಲ್ಲಿರುವ ಈಶ್ವರ ಗುಡಿ ಹೊಯ್ಸಳರ ಕಾಲದ್ದಾಗಿದೆ. ಅಪರೂಪವಾಗಿ ಕಾಣಸಿಗುವ ನಗರೇಶ್ವರ ಗುಡಿಯೂ ಇಲ್ಲಿದೆ. ಕವತೇಶ್ವರ, ಮಲ್ಲೇಶ್ವರ ಗುಡಿಗಳು ಸಹ ಕಾಣಸಿಗುತ್ತವೆ.

**ಮಾಚಲಘಟ್ಟದ ಮಲ್ಲೇಶ್ವರ :**

ನಾಗಮಂಗಲದ ದಕ್ಷಿಣಕ್ಕೆ ೧೮ ಕಿ.ಮೀ. ದೂರವಿರುವ ಮಾಚಲಘಟ್ಟದ ಮಲ್ಲೇಶ್ವರ ಗುಡಿ ಹೊಯ್ಸಳ ಶೈಲಿಯ ಚೊಕ್ಕನಾದ ಗುಡಿ. ಊರಾಚೆ ಇರುವ ಈ ಗುಡಿ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಲಿಂಗವಿದ್ದು, ಬಾಗಿಲವಾಡದ ಲಲಾಟದಲ್ಲಿ ಗಜಲಕ್ಷ್ಮಿ ಕೆತ್ತನೆ ಇದೆ. ಕೆಳಭಾಗದಲ್ಲಿ ಶೈವ ದ್ವಾರಪಾಲಕರಿದ್ದಾರೆ. ಅಂತರಾಳದ ಜಾಲಂಧ್ರಯುಕ್ತ ಬಾಗಿಲವಾಡವು ತ್ರಿಶಾಖಾಲಂಕೃತವಾಗಿದ್ದು, ಲಲಾಟದಲ್ಲಿ ಪಾರ್ವತಿ–ಪರಮೇಶ್ವರರ ಕೆತ್ತನೆಯಿದೆ. ಅಲ್ಲಿಯೇ ಕೆಳಗೆ ದ್ವಾರಪಾಲಕರಿದ್ದಾರೆ. ಚಿತ್ತಾಕರ್ಷಕ ಅಲಂಕಾರದಿಂದ ಕೂಡಿದ, ನಾಲ್ಕು ಮಾದರಿಯ ನವರಂಗದ ಕಂಬಗಳು ಹಾಗೂ ನಾಲ್ಕು ದೇವಕೋಷ್ಠಗಳಲ್ಲಿ ಗಣಪತಿ(೨) ಸಪ್ತಮಾತೃಕಾ ಮತ್ತು ನಾಗ ಶಿಲ್ಪಗಳಿವೆ. ನಡುವೆ ನಂದಿ ಇದೆ. ನವರಂಗದ ಭುವನೇಶ್ವರಿಗಳು ವೈವಿಧ್ಯಮಯವಾಗಿವೆ. ನಡುವಣ ಭುವನೇಶ್ವರಿಯನ್ನು ೩೨ ಕೋನದ ನಕ್ಷತ್ರಾಕಾರದ ಕೆತ್ತನೆಯ ಇಳಿಬಿಟ್ಟ ಕಮಲ, ಅಷ್ಟದಿಕ್ಪಾಲಕರು, ಮಾವಿನ ಎಲೆಯ ತಳಿರುತೋರಣ, ವಾದ್ಯಗಾರರು ಹಾಗೂ ಮುತ್ತಿನ ಅಲಂಕಾರಿಕ ಅಂಚುಗಳಿಂದ ಅಲಂಕರಿಸಲಾಗಿದೆ. ನವರಂಗದ ಪ್ರವೇಶದ್ವಾರವು ಸರಳವಾಗಿದೆ. ಕದಂಬನಾಗರ ಶಿಖರ, ಸುಕನಾಸಿಗಳನ್ನು ಹೊಂದಿರುವ ಈ ಗುಡಿಯ ಭಿತ್ತಿಯು ಅಲಂಕಾರಿಕ ಅರೆಕಂಬಗಳನ್ನು ಹೊಂದಿದ್ದು, ನಿರಾಡಂಬರವಾಗಿದೆ. ಇದೀಗ ಈ ದೇವಾಲಯದ ಜೀರ್ಣೋದ್ಧಾರಗೊಂಡಿದೆ.

ನಾಗಮಂಗಲ ತಾಲ್ಲೂಕಿನಲ್ಲಿ ಹೊಯ್ಸಳರ ಅಳಿದುಳಿದ ಕಲಾಕೃತಿಗಳು ಹೊನ್ನಾವರ, ಬೋಗಾದಿ, ಹಾಲ್ತಿ, ತಿಬ್ಬನಹಳ್ಳಿ ಮುಂತಾದ ಕಡೆಗಳಲ್ಲಿ ಕಾಣಸಿಗುತ್ತವೆ. ಹೇರಳವಾಗಿ ಕೆರೆಕಟ್ಟೆಗಳನ್ನು ನಿರ್ಮಿಸಿದ್ದಾರೆ. ಅವರ ಕಾಲದಲ್ಲಿ ಆಗಿದ್ದ ಹಸಿರು ಕ್ರಾಂತಿಗೆ ಸಂಕೇತವಾಗಿ ಅವರ ಹಲವು ದೇವಾಲಯಗಳ ಪಟ್ಟಿಕೆಗಳಲ್ಲಿ ಬಳ್ಳಿಗಳನ್ನು ಕಾಣಬಹುದು. ಗೋವುಗಳ ರಕ್ಷಣೆಗಾಗಿ ಪ್ರಾಣಬಿಟ್ಟ ದಾಖಲೆಗಳಿವೆ. ಹಲವಾರು ದತ್ತಿ ದಾನ ಶಾಸನಗಳ ನಡುವೆ ಅಳೀಸಂದ್ರದ ಲಾಲಿತ್ಯಪೂರ್ಣಶಾಸನವೊಂದು

ಕುತೂಹಲಕರವಾಗಿದೆ. ಹೊಯ್ಸಳ ಮರಿಯಾನೆ ದಂಡನಾಯಕನಿಗೆ ಚಾಮವ್ವೆ ಎಂಬ ಪತ್ನಿಯಲ್ಲಿ ಜನಿಸಿದ ಪದುಮಲೆದೇವಿ, ಚಾಮಲದೇವಿ, ಬೊಪ್ಪದೇವಿ ಎಂಬ ಮೂವರು ಹೆಣ್ಣುಮಕ್ಕಳನ್ನು ಹೊಯ್ಸಳ ಎರೆಯಂಗನ ಮಗ ಒಂದನೆಯ ಬಲ್ಲಾಳನು ಒಂದೇ ಹಸೆಯ ಮೇಲೆ ಮದುವೆಯಾದ ವಿಷಯವನ್ನು ಇದು ತಿಳಿಸುತ್ತದೆ. ಈ ಮೂವರು ಮದುಮತಿಯರು ನೃತ್ಯ, ಗೀತ, ಶಾಸ್ತ್ರಗಳಲ್ಲಿ ಜಗದಳೆಯರೆಂದು ಅದೇ ಶಾಸನ ಉಲ್ಲೇಖಿಸಿದೆ.

## ಬಸರಾಳು ಕಲಾ ಸೌರಭ

ಹೊಯ್ಸಳ ಶೈಲಿಯ ಪರಾಕಾಷ್ಠೆಯ ಮತ್ತೊಂದು ದೇವಾಲಯ ಬಸರಾಳಿನ ಮಲ್ಲಿಕಾರ್ಜುನ ದೇವಾಲಯ. ಇದು ಮಂಡ್ಯ ತಾಲ್ಲೂಕಿಗೆ ಸೇರಿಕೊಂಡರೂ ಭಾವನಾತ್ಮಕವಾಗಿ ನಾಗಮಂಗಲ ತಾಲ್ಲೂಕಿನ ಗಡಿಯಲ್ಲಿದೆ. ನಾಗಮಂಗಲ–ಮಂಡ್ಯ ರಸ್ತೆಯಲ್ಲಿ ಬಸರಾಳು ಸಿಕ್ಕಿದಾಗ ಬಲಭಾಗಕ್ಕೆ ಈ ದೇವಾಲಯ ಕಣ್ಣಿಗೆ ಬೀಳುತ್ತದೆ. ಇದು ಕ್ರಿ.ಶ. ೧೨೩೪ರ ಶಾಸನದ ಮೇರೆಗೆ ಹರಿಹರ ದಂಡನಾಯಕನು ತನ್ನ ಹುಟ್ಟೂರಾದ ಬಸರಾಳಿನಲ್ಲಿ ಮೇರು ಪರ್ವತಕ್ಕೆ ಸಮನಾದ ಮಲ್ಲಿಕಾರ್ಜುನ ದೇವಾಲಯವನ್ನು ತಂದೆ ಮಲ್ಲೆಯನಾಯಕನ ಹೆಸರಲ್ಲೂ, ಕೆರೆಯನ್ನು ತಾಯಿ ಗುಜ್ಜವ್ವೆಯ ಹೆಸರಲ್ಲೂ ನಿರ್ಮಿಸಿ ದೇವರ ಸೇವೆಗೆಂದು ಬಿಟ್ಟ ದತ್ತಿಶಾಸನವಿದೆ. ಹರೋಜ ಎಂಬುವನು ಸೂರ್ಯ ಪ್ರತಿಷ್ಠೆ ಮಾಡಿಸಿದನು. ನಂತರದಲ್ಲಿ ಕ್ರಿ.ಶ. ೧೨೩೭ರಲ್ಲಿ ಹರಿಹರ ದಂಡನಾಯಕನು ದತ್ತಿ ನೀಡಿದ ಶಾಸನವಿದೆ. ಶಾಸನದ ಕೊನೆಯಲ್ಲಿ ಚಿದಾನಂದ ಕವಿ ಈ ಶಾಸನವನ್ನು ರಚಿಸಿದನೆಂದು ಹೇಳಲಾಗಿದೆ.

ಇದು ದೇವಾಲಯಗಳ ಸಾಲಿನಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದು ಹಾಸನ ತಾಲ್ಲೂಕಿನ ಕೋರಮಂಗಲದ ಬೂಚೇಶ್ವರ ದೇವಾಲಯವನ್ನು ನೆನಪಿಸುವ ತ್ರಿಕೂಟವಾಗಿದ್ದು, ಬಹುಕೋನಾಕಾರದ ತಳವಿನ್ಯಾಸವನ್ನು ಹೊಂದಿರುವ ಈ ಗುಡಿಯು ಮೂರು ಅಡಿ ಎತ್ತರದ ಜಗತಿಯ ಮೇಲೆ ನಿರ್ಮಿಸಲ್ಪಟ್ಟಿದೆ. ಪ್ರಧಾನ ಗರ್ಭಗೃಹಕ್ಕೆ ಅಂತರಾಳವಿದ್ದು, ನವರಂಗದ ಇಕ್ಕೆಲಗಳಲ್ಲಿ ಎದುರು ಬದುರಾಗಿ ಒಂದೊಂದು ಅಂಕಣದ ಪ್ರತ್ಯೇಕ ಗರ್ಭಗೃಹಗಳಿದ್ದು, ನವರಂಗದ ಪೂರ್ವಕ್ಕೆ ನಾಲ್ಕು ಅಂಕಣ ಉದ್ದದ ಜಾಲಂಧ್ರ ಭಿತ್ತಿಯುಳ್ಳ ಆಯತಾಕಾರದ ಮುಖಮಂಟಪವಿದ್ದು, ದೇವಾಲಯವನ್ನು ಮುಖ ಮಂಟಪದ ಉತ್ತರ ದಕ್ಷಿಣ ಭಾಗಗಳಲ್ಲಿರುವ ದ್ವಾರಗಳ ಮೂಲಕ ಪ್ರವೇಶಿಸುವಾಗ ಇಕ್ಕೆಲಗಳಲ್ಲಿ ಜಗತಿಯಂಚಲ್ಲಿರುವ ಶಿಖರವುಳ್ಳ ಕಿರುಗುಡಿಗಳು ಮತ್ತು ದ್ವಾರಗಳ ಬಳಿ ಇರುವ ಸುಂದರವಾದ ಆನೆ ಕೈಪಿಡಿಗಳು ಗಮನ ಸೆಳೆಯುತ್ತವೆ.

ದ್ರಾವಿಡ ಶಿಖರವನ್ನು ಹೊಂದಿರುವ ಪ್ರಧಾನ ಗರ್ಭಗೃಹದಲ್ಲಿ ಬಲಹರಿ ಲಿಂಗ, ಛತ್ತಲ್ಲಿ ಸುಂದರ ಕಮಲಗಳಿದ್ದು, ಅದರ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು ಬರಿದಾದ ಲಲಾಟದ ಮೇಲೆ ತ್ರಿಶಿಖರ ಹಾಗೂ ಸಿಂಹಗಳಿದ್ದು, ಇಕ್ಕೆಲಗಳಲ್ಲಿ ಶೈವ ದ್ವಾರಪಾಲಕರಿದ್ದಾರೆ. ಅಂತರಾಳದ ಬಾಗಿಲವಾಡವು ಐದು ಶಾಖೆಯ ಅಲಂಕಾರ, ಜಾಲಂಧ್ರ, ಶೈವದ್ವಾರಪಾಲಕರು ಹಾಗೂ ಪಂಚ ಶಿಖರಗಳನ್ನು ಹೊಂದಿದ್ದು, ಆಕರ್ಷಕವಾಗಿದೆ. ನವರಂಗದ ನಡುವಣ ನಾಲ್ಕೂ ಕಂಬಗಳು ಚರಕಿ ಯಂತ್ರ ನಿರ್ಮಿತವಾಗಿದ್ದು ಕಮಲ ಬೋದಿಗೆಯನ್ನು ಹೊಂದಿದ್ದು ನಡುವಣ ಛತ್ತಿನ ಭುವನೇಶ್ವರಿಯ ಅಲಂಕಾರ ಇಂದು ಕಣ್ಮರೆಯಾಗಿದೆ. ಉಳಿದ ಅಂಕಣಗಳ ಛತ್ತು ಹಾಗೂ ತೊಲೆಗಳು ಆಕರ್ಷಕ ಕಮಲಗಳಿಂದ ಅಲಂಕೃತಗೊಂಡಿದ್ದು ನಯನ ಮನೋಹರವಾಗಿವೆ. ನವರಂಗದ ಉತ್ತರ-ದಕ್ಷಿಣದಲ್ಲಿ ಎದುರು ಬದುರಾಗಿರುವ ಒಂದು ಅಂಕಣದ ಗರ್ಭಗೃಹಗಳಲ್ಲಿ ಕ್ರಮವಾಗಿ ನಾಲ್ಕೂವರೆ ಅಡಿಯ ನಾಗ-ನಾಗಿಣಿ ಹಾಗೂ ಸೂರ್ಯನ ಸುಂದರ ಶಿಲ್ಪಗಳಿವೆ. ಇಂದು ನಾಗ-ನಾಗಿಣಿ ಶಿಲ್ಪವಿರುವ ಗರುಡ ಪೀಠದಲ್ಲಿ ಹಿಂದೆ ವಿಷ್ಣುವಿನ ಮೂರ್ತಿ ಇತ್ತೆಂದು ಹೇಳಲಾಗುತ್ತದೆ. ಈ ಗರ್ಭಗೃಹಗಳ ಬಾಗಿಲವಾಡವೂ ಪಂಚಶಾಖಾಲಂಕೃತವಾಗಿದ್ದು ವೈಷ್ಣವ ದ್ವಾರಪಾಲಕರಿದ್ದಾರೆ. ಶಿವಲಿಂಗಕ್ಕೆ ಎದುರಾಗಿ ನವರಂಗದಲ್ಲಿರುವ ನಂದಿಯೂ ಗಮನಾರ್ಹವಾಗಿದೆ. ಅಲ್ಲಿರುವ ನಾಲ್ಕು ದೇವಕೋಷ್ಠಗಳು ಕಿರುಗುಡಿಗಳೇ ಆಗಿದ್ದು ದ್ರಾವಿಡ ಮಾದರಿಯ ಸುಂದರ ಶಿಖರಗಳನ್ನು ಹೊಂದಿದ್ದು ಶಾರದೆ (ಸರಸ್ವತಿ), ಗಣಪತಿ, ಮಹಿಷಮರ್ಧಿನಿ ಹಾಗೂ ಇನ್ನೊಂದು ಕಿರಿದಾದ ಸರಸ್ವತಿ ಶಿಲ್ಪಗಳ ಜೊತೆಗೆ ಸಪ್ತಮಾತೃಕಾ ಪಟ್ಟಿಕೆ ಇದೆ. ನವರಂಗವನ್ನು ಪ್ರವೇಶಿಸಲು ಇರುವ ಬಾಗಿಲವಾಡದ ಲಲಾಟದಲ್ಲಿ ತಾಂಡವೇಶ್ವರ ಶಿಲ್ಪವಿದ್ದು ಶೈವ ದ್ವಾರಪಾಲಕರು ಹಾಗೂ ಜಾಲಂಧ್ರಗಳಿವೆ. ನವರಂಗದ ಪೂರ್ವಭಾಗ ಹಾಗೂ ಮುಖಮಂಟಪದ ಭಿತ್ತಿಗಳ ನಡುವೆ ಒಡಗಿಸಿರುವ ಜಾಲಂಧ್ರಗಳು ಗಾಳಿ ಬೆಳಕನ್ನು ನೀಡುತ್ತವೆ. ನವರಂಗದ ಪೂರ್ವ ಭಾಗ ಹಾಗೂ ಮುಖ ಮಂಟಪಗಳಲ್ಲಿ ಕಂಡುಬರುವ ಕಕ್ಷಾಸನಗಳಿಂದ, ಮೂಲತಃ ಹಿಂದೆ ಇದ್ದ ತೆರೆದ ನವರಂಗ, ಅರ್ಧಮಂಟಪ ಹಾಗೂ ನಂದಿ ಮಂಟಪಗಳನ್ನು ನಂತರದಲ್ಲಿ ಜಾಲಂಧ್ರ ಭಿತ್ತಿಗಳನ್ನು ನಿರ್ಮಿಸಿ, ಒಳಕ್ಕೆ ಸೇರಿಸಿಕೊಂಡಂತೆ ತೋರುತ್ತದೆ. ದೇವಾಲಯವನ್ನು ಪ್ರವೇಶಿಸುವ ಮುಖಮಂಟಪದ ಉತ್ತರ-ದಕ್ಷಿಣದ್ವಾರಗಳಿಗೆ ಒಂದೊಂದೇ ವೈಷ್ಣವ ದ್ವಾರಪಾಲಕರಿದ್ದು ಉಳಿದೆರಡು ಕಣ್ಮರೆಯಾಗಿವೆ. ಮುಖಮಂಟಪದಲ್ಲಿರುವ ಆಕರ್ಷಕ ಬೃಹತ್ ನಂದಿ ಹಾಗೂ ದ್ವಾರಪಾಲಕರ ಶಿಲ್ಪಗಳು ಉತ್ಕೃಷ್ಟವಾಗಿವೆ. ಬಳಪದ ಕಲ್ಲಿನಲ್ಲಿ ನಿರ್ಮಿಸಿರುವ ಈ

ದೇವಾಲಯದಲ್ಲಿ ಕನಿಷ್ಠ ಏಳು ಮಾದರಿಯ ಕಂಬಗಳಿದ್ದು, ಭಿತ್ತಿಯಲ್ಲಿ ಅಡಿಯಿಂದ ಮುಡಿಯವರೆಗೆ ದೇವಲೋಕವನ್ನೇ ಸೃಷ್ಟಿಸಲಾಗಿದೆ. ಪುರಾಣ ಕಥನ ಶಿಲ್ಪಗಳಂತೂ ರಾಮಾಯಣ-ಮಹಾಭಾರತ ಭಾಗವತಗಳೊಂದಿಗೆ ಮೈತುಂಬಿನಿಂತ ಮೇರುಗಿರಿ ಏನೋ ಎಂಬಂತೆ ಶಾಸನದಲ್ಲಿ ದೇವಾಲಯದ ಶಿಲ್ಪವೈಭವ ಮಾರ್ದನಿಸುತ್ತಿದೆ ಎಂದರೆ ಉತ್ಪ್ರೇಕ್ಷೆಯಾಗಲಾರದು.

ದೇವಾಲಯದ ಅಧಿಷ್ಠಾನವನ್ನು ಆರೋಹಣ ಕ್ರಮದಲ್ಲಿ ಆನೆ, ಕುದುರೆ ಸವಾರರು, ಹೊಯ್ಸಳ ಲಾಂಛನ, ಪುರಾಣ ಕಥನ ಶಿಲ್ಪ, ಮಕರ ಹಾಗೂ ಹಂಸಾವಳಿಯ ಆಕರ್ಷಕ ಸಾಲುಪಟ್ಟಿಕೆಗಳು ಅಲಂಕರಿಸಿದ್ದು, ನವರಂಗದ ಪೂರ್ವಭಾಗ ಹಾಗೂ ಮುಖಮಂಟಪಗಳಲ್ಲಿ ಕಂಡು ಬರುವ ಭಾಗಶಃ ಹಾಳಾಗಿರುವ ಕಕ್ಷಾಸನ (ಒರಗುಆಸನ)ದ ಹಿಂಬದಿಯಲ್ಲಿರುವ ಮಿಥುನ ಶಿಲ್ಪಗಳೂ ಸೇರಿದಂತೆ ಹಲವಾರು ಸಾಮಾಜಿಕ ದೃಶ್ಯಗಳು ಸಮಕಾಲೀನ ಸಮಾಜವನ್ನು ನೈಜವಾಗಿ ಪ್ರತಿಬಿಂಬಿಸಿವೆ. ಅವುಗಳಲ್ಲಿ ರಾಮಾಯಣದ ವಾಲಿ-ಸುಗ್ರೀವರ ಯುದ್ಧ, ಕೈಲಾಸ ಎತ್ತುತ್ತಿರುವ ರಾವಣ, ಮಹಾಭಾರತದ ಮತ್ಸ್ಯಯಂತ್ರಭೇದ್ಯ, ಕಿರಾತಾರ್ಜುನೀಯ, ಚಕ್ರವ್ಯೂಹ, ಭಾಗವತದ ಕೃಷ್ಣಲೀಲಾ ದೃಶ್ಯ, ಗೋವರ್ಧನಧಾರಿ ಮುಂತಾದವು ಮನೋಜ್ಞವಾಗಿ ಮೂಡಿ ಬಂದಿವೆ. ಅಧಿಷ್ಠಾನದ ಮೇಲಿರುವ ಎರಡು ಹಂತದ ಭಿತ್ತಿಯಲ್ಲಿ ಕೆಳಗಿನ ಹಂತವು ದೇವಾನುದೇವತೆಗಳ ಶಿಲ್ಪಗಳಿಂದ ಅಲಂಕೃತಗೊಂಡಿದ್ದರೆ ಮೇಲಿನ ಹಂತವು ಕಿರು ಶಿಖರ ಹಾಗೂ ಅಲಂಕಾರಿಕ ಸ್ತಂಭಗಳಿಂದ ಅಲಂಕರಿಸಲ್ಪಟ್ಟಿದೆ.


ಸಮುದ್ರಮಥನ, ಕಾಳಿಂಗಮರ್ಧನ, ಷಣ್ಮುಖ, ಹಯಗ್ರೀವ, ನೃತ್ಯಲಕ್ಷ್ಮೀನರಸಿಂಹ, ಗಜಚರ್ಮಾಂಬರಧಾರಿ ಶಿವ, ಹರಿಹರ, ವಾಮನ, ಬಲಿಚಕ್ರವರ್ತಿ, ೧೬ಭುಜದ ದುರ್ಗಿ, ನಟರಾಜ, ರತಿ-ಮನ್ಮಥ ಮುಂತಾದ ಶಿಲ್ಪಗಳೊಂದಿಗೆ ಶುಕಸುಂದರಿ, ಚೌರಿಧಾರಿ ಸಖಿಯರನ್ನು ಭಿತ್ತಿಯ ಮೇಲೆ ನೋಡಬಹುದು. ಗರ್ಭಗುಡಿಯ ಮೇಲೆ ವೈವಿಧ್ಯಮಯ ಕಿರು ಶಿಲ್ಪಗಳಿಂದ ಕೂಡಿದ ದ್ರಾವಿಡ ಶಿಖರವಿದೆ. ದಕ್ಷಿಣಕ್ಕಿರುವ ಪ್ರಾಕಾರದ ದ್ವಾರಮಂಟಪದ ಮೂಲಕವೇ ದೇವಾಲಯದ ಆವರಣವನ್ನು ಪ್ರವೇಶಿಸಬೇಕು. ಅದರ ಎತ್ತರವಾದ ಕಂಬ ಹಾಗೂ ಅಧಿಷ್ಠಾನಗಳು ವಿಶೇಷ ಮೆರಗನ್ನು ನೀಡುತ್ತವೆ. ಸಂಕೀರ್ಣದ ಈಶಾನ್ಯ ಮೂಲೆಯಲ್ಲಿರುವ ಚಂಡಿಕೇಶ್ವರ ಗುಡಿಯಲ್ಲಿ ಭೈರವನ ಶಿಲ್ಪವಿದ್ದು ಮುಂದೆ ಅರ್ಧಮಂಟಪವಿದೆ. ದೇವಾಲಯದ ಪೂರ್ವಕ್ಕೆ ಸುಮಾರು ೨೦ ಅಡಿ ಎತ್ತರದ ಸ್ತಂಭದ ಮೇಲೆ ಇರುವ ಪೀಠದಲ್ಲಿ ಆನೆಯ ಮೇಲಿರುವ ಆಸೀನವೀರರ ಕೆತ್ತನೆ

ಇದೆ. ಇದು ಅಗ್ರಹಾರ ಬಾಚಹಳ್ಳಿಯಲ್ಲಿ ಇರುವಂತೆ ವೀರಗರುಡರ ಸ್ತಂಭ ಇರಬಹುದು.

ಇಲ್ಲಿಯ ಶಾಸನವೊಂದು ದೇವಾರತಿಯ ಮತ್ತು ದೇವರ ಭೋಗದ ನಾಗವಾಸದ ಸೂಳೆಯರನ್ನು ಉಲ್ಲೇಖಿಸಿದೆ. ಇದಕ್ಕೆ ಪರ್ಯಾಯವಾಗಿ ಉತ್ತರ ಕರ್ನಾಟಕ ಅಥವಾ ದೇಶದ ವಿವಿಧೆಡೆ ದೇವದಾಸಿಯರ ಹೆಸರನ್ನು ಕೇಳುತ್ತೇವೆ. ಅಂದಿನ ದೇವದಾಸಿಯರು ಸಂಗೀತ, ನೃತ್ಯ, ಗಾಯನ ಕಲಾವಿದೆಯರಾಗಿದ್ದು, ತಮ್ಮ ಕಲಾವಂತಿಕೆಯನ್ನು ದೇವರ ಪೂಜಾ ಸಮಯದಲ್ಲಿ ಸೇವೆಯ ರೂಪದಲ್ಲಿ ಸಲ್ಲಿಸಬೇಕಾಗಿತ್ತು. ಜೊತೆಗೆ ಚಿತ್ರಲೇಖನ, ಕಸೂತಿ ಇತ್ಯಾದಿ ಲಲಿತ ಕಲೆಗಳಲ್ಲಿಯೂ ಪರಿಣಿತರಾಗಿದ್ದರು. ಮಹಿಳೆಯರಿಗೆ ಸಂಬಂಧಿಸಿದ ನಾಟೀ ವೈದ್ಯವನ್ನು ಮಾಡುತ್ತಿದ್ದರು. ಗೃಹಿಣಿಯರ ಹೆರಿಗೆ ಸಮಯದಲ್ಲಿ ವೈದ್ಯರಂತೆ ಅಥವಾ ದಾದಿಯರಂತೆ ಸೇವೆ ಸಲ್ಲಿಸುತ್ತಿದ್ದರು. ಇವರನ್ನು ಶಾಶ್ವತ ಸುಮಂಗಲೆಯರು ಎಂದು ಕರೆಯಲಾಗಿತ್ತು. ವಿವಾಹ ಸಮಾರಂಭಗಳಲ್ಲಿ ಮದುವೆಯ ಮಾಂಗಲ್ಯ ಸರದ ಕರಿಮಣಿಗಳನ್ನು ಇವರೇ ಪೋಣಿಸಬೇಕಾಗಿತ್ತು. ಇಂಥ ಕಾರ್ಯಗಳಿಗಾಗಿಯೇ ದೇವದಾಸಿಯರ ಪರಂಪರೆ ನಡೆದುಬಂದಿತ್ತು. ರಾಜರ, ಶ್ರೀಮಂತರ, ಕಲಾರಸಿಕರ ಆಶ್ರಯವೂ ಇತ್ತು. ಕಾಲಕ್ರಮೇಣ ಅದೆಲ್ಲ ಬದಲಾಗಿ ಅವರಿಗೆ ನೀಡುತ್ತಿದ್ದ ಪ್ರೋತ್ಸಾಹ ನಿಂತು ಹೋದಂತೆ ಅಥವಾ ದಿಕ್ಕುತಪ್ಪಿದಂತೆ ಅವರ ಜೀವನೋಪಾಯ ಬೇರೆ ಹಾದಿ ಹಿಡಿಯಿತು. ಇವತ್ತಿನ ನೃತ್ಯ ಪರಂಪರೆಯಲ್ಲಿ ಅವರ ಸೇವೆಯನ್ನು ಸ್ಮರಿಸಬೇಕಾಗಿದೆ.

**ಕೇಶವ ಮತ್ತು ಕಾಶಿ ವಿಶ್ವನಾಥ :**

ಮಂಡ್ಯ ನಗರದಿಂದ ಏಳು ಕಿಲೋ ಮೀಟರ್ ದೂರದಲ್ಲಿ ಬೆಂಗಳೂರು ಹೆದ್ದಾರಿಯಲ್ಲಿ ಎಡಕ್ಕೆ ಸಿಗುವ ಊರು ಹೊಸಬೂದನೂರು. ಇಲ್ಲಿ ಜೀರ್ಣೋದ್ಧಾರಗೊಂಡಿರುವ ಅನಂತ ಪದ್ಮನಾಭ (ಶಾಸನೋಕ್ತ ಕೇಶವ) ಮತ್ತು ಕಾಶಿವಿಶ್ವನಾಥ ದೇವಾಲಯಗಳು ಹೊಯ್ಸಳ ವಾಸ್ತುಶಿಲ್ಪದ ವಿನ್ಯಾಸದಲ್ಲಿ ಹೊಸ ಆಯಾಮವನ್ನು ದೊರಕಿಸಿಕೊಟ್ಟಿವೆ. ಈ ಊರು ಹಿಂದೆ ಅಗ್ರಹಾರವಾಗಿದ್ದ ರಚನೆ ಸ್ಪಷ್ಟವಾಗಿದೆ. ಊರ ನಡುವೆ ಪೂರ್ವಕ್ಕೆ ಅನಂತ ಪದ್ಮನಾಭ, ಈಶಾನ್ಯಕ್ಕೆ ಕಾಶೀ ವಿಶ್ವನಾಥ (ಶಿವ), ಎದುರಿಗೆ ವಿಶಾಲ ಕೆರೆ (ಈಗ ಸಾಕಷ್ಟು ಮುಚ್ಚಿಕೊಂಡಿದೆ). ಇವು ಹೊಯ್ಸಳ ಮೂರನೇ ನರಸಿಂಹನ ಕಾಲ ಕ್ರಿ.ಶ. ೧೨೭೬ ರಲ್ಲಿ ನಿರ್ಮಾಣವಾದುದಕ್ಕೆ ಶಾಸನಾಧಾರವಿದೆ. ಈ ಶಾಸನ ಅನಂತಪದ್ಮನಾಭ ಗುಡಿಯಲ್ಲಿ ವಿರಾಜಿಸಿದೆ.




ಮಲ್ಲೇಶ್ವರ ದೇವಾಲಯ. ಮಾಚಲಘಟ್ಟ



ಚನ್ನಕೇಶವ ದೇವಾಲಯ. ಸುಂಕತೊಣ್ಣೂರು.



ಅನಂತಪದ್ಮನಾಭ ದೇವಾಲಯ. ಹೊಸಬೂದನೂರು.



ಮಲ್ಲಿಕಾರ್ಜುನ ದೇವಾಲಯ. ಬಸರಾಳು.



ಅಲಂಕಾರ ಪಟ್ಟಿಕೆಗಳು. ಮಲ್ಲಿಕಾರ್ಜುನ ದೇವಾಲಯ.



ಕಾಶಿವಿಶ್ವನಾಥ ದೇವಾಲಯ. ಹೊಸಬೂದನೂರು.

ಅನಂತಪದ್ಮನಾಭ ದೇವಾಲಯವು, ಸುಮಾರು ಮೂರು ಅಡಿ ಎತ್ತರದ ಜಗತಿಯ ಮೇಲೆ ಪೂರ್ವಾಭಿಮುಖವಾಗಿ ನಿಂತಿದೆ. ಗರ್ಭಗೃಹ, ಸುಖನಾಸಿ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿ ಚತುರ್ಭುಜದಾರಿ ವಿಷ್ಣು (ಅನಂತಪದ್ಮನಾಭ) ಶಿಲ್ಪ ಮನಮೋಹಕವಾಗಿದೆ. ಬಲಭಾಗದ ಕೈಗಳಲ್ಲಿ ಪದ್ಮ ಮತ್ತು ಶಂಖಗಳಿದ್ದರೆ, ಎಡಭಾಗದ ಕೈಗಳಲ್ಲಿ ಚಕ್ರ, ಗದೆಗಳಿವೆ. ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಯಿದೆ. ನವರಂಗದ ನಡುವಣ ನಾಲ್ಕು ಕಂಬಗಳು ಚರಕಿಯಂತ್ರದಿಂದ ನಿರ್ಮಿತವಾಗಿದ್ದು ಭುವನೇಶ್ವರಿಗಳು ಕಮಲಗಳಿಂದ ಅಲಂಕೃತಗೊಂಡಿವೆ. ಒಂಬತ್ತು ಅಂಕಣದ ನವರಂಗ ಸುಂದರವಾಗಿದೆ. ನವರಂಗದಲ್ಲಿ ಎರಡು ಕಿರು ದೇವಕೋಷ್ಠಗಳಿವೆ. ಬಾಗಿಲವಾಡಗಳು ಪಂಚ ಹಾಗೂ ಸಪ್ತಶಾಖಾಲಂಕಾರಗಳಿಂದ ಆಕರ್ಷಕವಾಗಿವೆ. ಆರು ಪಟ್ಟಿಕೆಯ ಅಧಿಷ್ಠಾನದ ಮೇಲೆ ನಿಂತಿರುವ ಎರಡು ಹಂತದ ಭಿತ್ತಿಯು ನಿರಾಡಂಬರವಾಗಿದೆ. ಅಲಂಕಾರಿಕ ಸ್ತಂಭ, ದ್ವಾರಗೋಪುರ, ಸ್ತಂಭಗೋಪುರಗಳಿಂದ ಅಲಂಕೃತಗೊಂಡಿದ್ದು ಮೇಲೆ ಸುಂದರವಾದ ದ್ರಾವಿಡ ಶಿಖರವಿದೆ. ಹಿಂದೆ ಈ ದೇವಾಲಯದಲ್ಲಿದ್ದ 'ಯೋಗೀಶ್ವರ' ಎಂಬ ದ್ವಿಬಾಹು ವಿಷ್ಣುಶಿಲ್ಪ ಚ್ಯುತಿಗೊಂಡು ಈಗ ಶ್ರೀರಂಗಪಟ್ಟಣದ ಸರಕಾರಿ ವಸ್ತು ಸಂಗ್ರಹಾಲಯದಲ್ಲಿದೆ. ಶಿಲ್ಪಶಾಸ್ತ್ರಗಳಲ್ಲಿ ವಿಷ್ಣು ಪದ್ಮಾಸನದಲ್ಲಿ ಕುಳಿತು ಧ್ಯಾನಭಂಗಿಯಲ್ಲಿರುವ ಮೂರ್ತಿಯನ್ನು ಯೋಗನಾರಾಯಣ ಅಥವಾ ಯೋಗೀಶ್ವರ ಎಂದು ಹೇಳಿದೆ. ಅಲ್ಲದೆ ಇಲ್ಲಿಯ ಹಲವು ಶಿಲ್ಪಗಳನ್ನು ಈ ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಲಾಗಿದೆ.

ಮತ್ತೊಂದು ಕಾಶಿ ವಿಶ್ವನಾಥ ಗುಡಿ ಸಹ ಅನಂತಪದ್ಮನಾಭ ಗುಡಿಯ ವಿನ್ಯಾಸವನ್ನೇ ಹೊಂದಿದೆ. ಬಹಳ ಶಿಥಿಲಗೊಂಡು ಬಿದ್ದುಹೋಗಿದ್ದ ದೇವಾಲಯವನ್ನು ಪುನಃ ಜೋಡಿಸಿ ಜೀರ್ಣೋದ್ಧಾರಗೊಳಿಸಿದ್ದು (ಧರ್ಮಸ್ಥಳ ಟ್ರಸ್ಟ್) ಒಂದು ಸಾಹಸದ ಕೆಲಸವೇ ಸರಿ. ಸುಮಾರು ೧೫೦ ವರ್ಷಗಳ ಹಿಂದೆ ಸ್ಥಾನಪಲ್ಲಟಗೊಂಡು ಮುಂಭಾಗದ ಒಂದು ಸಣ್ಣಗುಡಿಯಲ್ಲಿದ್ದ ಭವ್ಯವಾದ ನಂದಿವಿಗ್ರಹ ಮತ್ತೆ ಮೂಲಸ್ಥಾನಕ್ಕೆ ಕಳೆದ ವರ್ಷ (೨೦೦೯) ಶಿವರಾತ್ರಿಯಂದು ಮರಳಿಬಂದಿತು. ಈ ದೇವಾಲಯದ ನವರಂಗದಲ್ಲಿ ನಾಲ್ಕು ದೇವಕೋಷ್ಠಗಳಿದ್ದು ನಡುವಣ ಭುವನೇಶ್ವರಿ ಅಷ್ಟದಿಕ್ಪಾಲಕರಿಂದ ಕೂಡಿ ವೈವಿಧ್ಯಮಯ ಕೆತ್ತನೆಯಿಂದ ಆಕರ್ಷಕವಾಗಿದೆ. ಗರ್ಭಗುಡಿಯಲ್ಲಿರುವ ಪಾಣಿಪೀಠ ಗಾತ್ರದಲ್ಲಿ ದೊಡ್ಡದಾಗಿದ್ದು ಲಿಂಗಾಕೃತಿ ಬಹು ಚಿಕ್ಕದಾಗಿದೆ. ಸುಖನಾಸಿ ಮತ್ತು ನವರಂಗಗಳ ಬಾಗಿಲವಾಡಗಳು ಆಕರ್ಷಕ ಕೆತ್ತನೆಗಳಿಂದ ಕೂಡಿದೆ. ನವರಂಗದ ಮಧ್ಯಸ್ಥಳದಲ್ಲಿ ಈಗ ನೆಲೆಯಾಗಿರುವ ನಂದಿವಿಗ್ರಹ ಮತ್ತು ಅದಕ್ಕೆ ತೊಡಿಸಿರುವ ಮಣಿಸರ,

ಗಂಟೆಸರ, ಬಾಸಿಂಗ, ಕಾಲ್ಮುರಿ ಮುಂತಾದ ಸಾಧನಗಳು ಹಾಗೇ ಇಟ್ಟಂತಿವೆ. ಆ ಕಾಲದ ಸುಬ್ರಹ್ಮಣ್ಯ, ವಿಘ್ನೇಶ್ವರ ಶಿಲ್ಪಗಳು ಗುಡಿಗೆ ಮರಳಿ ಬಂದಿವೆ. ನವರಂಗದ ನಾಲ್ಕು ಕಂಬಗಳು ಚರಕಿಯಂತ್ರಗಳಿಂದಾಗಿವೆ. ದೇವಾಲಯದ ಬಲಭಾಗದಲ್ಲಿರುವ ಭವ್ಯಮಂಟಪ ಜೀರ್ಣೋದ್ಧಾರವಾಗಬೇಕಾಗಿದೆ. ಒಟ್ಟಾರೆ ಎರಡೂ ದೇವಾಲಯಗಳು ಚಾಲುಕ್ಯ ಹಾಗೂ ಹೊಯ್ಸಳ ಶೈಲಿಯ ಸಮ್ಮಿಶ್ರಣದಂತಿದೆ.

ಈ ಊರಿಗೆ ಸಮೀಪದಲ್ಲಿರುವ ಬೇಲೂರು ಗ್ರಾಮದ ಚನ್ನಕೇಶವ, ಮಂಡ್ಯಕ್ಕೆ ಹೊಂದಿಕೊಂಡಂತಿರುವ ಗುತ್ತಲು ಗೋಪಾಲಕೃಷ್ಣ ಮತ್ತು ಅರ್ಕೇಶ್ವರ, ಹಳೇಮಂಡ್ಯದ ಲಕ್ಷ್ಮೀಜನಾರ್ದನ ಮತ್ತು ಸಕಲೇಶ್ವರ ಈ ಎಲ್ಲದರ ಮೂಲ ಶಿಲ್ಪಗಳು ಹೊಯ್ಸಳರ ಕಾಲದ್ದಾಗಿವೆ. ಶಾಸನಗಳ ಆಧಾರವೂ ಇದೆ. ಆದರೆ ದೇವಾಲಯಗಳ ಕಟ್ಟಡಗಳು ಬಹುಪಾಲು ಬದಲಾಗಿವೆ. ಪ್ರಾಚೀನ ಅರ್ಕೇಶ್ವರ ದೇವಾಲಯ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು ಬೇರೊಂದು ರೂಪ ಪಡೆದುಕೊಂಡಿದೆ. ಲಕ್ಷ್ಮೀಜನಾರ್ದನ ಮೂರ್ತಿಯ ಮುಖದಲ್ಲಿ ಮುಗ್ಧತೆಯ ಭಾವ ಕಾಣುವುದರಿಂದ 'ಮಕ್ಕಳ ಜನಾರ್ದನ' ನೆಂದು ಕರೆಯಲಾಗಿದೆ. ಪಕ್ಕದಲ್ಲಿ ಲಕ್ಷ್ಮಿ ಗುಡಿ ಇದೆ. ಜೈನ ತೀರ್ಥಂಕರರಲ್ಲಿ ೧೪ ನೆಯವರಾದ ಅನಂತನಾಥಸ್ವಾಮಿಯ ಗುಡಿಯು ಪೇಟೆ ಬೀದಿಯಲ್ಲಿದೆ.

ಮಂಡ್ಯ–ನಾಗಮಂಗಲ ರಸ್ತೆಯಲ್ಲಿ ಆರು ಕಿಲೋಮೀಟರ್ ದೂರದಲ್ಲಿರುವ ಜೀಗುಂಡಿ ಪಟ್ಟಣದ ಹೊಯ್ಸಳ ಕಾಲದ ಚಂದ್ರಮೌಳೇಶ್ವರ ಗುಡಿ ದ್ವಿಕೂಟವಾಗಿದ್ದು, ಪೂರ್ವ–ಪಶ್ಚಿಮಕ್ಕಾದಂತೆ ಎದುರುಬದರಾಗಿ ಒಂದೊಂದು ಗರ್ಭಗೃಹ ಹಾಗೂ ಸುಖನಾಸಿಗಳನ್ನು ಹೊಂದಿದ್ದು, ನಡುವೆ ಇರುವ ಒಂದೇ ನವರಂಗ ಅವರೆಡನ್ನೂ ಒಗ್ಗೂಡಿಸಿದೆ. ದಕ್ಷಿಣಕ್ಕಿರುವ ಪ್ರವೇಶದ್ವಾರಕ್ಕೆ ತೆರೆದ ಮಂಟಪವಿದೆ. ಪೂರ್ವಾಭಿಮುಖವಾಗಿರುವ ಪ್ರಧಾನ ಗರ್ಭಗೃಹಕ್ಕೆ ಸಪ್ತಶಾಖಾಲಂಕೃತ ಬಾಗಿಲುವಾಡವಿದ್ದು, ಒಳಗೆ ಲಿಂಗವಿದ್ದರೆ, ಇದಕ್ಕೆ ಎದುರಾಗಿ ಪಶ್ಚಿಮಾಭಿಮುಖವಾಗಿ–ರುವ ಗರ್ಭಗೃಹದಲ್ಲಿ ನಂದಿ ಇದ್ದು, ಪೂರ್ವದ ಗೋಡೆಗೆ ಜಾಲಂಧ್ರವಿದೆ. ನವರಂಗದ ನಡುವಣ ಛತ್ತು ಕಮಲಾಲಂಕೃತವಾಗಿದ್ದು, ದೇವಕೋಷ್ಠದಲ್ಲಿ ಗಣಪತಿಯ ಶಿಲ್ಪವಿದೆ. ಇಲ್ಲಿಗೆ ಸಮೀಪದ ಬಿ. ಹೊಸೂರು ಗ್ರಾಮದ ಹೊರವಲಯದಲ್ಲಿರುವ 'ಅಂಬೆಗಾಲುಕೃಷ್ಣ' ವಿಗ್ರಹ ಹೊಯ್ಸಳ ಶೈಲಿಯದಾಗಿದೆ.

**ನಡುಕೇರಿ ನರಸಿಂಹ ಮತ್ತು ದೇಶಿಸ್ ಸೌಟು :**

ಮಂಡ್ಯ–ಮೇಲುಕೋಟೆ ರಸ್ತೆಯಲ್ಲಿ ೧೫ ಕಿ.ಮೀ. ದೂರದಲ್ಲಿ ಸಿಗುವ ದುದ್ದದ ಲಕ್ಷ್ಮೀನರಸಿಂಹ ದೇವಾಲಯ ಹೊಯ್ಸಳರ ಕಾಲದ್ದಾಗಿದೆ. ಗರ್ಭಗೃಹ,

ಸುಖನಾಸಿ ಹಾಗೂ ನವರಂಗಗಳಿವೆ. ಇದನ್ನು ನಡುಕೇರಿ (ಊರಿನ ನಡುವೆ ಇರುವುದು) ನರಸಿಂಹ ಎಂದು ಕರೆಯಲಾಗುತ್ತದೆ. ಮೂಲಮೂರ್ತಿ ಲಲಿತಾಸೀನ ಚತುರ್ಭುಜಧಾರಿ ನರಸಿಂಹನ ಎಡತೊಡೆಯ ಮೇಲೆ ಲಕ್ಷ್ಮಿಯು ಆಸೀನಳಾಗಿದ್ದಾಳೆ.

ವಿಶೇಷವಾಗಿ ಈ ಗುಡಿಯ ಬಳಿ ಇರುವ ಚಿತ್ರಗಲ್ಲಿನಲ್ಲಿ ಮುದ್ದಾದ ಎಳೆಗರುವೊಂದು ಹಾಲನ್ನು ಕುಡಿಯಲು ಹಸುವಿನ ಕೆಚ್ಚಲಿಗೆ ಮುಸುಡಿ ಹಾಕಿರುವುದು ಮನಮೋಹಕವಾಗಿದೆ. (ದುಗ್ಧ ಎಂದರೆ ಹಾಲು; ಇದೇ ಕ್ರಮೇಣ ದುದ್ದ ಆಗಿರಲೂಬಹುದು) ಇದು ಇಲ್ಲಿನ ಹೈನುಗಾರಿಕೆಯನ್ನು ವ್ಯಕ್ತಪಡಿಸುತ್ತದೆ.

ಕೆರೆ ದಂಡೆಯಲ್ಲಿರುವ ಸೋಮೇಶ್ವರ ಗುಡಿ ಹಾಳು ಬಿದ್ದಿದ್ದು ಜೀರ್ಣೋದ್ಧಾರಗೊಂಡರೆ ಅದೊಂದು ಉತ್ತಮ ಹೊಯ್ಸಳ ಕೃತಿ ಆಗಬಲ್ಲದು. ಊರಾಚೆ ಇರುವ ಚೌಡೇಶ್ವರಿ ಮತ್ತಿತರ ಶಿಲ್ಪಗಳು (ಗಣಪತಿ, ಸಪ್ತಮಾತೃಕಾ) ಹೊಯ್ಸಳ ಶೈಲಿಯಲ್ಲಿವೆ. ದುದ್ದ-ಬಸರಾಳಿಗೆ ಸಂಬಂಧಿಸಿದಂತೆ ಒಂದು ಪಾಳೆಪಟ್ಟು ಕಥೆ ಕರುಣಾಜನಕವಾಗಿದೆ. ಇದು ಒಂದು ಹೆಣ್ಣಿಗಾಗಿ ನಡೆದ ಕಥೆಯಾಗಿದೆ. ಬಸುರಿಯಾಗಿದ್ದವಳು ಕೋಟೆಯ ಮೇಲಿಂದ ಬಿದ್ದು ಬಲಿದಾನಗೊಳ್ಳುತ್ತಾಳೆ. ಈ ಸಂಬಂಧ ಒಬ್ಬ ದಾಯಾದಿ ಪಾಳೇಗಾರ ಒಂದು ಕರಿಕಲ್ಲನ್ನು (ಹೊಯ್ಸಳ ಕೃತಿ) ತನ್ನ ಪ್ರತಿಷ್ಠೆಗಾಗಿ ದುದ್ದಕ್ಕೆ ಹೊತ್ತು ತಂದಿದ್ದಾನೆ.

ಹಿಂದೆ ಈ ಊರಿನಲ್ಲಿ ಬಳಕೆಯಾಗುತ್ತಿದ್ದ 'ದೇಶಿಸ್‌ಸೌಟು' ಎಂಬ ಜನಪದ ಸಂಪ್ರದಾಯ ಸಾಧನ ಜನರ ಒಗ್ಗಟ್ಟಿಗೆ ಸಾಕ್ಷಿಯಾಗಿದೆ. ಇಪ್ಪತ್ನಾಲ್ಕು ಹಳ್ಳಿಗಳ 'ಕಟ್ಟೆಮನೆ' ಯಾಗಿದ್ದ ದುದ್ದದ ಎಲ್ಲಾ ಹಳ್ಳಿಗಳಿಗೂ ಇದರ ಸಂಬಂಧವಿತ್ತು. ಹಬ್ಬ ಹರಿದಿನ, ಮದುವೆ-ಮುಂಜಿ, ಜಾತ್ರೆ ಉತ್ಸವಗಳಲ್ಲಿ ಈ ಸೌಟಿನಿಂದ 'ಪಡಿ' ತೆಗೆಯುತ್ತಿದ್ದ ವಿಷಯ ತಿಳಿದುಬರುತ್ತದೆ. ಸೌಟಿನ ಹಿಡಿಯ ಉದ್ದಕ್ಕೂ ವಿವಿಧ ಜನಾಂಗದ ಕಸುಬಿನ ಗುರುತುಗಳನ್ನು ಎರಕಹೊಯ್ಯಲಾಗಿದೆ. ಮೊದಲಿಗೆ ನಂದಿಯ ಎದುರಿಗೆ ನಾಗರಸೆಡೆ, ಅದರ ಕೆಳಗೆ ಲಿಂಗಾಕೃತಿಯ ಸೋಮೇಶ್ವರನಿಂದ ಆರಂಭವಾಗಿ, ಕುದುರೆ (ಆಳ್ವಿಕೆಯ ಗುರುತು), ತಕ್ಕಡಿ (ಶೆಟ್ಟರು) ನೇಗಿಲು (ಒಕ್ಕಲಿಗರು), ಜನಿವಾರ (ಬ್ರಾಹ್ಮಣರು) ಅಡಿಗಲ್ಲು (ಅಕ್ಕಸಾಲಿಗರು) ಪೀಠ (ಕಟ್ಟೆಮನೆ ಯಜಮಾನರು) ಕತ್ತರಿ (ಕುರುಬರು) ಬಲೆ (ಬೆಸ್ತರು) ಅಡಿಗಲ್ಲು (ಕಮ್ಮಾರರು) ಚಕ್ರ (ಕುಂಬಾರರು) ನಗಾರಿ (ಹೊಲೆಯರು)-ಹೀಗೆ ಇನ್ನೂ ಹಲವು ಕಸುಬುಗಳ ಎರಕಹೊಯ್ದ ಚಿಹ್ನೆಯ ಗುರುತುಗಳಿವೆ. ಅಗಲ ಬಾಯಿಯುಳ್ಳ ಉದ್ದನೆಯ ಕಂಚಿನ ಈ ಸೌಟಿನಿಂದ ತೆಗೆಯುತ್ತಿದ್ದ ದವಸಧಾನ್ಯ ಶೇಕರಣೆಗೊಂಡು ಧರ್ಮಕಾರ್ಯಕ್ಕೆ ಮತ್ತು ಕೆಲಸಮಯ ಬರಗಾಲದಂಥ ಆಪತ್ಕಾಲಕ್ಕೂ ನೆರವಾಗುತ್ತಿತ್ತು ಎಂದು ಹೇಳಲಾಗುತ್ತದೆ.

**ಕಲ್ಕುಣಿ :**

ಮಳವಳ್ಳಿ ತಾಲ್ಲೂಕಿಗೆ ಸಂಬಂಧಿಸಿದಂತೆ ಹೊಯ್ಸಳ ಕಲಾಕೃತಿಗಳು ಕಾಣಬರುವುದು ತೀರ ಕಡಿಮೆ. ಮಳವಳ್ಳಿಯಿಂದ ಪಶ್ಚಿಮಕ್ಕೆ ೧೪ ಕಿಲೋಮೀಟರ್ ದೂರದಲ್ಲಿರುವ ಕಲ್ಕುಣಿ ಗ್ರಾಮದ ಪ್ರವೇಶದಲ್ಲಿಯೇ ಸಿಗುವ ಬಸವೇಶ್ವರ ದೇವಾಲಯವನ್ನು ಹೊಯ್ಸಳರ ದೊರೆ ಮುಮ್ಮಡಿ ಬಲ್ಲಾಳ ಕ್ರಿ.ಶ. ೧೩೧೮ ರಲ್ಲಿ ನಿರ್ಮಿಸಿದ ವಿಷಯು ಅಲ್ಲಿಯ ದತ್ತಿ ಶಾಸನದಿಂದ ತಿಳಿಯುತ್ತದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹದಲ್ಲಿ ಲಿಂಗ, ಛತ್ತಲ್ಲಿ ಕಮಲ, ತೆರೆದ ಅಂತರಾಳದಲ್ಲಿ ಷಣ್ಮುಖನ ಕಿರುಶಿಲ್ಪ ಹಾಗೂ ನವರಂಗದ ದೇವಕೋಷ್ಠಗಳಲ್ಲಿ ಸುಮಾರು ಎರಡು ಅಡಿ ಎತ್ತರದ ಗಣಪ ಮತ್ತು ಮಹಿಷಮರ್ಧಿನಿ ಶಿಲ್ಪಗಳಿವೆ. ಪಾರ್ಶ್ವದ್ವಾರವನ್ನು ಹೊಂದಿರುವ ನವರಂಗದ ಛತ್ತು ಕಮಲಾಲಂಕೃತವಾಗಿದ್ದು, ನವರಂಗದ ಪೂರ್ವಗೋಡೆಗೆ ಜಾಲಂಧ್ರವಿದೆ. ಹೊರಭಿತ್ತಿಯು ನಿರಾಡಂಬರವಾಗಿದ್ದು ಅಲಂಕಾರಿಕ ಕಂಬಗಳಿವೆ. ಈ ದೇವಾಲಯದ ಉತ್ತರಭಾಗದ ಎರಡು ಕಿರುಗುಡಿಗಳಲ್ಲಿ, ಒಂದರಲ್ಲಿ ಸೂರ್ಯ ಮತ್ತೊಂದರಲ್ಲಿ ಕೇಶವ ಶಿಲ್ಪಗಳಿವೆ. ಶಾಸನೋಕ್ತಿಯಲ್ಲಿ ನಾಗೇಶ್ವರ ಎಂಬುದು ಜನರ ಬಾಯಲ್ಲಿ ಬಸವೇಶ್ವರ ಆಗಿದೆ.

ಇಲ್ಲಿನ ರಾವಳೇಶ್ವರ ಗುಡಿಯಲ್ಲಿ ರಾವಳೇಶ್ವರ ಮೂರ್ತಿ ಇದೆ. ಈ ರಾವಳೇಶ್ವರ ಮೂರ್ತಿಗಳ ಬಗ್ಗೆ ಮುಂದೆ ಅವಲೋಕಿಸೋಣ. ಗಂಗರ ಕಾಲದ ವೀರಗಲ್ಲುಗಳಿವೆ. ಈ ಊರಿಗೆ ಸಮೀಪದಲ್ಲಿರುವ 'ವಡ್ಡಗಲ್ಲು ರಂಗನಾಥಸ್ವಾಮಿ' ಗುಡಿಯು ಬೆಟ್ಟದ ಮೇಲಿದ್ದು ಪ್ರಶಾಂತ ವಾತಾವರಣವನ್ನು ಕಲ್ಪಿಸಿಕೊಟ್ಟಿದೆ. (ಗಣಿಗಾರಿಕೆ ನಡೆದು ಬೆಟ್ಟ ಹಾಳಾಗುತ್ತಿದೆ). ಚಿಕ್ಕಕಲ್ಕುಣಿ ರಸ್ತೆಯಲ್ಲಿರುವ ಈಶ್ವರ ಗುಡಿಯು ಸುಮಾರು ೧೬ನೆಯ ಶತಮಾನಕ್ಕೆ ಸೇರಿದ್ದಾಗಿದೆ.

**ಚಿಕ್ಕಬಾಗಿಲು ನಾರಾಯಣಸ್ವಾಮಿ :**

ಹಿಂದೆ ರಾಜಧಾನಿ ತಲಕಾಡಿಗೆ ಈ ಭಾಗಕ್ಕೆ ಇದ್ದ ಎರಡು ಹೆಬ್ಬಾಗಿಲುಗಳಲ್ಲಿ ಒಂದು ಚಿಕ್ಕಬಾಗಿಲು ಇದೇ ಎಂದೆ ಹೇಳುತ್ತಾರೆ. (ದೊಡ್ಡ ಬಾಗಿಲು ಗ್ರಾಮ ತಿರುಮಕೂಡಲು (ತಿ) ನರಸೀಪುರ ತಾಲ್ಲೂಕಿನಲ್ಲಿದೆ.) ಇಲ್ಲಿರುವ ನಾರಾಯಣಸ್ವಾಮಿ ಗುಡಿಯು ಚೋಳ ಶೈಲಿಯುಲ್ಲಿರುವ ಹೊಯ್ಸಳ ದೇವಾಲಯವಾಗಿದೆ. ಹೊಯ್ಸಳ ಮುಮ್ಮಡಿ ನರಸಿಂಹನ ಕಾಲದ ಕ್ರಿ.ಶ. ೧೨೮೯ರ ದತ್ತಿ ಬಿಟ್ಟ ಶಾಸನವಿದೆ. ಸರಳಬಾಗಿಲವಾಡವನ್ನು ಹೊಂದಿರುವ ಚೌಕಾಕಾರದ ಗರ್ಭಗುಡಿಯಲ್ಲಿರುವ ಚತುರ್ಭುಜಧಾರಿ ನಾರಾಯಣ ಮೂರ್ತಿ ಶಂಖ, ಚಕ್ರ

ಅಭಯ, ಗದಾಧಾರಿಯಾಗಿ ಬಹುಸುಂದರವಾಗಿದೆ. ನವರಂಗದ ಕಂಬಗಳು ಸರಳವಾಗಿದ್ದು, ನಡುವಣ ಛತ್ತಲ್ಲಿ ಕಮಲವಿದ್ದು ಭಾವಣಿ ಇಳಿಜಾರಾಗಿದೆ. ದೇವಾಲಯದ ಭಿತ್ತಿ ನಿರಾಂಡಬರವಾಗಿದ್ದು, ಗರ್ಭಗೃಹದ ಮೂರು ಪಾರ್ಶ್ವ ಹಾಗೂ ನವರಂಗದ ಎರಡು ಪಾರ್ಶ್ವಗಳಲ್ಲಿ ಕಿರುದೇವಕೋಷ್ಠಗಳಿದ್ದು, ಅಲಂಕಾರಿಕ ಕಂಬಗಳಿವೆ. ಈಗ ಗುಡಿಯ ಪ್ರಧಾನ ದ್ವಾರ ಕುಸಿದಿದ್ದು ಹಿಂದೆ ೧೭ ನೇ ಶತಮಾನದಲ್ಲಿ ಜೀರ್ಣೋದ್ಧಾರವಾಗಿದ್ದ ವಿಷಯ ಅಲ್ಲಿಯೇ ಇರುವ ಶಾಸನದಿಂದ ತಿಳಿದುಬರುತ್ತದೆ.

**ಸೋಮನಹಳ್ಳಿ ಕಾಶಿವಿಶ್ವನಾಥ :**

ಮಳವಳ್ಳಿಯಿಂದ ೨೭ ಕಿಲೋಮೀಟರ್ ದಕ್ಷಿಣದಲ್ಲಿದೆ. ಕಾವೇರಿ ಎಡದಂಡೆಯ ಮೇಲೆ ಕಾಶಿವಿಶ್ವನಾಥ ದೇವಾಲಯವಿದೆ. ಈ ಊರನ್ನು ಹಿಂದೆ 'ವಾಗೀಶ್ವರಮಂಗಲ' ಎಂದು ಕರೆಯಲಾಗಿತ್ತು. ಗರ್ಭಗೃಹದಲ್ಲಿ ಆರು ಅಡಿ ಎತ್ತರದ ಬೃಹತ್ ಲಿಂಗವಿದ್ದು, ಅಂತರಾಳದಲ್ಲಿ ನಂದಿ ಇದೆ. ನವರಂಗದ ನಡುವಣ ಭುವನೇಶ್ವರಿ ಅಷ್ಟಕೋನಾಕಾರದಲ್ಲಿದೆ. ಶಿವಲಿಂಗದ ಆಕೃತಿ ನೋಡಿದಾಗ ಚೋಳ ಶೈಲಿ ಎನಿಸುತ್ತದೆ. ಆದರೂ ದೇವಾಲಯದ ತಳಪಾದಿ ಕಲ್ಲಿನ ಮೇಲಿರುವ ಶಾಸನಗಳು, ಹೊಯ್ಸಳ ವಿಷ್ಣುವರ್ಧನ ಹಾಗೂ ಇಮ್ಮಡಿ ಬಲ್ಲಾಳನ ಕಾಲಕ್ಕೆ ಸೇರಿದ್ದಾಗಿವೆ. ತಲಕಾಡು ಇಲ್ಲಿಗೆ ಸಮೀಪವಾಗಿದ್ದು ಗಂಗ, ಚೋಳರ ರಾಜಧಾನಿಯಾಗಿದ್ದು, ನಂತರದಲ್ಲಿ ಹೊಯ್ಸಳರ ಅಧೀನಕ್ಕೆ ಬಂದದ್ದು ಈ ದೇವಾಲಯದ ಮೇಲೆ ಪರಿಣಾಮಬೀರಿದೆ ಎಂಬುದರಲ್ಲಿ ಸಂಶಯವಿಲ್ಲ. ಇಲ್ಲಿಗೆ ಮುಡುಕುತೊರೆ ಕ್ಷೇತ್ರವೂ ಹತ್ತಿರದಲ್ಲಿದೆ.

**ಅಂತರವಳ್ಳಿಯ ಅಂತರ :**

ಮಳವಳ್ಳಿಗೆ ೧೫ ಕಿಲೋಮೀಟರ್ ದೂರದಲ್ಲಿ ಕತ್ತೆ ಮಾರ್ಗದಲ್ಲಿರುವ ಅಂತರವಳ್ಳಿಯಲ್ಲಿ ಚೋಳರ ಕಾಲದ ಸೋಮೇಶ್ವರ ಗುಡಿ ಇದೆ. ಇದು ಮುಖ್ಯವಾಗಿ ಗರ್ಭಗೃಹ ಹಾಗೂ ಆಯತಾಕಾರದ ಸಭಾಮಂಟಪಗಳನ್ನು ಹೊಂದಿದೆ. ಇಲ್ಲಿಯೇ ಹೊಯ್ಸಳ ಇಮ್ಮಡಿಬಲ್ಲಾಳನ ಶಾಸನಗಳಿರುವುದರಿಂದ ಹಲವು ಅಭಿವೃದ್ಧಿ ಕೆಲಸಗಳು ಆಗಿವೆ. ಉಪ್ಪರಿಗೆ ಬಸವೇಶ್ವರ ಸೇರಿದಂತೆ ಇನ್ನೂ ಹಲವಾರು ಪ್ರಾಚೀನ ಗುಡಿಗಳಿವೆ. ಬೆಟ್ಟದ ಮೇಲೆ ಶಂಭೂಲಿಂಗೇಶ್ವರ ಗುಡಿಯಲ್ಲಿ ಮರುಳು ಸಿದ್ದೇಶ್ವರ ಮತ್ತು ರಸಸಿದ್ದೇಶ್ವರ ವಿಗ್ರಹಗಳಿವೆ. ಬೆಟ್ಟದ ಮೇಲಿರುವ ಕೊಳದ ನೀರಿನ ರುಚಿಗೆ 'ಮಜ್ಜಿಗೆ ಕೊಳ' ಎನ್ನುತ್ತಾರೆ. ಇದೇ ನೀರಿನಿಂದ ಪ್ರಸಾದ (ಊಟ)ಕ್ಕಾಗಿ ಮಾಡುವ 'ಗೊಜ್ಜುಅನ್ನ' ಬಲುರುಚಿಯಾಗಿರುತ್ತದೆ. ಹಿಂದೆ ಇದು ಅನ್ನಸತ್ರವಾಗಿತ್ತು ಎಂಬುದಕ್ಕೆ

ಶಾಸನದಲ್ಲಿ ಈ ಊರನ್ನು 'ಅನ್ನದಾನಪಳ್ಳಿ' ಎಂದು ಕರೆಯಲಾಗಿದೆ. ಈ ಬೆಟ್ಟದ ಮೇಲೆ ನಿಂತು ಸುತ್ತಲೂ ನೋಡಿದಾಗ ಯಾವ್ಯಾವ ಸ್ಥಳ ಎಷ್ಟೆಷ್ಟು ಅಂತರ ಎಂಬುದು ತಿಳಿಯುತ್ತದೆ. ಹಿಂದೆ ಈ ಕತ್ತೆಮಾರ್ಗ ಶ್ರೀರಂಗಪಟ್ಟಣ–ಕನಕಪುರಕ್ಕೆ ಹೆದ್ದಾರಿ ಇದ್ದಂತೆ. ಹೀಗಾಗಿ ಜನ–ಜಾನುವಾರು ಸಂಚಾರವೂ ಹೆಚ್ಚಾಗಿತ್ತು. ಆಗ ಇದೊಂದು ಕೂಡಲುಸ್ಥಳವಾಗಿತ್ತು.

**ಶಾರ್ಙ್ಗಪಾಣಿ ಮತ್ತು ಗಂಗಾಧರೇಶ್ವರ :**

ಮಳವಳ್ಳಿಯ ದೇವಾಲಯಗಳು ಮೂಲತಃ ಗಂಗ–ಚೋಳ ಕಾಲದ್ದಾದರೂ ಹೊಯ್ಸಳರು ಜೀರ್ಣೋದ್ಧಾರ ನಡೆಸಿದ್ದಾರೆ. ಮಳವಳ್ಳಿ ಹೊಯ್ಸಳರ ಕಾಲದಲ್ಲಿ ಅಗ್ರಹಾರವಾಗಿತ್ತು ಎಂದು ತಿಳಿದುಬರುತ್ತದೆ. ಮೈಸೂರು ಅರಸರ ಕಾಲಕ್ಕೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಶ್ರೀರಂಗಪಟ್ಟಣದ ಹಲವಾರು ವಿಷಯಗಳಿಗೆ ಇಲ್ಲಿ ಸಿಕ್ಕಿರುವ ಶಾಸನಗಳೇ ಆಧಾರವಾಗಿವೆ. ಟಿಪ್ಪು ಮತ್ತು ಬ್ರಿಟಿಷರ ಕದನಕ್ಕೆ ಕಠಿಣವಾದ ಭೂಮಿಕೆಯೂ ಆಗಿತ್ತು. ಈಗಲೂ ಪಟ್ಟಣವನ್ನು ಕೋಟೆ ಮತ್ತು ಪೇಟೆ ಎಂದು ವಿಭಾಗಿಸುವುದುಂಟು. ಕೋಟೆಯ ಕಂದಕ ಮತ್ತು ಸುತ್ತಲ ಕೆರೆಗಳಿಗೆ ಮಳವಳ್ಳಿ ಪ್ರಸಿದ್ಧಿ ಪಡೆದಿತ್ತು.

ಕೋಟೆಯೊಳಗೆ ಊರಿನ ನಡುವೆ ಇರುವ ಶಾರ್ಙ್ಗಪಾಣಿ ದೇವಾಲಯ ಪೂರ್ವಾಭಿಮುಖವಾಗಿದ್ದು ಗರ್ಭಗುಡಿ ಮತ್ತು ಸುಖನಾಸಿ ಹೊಯ್ಸಳ ವಾಸ್ತುಶೈಲಿಯಿಂದಲೇ ಕೂಡಿದೆ. ನವರಂಗ, ಮುಖಮಂಟಪ ಮತ್ತು ಈಗ ಉಳಿದಿರುವ ಮಹಾದ್ವಾರ ನಂತರದ ರಚನೆಯಾಗಿದೆ. ಗರ್ಭಗುಡಿಯಲ್ಲಿರುವ ಶಾರ್ಙ್ಗಪಾಣಿ ಬಹು ಅಪರೂಪದ ದೇವತಾ ಶಿಲ್ಪವಾಗಿದೆ. ಈ ದೇವರನ್ನು ಸಾರಂಗಪಾಣಿ ಎಂತಲೂ ಕರೆಯುತ್ತಾರೆ. ಶಾರ್ಙ್ಗವೆಂಬ ಬಿಲ್ಲನ್ನು ಧರಿಸಿದವನು ವಿಷ್ಣು ಎಂಬ ಅರ್ಥವಿದೆ. (ಸಾರಂಗಧರ: ಜಿಂಕೆಯನ್ನು ಧರಿಸಿದವನು; ಚಂದ್ರ, ಶಿವ ಎಂಬ ಅರ್ಥವಿದೆ.) ಚತುರ್ಭುಜಧಾರಿಯಾಗಿರುವ ಈ ಶಿಲ್ಪದ ಬಲದ ಕೈಯಲ್ಲಿ ಬಾಣವಿದ್ದರೆ ಎಡದ ಕೈಯಲ್ಲಿ ಬಿಲ್ಲು ಇದೆ. ಇನ್ನುಳಿದಂತೆ ಶಂಖ, ಚಕ್ರಗಳಿವೆ. ನವರಂಗದ ಕಂಬಗಳು ಮೈಸೂರು ಅರಸರ ಅಥವಾ ಪಾಳೇಗಾರರ ಕಾಲದ್ದಾಗಿವೆ. ದ್ವಾರದಲ್ಲಿ ಜಯವಿಜಯರಿದ್ದಾರೆ. ದೇವಾಲಯದಲ್ಲಿರುವ ಉತ್ಸವಮೂರ್ತಿಗಳು ಆಕರ್ಷಕವಾಗಿವೆ. ಪ್ರಧಾನ ದೇವರೊಂದಿಗೆ ಅಕ್ಕಪಕ್ಕದಲ್ಲಿ ಭೂದೇವಿ–ನೀಳಾದೇವಿ ಮತ್ತು ಮುಂದಾಕ್ಕಾದಂತೆ ಶ್ರೀದೇವಿ (ಗಜಲಕ್ಷ್ಮಿ) ಮೂರ್ತಿಗಳಿವೆ. ಮಾರೇಹಳ್ಳಿಯ ಸುಪ್ರಸಿದ್ಧ ಲಕ್ಷ್ಮೀನರಸಿಂಹ ದೇವಾಲಯದ ಉತ್ಸವಮೂರ್ತಿಗಳೂ ಸಹ ಇಲ್ಲಿಯೇ ಇದ್ದು, ಉತ್ಸವದ ದಿನಗಳಲ್ಲಿ ಮಾತ್ರ

ಮಾರೇಹಳ್ಳಿಗೆ ತೆರಳುತ್ತವೆ. ದೇವಾಲಯದ ಬಲಭಾಗದಲ್ಲಿ ಡೋಲೋತ್ಸವ ಮಂಟಪವಿದೆ. ವಿಶೇಷವಾಗಿ ನವರಾತ್ರಿಯ ಸಂದರ್ಭದಲ್ಲಿ ವಿವಿಧ ಪೂಜಾ ಕೈಂಕರ್ಯಗಳಿಗೆ ಇದನ್ನು ಬಳಸಿಕೊಳ್ಳಲಾಗುತ್ತದೆ. ಆಧ್ಯಾತ್ಮದೊಂದಿಗೆ ಮನೋರಂಜಕವಾಗಿಯೂ ಇರುತ್ತದೆ.

ಶಾರ್ಙ್ಗಪಾಣಿ ದೇವಾಲಯದ ಈಶಾನ್ಯ ದಿಕ್ಕಿನಲ್ಲಿರುವ ಗಂಗಾಧರೇಶ್ವರ ದೇವಾಲಯ ಪೂರ್ವಾಭಿಮುಖವಾಗಿದ್ದು ಅಗ್ರಹಾರದ ರಚನೆಯಂತೆ ಸನಿಹದಲ್ಲಿಯೇ ವಿಶಾಲವಾದ ಜಲಾಶಯ (ಕೆರೆ)ವಿದೆ. ದೇವಾಲಯ ಗರ್ಭಗುಡಿ, ಸುಖನಾಸಿ, ನವರಂಗ ಮುಖಮಂಟಪಗಳಿಂದ ಕೂಡಿದ್ದು; ನವರಂಗ ಮತ್ತು ಮುಖಮಂಟಪದ ಕಂಬಗಳಲ್ಲಿ ಉಬ್ಬುಶಿಲ್ಪಗಳ ಕೆತ್ತನೆಗಳಿವೆ. ಲಿಂಗಕ್ಕೆ ಹಾಲು ಎರೆಯುತ್ತಿರುವ ಹಸು, ಓಡುವ ಜಿಂಕೆ, ಆನೆ, ಶಾರ್ಧೂಲ, ಬಸವ, ನವಿಲು, ಮೀನು, ಹಾವು ಮತ್ತು ಕೋತಿ ಆಟ, ಹುಲಿ ಮೇಲೆ ಸವಾರಿ, ಜಿಂಕೆ ಮೇಲೆ ಸವಾರಿ ಮುಂತಾದ ಕೆತ್ತನೆಗಳನ್ನು ನೋಡಿದಾಗ ಈ ಪ್ರದೇಶ ಕಾಡು ಅಥವಾ ಮೆಳೆಯಿಂದ ಕೂಡಿದ್ದಾಗಿತ್ತು ಎಂದು ಸೂಚಿಸುತ್ತದೆ. 'ಮೆಳೆ' ಯಿಂದಾಗಿ ಮಳವಳ್ಳಿ ಎಂದಾಯಿತು ಎನ್ನುವುದಿದೆ. ಸುಖಾಸೀನಸುಂದರಿ, ಧ್ಯಾನಾಸಕ್ತ ಮೂರ್ತಿ ಇನ್ನಿತರ ಉಬ್ಬುಶಿಲ್ಪಗಳು ಕಾಣಬರುತ್ತವೆ. ಮೂಲಮೂರ್ತಿ ಗಂಗಾಧರೇಶ್ವರ (ಲಿಂಗ) ಭಾರೀಗಾತ್ರವಾಗಿದ್ದು ಚೋಳ ಶೈಲಿಯಲ್ಲಿದೆ. ನವರಂಗದಲ್ಲಿರುವ ನಂದಿ ಸಾಲಿಗ್ರಾಮ ಶಿಲೆಯಿಂದ ರಚನೆಗೊಂಡು ಬಹು ಅತ್ಯಾಕರ್ಷಕವಾಗಿದೆ. ಇಲ್ಲಿರುವ ಒಂದು ಗಣಪತಿ ವಿಗ್ರಹ ಆಕಾರದಲ್ಲಿ ಚಿಕ್ಕದಾದರೂ ಹಂಪಿಯ ಕಡ್ಲೆಕಾಳು ಗಣಪತಿಯನ್ನು ಹೋಲುತ್ತದೆ. ಇಲ್ಲಿರುವ ಉತ್ಸವಮೂರ್ತಿಗಳು ಸುಮನೋಹರವಾಗಿವೆ. ನವರಂಗದ ದ್ವಾರದಲ್ಲಿ ಶೈವ ದ್ವಾರಪಾಲಕರಿದ್ದಾರೆ.

ಗುಡಿಯ ಬಲಭಾಗಕ್ಕೆ ಪಾರ್ವತಿಗುಡಿ ಇದೆ. ಇದೂ ಸಹ ಗರ್ಭಗುಡಿ, ಸುಖನಾಸಿ, ನವರಂಗಗಳಿಂದ ಕೂಡಿದೆ. ಇಲ್ಲಿಯು ಕಂಭಗಳಲ್ಲಿಯೂ ಉಬ್ಬುಶಿಲ್ಪಗಳಿವೆ.

ದೇವಾಲಯದ ಆವರಣದಲ್ಲಿರುವ ಚಂಡಿಕೇಶ್ವರ ವಿಗ್ರಹಕ್ಕೆ ಎಳೆಯ ಮಕ್ಕಳು ಚಂಡಿಹಿಡಿದರೆ ವಿಗ್ರಹವನ್ನು ಪೂಜಿಸಿ ಅದರ ಮೇಲೆ ಕಡ್ಲೆಪುರಿ ಎರಚಿದರೆ ಮಕ್ಕಳು ಚಂಡಿ ಬಿಡುವರೆಂದು ನಂಬಿಕೆಯಿದೆ.

ಇಡೀ ದೇವಾಲಯದ ಸಮುಚ್ಚಯದಲ್ಲಿ ಹೊಯ್ಸಳ ರಚನೆ ಅಷ್ಟಾಗಿ ಕಾಣಬರುವುದಿಲ್ಲ. ಮೈಸೂರು ಅರಸರ ಕಾಲದಲ್ಲಿ ಜೀರ್ಣೋದ್ಧಾರಗೊಂಡ ಅಂಶಗಳು ಕಾಣಬರುತ್ತವೆ. ಕ್ರಿ.ಶ. ೧೬೭೮ರಲ್ಲಿ ಮೈಸೂರು ಅರಸು ದೇವರಾಜ

ಒಡೆಯರ್‌ರವರು ಮಳವಳ್ಳಿ ಸಮೀಪದ ಸಸಿಯಾಲಪುರ ಎಂಬ ಗ್ರಾಮವನ್ನು ಈ ದೇವಾಲಯಕ್ಕೆ ದತ್ತಿಬಿಟ್ಟಿರುವ ಶಾಸನ ಗುಡಿಯ ಮುಂಭಾಗದಲ್ಲಿದೆ.

ಕೋಟೆಯೊಳಗೆ ಉಳಿದಂತೆ ಕಾಳಿಕಾಂಬ, ಉತ್ತರ ಮತ್ತು ದಕ್ಷಿಣ ದ್ವಾರದಲ್ಲಿರುವ ಕೋಟೆ ಆಂಜನೇಯ ಗುಡಿಗಳು, ಕೋಟೆ ವಿಘ್ನೇಶ್ವರ ಗುಡಿಗಳು, ವಿಶೇಷವಾಗಿ ಮೂಲೆ ವಿಘ್ನೇಶ್ವರ, ವೀರಭದ್ರ, ಬಿಸಿಲುಮಾರಮ್ಮ, ಮೂಲಮಂತೇಸ್ವಾಮಿ ಮಠ ಇತ್ಯಾದಿ ಗುಡಿಗಳಿವೆ.

ಕೋಟೆಯ ಹೊರಭಾಗದಲ್ಲಿ ಶಿಂಗಾರಕೊಳ ಅಥವಾ ಸಿಹಿನೀರಿನ ಕೊಳದ (ಈಗ ಗಬ್ಬೆದ್ದು ಮುಚ್ಚಿಹೋಗುವ ಹಂತದಲ್ಲಿದೆ) ಬಳಿ ಅರ್ಕೇಶ್ವರ ದೇವಾಲಯವಿದೆ. ಇನ್ನು ಗಂಗಾಧರೇಶ್ವರ ದೇವಾಲಯದ ಕಡೆಗಿರುವ ಒಳಗೆರೆಯಲ್ಲಿರುವ ಪಟ್ಟಲದಮ್ಮ ಅಥವಾ ಒಳಗೆರೆ ಹುಚ್ಚವ್ವ ಎಂಬ ಜನಪದ ದೇವರ ಸಿಡಿಹಬ್ಬ ಬಹು ಪ್ರಸಿದ್ಧವಾಗಿದೆ. ಇದು ಜನವರಿ–ಫೆಬ್ರವರಿ ನಡುವಿನಲ್ಲಿ (ಪುಷ್ಯಮಾಸ) ಜರುಗುತ್ತದೆ.

**ಶಿವಸಮುದ್ರ :**

ಇನ್ನು ಮಳವಳ್ಳಿ–ಕೊಳ್ಳೇಗಾಲ ತಾಲ್ಲೂಕುಗಳ ಗಡಿಯಂಚಿನಲ್ಲಿರುವ ಶಿವಸಮುದ್ರದ ಕಾವೇರಿ ದ್ವೀಪದಲ್ಲಿರುವ ಸೋಮೇಶ್ವರ ಮತ್ತು ಮಧ್ಯರಂಗ ಅಥವಾ ಜಗನ್ಮೋಹನರಂಗ ದೇವಾಲಯಗಳು ಪ್ರಾಚೀನವಾಗಿವೆ. ಗರ್ಭಗುಡಿಯಲ್ಲಿರುವ ಮೂರ್ತಿ ಚಿಕ್ಕದಾದರೂ ಅದರ ಮುಖಮಂಡಲದ ಕಾಂತಿಯಿಂದಾಗಿ 'ಜಗನ್ಮೋಹನ' ಎಂಬ ಹೆಸರು ಪ್ರಾಪ್ತವಾಗಿದೆ. ತಲಕಾಡಿಗೆ ಸಮೀಪವಾಗಿರುವುದರಿಂದ ಗಂಗ–ಚೋಳರ ನಿರ್ಮಿತ ಎಂದಾದರೂ, ಮುಂದಿನ ಅದರ ವಾಸ್ತು ರಚನೆಗಳು ಹೊಯ್ಸಳ ಪೂರ್ವ ಮತ್ತು ನಂತರದ ವಿಜಯನಗರ, ಮೈಸೂರು ಅರಸರ ಕಾಲದ ರಚನೆಗಳು ಸೇರ್ಪಡೆಯಾಗಿವೆ.

## ವಿಜಯನಗರ ಕಾಲ

ಮೇಲುಕೋಟೆ, ಕೆರೆತೊಣ್ಣೂರು, ಶ್ರೀರಂಗಪಟ್ಟಣ, ಕನ್ನಂಬಾಡಿ ಹೀಗೆ ಪಾಂಡವಪುರ ಮತ್ತು ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿರುವ ಹೊಯ್ಸಳ ದೇವಾಲಯಗಳನ್ನು ಅಧ್ಯಯನ ಮಾಡಲು ಹೊರಟರೆ ಜತೆಗೆ ವಿಜಯನಗರ ಶೈಲಿಯ ತಿಳಿವಳಿಕೆಯೂ ಇರಬೇಕಾಗುತ್ತದೆ. ಈ ಭಾಗದ ಹಲವು ಹೊಯ್ಸಳ ದೇವಾಲಯಗಳಿಗೆ ವಿಜಯನಗರ ಮತ್ತು ಮೈಸೂರು ಅರಸರ ಕಾಲದ ಹಲವು ಜೋಡಣೆ ಕೆಲಸಗಳು ಆಗಿವೆ. ಕೆಲವೆಡೆ ಮಾತ್ರ ಪೂರ್ಣಪ್ರಮಾಣದ ವಿಜಯನಗರ ಕಾಲದ ದೇವಾಲಯಗಳು ಕಾಣಸಿಗುತ್ತವೆ. ಮೈಸೂರು ಅರಸರ ರಚನೆಗಳು

ವಿಜಯನಗರದಷ್ಟು ಭವ್ಯತೆಯಿಲ್ಲವಾದರೂ ಅದರ ಅನುಕರಣೆ ಕಾಣುತ್ತದೆ. **(ಮುಂದೆ ಬರುವ ಹೊಯ್ಸಳ ಮತ್ತಿತರ ದೇವಾಲಯಗಳನ್ನು ಆಸಕ್ತ ಸಂದರ್ಶಕರ ಅನುಕೂಲಕ್ಕಾಗಿ ಸಮೀಪ ಸ್ಥಳಗಳಿಗೆ ಹೊಂದಿಸಿ ಕೊಳ್ಳಲಾಗಿದೆ.)**

ವಿಜಯನಗರ ಶೈಲಿಯ ದೇವಾಲಯಗಳು ಕಂಬಗಳಿಂದಲೇ ಸೌಂದರ್ಯದ ನಿಲುವು ಮತ್ತು ಸಂಕೀರ್ಣತೆಯನ್ನು ಪಡೆದಿರುತ್ತವೆ. ಹಲವು ಕಂಬಗಳು ಮೂರ್ತಿ ಶಿಲ್ಪಗಳಿಂದ ಕೂಡಿರುವುದಲ್ಲದೆ ಕಲಾತ್ಮಕ ಕೆತ್ತನೆಗಳಿಂದ ಕಂಗೊಳಿಸುತ್ತವೆ. ಸಿಂಹಮುಖದ 'ಯಾಳಿ' ಕಂಬಗಳು ವಿಜಯನಗರ ಶೈಲಿಯ ಭವ್ಯತೆಯನ್ನು ಎತ್ತಿ ಹಿಡಿದಿವೆ. ದೇವಾಲಯದ ಮತ್ತೊಂದು ಸಂಕೀರ್ಣ ಭಾಗವೆನಿಸಿದ ಕಲ್ಯಾಣಮಂಟಪ ಅಥವಾ ವಸಂತಮಂಟಪವು ಸೌಂದರ್ಯದ ಅಭಿವ್ಯಕ್ತಿಗೆ ಸಾಕ್ಷಿಯಾಗಿರುತ್ತದೆ. ಗೋಪುರದ ನಿರ್ಮಾಣವನ್ನು ಉತ್ತುಂಗಕ್ಕೆ ಏರಿಸುವುದರಲ್ಲಿ ವಿಜಯನಗರ ಶೈಲಿಯ ಘನತೆ ಇಮ್ಮಡಿಸುವಂತಾಯಿತು. ಇಂಥ ಗೋಪುರಗಳು ರಾಯಗೋಪುರಗಳೆಂದು ಪ್ರಸಿದ್ಧಿ ಪಡೆದವು. ಗೋಪುರವು ಶಿಲ್ಪಕಲೆಗಳಿಂದ ರಂಜಿಸುತ್ತವೆ. ಗೋಪುರದ ಮಹಾದ್ವಾರ ಮಧ್ಯದಲ್ಲಿ ಪತ್ರತೋರಣ ಮತ್ತು ಹೊಸ್ತಿಲಲ್ಲಿ ವೃಶ್ಚಿಕ ಚಿಹ್ನೆ ಕಂಡುಬರುತ್ತದೆ. ದೇವಾಲಯದ ಒಳಾವರಣದಲ್ಲಿ ಕೆಲವು ಪರಿವಾರ ಗುಡಿಗಳು, ಕಂಬಗಳಿಂದ ಶೋಭಿಸುವ ಪಡಸಾಲೆ, ಹಜಾರ, ರಂಗಮಂಟಪಗಳು ವಿಜಯನಗರ ಮಾದರಿಗೆ ಇಂಬುಕೊಡುತ್ತವೆ. ಒಟ್ಟಿನಲ್ಲಿ ವಿಜಯನಗರ ವಾಸ್ತುಶಿಲ್ಪವು ಚಾಳುಕ್ಯ, ಹೊಯ್ಸಳ ಮೇಲಾಗಿ ದ್ರಾವಿಡ ಶೈಲಿಯ ಅನುಪಮ ಸೌಂದರ್ಯವನ್ನು ಒಳಗೊಂಡಿದೆ. ದಕ್ಷಿಣ ಭಾರತದ ಬಹುತೇಕ ಬದುಕುಳಿದ ದೇವಾಲಯಗಳ ಗೋಪುರಗಳು ವಿಜಯನಗರ ಮಹತ್ವಾಕಾಂಕ್ಷೆಯ ಹೆಗ್ಗುರುತಾಗಿವೆ. ಇವು ಹಿಂದು ಸಂಸ್ಕೃತಿಯ ಪ್ರತಿಪಾದನೆಯಾದರೂ; ಹಲವು ಕಟ್ಟಡಗಳು ಇಂಡೊ–ಮುಸ್ಲಿಂ ಶೈಲಿಯ ಸಮ್ಮಿಶ್ರಣದಿಂದ ರಚನೆಗೊಂಡಿವೆ.

## ಮೇಲುಕೋಟೆ ಪರಿಸರ ಮತ್ತು ದೇವಾಲಯಗಳು

ಇದೊಂದು ಆಲಯಾಶ್ರಿತ ಗ್ರಾಮ. ಈ ಸ್ಥಳಕ್ಕೆ ಪುರಾಣದಲ್ಲಿ ನಾರಾಯಾಣಾದ್ರಿ, ವೇದಾದ್ರಿ, ಯಾದವಾದ್ರಿ ಎಂದೂ, ಚಾರಿತ್ರಿಕವಾಗಿ ಯತಿ ರಾಮಾನುಜರ ಆಗಮನದಿಂದ ಯತಿಶೈಲ ಎಂದೂ ಹಲವು ಹೆಸರುಗಳುಂಟು. ವಿಜಯನಗರ ಕಾಲದಲ್ಲಿ ಕಲ್ಲಿನ ಕೋಟೆ ಮತ್ತು ಹೆಬ್ಬಾಗಿಲನ್ನು ಕಟ್ಟುವ ಪ್ರಯತ್ನವೂ ನಡೆದಿದೆ. ಕಟ್ಟಿದ ಕೋಟೆಯಿಂದಾಗಿ ಮೇಲುಕೋಟೆ ಆಗಿಲ್ಲ. ಇದಕ್ಕೆ ಮುಂಚೆಯೇ ಹೊಯ್ಸಳರ ಕಾಲದಲ್ಲಿಯೇ ಕ್ರಿ.ಶ. ೧೨೯೮ರ ಅವಧಿಗೆ ಸೇರಿದ ಶಾಸನಗಳಲ್ಲಿ 'ಮೇಲುಕೋಟೆ' ಎಂಬ ಹೆಸರನ್ನು ಉಲ್ಲೇಖಿಸಿದೆ. ಗಿರಿಯ ನೆತ್ತಿಯ ಮೇಲೆ ನಿಂತು

ಸುತ್ತ ಕಣ್ಣು ಹಾಯಿಸಿದಾಗ ಪ್ರಾಕೃತಿಕವಾಗಿ ಹಬ್ಬಿರುವ ಬೆಟ್ಟದ ಸಾಲುಗಳೇ ಮೇಲುಕೋಟೆ ಎನಿಸಿದೆ. ತಮಿಳಿನಲ್ಲಿ ಮೆರ್ಕುಕೋಟೆ ಅಂದರೆ ಪಶ್ಚಿಮ ಕೋಟೆ ಎಂದು ಹೇಳಲಾಗಿದೆ. ಇಲ್ಲಿಯ ಕೆರೆಕಟ್ಟೆ ಕಲ್ಯಾಣಿಗಳು, ಮಂಟಪಗಳು, ಸೋಪಾನಗಳು, ದೇವಾಲಯಗಳು ಈ ನೆಲದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿವೆ. ಇಲ್ಲಿ ಆಸ್ತಿಕ, ನಾಸ್ತಿಕ ಎಂಬ ಪ್ರಶ್ನೆಯಿಲ್ಲದೆ ಕಣ್ಣಿಗೆ ಕಾಣುವ ಸೌಂದರ್ಯವನ್ನು ಅನುಭವಿಸಬೇಕು. ಪ್ರಾಗ್ಯೆತಿಹಾಸಿಕ ಕಾಲಕ್ಕೆ ಸೇರಿದಂತೆ ಇಲ್ಲಿಯ ಹೊಗರ ಕಲ್ಲಮ್ಮ ಗುಡಿ ಬಳಿಯಿರುವ ಮಾನವನ ರೇಖಾ ಚಿತ್ರ, ನರಸಿಂಹಸ್ವಾಮಿ ಬೆಟ್ಟದಲ್ಲಿರುವ ಪಾಂಡವರ ಗವಿಗಳು, ಬಂಡೆಮೇಲಿನ ತಟ್ಟೆಗಳು, ಇಲ್ಲಿ ಸಿಕ್ಕಿರುವ ಮಡಕೆ ಕುಡುಕೆಗಳು ಪ್ರಾಚೀನ ಮಾನವನೆಲೆಯನ್ನು ತಿಳಿಸುತ್ತವೆ.

ಚೋಳ ರಾಜ್ಯದಿಂದ ರಾಮಾನುಜಾಚಾರ್ಯರು ಇಲ್ಲಿಗೆ ಆಗಮಿಸಿ ಇಲ್ಲಿಯೇ ಹಲವು ವರ್ಷಗಳ ಕಾಲ ತಂಗಿದ್ದು ಅವರ ಧಾರ್ಮಿಕ ಕಾರ್ಯ ವೈಖರಿ ಹಾಗೂ ಎಲ್ಲ ವರ್ಗದ ಜನರನ್ನು ಪ್ರೀತಿ ವಾತ್ಸಲ್ಯದಿಂದ ನಡೆಸಿಕೊಳ್ಳುತ್ತಿದ್ದ ಕಾರಣ ನಮ್ಮ ಜನಪದರು ಗುರುಭಕ್ತಿಯಿಂದ ಮೇಲುಕೋಟೆಯನ್ನು 'ದೊಡ್ಡಗುರುಗಳ ಹಳ್ಳಿ' ಎಂದು ಕರೆದುಕೊಂಡಿದ್ದಾರೆ. ಹೊಯ್ಸಳ ಚಕ್ರವರ್ತಿ ವಿಷ್ಣುವರ್ಧನನ ನೆರವಿನಿಂದ ಇಲ್ಲಿಯ ಚಲುವನಾರಾಯಣಸ್ವಾಮಿ ಮತ್ತಿತರ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿ, ಜಲಾಶಯಗಳನ್ನು ನಿರ್ಮಿಸಿ ಡೆಲ್ಲಿಯಿಂದ ಉತ್ಸವ ಮೂರ್ತಿ ಶ್ರೀರಾಮಪ್ರಿಯನನ್ನು ಮರಳಿ ತರಲು ನೆರವಾದ ಹೊಲೆಯರನ್ನು 'ಹರಿಜನ' ಅಂದರೆ ಹರಿಗೆ ಪ್ರಿಯರಾದವರು ಎಂಬ ಅರ್ಥದಲ್ಲಿ ಕರೆದವರಲ್ಲಿ ಇವರೇ ಮೊದಲಿಗರು ಎಂದು ಹೇಳಲಾಗಿದೆ. ಇಲ್ಲಿ ಶ್ರೀವೈಷ್ಣವ ಧಾರ್ಮಿಕ ಕಾರ್ಯವನ್ನು ಮುಗಿಸಿ ಶ್ರೀರಂಗಕ್ಕೆ ತೆರಳುವ ಮುನ್ನ ತಮ್ಮ ಪ್ರತಿಕೃತಿಯೊಂದನ್ನು ನಿರ್ಮಿಸಿ, ಪ್ರತಿಷ್ಠಾಪಿಸಿ, ತಮ್ಮ ಐವತ್ತಿಬ್ಬರು (ಐವತ್ತೆರಡು) ಶಿಷ್ಯರಿಗೆ ದೇವಾಲಯ, ರಾಮಾನುಜ (ಯತಿರಾಜ) ಮಠ ಹಾಗೂ ಏಳು ವಿಭಾಗಗಳ ಆಡಳಿತ ವ್ಯವಸ್ಥೆಯನ್ನು ವಹಿಸಿ ಅದಕ್ಕೆ ಪೂರಕವಾಗಿ ರೂಪಿಸಿದ ನೇಮಗಳನ್ನು ಒಳಗೊಂಡ 'ಉಡೈಯವರ್ ನಿಯಮನಪ್ಪಡಿ' ಕ್ರಿ.ಶ. ೧೧೧೦ರಲ್ಲಿ ನೀಡಿದ್ದರೆಂದು ತಿಳಿದುಬರುತ್ತದೆ. ರಾಮಾನುಜರ ವಿಶಿಷ್ಟಾದ್ವೈತವು ಸುಧಾರಣೆ ಹೊಂದಿದ ಅದ್ವೈತ ಸಿದ್ಧಾಂತವೇ ಆಗಿದೆ. ಇದರ ಪ್ರಕಾರ ಬ್ರಹ್ಮನೇ ಪರಮಸತ್ಯ. ಅವನು ಜೀವಾತ್ಮ ಮತ್ತು ಸೃಷ್ಟಿಯಲ್ಲಿ ಅಂತರ್ಯಾಮಿಯಾಗಿದ್ದು, ಒಳಗಿನಿಂದಲೇ ಅವುಗಳನ್ನು ನಿಯಂತ್ರಿಸುತ್ತಾನೆ ................ ಶುದ್ಧಸತ್ವವು ಪರಮಾತ್ಮನ ದೇಹವನ್ನು ಒದಗಿಸುತ್ತದೆ. ಭಗವಂತನಲ್ಲಿ ಶರಣಾಗುವುದೇ ಪ್ರಪತ್ತಿ. ಶ್ರೀ ಎಂದರೆ ಲಕ್ಷ್ಮಿ, ಲಕ್ಷ್ಮಿಯೊಂದಿಗೆ ವಿಷ್ಣುವನ್ನು ಆರಾಧಿಸುವವರನ್ನು ಶ್ರೀವೈಷ್ಣವರೆಂದು ಕರೆಯಲಾಗುತ್ತದೆ.

**ಕೊಳ-ಮಂಟಪಗಳು :**


ದೇವಾಲಯಗಳ ಬೀಡಾದ ಮೇಲುಕೋಟೆಯಲ್ಲಿ ಧರ್ಮ ಸೇವಾರ್ಥವಾಗಿ ಕಟ್ಟಲ್ಪಟ್ಟಿರುವ ಕೊಳ ಹಾಗೂ ಮಂಟಪಗಳು ಸಾಕಷ್ಟು ಸಂಖ್ಯೆಯಲ್ಲಿವೆ. ೧೯೩೦ರಲ್ಲಿ ನೋಂದಣಿಸಿದ್ದಂತೆ, ಇಲ್ಲಿ ವಿವಿಧ ಹೆಸರಿನ ೨೯ ಕೊಳ ಹಾಗೂ ೭೬ ಮಂಟಪಗಳಿದ್ದವೆಂದು ತಿಳಿದುಬರುತ್ತದೆ. ಬೇರೆ ಬೇರೆ ಕಾಲದಲ್ಲಿ ಧಾರ್ಮಿಕ ಮನೋಭಾವದ ದಾನಿಗಳಿಂದ ವಿವಿಧೋದ್ದೇಶಗಳಿಗಾಗಿ ನಿರ್ಮಿಸಲ್ಪಟ್ಟಿರುವ ಇವು ಮೇಲುಕೋಟೆಯ ಮಹತ್ವವನ್ನು ಸೂಚಿಸುತ್ತದೆ. ದಳವಾಯಿ ಕೆರೆ, ಯೋಗಾನರಸಿಂಹ ಗುಡಿಯ ಬುಡದಲ್ಲಿರುವ ವಿಶಾಲವಾದ ಕಲ್ಯಾಣಿ (ಪಂಚಕಲ್ಯಾಣಿ), ತೆಪ್ಪಕೊಳ, ದತ್ತಾತ್ರೇಯರು ಶಿಷ್ಯಂದಿರಿಗೆ ವೇದ ಬೋಧಿಸಿದ ವೇದ ಪುಷ್ಕರಣಿ, ಧನುಷ್ಕೋಟಿ, ಯಾದವತೀರ್ಥ, ನಾರಾಯಣ ತೀರ್ಥ, ದರ್ಭತೀರ್ಥ, ಮೈತ್ರೇಯಿ ತೀರ್ಥ ಹಾಗೂ ಕೊಳ, ಪದ್ಮಾತೀರ್ಥ, ಪಲಾಶತೀರ್ಥ, ವೈಕುಂಠ ಗಂಗೆ, ಚಕ್ರತೀರ್ಥ, ಬ್ರಹ್ಮಚಾರಿ ಕೊಳ, ಚಲುವೆ ಅರಸಿನ ಕೊಳ (ಎರಡು), ಪುಟ್ಟನರಸಿಕೊಳ, ದೊಡ್ಡಯ್ಯನ ಕೊಳ, ಮೇಲು ಹಾಗೂ ಕೆಳ ಚಿಕ್ಕಯ್ಯನ ಕೊಳ, ಬಸವರಾಜಕೊಳ, ತಮ್ಮಣ್ಣಿ ಅಳಸಿಂಗ್ರಕೊಳ, ನಿಂಗಣ್ಣನ ಕೊಳ, ಸಿಂಗ್ರೈಯ್ಯಂಗಾರ ಕೊಳ, ಸಂಪಿಗೆ ಕೊಳ, ಉಳ್ಳಿ ಹಾಗೂ ಆನೆ ಬಾವಿಗಳೇ ಇಲ್ಲಿಯ ೨೯ ಕೊಳಗಳಾಗಿವೆ. ಇವುಗಳಲ್ಲಿ ವೇದ, ದರ್ಭ, ಪದ್ಮಾ, ಯಾದವ, ಪಲಾಶ, ಪರಾಶರ, ನಾರಾಯಣ ಹಾಗೂ ವೈಕುಂಠ ಗಂಗೆಗಳನ್ನು ಅಷ್ಟತೀರ್ಥೋದಕಗಳೆಂದು ಕರೆಯಲಾಗುತ್ತದೆ. ಹಿಂದೆಲ್ಲ ಇವು ದಟ್ಟ ಕಾಡು ಪ್ರದೇಶದಲ್ಲಿದ್ದವು. ಈಗಲೂ ಕೆಲವು ಕಣಿವೆ ಕಾಡು ಪ್ರದೇಶದಲ್ಲಿದ್ದು ತೊಟ್ಟಿಲುಮಡು ಜಾತ್ರೆಯಲ್ಲಿ ಹರಕೆಹೊತ್ತ ಹೆಂಗಳೆಯರು ಉತ್ಸವದೊಂದಿಗೆ ಹೋಗುತ್ತಾರೆ. ಇದೊಂದು ಆರೋಗ್ಯವೃದ್ಧಿ ಸಂಚಾರವಾಗಿರುತ್ತದೆ.

ಇಲ್ಲಿರುವ ೭೬ ಮಂಟಪಗಳಲ್ಲಿ ವೇದ ಪುಷ್ಕರಣಿ, ಧನುಷ್ಕೋಟಿ, ದರ್ಭ, ಪದ್ಮಾ, ಯಾದವ, ಪಲಾಶ, ನಾರಾಯಣ ಹಾಗೂ ವೈಕುಂಠ ತೀರ್ಥಗಳ ಬಳಿ ಇರುವ ಮಂಟಪಗಳು; ಕಲ್ಯಾಣಿ ಸುತ್ತ ಇರುವ ಕೈಸಾಲೆ ಮಂಟಪ, ಭುವನೇಶ್ವರಿ ಹಾಗೂ ಗಜೇಂದ್ರಮೋಕ್ಷ ಮಂಟಪ, ವಿವಿಧ ತೀರ್ಥ, ಗುಡಿ, ಬೀದಿ ಹಾಗೂ ಕೊಳಗಳ ಬಳಿ ಇರುವ ಮಂಟಪಗಳು; ರಥಗಳ ಮಂಟಪ, ಹೆಬ್ಬಾಗಿಲ ಮಂಟಪ, ತುಲಾಭಾರ ಮಂಟಪ (೨), ನಾಮತೀರ್ಥ ಮಂಟಪ, ಸಹಸ್ರಗದಾ ಮಂಟಪ, ತೆಪ್ಪದಕೊಳದ ಕೈಸಾಲೆ ಮಂಟಪ, ವಸಂತೋದ್ಯಾನ ಮಂಟಪ, ಅಂಗಮಣಿ ಮಂಟಪ, ನಯನಕ್ಷೇತ್ರ ಮಂಟಪ, ರಾಯಗೋಪುರ ಮಂಟಪ, ಮಧ್ಯಮಂಟಪ, ಧಾರೆಮಂಟಪ ಮುಂತಾದವನ್ನಿಲ್ಲಿ ಉದಾಹರಿಸಬಹುದಾಗಿದೆ. ಈ ಮಂಟಪಗಳಲ್ಲಿ

ಹೆಚ್ಚಿನವು ವಿಜಯನಗರ ಹಾಗೂ ಮೈಸೂರು ಅರಸರ ಕಾಲದ ರಚನೆಗಳಾಗಿದ್ದು, ಮೇಲುಕೋಟೆಂತು ಧಾರ್ಮಿಕ, ಸಾಮಾಜಿಕ, ಬದುಕಿನಲ್ಲಿ ಹಾಸು ಹೊಕ್ಕಾಗಿಹೆಣೆದುಕೊಂಡು ತಮ್ಮದೇ ಆದ ವೈಶಿಷ್ಟ್ಯವನ್ನು ಪಡೆದು ಕೊಂಡಿವೆ. ಬಹುತೇಕ ಮಂಟಪ ಮತ್ತು ಕೊಳಗಳು ಪ್ರಕೃತಿಯ ಮಡಿಲಲ್ಲಿದ್ದು ಹಬ್ಬಹರಿದಿನ, ಜಾತ್ರೆ ಉತ್ಸವಗಳಲ್ಲಿ ಭಗವಂತನನ್ನು ಬರಮಾಡಿಕೊಳ್ಳುತ್ತವೆ. ಹಲವು ಆಚರಣೆಗಳು ಜರುಗುತ್ತವೆ. ಭಗವಂತನ ಸಾನ್ನಿಧ್ಯದಲ್ಲಿ ಪ್ರಕೃತಿಯನ್ನು ಆರಾಧಿಸುವ ಪರಿ ಇದಾಗಿದೆ. ಆಗಮ, ವೇದಗಳಲ್ಲಿ ಇದಕ್ಕೆಲ್ಲ ವಿವರಣೆಯಿದೆ. ಪ್ರಕೃತಿಗೆ ಹೊಂದಿಕೊಂಡಂತೆ ದೇವಾಲಯಗಳ ಬಹುತೇಕ ಉತ್ಸವಗಳು ಜರುಗುತ್ತವೆ. ಪಾಂಚರಾತ್ರ, ವೈಖಾನಸ, ಶೈವಾಗಮ, ಮುಂತಾದ ಪೂಜಾವಿಧಿಗಳಿವೆ. ಇದೀಗ ಮುಖ್ಯ ದೇವಾಲಯಗಳ ಬಗ್ಗೆ ಅವಲೋಕಿಸೋಣ.

**ಚಲುವನಾರಾಯಣ ದೇವಾಲಯ :**


ಈ ದೇವಾಲಯ ಹೊಯ್ಸಳ, ವಿಜಯನಗರ, ಮೈಸೂರು ಅರಸರ ಆಡಳಿತದೊಂದಿಗೆ ಮೂರು ಕಾಲಘಟ್ಟದ ರಚನೆಗಳನ್ನು ಹೊಂದಿದೆ. ಪೂರ್ವಾಭಿಮುಖವಾಗಿರುವ ಈ ವಿಶಾಲ ದೇವಾಲಯದ ಗರ್ಭಗೃಹದಲ್ಲಿ ಸ್ಥಾನಿಕ ಭಂಗಿಯಲ್ಲಿರುವ ಚತುರ್ಭುಜಧಾರಿ ನಾರಾಯಣನ ಆಳೆತ್ತರದ ಶಿಲ್ಪವು ಬಹಳ ಸುಂದರವಾಗಿದೆ. ಚಕ್ರ, ಶಂಖ, ಗದಾ, ಅಭಯ ಹಸ್ತಧಾರಿಯಾಗಿ ಸರ್ವಾಭರಣ ಭೂಷಿತನಾಗಿ ಕಂಗೊಳಿಸುತ್ತಿದ್ದು; ಮುಂದಿರುವ ಅಂತರಾಳಕ್ಕೆ ದ್ವಾರಪಾಲಕರಾದ ಜಯ-ವಿಜಯರಿದ್ದು, ಸುತ್ತ ಕತ್ತಲು ಪ್ರದಕ್ಷಿಣ ಪಥವಿದೆ. ವೇಸರ ಮಾದರಿಯ ವಿಮಾನವನ್ನು ಹೊಂದಿರುವ ಗರ್ಭಗೃಹಕ್ಕೆ ಸಿಂಹ ಪ್ರಣಾಳವಿದ್ದು, ಅಧಿಷ್ಠಾನವು ಆಕರ್ಷಕವಾಗಿದೆ. ಅಂತರಾಳದ ಮುಂದಿರುವ ೩೬ ಕಂಬಗಳನ್ನುಳ್ಳ ೨೫ ಅಂಕಣದ ವಿಶಾಲ ನವರಂಗದ ಪಶ್ಚಿಮ ದ್ವಾರದ ಇಕ್ಕೆಲಗಳಲ್ಲಿರುವ ಎರಡು ಕೊಠಡಿಗಳಲ್ಲಿ ಬಲಭಾಗದ್ದು ಬೊಕ್ಕಸವಾದರೆ, ಎಡಭಾಗದ್ದು ವಿಶ್ವಕ್ಸೇನರ ಸನ್ನಿಧಿಯಾಗಿದೆ. ತಿರುಮುಗ್ಯೆ ಹಾಗೂ ನಮ್ಮಾಳ್ವಾರರ ಉತ್ಸವಮೂರ್ತಿಗಳು ಅಲ್ಲಿಯೇ ಇವೆ. ನವರಂಗದಲ್ಲಿ ಉತ್ತರಮುಖವಾಗಿರುವ ಕಿರು ಗರ್ಭಗೃಹದಲ್ಲಿ ನಾರಾಯಣ ಉಭಯನಾಚ್ಚಿಯರರನ್ನು (ಶ್ರೀದೇವಿ-ಭೂದೇವಿ) ಒಳಗೊಂಡ ಮೂಲದೇವರ ಉತ್ಸವಮೂರ್ತಿಗಳನ್ನು ಇಡಲಾಗಿದೆ. ನವರಂಗದ ಕಂಬವೊಂದರ ಕೆಳಗೆ 'ರಾಜ ಒಡೆಯ' ನಾಮಾಂಕಿತ ಶಿಲ್ಪವನ್ನು ಪ್ರಾತಿನಿಧಿಕವಾಗಿ ಕೆತ್ತಲಾಗಿದೆ. ನವರಂಗವನ್ನು ಪ್ರವೇಶಿಸಲು ಮೂರು ದಿಕ್ಕುಗಳಲ್ಲೂ ದ್ವಾರಗಳಿದ್ದು, ಪ್ರಧಾನದ್ವಾರಕ್ಕೆ ಮುಖಮಂಟಪವಿದೆ. ಮುಂದಿನ ಪಾತಾಳಾಂಕಣವನ್ನು ಪ್ರಾಕಾರದ




ಚಲುವನಾರಾಯಣ ದೇವಾಲಯ. ಮೇಲುಕೋಟೆ.




ಕಲ್ಯಾಣ ಮಂಟಪ. ಚಲುವನಾರಾಯಣ ದೇವಾಲಯ.




ಭುವನೇಶ್ವರಿ ಮಂಟಪ. ಮೇಲುಕೋಟೆ.



ಪಂಚಕಲ್ಯಾಣಿ ಮತ್ತು ಯೋಗಾನರಸಿಂಹ ದೇವಾಲಯ. ಮೇಲುಕೋಟೆ.



ನಂಬಿನಾರಾಯಣ ದೇವಾಲಯ. ಕೆರೆತೊಣ್ಣೂರು.



ಗೋಪಾಲರಾಯನ ಹೆಬ್ಬಾಗಿಲು. ಮೇಲುಕೋಟೆ.

ದ್ವಾರಮಂಟಪದವರೆಗೂ ವಿಸ್ತರಿಸಲಾಗಿದೆ. ನವರಂಗದಿಂದ ಹೊರಕ್ಕಿರುವ ವಿಶಾಲವಾದ ಪ್ರಾಕಾರದ ಆಗ್ನೇಯ ಮೂಲೆಯಲ್ಲಿ ೧೬ ಅಂಕಣದ ಪಾಕಶಾಲೆಯ ಪಕ್ಕದಲ್ಲೇ ಮೈಸೂರು ಅರಸು ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತವರ ನಾಲ್ವರು ಪತ್ನಿಯರ ಅಂಜಲಿಬದ್ಧ ಸ್ಥಾನಕ ಭಕ್ತ ಮೂರ್ತಿಗಳಿವೆ.

ಪ್ರಾಕಾರದ ನೈಋತ್ಯ ಮೂಲೆಯಲ್ಲಿ ಚಕ್ರತ್ತಾಳ್ವಾರ್ (ಸುದರ್ಶನ) ಸನ್ನಿಧಿ ಇದ್ದು, ಬಲಕ್ಕಾದಂತೆ ೧೨ ಆಳ್ವಾರುಗಳ ಹಾಗೂ ಪರಮಪದನಾಥ ಸನ್ನಿಧಿಗಳಿವೆ. ವಾಯವ್ಯ ಮೂಲೆಯಲ್ಲಿ ಯದುಗಿರಿ (ಶ್ರೀಲಕ್ಷ್ಮೀ) ಅಮ್ಮನ ಸನ್ನಿಧಿ ಇದೆ. ಗರ್ಭಗೃಹ, ಸುಖನಾಸಿ, ಹಾಗೂ ಮುಖಮಂಟಪಗಳನ್ನು ಹೊಂದಿರುವ ಇದರಲ್ಲಿ ಚತುರ್ಭುಜಧಾರಿ ಪದ್ಮಾಸೀನ ಲಕ್ಷ್ಮೀದೇವಿಯ ಶಿಲ್ಪವಿದ್ದು, ಬಾಗಿಲಲ್ಲಿ ದ್ವಾರಪಾಲಕಿಯರಿದ್ದಾರೆ. ಯದುಗಿರಿ ಅಮ್ಮನವರ ಗುಡಿ ಮುಂದಿರುವ ರಂಗಮಂಟಪವನ್ನು ನಾಗಮಂಗಲದ ಪ್ರಭು ತಿಮ್ಮಣ್ಣ ದಂಡನಾಯಕನ ಮಡದಿಯಾದ ರಂಗಾಂಬಿಕೆಯು ಕ್ರಿ.ಶ. ೧೪೫೮ರಲ್ಲಿ ಮಾಡಿಸಿದಳೆಂದು ಹೇಳುವ ಶಾಸನವಿದೆ. ಅಲ್ಲಿಯ ಕಂಬಗಳ ಮೇಲೆ ರಾಮಾಯಣ, ಮಹಾಭಾರತ, ಭಾಗವತ ಸಂಬಂಧಿ ಕಥಾವಳಿ ದೃಶ್ಯಗಳನ್ನು ಕಿರು ಶಾಸನಗಳೊಂದಿಗೆ ಬಿಡಿಸಲಾಗಿದೆ. ವಿಷ್ಣುವಿನ ವಿವಿಧ ರೂಪಗಳ ಮತ್ತು ಅವತಾರಗಳ ಶಿಲ್ಪಗಳನ್ನು ಬಿಡಿಸಲಾಗಿದೆ. ಇದೊಂದು ಮಹೋನ್ನತ ಶಿಲ್ಪಕಲಾ ಶಾಲೆಯಂತಿದೆ. ಪುರಾಣ ಮತ್ತು ಮಹಾಕಾವ್ಯಗಳನ್ನು ಶಿಲ್ಪಸಮೇತ ಅಭ್ಯಾಸ ಮಾಡುವಂತಿದೆ. ಮಧುವನದಲ್ಲಿ ವಾನರರು, ವಿಭೀಷಣನು ರಾಮ-ಲಕ್ಷ್ಮಣರಿಗೆ ವಂದಿಸುತ್ತಿರುವುದು, ರಥದಲ್ಲಿ ಕುಳಿತ ರಾವಣನ ಹತ್ತು ತಲೆಗಳು ಉರುಳಿ ಕೆಳಗೆ ಬಿದ್ದಿರುವುದು, ಅಶೋಕವನದಲ್ಲಿ ಹೊನ್ನಜಟ್ಟಿ ಮತ್ತು ಶ್ರೀಮಜಟ್ಟಿಯರ ಮಧ್ಯದಲ್ಲಿ ಸೀತೆಯಿರುವುದು, ರಾಮ ಲಕ್ಷ್ಮಣ ಸೀತೆಯರನ್ನು ಲಂಕೆಯಿಂದ ಬೀಳ್ಕೊಡುತ್ತಿರುವುದು, ಶ್ರೀಕೃಷ್ಣನು ಬಲಗೈ ತೋರುಬೆರಳನ್ನು ಮೇಲೆತ್ತಿ ಮಾತನಾಡುವ ಭಂಗಿಯಲ್ಲಿ ನಿಂತಿರುವುದು, ಬ್ರಾಹ್ಮಣನ ವೇಷದಲ್ಲಿ ಬಂದ ಅರ್ಜುನ, ಸ್ವಯಂವರದಲ್ಲಿ ಮಾಲೆಯನ್ನು ಹಿಡಿದು ನಿಂತಿರುವ ದ್ರೌಪದಿ, ಅರ್ಜುನನು ಮತ್ಸ್ಯಯಂತ್ರವನ್ನು ಭೇದಿಸುತ್ತಿರುವುದು, ಶಿವನು ಅರ್ಜುನನಿಗೆ ಪಾಶುಪತವನ್ನು ಕೊಡುತ್ತಿರುವುದು, ವಸುದೇವ ಮತ್ತು ದೇವಕಿಯರು ಕುಳಿತಿರುವುದು, ಕೊರವಂಜಿ ದೇವಕಿಗೆ ಕಣಿಯನ್ನು ಹೇಳುತ್ತಿರುವುದು, ತಾಯಿ ದೇವಕಿ ಹುಟ್ಟಿದ ಕೃಷ್ಣನನ್ನು ವಸುದೇವನ ಕೈಗೆ ಕೊಡುತ್ತಿರುವುದು, ವಸುದೇವನು ಕೃಷ್ಣನನ್ನು ಗೋಕುಲದಲ್ಲಿ ಯಶೋಧೆಗೆ ಒಪ್ಪಿಸುತ್ತಿರುವುದು, ಕೃಷ್ಣನು ತೊಟ್ಟಿಲಾಗಿ ಬಂದ ರಾಕ್ಷಸನನ್ನು ಕೊಲ್ಲುತ್ತಿರುವುದು, ಪೂತನಿಯನ್ನು ಸಂಹಾರ ಮಾಡುತ್ತಿರುವುದು, ಬಂಡಿಯ ರೂಪದ ರಾಕ್ಷಸನನ್ನು ಕೊಲ್ಲುತ್ತಿರುವುದು, ಕೃಷ್ಣನು

ಗೂನುಬೆನ್ನು ಹೆಂಗಸಿನಿಂದ ಗಂಧವನ್ನು ಸ್ವೀಕರಿಸಿ ನಿಂತಿರುವುದು, ಚಾಣೂರ ಮುಷ್ಟಿಕಾದಿ ನಾಲ್ವರು ಮಲ್ಲರನ್ನು ಕೊಲ್ಲುತ್ತಿರುವುದು, ಕಂಸನನ್ನು ಕೊಲ್ಲುತ್ತಿರುವುದು, ಬಲಿವಾಮನರ ಶಿಲ್ಪಗಳು, ವಿಷ್ಣು ಬ್ರಾಹ್ಮಣ ವೇಷದಲ್ಲಿ ಬಂದು ಬಲಿಯಲ್ಲಿ ದಾನವನ್ನು ಬೇಡುತ್ತಿರುವುದು, ಬಲಿಯು ಬ್ರಾಹ್ಮಣನಿಗೆ ಮೂರು ಅಡಿ ಭೂಮಿಯನ್ನು ಧಾರೆಯೆರೆದು ಕೊಡುತ್ತಿರುವುದು, ವಿಷ್ಣುವು ಬಲಿಯನ್ನು ವರುಣ ಪಾಶದಿಂದ ಬಂಧಿಸಿರುವುದು, ವಿಷ್ಣುವು ದೊಡ್ಡ ಆಕಾರದಲ್ಲಿ ತ್ರಿವಿಕ್ರಮನಾಗಿ ಬೆಳೆದಿರುವುದು-ಹೀಗೆ ಕಥೆಗಳೇ ಶಿಲ್ಪಗಳ ಮೂಲಕ ಮೈದಾಳಿದಂತೆ ಗೋಚರಿಸುತ್ತವೆ. ಇಲ್ಲಿ ಕೆಲವನ್ನು ಮಾತ್ರ ಹೇಳಲಾಗಿದ್ದು ಕೇಶವ, ಮಾಧವ, ನಾರಾಯಣ, ಜನಾರ್ದನ, ಶ್ರೀನಿವಾಸ, ಪಾಂಡುರಂಗ, ರಂಗನಾಥ, ವರಾಹವತಾರ, ಯಜ್ಞವರಾಹ, ಲಕ್ಷ್ಮೀವರಾಹ, ನರಸಿಂಹ, ಗಿರಿಜಾನರಸಿಂಹ, ಯೋಗಾನರಸಿಂಹ, ಲಕ್ಷ್ಮೀನರಸಿಂಹ, ಕೃಷ್ಣ ಕಾಳಿಂಗಮರ್ಧನ, ಮುರಳೀಧರ ಹೀಗೆ ವಿಷ್ಣುವಿನ ವಿವಿಧ ರೂಪ ಮತ್ತು ಅವತಾರದ ಶಿಲ್ಪಗಳ ಸಮುಚ್ಚಯವೇ ಕಾಣಬರುತ್ತವೆ.

ದೇವಾಲಯದ ಪೂರ್ವಕ್ಕಾದಂತೆ ಇರುವ ಗಜೇಂದ್ರ, ವರದರಾಜ, ಕೂರತ್ತಾಳ್ವಾರ್ ಹಾಗೂ ರಾಮಾನುಜಾಚಾರ್ಯರ ಪ್ರತ್ಯೇಕ ಸನ್ನಿಧಿಗಳಲ್ಲಿ, ಗರ್ಭಗೃಹ, ಮುಖಮಂಟಪಗಳಷ್ಟೇ ಇವೆ. ಇಲ್ಲಿರುವ ರಾಮಾನುಜರ ಪದ್ಮಾಸೀನ ದ್ವಿಬಾಹುಮೂರ್ತಿ ದಿವ್ಯವಾಗಿದೆ. ಮೂರ್ತಿಯ ಬದಿಯಲ್ಲೇ ಸನ್ಯಾಸ ಸೂಚಿಸುವ ತ್ರಿದಂಡವೂ ಇದೆ. ಅಲ್ಲದೇ ತಿರುಕಂಚಿನಂಬಿ, ನಮ್ಮಾಳ್ವಾರ್, ಅಂಡಾಳ್, ಶೂಡಿಕೊಡುತ್ತ ನಾಚ್ಚಿಯರ್, ವೇದಾಂತ ದೇಶಿಕ ಮಣವಾಳಮಾಮುನಿ ಮುಂತಾದ ಆಳ್ವಾರರ ಶಿಲ್ಪಗಳು ಇಲ್ಲಿವೆ. ಬದಿಯ ಯಾಗಶಾಲೆಯ ಪಕ್ಕದಲ್ಲೇ ಮುಮ್ಮಡಿ ಕೃಷ್ಣರಾಜ ಒಡೆಯರು ಕ್ರಿ.ಶ. ೧೮೨೯ರಲ್ಲಿ ಪ್ರತಿಷ್ಠಾಪಿಸಿದ ಪಿಳ್ಳೈಲೋಕಾಚಾರ್ಯರ ಸನ್ನಿಧಿ ಇದೆ. ಪ್ರಾಕಾರದ ಆಗ್ನೇಯ ಮೂಲೆಯಲ್ಲಿರುವ ಪಾಕಶಾಲೆಯಿಂದ ನೈಋತ್ಯ ಮೂಲೆಯ ಚಕ್ರತ್ತಾಳ್ವಾರ ಸನ್ನಿಧಿ ಹಾಗೂ ಯದುಗಿರಿಅಮ್ಮನ ಸನ್ನಿಧಿವರೆಗಿನ ಮಂಟಪವನ್ನು ವಿಜಯನಗರ ಪ್ರತಿನಿಧಿ ನಾಗಮಂಗಲದ ಮಹಾಪ್ರಭು ತಿಮ್ಮಣ್ಣದಂಡನಾಯಕನು ಕ್ರಿ.ಶ. ೧೪೫೮ ರಲ್ಲಿ ನಿರ್ಮಿಸಿದನೆಂದು ಶಾಸನದಿಂದ ತಿಳಿದುಬರುತ್ತದೆ. ಈ ಕಂಬಸಾಲುಗಳೇ ವಿಜಯನಗರದ ಪ್ರತೀಕವಾಗಿವೆ. ಧ್ವಜಸ್ತಂಭ, ಬಲಿಪೀಠಗಳು ಮುಖಮಂಟಪದ ಎದುರಿನಲ್ಲಿದೆ.

ದೇವಾಲಯದ ಮಹಾದ್ವಾರಕ್ಕೆ ಆಕರ್ಷಕವಾದ ಗೋಪುರವಿದ್ದು, ದ್ವಾರಮಂಟಪದ ಇಕ್ಕೆಲಗಳಲ್ಲಿರುವ ಒಂದಂಕಣದ ಮೊಗಸಾಲೆಮಂಟಪ ಹಾಗೂ ದೇವಾಲಯದ ಸುತ್ತಲೂ ಇರುವ ಒಂದಂಕಣದ ಕೈಸಾಲೆ ಮಂಟಪಗಳು

ಮೈಸೂರು ಅರಸು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ್ದಾಗಿದ್ದು, ವೈರಮುಡಿ ಹಾಗೂ ಮತ್ತಿತರ ಜಾತ್ರೆ, ಉತ್ಸವಕ್ಕೆ ಬರುವ ಭಕ್ತರಿಗೆ ವಸತಿ ಸೌಕರ್ಯ ಕಲ್ಪಿಸಿಕೊಡಲು ನೆರವಾಗುತ್ತದೆ. ಮಹಾದ್ವಾರ ಭವ್ಯವಾಗಿದ್ದು ದ್ವಾರದ ಹೊಸಿಲಲ್ಲಿ 'ರಾಜ ಒಡೆಯರ್' ಆಕೃತಿಯೊಂದಿದೆ.

ದೇವಾಲಯದ ಮುಂದೆ ಭವ್ಯವಾದ ಗರುಡಗಂಬವಿದೆ. ಇದನ್ನು ದೀಪಸ್ತಂಭವೆಂತಲೂ ಕರೆಯುತ್ತಾರೆ. ಇದು ಸುಮಾರು ೪೫ ಅಡಿ ಎತ್ತರವಿದ್ದು ಕೆಳಗಿನ ಭಾಗವು ಚತುರ್ಮುಖವಾಗಿದ್ದು ಅದರ ಮೇಲಕ್ಕೆ ೧೬ ಮುಖಗಳಿವೆ. ಕೆಳಗಿನ ನಾಲ್ಕು ಮುಖಗಳಲ್ಲಿ ಪೂರ್ವಕ್ಕೆ ಸಿಂಹ, ದಕ್ಷಿಣಕ್ಕೆ ಹನುಮಂತ, ಪಶ್ಚಿಮಕ್ಕೆ ಗರುಡ ಹಾಗೂ ಉತ್ತರಕ್ಕೆ ಹಂಸವನ್ನು ಹೊಂದಿದೆ. ದೇವಾಲಯದ ಸುತ್ತಲು ಕೈಪಿಡಿಯಲ್ಲಿರುವ ಗೂಡುಗಳಲ್ಲಿ ಗಾರೆ ಶಿಲ್ಪಗಳಿವೆ. ಇವುಗಳಲ್ಲಿ ಹಲವು ದೇವಾನುದೇವತೆಗಳಿಗೆ ಕೆಲವು ಮಿಥುನ, ಪ್ರಾಣಿ ಪಕ್ಷಿಗಳಿಗೆ ಸಂಬಂಧಪಟ್ಟಿವೆ.

**ಯೋಗಾನರಸಿಂಹ ದೇವಾಲಯ :**

ಇಲ್ಲಿಯ ಮತ್ತೊಂದು ಪ್ರಮುಖ ದೇಗುಲ ಯೋಗಾನರಸಿಂಹ ದೇವಾಲಯ. ಮೇಲುಕೋಟೆಯ ಪೂರ್ವಭಾಗಕ್ಕೆ ಬೆಟ್ಟದ ಮೇಲಿರುವ ಆಲಯವು ಪಶ್ಚಿಮಾಭಿಮುಖವಾಗಿ ನಿಂತಿದೆ. ನೆಲಮಟ್ಟದಿಂದ ೩೬೦ ಮೆಟ್ಟಿಲುಗಳನ್ನು ಏರಿ ಆಲಯದ ಮುಖದ್ವಾರವನ್ನು ತಲುಪಬೇಕು. ವಿಜಯನಗರ ಶೈಲಿಯ ಗೋಪುರವು ಸುಮಾರು ೮೦ ಅಡಿಗಳಷ್ಟು ಎತ್ತರವಾಗಿದೆ. ಇದರ ಅದಿಷ್ಠಾನವು ಹಲವು ದೇವಾಲಯಗಳಲ್ಲಿರುವಂತೆ ಶಿಲೆಯಿಂದ ನಿರ್ಮಿಸಿದ್ದು ಜಗತಿ, ಪಟ್ಟಿ, ಊರ್ಧ್ವಪದ್ಮ, ಕಂಠ, ತ್ರಿಪಟ, ಕುಮುದಗಳಿಂದ ಕೂಡಿದೆ. ಈ ಎಲ್ಲಾ ಶೈಲಿಯನ್ನು ಗಮನಿಸಿದಾಗ ಇದು ಚೋಳ ಹಾಗೂ ಹೊಯ್ಸಳರ ಕಾಲದ ಶೈಲಿಯನ್ನು ಸೂಚಿಸುತ್ತದೆ. ವಿಶೇಷವಾಗಿ ಐದು ಅಂತಸ್ತಿನ ಈ ಗೋಪುರ ದ್ರಾವಿಡ ಶೈಲಿಗೆ ಸ್ಪಷ್ಟ ಉದಾಹರಣೆಯಾಗಿದೆ. ದ್ವಾರದ ಒಂದು ಕಂಬದಲ್ಲಿ ನಾರಾಯಣಮೂರ್ತಿ ಕೆತ್ತನೆಯಿದ್ದು, ಅದರ ಎದುರಾದ ಕಂಬದಲ್ಲಿ ದೈನ್ಯಭಾವದಿಂದ ಕೈಜೋಡಿಸಿ ನಿಂತಿರುವ ಗೋಪುರ ನಿರ್ಮಿಸಿದಾತನ ದೊರೆಯ ಶಿಲ್ಪವನ್ನು ಕಡೆಯಲಾಗಿದೆ. ಇದು ತಿರುಪತಿಯಲ್ಲಿನ ಶ್ರೀಕೃಷ್ಣದೇವರಾಯನ ಕಂಚಿನ ಪ್ರತಿಮೆಯನ್ನು ಹೋಲುತ್ತದೆ. ಒಟ್ಟಾರೆ ಇದು ವಿಜಯನಗರ ಸಾಮ್ರಾಜ್ಯದ ಚಕ್ರವರ್ತಿ ಅಥವಾ ಸಾಮಂತನದ್ದೋ ಇರಬಹುದು. (ವಿಜಯನಗರದ ಪ್ರತಿನಿಧಿ ತಿಮ್ಮಣ್ಣದಂಡನಾಯಕ ಇಮ್ಮಡಿ ಪ್ರೌಢದೇವರಾಯ (ಮಲ್ಲಿಕಾರ್ಜುನ)ನ ಆಳ್ವಿಕೆಯ ಕಾಲದಲ್ಲಿದ್ದವನು. ಅಲ್ಲದೆ ಶ್ರೀಕೃಷ್ಣದೇವರಾಯನ ಕ್ರಿ.ಶ. ೧೫೨೮ರ ಶಾಸನಗಳು ಸಹ ಮೇಲುಕೋಟೆಯಲ್ಲಿ

ಕಾಣಬರುತ್ತವೆ.) ಮೇಲುಕೋಟೆಯ ಕೆಳಗಿನ ದೇವಾಲಯಗಳು ಆಶ್ರಿತಾಲಯಗಳಾಗಿದ್ದರೆ; ಬೆಟ್ಟದ ಮೇಲಿರುವ ಯೋಗಾನರಸಿಂಹ ದೇವಾಲಯ ಸ್ವತಂತ್ರಾಲಯ ಎಂದೆನಿಸಿಕೊಳ್ಳುತ್ತದೆ. ಬೆಟ್ಟಗುಡ್ಡಗಳ ಮೇಲಿರುವ ಯಾವುದೇ ದೇವಾಲಯಗಳಿಗೂ ಈ ಹೆಸರು ಅನ್ವಯಿಸುತ್ತದೆ. ಬೆಟ್ಟದ ಮೇಲೆ ಪ್ರಶಾಂತ ವಾತಾವರಣದಲ್ಲಿ ಶುದ್ಧ ಆಮ್ಲಜನಕ ಸಿಗುವುದಲ್ಲದೆ, ಬೆಟ್ಟ ಹತ್ತುವುದರಿಂದ ಆರೋಗ್ಯ ವೃದ್ಧಿಯಾಗುತ್ತದೆಂದು ಆಗಮ ಶಾಸ್ತ್ರಗಳಲ್ಲಿಯೇ ಹೇಳಿದೆ.

ಈ ದೇವಾಲಯದ ರಚನೆ ಗರ್ಭಗುಡಿ, ಸುಖನಾಸಿ, ನವರಂಗ, ಸುತ್ತುಮಂಟಪ ಮತ್ತು ಮಹಾದ್ವಾರವುಳ್ಳದ್ದಾಗಿದೆ. ಇಲ್ಲಿನ ಶಿಖರವು 'ಶಾಲಾ' ಎಂಬ ರೂಪದ್ದು. ಶಾಲಾವು ಸಿಂಹಲಲಾಟವನ್ನು ಹೊಂದಿದೆ. ಮೂಲವಿಗ್ರಹ ಸನ್ನಿಧಿ ಪ್ರವೇಶಕ್ಕೆ ಮುಂಚೆ ಸಿಗುವ ಮುಖ್ಯದ್ವಾರವು ಪುನಃ ಒಂಬತ್ತು ಮೆಟ್ಟಿಲುಗಳನ್ನು ಹೊಂದಿದೆ. ಬೆಟ್ಟದ ಮೇಲಿನ ದೇವಾಲಯದ ಗೋಪುರ ಎತ್ತರೆತ್ತರಕ್ಕೆ ಬೆಳೆದು ಬಹುದೂರದವರೆಗೂ ಗೋಪುರ ಕಾಣಿಸಬೇಕು ಎಂಬುದು ಮುಖ್ಯ ಉದ್ದೇಶವಾಗಿದೆ. ಇಲ್ಲಿಂದಲೇ ಸುತ್ತಲ ಪ್ರಾಕೃತಿಕ ಸೊಬಗನ್ನು ಸವಿಯಬಹುದಾಗಿದೆ. ಮೇಲುಕೋಟೆಯ ಪ್ರಮುಖ ಪಂಚಕಲ್ಯಾಣಿ ಮತ್ತು ಮಂಟಪಗಳು ಮನಸ್ಸಿಗೆ ಮುದಕೊಡುತ್ತವೆ. ದೇವಾಲಯದ ಕೇಂದ್ರ ಭಾಗವಾದ ಗರ್ಭಗುಡಿ ಪೂರ್ವಾಭಿಮುಖವಾಗಿದೆ. ಮುಖ್ಯ ಮೂರ್ತಿ ಯೋಗಾನರಸಿಂಹ ಹೆಸರಿಗೆ ತಕ್ಕಂತೆ ಹಿರಣ್ಯಕಶಿಪುವನ್ನು ಸಂಹಾರ ಮಾಡಿ ಯೋಗಕ್ಕೆ ಹೋದಂತೆ ಯೋಗಮುದ್ರೆಯಲ್ಲಿರುವುದು ನೋಡುಗರ ಭಕ್ತಿ ಭಾವವನ್ನು ಹೆಚ್ಚಿಸುತ್ತದೆ. ಚತುರ್ಭುಜಧಾರಿಯಾಗಿದ್ದು, ಮೇಲಿನ ಎರಡು ಭುಜಗಳಲ್ಲಿ ಚಕ್ರ ಮತ್ತು ಶಂಖವನ್ನು ಧರಿಸಿ; ಮಿಕ್ಕೆರಡು ಭುಜಗಳು ಮಂಡಿಯ ಮೇಲೆ ಬಳಸಿ ಇಡಲ್ಪಟ್ಟಿವೆ. ಇದು ಚೋಳ ಮತ್ತು ಹೊಯ್ಸಳ ಮಿಶ್ರಶೈಲಿಯನ್ನು ಸೂಚಿಸುತ್ತದೆ ಎಂಬ ಅಭಿಪ್ರಾಯವಿದೆ. ಗರ್ಭಗುಡಿಯ ಕೆಳಗೆ 'ಪ್ರಹ್ಲಾದ ಬಿಲ' (ಬಿಲದ್ವಾರ) ಎಂದು ಕರೆಯಲ್ಪಡುವ ಬಿಲದ್ವಾರ (ಸುರಂಗ) ದೊಳಗೆ ನುಸುಳಿಬರುವುದು ರೋಮಾಂಚನಗೊಳಿಸುತ್ತದೆ. ಈ ದೇವಾಲಯದಲ್ಲಿರುವ ನಗಾರಿ ಟಿಪ್ಪುಸುಲ್ತಾನನ ಕೊಡುಗೆಯಾಗಿದೆ. ಕ್ರಿ.ಶ. ೧೭೮೬ ರಲ್ಲಿ ಇದರೊಂದಿಗೆ ಆನೆಗಳನ್ನು ನೀಡಿದ ವಿಷಯ ತಿಳಿದುಬರುತ್ತಿದೆ. ಕ್ರಿ.ಶ. ೧೮೪೨ ರಲ್ಲಿ ಮುಮ್ಮಡಿ ಕೃಷ್ಣರಾಜರ ಮಡದಿ ಲಿಂಗರಾಜಮ್ಮಣ್ಣಿಯು ಬಂಗಾರದ ಕಿರೀಟವನ್ನು ನೀಡಿದ್ದನ್ನು ಶಾಸನಗಳ ದಾಖಲೆ ತಿಳಿಸುತ್ತವೆ.

**ಇತರ ದೇವಾಲಯಗಳು :**

ಇಲ್ಲಿ ಆಂಜನೇಯನ ಏಳು, ಗರುಡನ ನಾಲ್ಕು, ಕಲ್ಯಾಣಿಯ ಸುತ್ತ ಇರುವ

ಪಂಚಭಾಗವತರು, ಅಮ್ಮನವರು, ಅಚ್ಯುತರಾಮಾನುಜದೇವರು, ಕರಣಿಕ ನಾರಾಯಣ, ಲಕ್ಷ್ಮೀನರಸಿಂಹ, ಮಹಾಶೇಷ, ಪೆರಿಯಾಳ್ವರ್, ಗೋಪಾಲಕೃಷ್ಣ, ಗಜೇಂದ್ರ, ಬಿಂದುಮಾಧವ ಗುಡಿಗಳ ಜತೆಗೆ, ಹೊಸವೆಂಕಟರಮಣ, ಚಿಕ್ಕಯ್ಯನ ಕೊಳದ ವೆಂಕಟರಮಣ, ಪೇಟೆಕೃಷ್ಣ, ವಿನಾಯಕ, ಬದರಿನಾರಾಯಣ ಮುಂತಾದ ದೇವಾಲಯಗಳಿವೆ. ಯೋಗಾನರಸಿಂಹ ಬೆಟ್ಟದ ತಳಭಾಗದಲ್ಲಿ ಕಾಡುಗಲ್ಲೊಂದರಲ್ಲಿ ಕೆತ್ತಿದ ಮಹಾಗಣಪತಿ ವಿಗ್ರಹ ಮನೋಹರವಾಗಿದೆ.

ಯೋಗಾನರಸಿಂಹಸ್ವಾಮಿ ಬೆಟ್ಟಕ್ಕೆ ಹೋಗುವ ಮಾರ್ಗದಲ್ಲಿ ಹಾಗೂ ದೊಡ್ಡ ಕಲ್ಯಾಣಿಗೆ ಹೊಂದಿಕೊಂಡಂತೆ ನಿರ್ಮಿಸಿರುವ ವೆಂಕಟರಮಣ ದೇವಾಲಯ ವಿಜಯನಗರ ಶೈಲಿಗೆ ಒಂದು ಸ್ಪಷ್ಟ ಉದಾಹರಣೆಯಾಗಿದೆ. ಎತ್ತರ ಮತ್ತು ಗಾತ್ರಗಳಲ್ಲಿ ಭವ್ಯತೆಯನ್ನು ಸಾರುವ ಕಂಭಗಳು ಮತ್ತು ಅದರ ಮೇಲಿನ ಉಬ್ಬುಶಿಲ್ಪಗಳು ಮನಮೋಹಕವಾಗಿವೆ. ಯೋಗಾನರಸಿಂಹ, ವಾಮನ, ಬಲರಾಮ, ಪರಶುರಾಮ, ಶ್ರೀರಾಮ, ಪುಂಗಿ ಊದುವ ವೇಷಧಾರಿ ಮನುಷ್ಯ, ಕಳಸಗಳು, ಆನೆಮೇಲೆ ಸಿಂಹ, ಪಟ್ಟದ ಕುದುರೆ, ನೃತ್ಯಗಾರ್ತಿಯರು, ಗಂಡಭೇರುಂಡ, ಆಂಜನೇಯ, ಹಯಗ್ರೀವ, ದೊಡ್ಡಕೋತಿಯ ಆಶ್ರಯದಲ್ಲಿ ಚಿಕ್ಕಕೋತಿ ತನ್ನ ಬಾಲವನ್ನು ಬಾಯಿಗೆ ಹಾಕಿಕೊಂಡಿರುವುದು ಮುಂತಾದ ಶಿಲ್ಪಗಳಿಂದೊಡಗೂಡಿ ನೋಡುಗರ ಮೈಮನಸ್ಸನ್ನು ಹರ್ಷಗೊಳಿಸುತ್ತದೆ. ಗುಡಿಯ ದ್ವಾರವು ಕೆತ್ತನೆಯಲ್ಲಿ ಆನೆದ್ವಾರಗಳಾಗಿದ್ದು ಅಕ್ಕಪಕ್ಕದಲ್ಲಿ ಜಯವಿಜಯ ದ್ವಾರಪಾಲಕರಿದ್ದಾರೆ.

**ಉತ್ಸವಗಳು :**

ಇಲ್ಲಿ ಜರುಗುವ ಅನೇಕ ಉತ್ಸವಗಳಲ್ಲಿ ಪ್ರಸಿದ್ಧವಾದದ್ದು ಹಾಗೂ ಕಿರೀಟ ಪ್ರಾಯವಾದದ್ದು 'ವೈರಮುಡಿ ಉತ್ಸವ'. ಶ್ರೀರಾಮ ಪಟ್ಟಾಭಿಷೇಕ ನಡೆದ ಸಂದರ್ಭಕ್ಕೆ ವೈರಮುಡಿ ಧರಿಸುವುದು ಪರಂಪರೆಯ ಸಂಕೇತವಾಗಿದೆ. ಇದಕ್ಕೊಂದು ಪುರಾಣ ಕಥೆಯೇ ಇದೆ. ಪಾಲ್ಗುಣ ಮಾಸದಲ್ಲಿ ಹತ್ತು ದಿನ ನಡೆಯುವ ವಿವಿಧ ಉತ್ಸವಗಳಲ್ಲಿ ನಾಲ್ಕನೇ ದಿನ ಜರುಗುವುದೇ ಈ ಉತ್ಸವ. ಉತ್ಸವಮೂರ್ತಿಗೆ ಧರಿಸುವ ರತ್ನ, ವಜ್ರ, ವೈಡೂರ್ಯ ಮುತ್ತಿನ ಬಿಳಿಹರಳಿನ ಕಿರೀಟವೇ ವೈರಮುಡಿಯ ವಿಶೇಷ ಆಕರ್ಷಣೆ. ದೀಪದ ಬೆಳಕಿನಲ್ಲಿ ರಾತ್ರಿವೇಳೆ ಜರುಗುವ ಈ ಉತ್ಸವದ ರೀತಿ ನೀತಿಗಳು ಮನಮೋಹಕವಾದದ್ದು. ಅಲಂಕೃತ ಗರುಡವಾಹನದಲ್ಲಿ ಉತ್ಸವ ಮೂರ್ತಿಯೊಂದಿಗೆ ಶ್ರೀದೇವಿ ಭೂದೇವಿಯರಿರುತ್ತಾರೆ. ಈ ಉತ್ಸವ ಮುಗಿದ ನಂತರವೇ ಅದೇ ರಾತ್ರಿ ರಾಜಮುಡಿಯನ್ನು ಧರಿಸುತ್ತಾರೆ. ಒಟ್ಟಾರೆ ಉತ್ಸವದ ಹತ್ತು

ದಿನಗಳಲ್ಲಿ ಅಂಕುರಾರ್ಪಣ, ವಾಹನೋತ್ಸವ, ರಥೋತ್ಸವ, ತೆಪ್ಪೋತ್ಸವ, ಅವಭೃತೋತ್ಸವ (ಮುಕ್ತಾಯ)ಗಳು ಜರುಗುತ್ತವೆ.

ಇದೇ ಸಂದರ್ಭದಲ್ಲಿ ಜರುಗುವ ಅನ್ನಕೋಟೆ ಉತ್ಸವ, ರಾಜಮುಡಿ ಹಾಗೂ ಕೃಷ್ಣರಾಜಮುಡಿ ಉತ್ಸವ, ವಸಂತೋತ್ಸವ, ಜೂನ್ ತಿಂಗಳಲ್ಲಿ ನಡೆಯುವ ಏಳು ದಿನದ ಪಲ್ಲೋತ್ಸವ, ಅಂಡಾಳ್ ಉತ್ಸವ, ಶಿಖ್ಯೋತ್ಸವ, ಪವಿತ್ರೋತ್ಸವ, ನವರಾತ್ರಿ ಕಾರ್ತಿಕ ದೀಪೋತ್ಸವ, ಮಾರ್ಗಶೀರ್ಷರೋತ್ಸವ, ರಥಸಪ್ತಮಿ, ಮೋಕ್ಷೋತ್ಸವ, ಅಂಗಮಣಿ ಉತ್ಸವ, ಅಳ್ಳಂತಳ್ಳಂ ಚೆರುಪು, ನಮ್ಮಾಳ್ವರ್ ಪುನರ್ವಸು ಉತ್ಸವ ಹೀಗೆ ಉತ್ಸವಗಳ ಪಟ್ಟಿ ವರ್ಷದುದ್ದಕ್ಕೂ ಬೆಳೆಯುತ್ತಾ ಹೋಗುತ್ತದೆ.

**ಮಠಗಳು :**

ಇಲ್ಲಿರುವ ಮಠಗಳಲ್ಲಿ ರಾಮಾನುಜಾಚಾರ್ಯರು ಸ್ಥಾಪಿಸಿದ ಯತಿರಾಜಮಠ ಪ್ರಾಚೀನವಾದದ್ದು. ಇನ್ನುಳಿದಂತೆ ಅಹೋಬಲ ಮಠ, ಪರಕಾಲ ಮಠ, ವಾಮನ ಮಲೈಮಠ, ತಿರುಪತಿ ಜೀಯರ್ ಮಠ, ಅಳಹಿಯ ಮಣವಾಳ್ ಜೀಯರ ಮಠ ಹಾಗೂ ಭೈರಾಗಿ ಮಠಗಳೂ ಇವೆ.

ಒಟ್ಟಾರೆ ಮೇಲುಕೋಟೆಯು ಸಾಂಸ್ಕೃತಿಕ ಅಧ್ಯಯನ ನಡೆಸುವ ಹೊರಗಿನವರು ಒಂದೆರಡು ವರ್ಷ ಇಲ್ಲಿದ್ದು ಪ್ರತಿಯೊಂದು ಕಾರ್ಯಕ್ರಮದಲ್ಲಿಯೂ ಭಾಗವಹಿಸಿ ವೀಕ್ಷಿಸಿದಾಗ ಅದರ ಅರ್ಥವಂತಿಕೆ ಅರ್ಥವಾಗುತ್ತದೆ.

**ಜನಪದರ ನಂಟು :**

ಜನಪದರಿಗೆ ಚಲುವನಾರಾಯಣನ ಮೇಲೆ ಭಕ್ತಿಯಷ್ಟೇ ಅಲ್ಲ, ಸ್ನೇಹ ಸಂಬಂಧವಾದ ಸರಸಕ್ಕೆ ಎಳೆದು ಖುಷಿ ಪಡುವಂಥ ದೆಸೆಯಲ್ಲಿ ಪ್ರಣಯ ಕಾವ್ಯಗಳು ಕೇಳಿಬರುತ್ತವೆ. ರಾಮಾನುಜರು ಡೆಲ್ಲಿಯಿಂದ ರಾಮಪ್ರಿಯ ಎಂಬ ಬಹು ಸುಂದರ ಉತ್ಸವ ಮೂರ್ತಿಯನ್ನು ಕರೆತರುವಾಗ ಅದರ ಮೇಲೆ ಮೋಹಿತಗೊಂಡಿದ್ದ ಸುಲ್ತಾನನ ಪುತ್ರಿ ಬೀಬಿನಾಚಿಯರ್ (ವರನಂದಿ) ಹಿಂಬಾಲಿಸಿ ಬಂದು ಮೇಲುಕೋಟೆ ಬೆಟ್ಟದ ಹೊರ ಮೈಯಲ್ಲಿ (ಹೊಗರಕಲ್ಲಮ್ಮ ಗವಿಗುಡಿ) ಉಳಿಯುತ್ತಾಳೆ. ಈಕೆಗೂ ಚಲುವ ನಾರಾಯಣನಿಗೂ ಪ್ರಣಯ ಸಂಬಂಧವನ್ನು ಕಲ್ಪಿಸಿ ಸ್ವಾಮಿ ಹೇಗೆ ತನ್ನ ಪ್ರಿಯತಮೆಯನ್ನು ನೋಡಲು ಹೋಗುತ್ತಾನೆ ಎಂಬ ಒಂದು ಎಳೆ ಹೀಗಿದೆ.

ಚೆಂಡಕೋ ಚೆಲುವಯ್ಯ ತುಂಡಂಗಿ ಇಕ್ಕೊಂಡು
ಮುಂಗೈ ಮೇಲೆ ಗಿಡಗನಾಡಿಸಕೊಂಡು । ಹೋದಾನು

ವರನಂದಿಯ ಅರಮನೆಗೆ ॥
ಯಾವಾಗ ಬಂದ ಚೆಲುವಯ್ಯ ಅಂತೇಳಿ
ಮಂದಲಿಗೆ ಹಾಕಿ ಮಣೆಯಾಕಿ ಬಳದಿ
ಮಂಡೆಯ ಜಡೆನಾಕಿ ಮನಸಿಗೆ ಬಂದ
ಹೂವ ಮುಡಿದವಳೆ ವರನಂದಿ
-----------------------
-----------------------

**ಭುವನೇಶ್ವರಿ ಮಂಟಪ :**

ಮೇಲುಕೋಟೆಯ ದೊಡ್ಡಕಲ್ಯಾಣಿ ಅಥವಾ ಪಂಚಕಲ್ಯಾಣಿಯ ವಾಯವ್ಯ ದಿಕ್ಕಿನಲ್ಲಿ ನಿರ್ಮಾಣವಾಗಿರುವ ಭುವನೇಶ್ವರಿ ಮಂಟಪವು ಆಧ್ಯಾತ್ಮಿಕ, ತಾಂತ್ರಿಕ ಮತ್ತು ಶಿಲ್ಪಕಲೆಯ ದೃಷ್ಟಿಯಿಂದ ಗಮನಾರ್ಹವಾಗಿದೆ. ಮೈಸೂರು ಅರಸು ಮುಮ್ಮಡಿ ಕೃಷ್ಣರಾಜ ಒಡೆಯರ (ಟಿಪ್ಪು ನಂತರ) ಕಾಲದಲ್ಲಿ ಕ್ರಿ.ಶ. ೧೮೧೦ರಲ್ಲಿ ನಿರ್ಮಾಣವಾದ ಬಗ್ಗೆ ಶಾಸನಾಧಾರವಿದೆ. ಇದು ಭುವನದ ಅಥವಾ ವಿಶ್ವದ ಅಸ್ತಿತ್ವವನ್ನು ಪುರಾಣದ ಮತ್ತು ಉಪನಿಷತ್ತಿನ ಆಧಾರದ ಮೇಲೆ ಕಟ್ಟಲ್ಪಟ್ಟಿದೆ. ಭುವನವನ್ನು ಹೊತ್ತಿರುವ ಮತ್ತು ರಕ್ಷಿಸುತ್ತಿರುವ ಆದಿಕೂರ್ಮ, ಆದಿಶೇಷ, ಅಷ್ಟದಿಗ್ಗಜಗಳು, ಅಷ್ಟದಿಕ್ಪಾಲರೊಳಗೊಂಡಂತೆ ಸೂಚಿಸುವ ಮೂಲೆಗಳು, ಕಂಬಗಳು, ಮೆಟ್ಟಿಲುಗಳು, ಬೋದಿಗೆಗಳು, ಅಡ್ಡ ಹಲಗೆಗಳು ಇತ್ಯಾದಿ ವಾಸ್ತುಗಳು ವಿಶೇಷ ಅರ್ಥವನ್ನು ಕೊಡುತ್ತವೆ. ಎಲ್ಲವೂ ಎಂಟೆಂಟು ಸಂಖ್ಯೆಯಲ್ಲಿವೆ. ಒಳ ಮತ್ತು ಹೊರ ಸುತ್ತಿನ ಎಂಟು ಮತ್ತು ಎಂಟು ಹೀಗೆ ಒಟ್ಟು ಹದಿನಾರು ಕಂಬಗಳಲ್ಲಿ ರಾಮಾಯಣ, ಮಹಾಭಾರತ, ದಶಾವತಾರ ಹಾಗೂ ಪೌರಾಣಿಕ ಘಟನೆಗಳ ಪ್ರಮುಖ ದೃಶ್ಯಾವಳಿ ಮತ್ತು ಅನೇಕ ಬಿಡಿ ಶಿಲ್ಪಗಳನ್ನು ಕೆತ್ತಲಾಗಿದೆ. (ಎರಡು ಕಂಬಗಳಲ್ಲಿ ಮಾತ್ರ ಅಪೂರ್ಣವಾಗಿವೆ) ಇವುಗಳು ವಿಜಯನಗರ ಪ್ರಭಾವದ ಮೈಸೂರುಶೈಲಿಯ ಶಿಲ್ಪಗಳಾಗಿವೆ. ಆಂಜನೇಯನ ಹೆಗಲಮೇಲೆ ಕುಳಿತ ಲಕ್ಷ್ಮಣನಿಂದ ಇಂದ್ರಜಿತುವಿನ ಸಂಹಾರ, ರಾವಣನಿಂದ ಜಟಾಯು ಸಂಹಾರ, ವಾಲಿಸುಗ್ರೀವರ ಮುಷ್ಠಿ ಕಾಳಗ ಹಾಗೂ ಮರಗಳನ್ನು ಎತ್ತಿಕೊಂಡು ಹೊಡೆದಾಡುತ್ತಿರುವುದು, ರಾಮನಿಗೆ ತಾರೆ ಶರಣಾಗತಿ, ರಾಮ ಮರೆಯಲ್ಲಿ ನಿಂತು ವಾಲಿಗೆ ಬಾಣ ಬಿಡುತ್ತಿರುವುದು, ರಾಮನಿಂದ ರಾವಣ ಸಂಹಾರ, ರಾವಣನ ಇಪ್ಪತ್ತು ತೋಳುಗಳಲ್ಲಿ ಇಪ್ಪತ್ತು ಬಗೆಯ ಆಯುಧಗಳು, ದಶಕೋಟಿ ವಾನರರು, ಗಜಮುಖ ವಾನರರು, ಅರ್ಜುನನು ಮಾಯಾಯಕ್ಷಪಕ್ಷಿಗೆ ಬಾಣ ಬಿಡುತ್ತಿರುವುದು ಮುಂತಾದ ದೃಶ್ಯ ಶಿಲ್ಪಗಳನ್ನು ಕಾಣಬಹುದು. ಬಿಡಿ ಶಿಲ್ಪಗಳಾಗಿ ಗಣಪತಿ, ಸರಸ್ವತಿ,

ಜಟಾಯು, ಗರುಡ, ಹನುಮ, ಶ್ರೀರಾಮ, ಶ್ರೀಕೃಷ್ಣ, ವೇಣುಗೋಪಾಲ, ಬಲರಾಮ, ಹಯಗ್ರೀವ, ಮೇಲುಕೋಟೆಯ ಸ್ಥಳೀಯ ಆರಾಧ್ಯಮೂರ್ತಿಗಳಾದ ಚಲುವನಾರಾಯಣ, ಯೋಗಾನರಸಿಂಹ, ಮೇಲುಕೋಟೆ ನೆರಿಗೆ ಪಂಚೆ (ಪಂಚಕಚ್ಚೆ) ಉಟ್ಟಿರುವ ರಾಮಾನುಜರು, ಘೋಸಾಯಿಗಳು ಇತ್ಯಾದಿ ದೇವಾನುದೇವತೆಗಳೊಂದಿಗೆ ಕಲ್ಪತರು, ಕಾಮದೇನು, ಕಲ್ಕಿ, ಲತಾಂಗಿ, ವಂಶಾವಳಿ, ಲಂಬಸ್ತಿನಿ, (ಕೈಯಲ್ಲಿ ರುಂಡವಿಡಿದು ತಲೆಯ ಮೇಲೆ ಮಡಕೆ ಹೊತ್ತವಳು) ಜಟ್ಟಿ ಮುಂತಾದ ಶಿಲ್ಪಗಳು ಆಕರ್ಷಣೀಯವಾಗಿವೆ. ಜೈನಧರ್ಮದ ಸಾಮರಸ್ಯಕ್ಕೆ ಒಂದು ಕಂಬದಲ್ಲಿ ಗೊಮ್ಮಟೇಶ್ವರ ಶಿಲ್ಪವನ್ನು ಸಹ ಮೂಡಿಸಲಾಗಿದೆ.

ಅಷ್ಟದಿಕ್ಪಾಲಕರ ದಿಕ್ಕಿನಲ್ಲಿರುವ ಕಂಬಗಳಲ್ಲಿ ಪೂರ್ವಕ್ಕೆ ಇಂದ್ರ, ಆಗ್ನೇಯಕ್ಕೆ ಅಗ್ನಿ, ದಕ್ಷಿಣಕ್ಕೆ ಯಮ, ನೈರುತ್ಯಕ್ಕೆ ನಿರುತಿ, ಪಶ್ಚಿಮಕ್ಕೆ ವರುಣ, ವಾಯವ್ಯಕ್ಕೆ ವಾಯು, ಉತ್ತರಕ್ಕೆ ಕುಬೇರ, ಈಶಾನ್ಯಕ್ಕೆ ಈಶಾನ (ಶಿವ) ಶಿಲ್ಪಗಳನ್ನು ಕಾಣಬಹುದು. ಇವುಗಳು ಬಹಳ ಸ್ಫುಟವಾಗಿ ಸುಂದರವಾಗಿದ್ದು ಚಿತ್ರಕಲೆಗೆ ಪ್ರೇರಕವಾಗಿವೆ. ಬಿಳಿಆನೆ ಮೇಲೆ ಇಂದ್ರಾಣಿ ಜತೆ ಇಂದ್ರ, ಮೊಸಳೆ ಮೇಲೆ ವರುಣ, ಟಗರು ಮೇಲೆ ಅಗ್ನಿ, ಜಿಂಕೆ ಮೇಲೆ ವಾಯು, ಕೋಣನ ಮೇಲೆ ಯಮ, ಬಿಳಿ ಮೇಕೆಯ ಮೇಲೆ ಕುಬೇರ, ಪಿಶಾಚಿ ಮೇಲೆ ನೈಋತ್ಯ, ಹೋರಿ ಮೇಲೆ ಈಶಾನ–ಈ ವಾಹನಗಳ ಆಧಾರದ ಮೇಲೆ ಅಷ್ಟದಿಕ್ಪಾಲಕರನ್ನು ಸುಲಭವಾಗಿ ಗುರುತಿಸಬಹುದು.

ಇಡೀ ಭುವನೇಶ್ವರಿ ಕೂರ್ಮಚಕ್ರದ ಮೇಲೆ ನಿಂತಿದೆ. ತಳಪಾಯದ ದಕ್ಷಿಣ ದಿಕ್ಕಿಗೆ ಕೂರ್ಮತಲೆ, ಪೂರ್ವ ಮತ್ತು ಪಶ್ಚಿಮಕ್ಕೆ ಅದರ ಎರಡೆರಡು ಪಾದಗಳು, ಉತ್ತರಕ್ಕೆ ಬಾಲವಿದ್ದು, ಕೂರ್ಮಚಕ್ರ ಆಧಾರವಾಗಿದೆ. ಅದೇ ಎಂಟು ಮೂಲೆಗೆ ಐದು ತಲೆಯ ಆದಿಶೇಷ ಮತ್ತು ಎಡ–ಬಲಗಳಲ್ಲಿ ನಾಗರ ಪರಿವಾರ ಶಿಲ್ಪಗಳು ಮನೋಜ್ಞವಾಗಿವೆ. ಇನ್ನು ಉಳಿಕೆ ಎಂಟು ಮೂಲೆಗಳಲ್ಲಿ ಜೋಡಣೆಯಾದ ಎರಡು ಆನೆ ಶರೀರಕ್ಕೆ ಒಂದು ತಲೆಆನೆಯ ಚಿತ್ರ ಹೀಗೆ ಎಲ್ಲವೂ ಎಂಟೆಂಟು ಸಂಖ್ಯೆಯಲ್ಲಿ ಕೂಡಿ ಹದಿನಾರು ಮೂಲೆಗಳಿಂದಾಗಿವೆ. ಹೀಗಾಗಿ ಇದನ್ನು 'ಷೋಡಶ ಕಲಾತ್ಮಕ' ಭುವನೇಶ್ವರಿ ಎನ್ನುತ್ತಾರೆ. ಗೋಪುರದ ಒಳಮುಚ್ಚಳವು ನಾಭಿ ಅಥವಾ ಬಿಂದುವಿನಿಂದ ಪ್ರಾರಂಭವಾಗಿ ವಿಸರ್ಗ ಮತ್ತು ತ್ರಿಕೋಣದಲ್ಲಿ ಮುಂದುವರಿದು ಚಂದ್ರ (ಪುರುಷ)ನ ಶೋಡಶ ಕಲೆಗಳ ರೂಪದಲ್ಲಿ ವಿಸ್ತರಿಸಿಕೊಂಡಿದೆ. ಗೋಪುರದ ಒಳ ಮೈಯಲ್ಲಿ ಅರುವತ್ತನಾಲ್ಕು ತ್ರಿಕೋನಗಳು ಬರುವಂತೆ ಮೇಲ್ಹಾವಣಿಯನ್ನು ಯೋಜಿಸಲಾಗಿದೆ. ಇದು ಲೌಕಿಕ ಪ್ರಪಂಚದ ಅರುವತ್ತನಾಲ್ಕು ವಿದ್ಯೆ ಎಂದು ಹೇಳಲಾಗುತ್ತದೆ.

ಇನ್ನು ಗೋಪುರದ ಮೇಲ್ಭಾಗದ ಶಿಖರ ಹಾಗೂ ಸುತ್ತಲೂ ಕಾಣುವ ಗೂಡುಗಳು ಮತ್ತು ಅದರ ಮುಡಿಗಳು ಬಹಳ ವೈಶಿಷ್ಟ್ಯ ಪೂರ್ಣವಾಗಿವೆ. ಇವುಗಳಲ್ಲಿ ಎಂಟು ದ್ರಾವಿಡ ಶೈಲಿಯಲ್ಲಿಯೂ, ಇನ್ನುಳಿದ ಎಂಟು ವೇಸರ ಶೈಲಿಯಲ್ಲಿಯೂ ಇವೆ. ಇವೂ ಸಹ ಎಂಟು ಎಂಟು ಹಂತಗಳಲ್ಲಿವೆ. ಷೋಡಶ ಸಂಖ್ಯೆಯ ಗೂಡುಗಳಲ್ಲಿ ಈಗ ಯಾವ ಮೂರ್ತಿಗಳೂ ಕಾಣಬರುವುದಿಲ್ಲ. ಗೂಡುಗಳ ನಡು ನಡುವೆ ಸುಂದರವಾದ ಪೀಠಗಳ ಮೇಲೆ ಗರುಡ, ಹನುಮರ ಮೂರ್ತಿಗಳಿವೆ. ಇವೂ ಸಹ ಎಂಟು ಎಂಟು ಸಂಖ್ಯೆಯಲ್ಲಿವೆ. ಇನ್ನು ಮುಖ್ಯಶಿಖರದ ರಚನೆಯು ಕುಂಬಾಕೃತಿಯಲ್ಲಿದೆ. ಕುಂಬದಲ್ಲಿ ನೈರುತ್ಯಕ್ಕೆ ಅದೂ ಚಲುವನಾರಾಯಣಸ್ವಾಮಿ ದೇವಾಲಯಕ್ಕೆ ಅಭಿಮುಖವಾಗಿ ಪರಮಪದನಾಥಮೂರ್ತಿಯನ್ನು ಇರಿಸಲಾಗಿದೆ. (ಪಾಂಚರಾತ್ರ ಆಗಮದಂತೆ ವಾಸುದೇವನಿಗೆ ಪರಮಪದನಾಥ ಎಂದು ಹೇಳಲಾಗಿದೆ) ಎಡತೊಡೆಯ ಮೇಲೆ ಲಕ್ಷ್ಮಿಯನ್ನು ಕುಳ್ಳಿರಿಸಿಕೊಂಡು ಬಲಗಾಲನ್ನು ಕೆಳಗೆ ಇಳಿಬಿಡಲಾಗಿದೆ. ಗೋಪುರದ ಇಡೀ ಭಾಗವನ್ನು ಇಟ್ಟಿಗೆ ಮತ್ತು ವಜ್ರಗಾರೆಯಿಂದ ಮಾಡಲ್ಪಟ್ಟಿದೆ. ತುದಿಯಲ್ಲಿದ್ದ ಪಂಚಲೋಹದ ಕಳಸವು ಮುಖ್ಯ ದೇವಾಲಯದಲ್ಲಿ ಇದೆ ಎಂಬ ವಿಷಯ ತಿಳಿದು ಬರುತ್ತದೆ.

## ಕೆರೆತೊಣ್ಣೂರು ದೇವಾಲಯಗಳು

ಮೇಲುಕೋಟೆಗೆ ದಕ್ಷಿಣದಲ್ಲಿರುವ ಈ ಊರು ಪ್ರಾಚೀನ ಶಾಸನಗಳಲ್ಲಿ ತೊಣ್ಣನೂರು, ತೊಂಡನೂರು, ತೊಂಣೂರು ಎಂದೆಲ್ಲಾ ಉಲ್ಲೇಖಿತಗೊಂಡು, ಅನಾದಿ ಹಿರಿಯ ಅಗ್ರಹಾರ 'ಯಾದವನಾರಾಯಣಾದ್ರಿ ಚತುರ್ವೇದಿ ಮಂಗಲ' ಎಂಬ ಅಭಿದಾನವನ್ನು ಪಡೆದಿತ್ತು. ರಾಮಾನುಜರು ಮೇಲುಕೋಟೆಗೆ ಹೋಗುವ ಮುನ್ನ ನಾಲ್ಕಾರು ವರ್ಷ ಇಲ್ಲಿಯೇ ಇದ್ದು ಶ್ರೀ ವೈಷ್ಣವ ಧರ್ಮಕ್ಕೆ ಭದ್ರಬುನಾದಿ ಹಾಕಿದರು ಎಂದು ತಿಳಿಯುತ್ತದೆ. ತೊಂಡ ಎಂದರೆ ಭಕ್ತ; ಭಕ್ತರಿದ್ದ ಊರು ತೊಂಡನೂರು ಎಂದಾಯಿತು ಎಂದು ಹೇಳಲಾಗುತ್ತದೆ. ಬೆಟ್ಟಗುಡ್ಡಗಳ ನಡುವೆ ಇರುವ ಇಲ್ಲಿನ ವಿಶಾಲವಾದ ಕೆರೆಯ ನೀರು ಖನಿಜಾಂಶಗಳಿಂದ ತುಂಬಿದ್ದು ಕೋಡಿಭಾಗದ ಮದಗ ಎಂಬ ಜಾಗದಲ್ಲಿ ಮೈಯೊಡ್ಡಿದರೆ ತೊನ್ನುರೋಗ ನಿವಾರಣೆಯಾಗುವುದೆಂಬ ನಂಬಿಕೆಯಿಂದ ತೊನ್ನೂರು–ತೊಣ್ಣೂರು ಆಯಿತು ಎಂದೂ ಸಹ ಹೇಳುತ್ತಾರೆ. ಮೇಲುಕೋಟೆ ಮಗ್ಗುಲಿನ ಈ ಸ್ಥಳ ಹೊಯ್ಸಳರಿಗೆ ಬೇಸಿಗೆ ರಾಜಧಾನಿಯಾಗಿತ್ತು ಎಂಬ ವಿಷಯಕ್ಕೆ ಶಾಸನಾಧಾರಗಳಿವೆ. ರಾಜ ವಿಷ್ಣುವರ್ಧನನ ಮಗಳಿಗೆ ರಾಮಾನುಜರಿಂದ ರೋಗ ನಿವಾರಣೆಯಾದದ್ದು; ರಾಜ

ಶ್ರೀವೈಷ್ಣವ ಧರ್ಮಾವಲಂಬಿಯಾದದ್ದು; ಜೈನರನ್ನು ವಾದದಲ್ಲಿ ಸೋಲಿಸಿದ್ದು; ಬೆಟ್ಟದ ನಡುವೆ ಹರಿಯುತ್ತಿದ್ದ ಒಂದು ಹಳ್ಳಕ್ಕೆ ಅಣೆಹಾಕಿ ಕೆರೆ ನಿರ್ಮಿಸಿದ್ದು ರಾಮಾನುಜರೇ ಎಂದು ನಂಬಲಾಗಿದೆ. ಈ ಕೆರೆ ಹೇಗಿತ್ತೆಂಬುದಕ್ಕೆ ಕ್ರಿ.ಶ. ೧೭೪೬ ರಲ್ಲಿ ಹೈದರಾಬಾದಿನ ದಖನ್ ಸುಬೇದಾರನ ಕುಮಾರ ನಾಸಿರ್‌ಜಂಗ್ ಇತ್ತ ಬಂದಾಗ ಮುತ್ತಿನಂತೆ ಹೊಳೆಯುತ್ತಿದ್ದ ಕೆರೆಯ ನೀರನ್ನು ಕಂಡು 'ಮೋತಿ ತಲಾಬ್' (ಮುತ್ತಿನ ಸರೋವರ) ಎಂದು ಕರೆದ. ಈಗಲೂ ಆ ಪದಪ್ರಯೋಗ ಬಳಕೆಯಾಗುತ್ತಿದೆ.

ನಂಬಿ ನಾರಾಯಣ :

ಇಲ್ಲಿಯ ದೇವಾಲಯಗಳಲ್ಲಿ ಹೊಯ್ಸಳ ವಿಷ್ಣುವರ್ಧನನ ಕಾಲದ ನಂಬಿನಾರಾಯಣ ಗುಡಿ ಅತ್ಯಂತ ಪ್ರಾಚೀನವಾಗಿದೆ. ನಂಬಿದವರನ್ನು ಕೈಬಿಡದ ದೇವರು, ನಂಬಿ ಎಂಬ ಭಕ್ತನಿಗೆ ವರಕರುಣಿಸಿದ್ದರಿಂದ ನಂಬಿನಾರಾಯಣ ಎಂಬ ಹೆಸರು ಅನ್ವರ್ಥವಾಗಿದೆ ಎನ್ನಲಾಗಿದೆ. ವಿಷ್ಣುವರ್ಧನನು ಚೋಳರ ಮೇಲೆ ಕ್ರಿ.ಶ. ೧೧೧೧ಳರಲ್ಲಿ ವಿಜಯ ಸಾಧಿಸಿದ ನೆನಪಾಗಿ ತನ್ನ ಸಾಮ್ರಾಜ್ಯದಲ್ಲಿ ನಿರ್ಮಿಸಿದ ಮೂರು ನಾರಾಯಣ ದೇವಾಲಯಗಳಲ್ಲಿ ಇದೂ ಒಂದೆಂಬ ಅಭಿಪ್ರಾಯವಿದೆ. ಮತ್ತೆರಡು ತಲಕಾಡಿನ ಕೀರ್ತಿನಾರಾಯಣ, ಬೇಲೂರಿನ ವಿಜಯನಾರಾಯಣ ಎಂದು ಹೇಳಲಾಗುತ್ತದೆ. ಈ ದೇವಾಲಯವನ್ನು ದೊರೆಯ ಅಪೇಕ್ಷೆಯಂತೆ ಆತನ ದಂಡನಾಯಕ ಸುರಗಿಯ ನಾಗಯ್ಯನು ಕಟ್ಟಿಸಿದನೆಂಬುದಕ್ಕೆ ಅಮ್ಮನವರ ಗುಡಿಯ ನವರಂಗದ ಒಂದು ಕಂಬದ ಬುಡದಲ್ಲಿ ಉಲ್ಲೇಖಿಸಿದೆ. ದೇವಾಲಯದ ಹೊರ ಪ್ರಾಕಾರದಲ್ಲಿರುವ ಲಕ್ಷ್ಮಿ ಗುಡಿಯು ಇದೇ ಅವಧಿಯಲ್ಲಿ ನಿರ್ಮಾಣವಾಗಿದೆ. ಹೀಗಾಗಿ ಮೂಲತಃ ನಂಬಿನಾರಾಯಣನ ನಾಮಾಂಕಿತ ಲಕ್ಷ್ಮೀನಾರಾಯಣ ಎಂತಲೇ ಆಗಿದೆ. ಇಡೀ ದೇವಾಲಯವನ್ನು ಅವಲೋಕಿಸಿದಾಗ ಚಾಲುಕ್ಯ ವಾಸ್ತುಶೈಲಿಯ ಅನುಕರಣೆಯ ಛಾಯೆಯನ್ನು ಕಾಣಬಹುದು. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಇರುವ ೨೦ ದತ್ತಿಶಾಸನಗಳಲ್ಲಿ ಹತ್ತು ಕನ್ನಡದಲ್ಲಿದ್ದರೆ; ಉಳಿದವು ತಮಿಳಿನಲ್ಲಿವೆ. ಇಲ್ಲಿಯ ಶಾಸನಗಳಿಂದ ಈ ದೇವಾಲಯವು ಹೊಯ್ಸಳ ರಾಜರಾದ ವಿಷ್ಣುವರ್ಧನ, ಇಮ್ಮಡಿಬಲ್ಲಾಳ ಹಾಗೂ ಮುಮ್ಮಡಿ ನರಸಿಂಹನ ಕಾಲದಲ್ಲಿ ಹಂತಹಂತವಾಗಿ ಅಭಿವೃದ್ಧಿ ಹೊಂದಿದ ವಿಷಯ ತಿಳಿಯುತ್ತದೆ. ಮೂಲಗರ್ಭಗೃಹ, ಅಂತರಾಳ, ನವರಂಗ ಭಾಗವು ವಿಷ್ಣುವರ್ಧನನ ಕಾಲದ ಬೆಣಚುಕಲ್ಲಿನ ರಚನೆಯಾಗಿದ್ದು, ಚೋಳ ಪ್ರಭಾವದೊಂದಿಗೆ ದ್ರಾವಿಡ ಶೈಲಿ ಎದ್ದು ಕಾಣುತ್ತದೆ. ಗರ್ಭಗೃಹದಲ್ಲಿ ಆರಡಿ ಎತ್ತರದ ನಾರಾಯಣ ಶಿಲ್ಪವಿದ್ದರೆ, ಅಂತರಾಳದ ಬಾಗಿಲವಾಡದ ಲಲಾಟದಲ್ಲಿ ಗಜಲಕ್ಷ್ಮಿ ಕೆತ್ತನೆ ಇದೆ. ನವರಂಗದ ನಡುವಣ

ಚೆರಕಿಕಂಬಗಳು ಹೂವಿನ ಮತ್ತು ಮಣಿಗಳ ಕೆಲಸದಿಂದ ಚಿತ್ತಾಕರ್ಷಕವಾಗಿವೆ. ಭುವನೇಶ್ವರಿಯಲ್ಲಿ ಇಳಿಬಿದ್ದ ಕಮಲಮೊಗ್ಗು ಹಾಗೂ ಅಷ್ಟದಿಕ್ಪಾಲಕರಿಂದ ಅಲಂಕರಿಸಲಾಗಿದೆ. ದೇವಾಲಯದ ಭಿತ್ತಿಯು ಕಿರುದೇವಕೋಷ್ಠ, ಅರೆಗಂಬ ಹಾಗೂ ಕಿರುಶಿಖರಗಳಿಂದ ಕೂಡಿದ್ದು ನಿರಾಡಂಬರವಾಗಿದೆ. ಹೊರ ಪ್ರಕಾರದ ಲಕ್ಷ್ಮಿಗುಡಿಯು ಇದೇ ಕಾಲದ ರಚನೆಯಾಗಿರುವುದಕ್ಕೆ ಕ್ರಿ. ಶ. ೧೧೨೦ರ ಶಾಸನದ ಆಧಾರವಿದೆ. ಈ ದೇವಾಲಯದಲ್ಲಿರುವ ಮುಖಮಂಟಪ, ಸುತ್ತಲಿನ ಒಳಪ್ರಕಾರ, ಹೊರಪ್ರಕಾರ ಹಾಗೂ ಮಹಾದ್ವಾರಗಳು ಎರಡನೆಯ ಹಂತದ ರಚನೆಯಾಗಿದ್ದು, (ಇಮ್ಮಡಿ ಬಲ್ಲಾಳ) ಇದನ್ನು ಓಲಗಸಾಲೆ ಎಂದು ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಗುಡಿಯ ಮೇಲಿನ ಇಟ್ಟಿಗೆ ಶಿಖರವೂ, ವರ್ತುಲಾಕಾರದ ೫೦ ಕಂಬಗಳಿರುವ ಮುಖಮಂಟಪವೂ, ಅಷ್ಟಮುಖಾಕೃತಿಯ ೪೦ ಕಂಬಗಳಿರುವ ಪಾತಾಳಂಕಣವೂ ವಿಜಯನಗರ ಕಾಲದ ಶೈಲಿಯಲ್ಲಿವೆ. ದೇವಾಲಯ ಮಹಾದ್ವಾರದ ಮುಂದೆ ೧೬ ಮೂಲೆಗಳುಳ್ಳ ಗರುಡಗಂಬವಿದೆ.

**ಕೃಷ್ಣಪರಿವಾರ :**


ಇಲ್ಲಿಯ ಮತ್ತೊಂದು ಪ್ರಸಿದ್ಧ ಕೃಷ್ಣದೇವಾಲಯ ಹೊಯ್ಸಳರ ಕಾಲದಲ್ಲಿಯೇ ಕ್ರಿ.ಶ. ೧೧೫೮ರಲ್ಲಿ ಕಾರಿಕುಡಿಯ ತಿಲ್ಲೈಕೊತ್ತಾಂಡಿ ದಂಡನಾಯಕನು ಯಾದವನಾರಾಯಣ ಚುತುರ್ವೇದಿ ಮಂಗಲದ ಮಧ್ಯದಲ್ಲಿ ವೀಣ್ಣಾಗಾರವನ್ನು ನಿರ್ಮಿಸಿ, ವಿಟ್ಟಿರುಂದ ಪೆರುಮಾಳೆ (ಕುಳಿತಿರುವ ದೇವರು) ದೇವರನ್ನು ಪ್ರತಿಷ್ಠಾಪಿಸಿದ್ದು ತಿಳಿದು ಬರುತ್ತದೆ. ಗರ್ಭಗೃಹ, ಅಂತರಾಳ, ನವರಂಗದ ಭಾಗವು ಮೂಲತಃ ದ್ರಾವಿಡ ಶೈಲಿಯುಲ್ಲಿರುವ ಚೋಳ ಮಾದರಿಯ ನಿರ್ಮಾಣವಾಗಿದೆ. ಈ ದೇವಾಲಯದ ಭಿತ್ತಿಯು ಅಲಂಕಾರಿಕ ಅರೆಗಂಬ, ದೇವಕೋಷ್ಠಗಳನ್ನು ಹೊಂದಿದ್ದು, ಮೇಲಿರುವ ಇಟ್ಟಿಗೆಯ ಶಿಖರವು ತಂಜಾವೂರು ದೇವಾಲಯದ ಮಾದರಿಯನ್ನು ಹೋಲುತ್ತದೆ ಎಂಬ ಅಭಿಪ್ರಾಯವಿದೆ. ಗರ್ಭಗುಡಿಯುಲ್ಲಿರುವ ಕೃಷ್ಣ, ರುಕ್ಮಿಣಿ, ಸತ್ಯಭಾಮ ಮೂರು ಬೃಹತ್ ಶಿಲಾಮೂರ್ತಿಗಳು ಚೋಳಶಿಲ್ಪವನ್ನು ಹೋಲುತ್ತವೆ. ಉತ್ಸವ ಮೂರ್ತಿ ಗೋಪಾಲಕೃಷ್ಣ ತನ್ನ ಬಲಗಾಲನ್ನು ಎಡಗಾಲಿನ ಹಿಂದಕ್ಕೆ ನೇರ ಹೆಜ್ಜೆ ಇರಿಸಿರುವುದು ಶಿಲ್ಪಶಾಸ್ತ್ರದಲ್ಲಿ ಅಪೂರ್ವವೆನಿಸಿದೆ. ಮುಂದೆ ಕ್ರಿ.ಶ. ೧೧೭೫ರಲ್ಲಿ ಹೊಯ್ಸಳ ಇಮ್ಮಡಿ ಬಲ್ಲಾಳನಿಂದ ಕೆಲವಷ್ಟು ರಚನೆಗಳು ಆದರೂ ವಿಜಯನಗರ ಕಾಲಕ್ಕೆ ಮತ್ತು ಅದರ ಶೈಲಿಗೆ ಬಹುಭಾಗದ ರಚನೆಗಳು ಸೇರ್ಪಡೆಯಾಗಿ ಇಡೀ ದೇವಾಲಯವನ್ನು ಭವ್ಯವಾಗಿಸಿದೆ. ಮಹಾದ್ವಾರ, ಗುಡಿಯ ಪ್ರಾಕಾರದ ಹೊರಗಿರುವ

ತೋರಣಗಂಬ, ವಿಜಯನಗರ ಶೈಲಿಯ ಹೆಗ್ಗುರುತಾಗಿ ಹಂಪೆಯಲ್ಲಿನ ತೋರಣಗಂಬವನ್ನು ಹೋಲುತ್ತದೆ. ವಸಂತ ಮಂಟಪವೂ ಆಕರ್ಷಕವಾಗಿದೆ. ಈ ಗುಡಿಯಲ್ಲಿನ ಒಂದು ಭಾಗದಲ್ಲಿ ಮುದ್ದಾದ ಬೆಣ್ಣೆಕೃಷ್ಣ ಮೂರ್ತಿಯನ್ನು ಚೋಳರಾಜ್ಯದ ಮಟ್ಟಿಯಬಾಕಂ ಊರಿನ ಅಂಡಾಳ್ ಎಂಬಾಕೆ ಪ್ರತಿಷ್ಠಾಪಿಸಿದ ಅಂಶವೂ ತಿಳಿದು ಬರುತ್ತದೆ (ಈಕೆಯು ಪತಿಯೂ ಸೇರಿ ದೇವರ ಸೇವಾದ್ಯವಸರಗಳಿಗೆ ದತ್ತಿಬಿಟ್ಟ ಪ್ರಸ್ತಾಪವಿದೆ.) ಈ ಮೂರ್ತಿಯು ಈಗ ನಂಬಿನಾರಾಯಣ ದೇವಾಲಯದಲ್ಲಿದೆ.


ಸಿಂಗಪೆರುಮಾಳ್ :

ನಂಬಿನಾರಾಯಣ ಗುಡಿಯ ಉತ್ತರಕ್ಕೆ ಸಣ್ಣಗುಡ್ಡದ ಮೇಲೆ ಯೋಗಾನರಸಿಂಹ ದೇವಾಲಯವಿದೆ. ಶಾಸನೋಕ್ತ ಸಿಂಗಪೆರುಮಾಳ್ ಕ್ರಿ.ಶ. ೧೧೫೨ರ ಗುಡಿ ಇದೇ ಆಗಿದೆ. ಚೋಳ ಶೈಲಿಯಲ್ಲಿರುವ ಈ ಹೊಯ್ಸಳ ದೇವಾಲಯವು ಗರ್ಭಗೃಹ, ಎರಡಂಕಣದ ಸುಖನಾಸಿ, ಪ್ರದಕ್ಷಿಣ ಪಥ, ವಿಶಾಲವಾದ ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಮಂಡಿಯ ಮೇಲೆ ಮುಂಗೈಗಳನ್ನಿಟ್ಟುಕೊಂಡು ಪದ್ಮಪೀಠದ ಮೇಲೆ ಯೋಗಮುದ್ರೆಯಲ್ಲಿ ಕುಳಿತಿರುವ ಕಿರೀಟಧಾರಿ ನರಸಿಂಹನ ಹಿಂಗೈಗಳಲ್ಲಿ ಚಕ್ರ, ಶಂಖಗಳಿವೆ. ನವರಂಗದ ಒಂದು ಭಾಗದಲ್ಲಿ ರಾಮಾನುಜಾಚಾರ್ಯರ ಶಿಲ್ಪವಿದೆ. ಪದ್ಮಾಸೀನರಾಗಿರುವ ಆಚಾರ್ಯರ ತಲೆಯ ಮೇಲೆ ಏಳು ಹೆಡೆಯ ಆದಿಶೇಷ ಛತ್ರಿಯಂತೆ ಶೋಭಿಸಿರುವುದು ಶಿಲ್ಪದಲ್ಲಿ ಜೀವಂತಿಕೆ ಕಂಡಂತಿದೆ; ಇಲ್ಲಿಯೇ ಆಚಾರ್ಯರು ಆದಿಶೇಷನ ನೆರವಿನಿಂದ ಸಾವಿರ ಜೈನರೊಡನೆ ವಾದಮಾಡಿ ಗೆದ್ದರೆಂಬುದು ಐತಿಹ್ಯವಾಗಿ ಉಳಿದು ಬಂದಿದೆ. ಊರಾಚೆ ಗದ್ದೆಯ ನಡುವಿರುವ ಕೈಲಾಸೇಶ್ವರ ಗುಡಿಯನ್ನು ಶಾಸನದಲ್ಲಿ ಕೈಲಾಸಉಡೆಯವರ್ ಎಂದಿದೆ. ಈ ಗುಡಿಯು ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿರುವ ಸರಳ ರಚನೆಯಾಗಿದೆ. ನವರಂಗದಲ್ಲಿ ಗ್ರಾನೈಟ್ ಶಿಲೆಯ ವೃತ್ತಾಕಾರದ ಮತ್ತು ೧೬ ಕೋನಗಳುಳ್ಳ ಕಂಬಗಳು ಮತ್ತು ಮುಖಮಂಟಪಗಳಲ್ಲಿ ಎಂಟು ಕೋನಗಳುಳ್ಳ ಕಂಬಗಳು ಕಾಣುಬರುತ್ತವೆ. ಇದು ಒಂದನೆಯ ನರಸಿಂಹನ ಕಾಲದ ಕ್ರಿ.ಶ. ೧೧೫೮ರ ರಚನೆ ಎಂಬ ಅಭಿಪ್ರಾಯವಿದೆ.

ಊರಿಂದ ಚಿನಕುರಳಿ ರಸ್ತೆಯಲ್ಲಿ ಸಣ್ಣದಿಬ್ಬದ ಮೇಲಿರುವ ಸಯ್ಯದ್ ಸಾಲಾರ್ ಮಸೂದ್ ಸಾಬ್ ಎಂಬ ದರ್ಗ ದೆಹಲಿಯ ಮುಸಲ್ಮಾನ ದಂಡ ನಾಯಕ ಸಾಲಾರ್ ಮಸೂದನ ಗೋರಿಯಾಗಿದೆ. ಇಲ್ಲಿಯೇ ಕ್ರಿ.ಶ. ೧೩೫೮ರಲ್ಲಿ




ನಿಷ್ಕಾಮೇಶ್ವರ ದೇವಾಲಯ. ಹೊಸಕೋಟೆ.




ಕೃಷ್ಣ ದೇವಾಲಯ ಒಳಾವರಣ. ಕಿರೆತೊಣ್ಣೂರು.




ಈಶ್ವರ ದೇವಾಲಯ. ಅರಕೆರೆ.



ಮುಳುಗಡೆಯಲ್ಲಿ ವೇಣುಗೋಪಾಲ ದೇವಾಲಯ. ಕನ್ನಂಬಾಡಿ.



ಸ್ಥಳಾಂತರ ವೇಣುಗೋಪಾಲ ದೇವಾಲಯ. ಕನ್ನಂಬಾಡಿ.



ಸ್ಥಳಾಂತರ ಕಂಬಗಳು. ವೇಣುಗೋಪಾಲ ದೇವಾಲಯ. ಕನ್ನಂಬಾಡಿ.

ಆತ ಮಡಿದನೆಂಬ ವಿಷಯ ತಿಳಿದುಬರುತ್ತದೆ. ಹೈದರಾಲಿ ಈ ದರ್ಗಾಕ್ಕೆ ದತ್ತಿಬಿಟ್ಟ ವಿಚಾರವೂ ಶಾಸನೋಕ್ತವಾಗಿದೆ.

**ಜನಪದರ ಬಲರಾಮನ (ಮೇಣಿ) ಕಲ್ಲು :**

ಇಲ್ಲಿಯ ಶ್ರೀಕೃಷ್ಣ ದೇವಾಲಯದ ಬಲಭಾಗದಲ್ಲಿ ಶಾಸನದ ಕಲ್ಲು ನೆಡುವಂತೆ 'ನೇಗಿಲು' ಗುರುತಿನ ಶಿಲೆಯನ್ನು ನೆಡಲಾಗಿದೆ. ಇದನ್ನು ಬಲರಾಮನ (ಮೇಣಿ) ಕಲ್ಲು ಎನ್ನುತ್ತಾರೆ. ಕೃಷ್ಣ ಗೋವುಗಳ ಪಾಲಕನಾದರೆ ಆತನ ಅಣ್ಣ ಬಲರಾಮ ನೇಗಿಲು ಹೂಡುವ ರೈತ ಎಂಬುದು ನಮ್ಮ ಜನಪದರ ನಂಬಿಕೆ. ಪುರಾಣದಲ್ಲಿ ಬಲರಾಮನ ಆಯುಧವೂ ನೇಗಿಲೇ ಆಗಿದೆ. ಹಳ್ಳಿಯ ಪೌರಾಣಿಕ ನಾಟಕಗಳಲ್ಲಿ ಬಲರಾಮ ಪಾತ್ರಧಾರಿ ಅಲಂಕರಿಸಿದ ನೇಗಿಲ ಆಯುಧವನ್ನು ಹೊತ್ತು ಬರುತ್ತಾನೆ. ಉಗಾದಿ ಹಬ್ಬದಲ್ಲಿ ಊರಿನಜನ ಈ ಕಲ್ಲಿಗೆ ಪೂಜೆ ಸಲ್ಲಿಸಿ, ಅಲಂಕರಿಸಿದ ಎತ್ತುಗಳನ್ನು ಕಟ್ಟಿ ಮುಂಗಾರು ಮಳೆಯ 'ಹೊನ್ನೇರು' ಹೂಡುವುದು ಸಂಪ್ರದಾಯವಾಗಿದೆ.

**ಸುಂಕಾತೊಣ್ಣೂರು :**

ಈ ಊರು ಕೆರೆತೊಣ್ಣೂರಿಗೆ ಹತ್ತಿರದಲ್ಲೇ ಇದೆ. ಶಾಸನದಲ್ಲಿ ಸುಂಕತೊಂಡನೂರು ಎಂದು ಉಲ್ಲೇಖಿಸಿದೆ. ಊರ ನಡುವೆ ಇರುವ ಚನ್ನಕೇಶವ ದೇವಾಲಯು ೧೨ನೇ ಶತಮಾನದ ಹೊಯ್ಸಳ ರಚನೆಯಾಗಿದೆ. ಬಹುಕೋನಾಕಾರದ ತಳವಿನ್ಯಾಸವನ್ನು ಹೊಂದಿರುವ ಇದು ಗರ್ಭಗೃಹ, ತೆರೆದ ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿ ಗರುಡ ಪೀಠದ ಮೇಲೆ ಚತುರ್ಭುಜಧಾರಿ ಕೇಶವನ ಶಿಲ್ಪವಿದ್ದು, ಚತುರ್‌ಶಾಖಾಲಂಕೃತ ಬಾಗಿಲವಾಡವಿದೆ. ಅಂತರಾಳದ ಇಕ್ಕೆಲಗಳಲ್ಲಿ ದ್ವಾರ ಪಾಲಕರಿದ್ದು, ನವರಂಗದ ಕಂಬಗಳು ಆಕರ್ಷಕವಾಗಿವೆ. ಕಮಲಾಲಂಕೃತ ಭುವನೇಶ್ವರಿ ಇದೆ. ಗರ್ಭಗುಡಿಯು ದ್ರಾವಿಡ ಶಿಖರದಿಂದ ಕೂಡಿದ್ದು, ಗರ್ಭಗೃಹ ಹಾಗೂ ನವರಂಗದ ಭಿತ್ತಿಯಲ್ಲಿ ದೇವಕೋಷ್ಠಗಳಿವೆ. (ಈಗ ಖಾಲಿ ಕಾಣಿಸುತ್ತಿವೆ.) ಭಿತ್ತಿಯನ್ನು ವಜ್ರ, ಕಮಲ, ಅಲಂಕಾರಿಕ ಅರೆಕಂಬ ಹಾಗೂ ಸ್ತಂಭಗೋಪುರ ಮಾದರಿಗಳಿಂದ ಅಲಂಕರಿಸಲಾಗಿದೆ.

**ಸುಂಕಾತೊಣ್ಣೂರು ರಾಕಾಸಮ್ಮ :**

ಊರ ಪ್ರವೇಶದಲ್ಲಿಯೇ ಈ ರಾಕ್ಷಸಮ್ಮನ ಗುಡಿ ಇದೆ. ಕರಿಭಂಟನಕಾಳಗಕ್ಕೆ ಸಂಬಂಧಪಟ್ಟಂತೆ ಘಟನಾವಳಿಯ ಐತಿಹ್ಯವಾಗಿ ಈ ಗುಡಿ ಮತ್ತಿತರ ಐತಿಹ್ಯಗಳು

ಕಾಣಬರುತ್ತವೆ. ಗುಡಿಯಲ್ಲಿ ಕರಿಭಂಟ ಮತ್ತು ಉದ್ದಂಡಿಯರ ಕಾಳಗ ಸೂಚಿಸುವ ಶಿಲ್ಪವಿದೆ. ಮಾರುವೇಷದ ಉದ್ದಂಡಿರಾಕ್ಷಸಿ ಮತ್ತು ಕರಿಭಂಟರನ್ನು ರಾತ್ರಿವೇಳೆ ಇರಿಸಿದ್ದ ಗುಡಿ ಇದೇ ಎಂದು ಪಾಳುಗುಡಿಯನ್ನು ತೋರಿಸುತ್ತಾರೆ. ಇಲ್ಲಿ ವಿಶೇಷವಾಗಿ ಕರಿಭಂಟನಿಗೆ ಕೊಟ್ಟಭಾಷೆಯನ್ನು ಉಳಿಸಿಕೊಳ್ಳಲಾಗದೆ ಕರಿಭಂಟನ ಸಾವಿಗೆ ನಾವೇ ಹೊಣೆಗಾರರೆಂದು ಅಗ್ನಿಗಾಹುತಿಯಾದ ಏಳುಮಂದಿ ಊರಿನ ಯಜಮಾನರ ಕುರುಹಾಗಿ ಏಳು ವೀರಗಲ್ಲುಗಳನ್ನು ರಾಕಾಸಮ್ಮಗುಡಿ ಬಳಿ ಕಾಣಬಹುದು. ಸಂಕ್ಷಿಪ್ತ ಕಥೆಯ ಪ್ರಕಾರ ತೊಂಡನೂರನ್ನು ಬೇತಾಳರಾಯ ಎಂಬುವನು ಆಳುತ್ತಿದ್ದನೆಂದು; ಈ ನಡುವೆ ಹಳೇಬೀಡಿನಲ್ಲಿ ಆಳುತ್ತಿದ್ದ ಬಲ್ಲಾಳರಾಯನ ಆಹ್ವಾನದ ಮೇಲೆ ಈ ಕಡೆ ಬಂದಿದ್ದ ತಲಕಾಡಿನ ರಾಜಕುಮಾರ ಕರಿಭಂಟ (ಕರಿರಾಯ)ನಿಗೂ, ಉದ್ದಂಡಿಯ ಮಗಳು ಪುಂಡರೀಕಾಕ್ಷಿಗೂ ಅನಿರೀಕ್ಷಿತ ಭೇಟಿಯಾಗಿ ಪ್ರೀತಿಸಿ ಗಾಂಧರ್ವ ವಿವಾಹ ಮಾಡಿಕೊಂಡರೆಂದೂ; ತನ್ನ ತಮ್ಮ ಬೊಮ್ಮರಾಕ್ಷಸನಿಗೆ ಮಗಳನ್ನು ಕೊಟ್ಟು ಮದುವೆಮಾಡಬೇಕೆಂದಿದ್ದ ಉದ್ದಂಡಿ ಕೋಪಗೊಂಡು ಮಾರುವೇಷದಲ್ಲಿ ಕರಿಭಂಟನನ್ನು ಹಿಂಬಾಲಿಸಿ ಸುಂಕತೊಣ್ಣೂರಿನಲ್ಲಿ ಕೊಂದಳೆಂದೂ; ನಂತರ ನಡೆದ ಯುದ್ಧದಲ್ಲಿ ಉದ್ದಂಡಿಯೂ ಸಾವಿಗೀಡಾದಳೆಂದೂ ತಿಳಿದುಬರುತ್ತದೆ. ಈ ಕಥೆ ಮೂಡಲಪಾಯ ಯಕ್ಷಗಾನದಲ್ಲಿ ಬರುತ್ತದೆ.

**ಹಳೇಬೀಡು ಕಂಭೇಶ್ವರ :**

ಪಾಂಡವಪುರದಿಂದ ಉತ್ತರಕ್ಕೆ ೧೦ ಕಿಲೋಮೀಟರ್ ದೂರದಲ್ಲಿದೆ. ಇದೊಂದು ಚಾರಿತ್ರಿಕವಾದ ಸ್ಥಳ. ಹೊಯ್ಸಳ ಮತ್ತು ವಿಜಯನಗರ ಕಾಲದ ಶಾಸನ –ಗಳಿವೆ. ಊರಾಚೆ ಇರುವ ಈಶ್ವರ ಗುಡಿಯೇ ಶಾಸನೋಕ್ತ ಕಂಭೇಶ್ವರ ದೇವಾಲಯ –ವಾಗಿದೆ. ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ನವರಂಗ ಹಾಗೂ ತೆರೆದ ಮುಖಮಂಟಪಗಳನ್ನು ಹೊಂದಿದೆ. ಮೂಲತಃ ಹೊಯ್ಸಳರ ರಚನೆಯಾಗಿದ್ದು ಇನ್ನೂರು ವರ್ಷಗಳ ಕಾಲ ಪಾಳುಬಿದ್ದ ದೇವಾಲಯವನ್ನು ಕ್ರಿ.ಶ. ೧೫೩೮ರಲ್ಲಿ ಜೀರ್ಣೋದ್ಧಾರ ಮಾಡಿದ ಪ್ರಸಂಗಕ್ಕೆ ಶಾಸನಾಧಾರವಿದೆ.

**ಹೊಸಕೋಟೆ ನಿಷ್ಕಾಮೇಶ್ವರ :**

ಪಾಂಡವಪುರದಿಂದ ಉತ್ತರಕ್ಕೆ ೧೨ ಕಿ.ಮೀ. ದೂರದಲ್ಲಿದೆ. ಊರಿನ ಹೊರಭಾಗದಲ್ಲಿರುವ ಈ ದೇವಾಲಯಕ್ಕೆ ಸಂಬಂಧಪಟ್ಟಂತೆ ಕ್ರಿ.ಶ. ೧೨೭೧ರ ಶಾಸನದ ಉಲ್ಲೇಖವಿದೆ. ಮೂರನೆಯ ನರಸಿಂಹನ ಕಾಲದಲ್ಲಿ ಸಮೀಪದ ಹೊನ್ನೆಮಡುವಿನ ಪಾಳೇಗಾರ ಭುಜಂಗರಾಯನು ಕಟ್ಟಿಸಿದನೆಂದು ಹೇಳಲಾಗುತ್ತದೆ. (ಇದು ಹೊಯ್ಸಳ ಥಣಾಯಕ ನಿಕ್ಕೇಶ್ವರನ ಹೆಸರಿನಲ್ಲಿ ನಿರ್ಮಾಣವಾದಂತಿದೆ.

ಶಾಸನದಲ್ಲಿಯೂ ನಿಕ್ಕೇಶ್ವರ ಎಂದು ಉಲ್ಲೇಖಿಸಿದೆ.) ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಅಷ್ಟಕೋನಾಕಾರದ ತೆರೆದ ಮಂಟಪಗಳನ್ನು ಹೊಂದಿದೆ. ಎದುರಲ್ಲಿ ಪುಷ್ಕರಣಿ ಇದೆ. ಗರ್ಭಗುಡಿಯಲ್ಲಿ ಲಿಂಗವಿದ್ದು ಎದುರಿಗೆ ನಂದಿ, ನವರಂಗದಲ್ಲಿ ಸಪ್ತಮಾತೃಕಾ ಶಿಲ್ಪಗಳಿವೆ. ಮೇಲಿನ ಭಿತ್ತಿನಲ್ಲಿ ಕಮಲಾಲಂಕಾರವಿದೆ. ಇತ್ತೀಚೆಗೆ ದೇವಾಲಯವನ್ನು ಯಥಾವತ್ತಾಗಿ ಜೀರ್ಣೋದ್ಧಾರ ಮಾಡಲಾಗಿದೆ.

ಮೇಲಿನ ಎರಡೂ ಊರುಗಳಿಗೆ ಸಂಬಂಧಿಸಿದಂತೆ ಐತಿಹ್ಯವಾಗಿ ಲೋಕಪಾವನಿ ನದಿ ದಂಡೆಯ ಮೇಲಿರುವ ಹೊನ್ನೆಮಡು ಎಂಬ ಊರಲ್ಲಿ ಅಚ್ಯುತರಾಯ ಮತ್ತು ಭುಜಂಗರಾಯ ಎಂಬ ಸಹೋದರ ಪಾಳೆಗಾರರು ಇದ್ದರಂತೆ, ಏನೋ ಅವರಲ್ಲಿ ವೈಮನಸ್ಸು ಬಂದು ಅಚ್ಯುತರಾಯ ಬೇರೆ ಒಂದು ಜಾಗಕ್ಕೆ ಹೋಗಿ ತಾತ್ಕಾಲಿಕವಾಗಿ ಬೀಡುಬಿಟ್ಟ, ನಂತರ ಅವನು ಸೂಕ್ತವಾದ ಇನ್ನೊಂದು ಜಾಗವನ್ನು ಹಿಡಿದು ಹೊಸದಾಗಿ ಕೋಟೆ ಕಟ್ಟಿಸಿಕೊಂಡು ಅಲ್ಲಿಗೆ ಹೋದ. ತಾತ್ಕಾಲಿಕವಾಗಿ ಬೀಡುಬಿಟ್ಟಿದ ಜಾಗ ಕ್ರಮೇಣ ಹಳೇಬೀಡಾಯಿತು. ಹೊಸಕೋಟೆ ಕಟ್ಟಿದ ಜಾಗ ಹೊಸಕೋಟೆಯಾಯಿತು. ಈ ಜಾಗದಲ್ಲಿ 'ಕನ್ನಪಳ್ಳಿ' ಎಂಬ ಸಸ್ಯಸೂಚಕವಾದ ಹಳ್ಳಿಯೊಂದಿತ್ತು.

## ಕನ್ನಂಬಾಡಿ ದೇವಾಲಯಗಳು

ಕನ್ನಂಬಾಡಿ ಅಣೆಕಟ್ಟು ಕಟ್ಟುವ ಮೊದಲು ಕಾವೇರಿ ತೀರದಲ್ಲಿ ನೆಲೆಗೊಂಡಿದ್ದ ಕನ್ನಂಬಾಡಿ ಗ್ರಾಮ ಸಂಸ್ಕೃತಿ ಸಮೃದ್ಧಿಯ ಗ್ರಾಮವಾಗಿತ್ತು. ಹಿಂದೆ ಕಣ್ವಋಷಿಗಳ ಆಶ್ರಮ ಪ್ರದೇಶವಾಗಿತ್ತೆಂದು ಅವರೇ ಪ್ರತಿಷ್ಠಾಪಿಸಿದ ಲಿಂಗವೇ ಕಣ್ವೇಶ್ವರ ಎಂದು ಪ್ರಸಿದ್ಧಿಯಾಯಿತು ಎಂಬ ಪ್ರತೀತಿ ಇದೆ. ಕನ್ನಂಬಾಡಿಯನ್ನು ಕಾಶಿಗೂ, ಕಾವೇರಿಯನ್ನು ಗಂಗೆಗೂ, ಗೋಪಾಲಕೃಷ್ಣನನ್ನು ಬಿಂದುಮಾಧವನಿಗೂ ಹೋಲಿಸಲಾಗುತ್ತಿತ್ತು. ಮುಳುಗಡೆಗೆ ಮುನ್ನ ಇಲ್ಲಿಂದ ಲಭ್ಯವಾಗಿರುವ ೨೪ ಶಾಸನಗಳು ಇಲ್ಲಿಯ ದೇವಾಲಯ ಮತ್ತಿತರ ಸಂಗತಿಗಳನ್ನು ಹೊರಚೆಲ್ಲಿದೆ. ಶಾಸನದಲ್ಲಿ ಕನಂಬಾಡಿ, ಕನ್ನಂಬಾಡಿ ಎಂದು ಉಲ್ಲೇಖಿಸಿ ಮಹಾ ಅಗ್ರಹಾರವಾಗಿತ್ತು ಎಂಬ ವಿಷಯವನ್ನು ತಿಳಿಸುತ್ತದೆ. ಕಣ್ವೇಶ್ವರ, ಗೋಪಾಲಕೃಷ್ಣ, ಮಹಾಲಕ್ಷ್ಮಿ ಇವು ಪ್ರಮುಖ ದೇವಾಲಯಗಳು.

ಇತ್ತೀಚಿನ ವರ್ಷಗಳಲ್ಲಿ ಕನ್ನಂಬಾಡಿ ಅಣೆಕಟ್ಟೆಯ ನೀರು ಬೇಸಿಗೆಯಲ್ಲಿ ಕೆಳಗಿಳಿದಾಗ ಗೋಪಾಲಕೃಷ್ಣ ದೇವಾಲಯವನ್ನು ಅಸಂಖ್ಯಾತ ಜನ ನೋಡಿ ತಣಿದಿದ್ದಾರೆ. ಅದೊಂದು ಬೃಹತ್ ದೇವಾಲಯ. ಹಿಂದೆ ಅದು ಊರಿನ ನಡುವೆ ಇತ್ತಂತೆ. ಇನ್ನು ಕಾವೇರಿನದಿ ತೀರದಲ್ಲಿಯೇ ಇರುವ ಕಣ್ವೇಶ್ವರ ಗುಡಿಯನ್ನು ಕ್ರಿ.ಶ.

೧೯೫೧ ಅಥವಾ ಕ್ರಿ.ಶ. ೧೯೫೨ರಲ್ಲಿ ನೋಡಿದ್ದನ್ನು ಕೆಲ ಹಿರಿಯರು ಹೇಳುತ್ತಾರೆ. ಈಗ ಅದೇ ಗೋಪಾಕೃಷ್ಣ ದೇವಾಲಯವನ್ನು ಸರಕಾರದ ಅನುಮತಿ ಪಡೆದು ವೈಜ್ಞಾನಿಕವಾಗಿ ಕಳಚಿ, ವಿಂಗಡಿಸಿ ನೀರಿನಂಚಿನ ಮೇಲ್ಭಾಗದ ವಿಶಾಲ ಜಾಗದಲ್ಲಿ ಯಥಾವತ್ತಾಗಿ ಜೋಡಣೆ ಮಾಡಲಾಗಿದೆ. ಈ ಸ್ಥಳಾಂತರದ ಹೊಣೆಯನ್ನು ಹೊತ್ತವರು ಹರಿಖೋಡೆ ಎಂಬ ಸಂಸ್ಥೆ ಅಥವಾ ದಾನಿ ಎಂದು ಉಲ್ಲೇಖಿಸಲಾಗಿದೆ.

ಪೂರ್ವಸ್ಥಳದಲ್ಲಿ ಕ್ರಿ.ಶ. ೧೩೦೦ರ ವೇಳೆಗಾಗಲೇ ಗೋಪಾಲಕೃಷ್ಣ ದೇವಾಲಯವಿದ್ದ ಅಂಶ ಬೆಳಕಿಗೆ ಬರುತ್ತದೆ. ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡಿರುವ ವಿಶಾಲವಾದ ಸಂಕೀರ್ಣದಲ್ಲಿ ಗರ್ಭಗೃಹ, ಸುಖನಾಸಿ, ನವರಂಗ, ತೆರೆದ ರಂಗಮಂಟಪ, ಗರುಡಗಂಬ, ಸುತ್ತಾಲಯ, ಕೈಸಾಲೆಮಂಟಪ ಮತ್ತು ಮಹಾದ್ವಾರಮಂಟಪಗಳನ್ನು ಒಳಗೊಂಡ ಒಳಪ್ರಕಾರ, ಯಾಗಶಾಲೆ, ಪಾಕಶಾಲೆ ಹಾಗೂ ವಿಶಾಲವಾದ ದ್ವಾರಮಂಟಪಗಳನ್ನೊಳಗೊಂಡ ಹೊರಪ್ರಾಕಾರಕ್ಕೆ ಎದುರಾಗಿ ಕಿರುಮಂಟಪವನ್ನು ಹೊಂದಿತ್ತು. ಗರ್ಭಗೃಹದ ಬಾಗಿಲವಾಡವು ಪಂಚಶಾಖಾಲಂಕೃತವಾಗಿದ್ದು; ಅಂತರಾಳದ ಬಾಗಿಲವಾಡದಲ್ಲಿ ಮಕರ ತೋರಣಗಳು, ಕಮಲಾಕೃತಿಯುಳ್ಳಿರುವ ನವರಂಗದ ಛತ್ತು ವೈವಿಧ್ಯಮಯವಾಗಿದ್ದು, ನಡುವಣ ಭುವನೇಶ್ವರಿ ಆಕರ್ಷಕವಾಗಿತ್ತು. ಪ್ರಧಾನ ದ್ವಾರವು ಮೇಲೆ ಪಂಚಶಿಖರ ಮಾದರಿಯನ್ನು ಹೊಂದಿದ್ದು, ಪಂಚಶಾಖಾಲಂಕೃತವಾಗಿತ್ತು. ನವರಂಗದ ಮುಂದಿರುವ ೧೩ ಅಂಕಣದ ತೆರೆದ ರಂಗಮಂಟಪವು ಹನ್ನೆರಡು ಮೂಲೆಯ ಇಳಿಜಾರಾದ ಛಾವಣಿಯನ್ನು ಹೊಂದಿದ್ದು, ಅಂಚಲ್ಲಿ ಸುಖಾಸನ (ಕಕ್ಷಾಸನ)ವಿತ್ತು. ರಂಗಮಂಟಪದ ಕಂಬ, ತೊಲೆ ಹಾಗೂ ಛತ್ತುಗಳನ್ನು ಕಮಲಾಲಂಕಾರದಿಂದ ಸುಂದರಗೊಳಿಸಲಾಗಿತ್ತು. ಈ ದೇವಾಲಯದ ಭಿತ್ತಿಯು ಅಲಂಕಾರಿಕ ಅರೆಗಂಬ ಹಾಗೂ ವೈವಿಧ್ಯಮಯ ಕಿರುಶಿಖರ ಮಾದರಿಗಳಿಂದ ಚಿತ್ತಾಕರ್ಷಕವಾಗಿದ್ದು, ಗರ್ಭಗುಡಿಯ ಮೇಲೆ ದ್ರಾವಿಡ ಶಿಖರವಿತ್ತು. ಈ ದೇವಾಲಯವನ್ನು ಬಳಸಿದ್ದ ವಿಶಾಲವಾದ ದ್ವಾರ ಮಂಟಪವನ್ನುಳ್ಳ ಒಳಪ್ರಾಕಾರದಲ್ಲಿ ಕೈಸಾಲೆ ಮಂಟಪದುದ್ದಕ್ಕೂ ಶಾಸನಯುಕ್ತ ಕಿರುಗುಡಿಗಳಲ್ಲಿ ವಿಷ್ಣು ಅಂಶದ ಅನೇಕಾನೇಕ ಶಿಲ್ಪಗಳು ಕಂಗೊಳಿಸಿದ್ದವು. ಮೇಲಿನ ದೇವಾಲಯದ ಮಾದರಿ ಯಶಸ್ವಿಯಾಗಿ ಸ್ಥಳಾಂತರಗೊಂಡು ಪುನಃ ನಿರ್ಮಾಣಗೊಂಡಿರುವುದು ಅಚ್ಚರಿ ಹಾಗೂ ಸಂತೋಷವನ್ನುಂಟು ಮಾಡುತ್ತದೆ. ಗರುಡಗಂಭವೂ ಸೇರಿದಂತೆ ಶಿಥಿಲಗೊಂಡ, ಮುಕ್ಕಾದ ಕಲ್ಲುಗಳನ್ನು ಬದಲಾಯಿಸಿ ಅದೇ ಲಕ್ಷಣದ ಕಲ್ಲನ್ನು ಕೆತ್ತಿ ಜೋಡಿಸಲಾಗಿದೆ. ಅಣೆಕಟ್ಟು ಭರ್ತಿಯಾಗಿ ತುಂಬಿದಾಗ ದೇವಾಲಯ ಸಮುದ್ರದಂಚಿನಲ್ಲಿ ಇದ್ದಂತೆ ಕಾಣುತ್ತದೆ.

**ಶಿಲ್ಪಾಗಾರ :**

ಮೇಲಿನ ದೇವಾಲಯದ ಗರ್ಭಗುಡಿಯಲ್ಲಿದ್ದ ಮೂಲ ಗೋಪಾಲಕೃಷ್ಣ ಶಿಲ್ಪ ಹಾಗೂ ದಶಾವತಾರ, ನಾರಾಯಣಾವತಾರ, ಆಳ್ವಾರ್ ಪ್ರತಿಮೆ ಇತ್ಯಾದಿ ಶಿಲ್ಪಗಳನ್ನು ಅಣೆಕಟ್ಟು ನಿರ್ಮಾಣದ ಅಂತಿಮ ಹಂತದಲ್ಲಿ ಮೂಲಸ್ಥಳದಿಂದ ಎತ್ತಿತಂದು ಅಣೆಕಟ್ಟೆಯ ಉತ್ತರಭಾಗದಲ್ಲಿ (ನಾರ್ಥ್ ಬ್ಯಾಂಕ್) ಸಂರಕ್ಷಿಸಿಡಲಾಗಿದೆ. ಅಂತೆಯೇ ಕಣ್ವೇಶ್ವರ ದೇವಾಲಯದಲ್ಲಿದ್ದ ಶಿವನ ವಿವಿಧ ಮುಖಗಳ ಹಾಗೂ ಶೈವಕ್ಕೆ ಸಂಬಂಧ ಪಟ್ಟ ಶಿಲ್ಪಗಳನ್ನು ತಂದು ಇರಿಸಲಾಗಿದೆ. ಈ ಎರಡೂ ವೈವಿಧ್ಯಮಯ ಶಿಲ್ಪಗಳಿಗೆ ಪ್ರತ್ಯೇಕ ಮಂಟಪಗಳಂತೆ ರಕ್ಷಣಾ ದೇವಾಲಯಗಳಂತಿವೆ. ಶಿಲ್ಪಶಾಸ್ತ್ರ ಅಭ್ಯಾಸ ಮಾಡುವವರಿಗೆ ಶಿಲ್ಪದ ಆಯ್ಕೆ, ಭಂಗಿ, ವಿನ್ಯಾಸ, ಪ್ರಮಾಣ, ಕೆತ್ತನೆ ಎಲ್ಲವನ್ನೂ ದೊರಕಿಸಿಕೊಡುತ್ತವೆ. ಇದೀಗ ಸ್ಥಳಾಂತರಗೊಂಡ ದೇವಾಲಯಕ್ಕೆ ಇವುಗಳನ್ನು ಸ್ಥಳಾಂತರಿಸುವ ಸನ್ನಿವೇಶ ಇದುವರೆಗೂ ಒದಗಿಬಂದಿಲ್ಲ.

**ಗೋಪಾಲಕೃಷ್ಣ ಸಮುಚ್ಚಯ :**

ಒಂಭತ್ತು ಅಂಕಣದ ಮೊದಲ ದೇವಾಲಯದ ವಿಶಾಲ ಹಜಾರದಲ್ಲಿ ಮೂರು ಗರ್ಭಗುಡಿಗಳಿವೆ. ಬಲಭಾಗದ ಗರ್ಭಗುಡಿಯಲ್ಲಿ ವೇಣುಗೋಪಾಲ (ಗೋಪಾಲಕೃಷ್ಣ) ನಿಂತಿದ್ದಾನೆ. ಸುಮಾರು ಎಂಟು ಅಡಿ ಎತ್ತರವಿರುವ ಲಲಿತಾಂಗ ಮೂರ್ತಿ ವೃಕ್ಷದ ಕೆಳಗೆ ವೇಣುನಾದ ಭಂಗಿಯಲ್ಲಿ ನಿಂತಿದ್ದಾನೆ. ಸುತ್ತಲ ಪ್ರಭಾವಳಿಯಲ್ಲಿ ದಶಾವತಾರ ಕೆತ್ತನೆಗಳಿವೆ. ವೇಣುನಾದಕ್ಕೆ ಮನಸೋತ ಗೋಪಿಕಾಸ್ತ್ರೀಯರು ಅಕ್ಕಪಕ್ಕದಲ್ಲಿ ನಿಂತು ಗಾನಲೋಕದಲ್ಲಿ ತಲ್ಲೀನರಾಗಿದ್ದಾರೆ. ಅಂತೆಯೇ ಕೃಷ್ಣನ ಗೆಳೆಯ ಮಕರಂದ ನಾದವನ್ನು ಕೇಳುತ್ತಿದ್ದಾನೆ. ಕೆಳಗೆ ಅಕ್ಕಪಕ್ಕದಲ್ಲಿ ಹುಲಿ, ಸಿಂಹ, ಜಿಂಕೆ, ಹಸು, ಹಂದಿ, ಸರ್ಪ ಈ ಪ್ರಾಣಿಗಳೂ ಸಹ ಕೃಷ್ಣನ ಕೊಳಲುನಾದಕ್ಕೆ ಮೂಕವಾಗಿ ನಿಂತಿವೆ. ಭಗವಂತನ ಕಿರೀಟದ ಮೇಲೆ ವೃಕ್ಷದ ಕೆಳಗೆ ಆಂಜನೇಯನ ಕೆತ್ತನೆಯಿದೆ. ಕೃಷ್ಣಾರ್ಜುನರ ರಥದ ಬಾವುಟ ಆಂಜನೇಯನ ಲಾಂಛನದ ಸಂಕೇತವಾಗಿದೆ.

ಇನ್ನು ಮಧ್ಯ ಗರ್ಭಗುಡಿಯಲ್ಲಿ ವೆಂಕಟರಮಣ, ಮತ್ತೊಂದರಲ್ಲಿ ರಂಗನಾಥ (ಚಿಕ್ಕದು) ಮೂರ್ತಿಗಳಿವೆ.

ದೇವಾಲಯದ ಮುಂದೆ ಬಲಿಪೀಠ, ಧ್ವಜಸ್ತಂಭ, ಗರುಡ ಗಂಭಗಳಿವೆ. ದೇವಾಲಯ ಎತ್ತರದಲ್ಲಿದ್ದು ಹತ್ತಲು ಸೋಪಾನಗಳಿವೆ. ಈ ದೇವಾಲಯದ ಹಿಂಬದಿಯ ಬಲಭಾಗದ ಗುಡಿಯ ಹಜಾರದಲ್ಲಿರುವ ಶಿಲ್ಪಗಳ ಸರಣಿ ಹೀಗಿವೆ.

| ಬಲಕ್ಕೆ ದಶಾವತಾರಗಳು | | ಮಧ್ಯಭಾಗದಲ್ಲಿ |
|---|---|---|
| | ಮೀನು (ಸೃಷ್ಟಿಯ ವಿಕಾಸ) | ಲಕ್ಷ್ಮಿಯ ಆಕರ್ಷಕ ಶಿಲ್ಪ |
| ೧. | ಮತ್ಸ್ಯಾವತಾರ | (ಪ್ರಭಾವಳಿಯಲ್ಲಿ ದಶಾವತಾರವಿದೆ.) |
| ೨. | ಕೂರ್ಮಾವತಾರ | ಎಡಕ್ಕೆ |
| ೩. | ವರಾಹಾವತಾರ | ಶ್ರೀರಾಮ ಲಕ್ಷ್ಮಣ |
| ೪. | ನಾರಸಿಂಹಾವತಾರ | ವೈಕುಂಠ ನಾರಾಯಣ |
| ೫. | ವಾಮನಾವತಾರ | ಶ್ರೀಕೃಷ್ಣ |
| ೬. | ಪರಶುರಾಮಾವತಾರ | ಅಚ್ಯುತ |
| ೭. | ಶ್ರೀರಾಮಾವತಾರ | ಅನಿರುದ್ಧ |
| ೮. | ಬಲರಾಮಾವತಾರ | ಪ್ರದ್ಯುಮ್ನ |
| ೯. | ಶ್ರೀಕೃಷ್ಣಾವತಾರ | ಪುರುಷೋತ್ತಮ |
| ೧೦. | ಕಲ್ಕಿ ಅವತಾರ | ನರಸಿಂಹ |

**ನಾರಾಯಣನ ದ್ವಾದಶ ಶಿಲ್ಪಗಳು :**

ಮೇಲ್ಕಂಡ ಹಿಂಬದಿಯ ದೇವಾಲಯದ ಎಡಭಾಗದಲ್ಲಿ ಶ್ರೀಸರಸ್ವತಿ ಬ್ರಹ್ಮದೇವಾಲಯದ ಆವರಣದಲ್ಲಿ ಬಹು ಅಪರೂಪದ ಬ್ರಹ್ಮಸರಸ್ವತಿಯರ ಶಿಲ್ಪಗಳಿದ್ದು ಇನ್ನುಳಿದಂತೆ ನಾರಾಯಣ ದ್ವಾದಶ (೨೪) ನಾಮಾಂಕಿತ ಶಿಲ್ಪಗಳು ಹೀಗಿವೆ. ಕೇಶವ, ನಾರಾಯಣ, ಮಾಧವ, ಗೋವಿಂದ, ವಿಷ್ಣು, ಮಧುಸೂದನ, ತ್ರಿವಿಕ್ರಮ, ವಾಮನ, ಶ್ರೀಧರ, ಹೃಷಿಕೇಶ, ಪದ್ಮನಾಭ, ಸಂಕರ್ಷಣ, ವಾಸುದೇವ, ಪ್ರದ್ಯುಮ್ನ, ಅನಿರುದ್ಧ, ಪುರುಷೋತ್ತಮ, ಅಧೋಕ್ಷಜ, ನಾರಸಿಂಹ, ಅಚ್ಯುತ, ಶ್ರೀಕೃಷ್ಣ ಹಯಗ್ರೀವ, ಹರಿಹರ, ವಿಶ್ವಕ್ಸೇನ, ಲಕ್ಷ್ಮೀನಾರಾಯಣ ಇವುಗಳೊಂದಿಗೆ 'ಜಲಶಯನ' ದ ವಿಶೇಷ ಶಿಲ್ಪವಿದೆ.

**ಕಣ್ವೇಶ್ವರ ಸಮುಚ್ಚಯ :**

ಇನ್ನು ಮುಳುಗಡೆಯಾಗಿರುವ ಕಣ್ವೇಶ್ವರ ದೇವಾಲಯಕ್ಕೆ ಸಂಬಂಧಿಸಿದಂತೆ, ಈ ಗುಡಿಯು ರಾಷ್ಟ್ರಕೂಟ ಕನ್ನರನಿಂದ ನಿರ್ಮಿಸಲ್ಪಟ್ಟು ದತ್ತಿ ಪಡೆದಿದ್ದ ಸುಳಿವಿನ ಬಗ್ಗೆ ಒಂದನೆಯ ಕೃಷ್ಣನ (ಕ್ರಿ.ಶ. ೭೫೭-೭೭೩) ಕಡಬ ತಾಮ್ರ ಶಾಸನದ ಉಲ್ಲೇಖ ಗಮನಾರ್ಹ ಎಂಬ ಅಭಿಪ್ರಾಯವಿದೆ. ಅಲ್ಲದೆ ಚೋಳ ಕುಲೋತ್ತುಂಗನ

ಕಾಲದಲ್ಲಿ ಎರಡು ದೇವಾಲಯಗಳು ನಿರ್ಮಾಣವಾಗಿದ್ದವು ಎಂಬ ಅಂಶವೂ ಇದೆ. ಒಟ್ಟಾರೆ ಹಿಂದೆ ಇಲ್ಲಿದ್ದ ಕಣ್ವೇಶ್ವರ ದೇವಾಲಯ ಶೈವ ದೇವಾಲಯದಂತೆ ರಚನೆಯಾಗಿದ್ದು ಗರ್ಭಗುಡಿಯಲ್ಲಿ ಲಿಂಗ, ಅಂತರಾಳದಲ್ಲಿ ನಂದಿ, ನವರಂಗದ ದೇವಕೋಷ್ಠಗಳಲ್ಲಿ ಹಾಗೂ ಸುತ್ತಾಲಯಗಳಲ್ಲಿ ಅನೇಕಾನೇಕ ಶೈವ ಸಂಬಂಧಿತ ಶಿಲ್ಪಗಳಿದ್ದವು ಎನ್ನುವುದಕ್ಕೆ ಉತ್ತರ ದ್ವಾರದಲ್ಲಿರುವ ಸಂರಕ್ಷಣಾ ಶಿಲ್ಪಗಳೇ ಸಾಕ್ಷಿಯಾಗಿವೆ. ವೇಣುಗೋಪಾಲ ಅಥವಾ ಗೋಪಾಲಕೃಷ್ಣ ಗುಡಿಯ ಬಲಕ್ಕಾದಂತಿರುವ ಮುಖ್ಯ ಕಣ್ವೇಶ್ವರ ಗುಡಿಯಲ್ಲಿ ಒಂದು ಸಾಮಾನ್ಯ ಲಿಂಗವಿದೆ. ಮೂಲಲಿಂಗ ಅದು ಉದ್ಭವಲಿಂಗವಾಗಿದ್ದು ಮುಳುಗಡೆಯಲ್ಲಿಯೇ ಇದೆ ಎನ್ನಲಾಗಿದೆ. ಸದರೀ ಗುಡಿಯ ಎಡಭಾಗದಲ್ಲಿರುವ ಸಂರಕ್ಷಣಾ ಕೋಣೆಯಲ್ಲಿ ಉಮಾಮಹೇಶ್ವರ ಅತ್ಯಂತ ಆಕರ್ಷಕ ಶಿಲ್ಪವಾಗಿದೆ. ಮಹೇಶ್ವರನ ಎಡತೊಡೆಯ ಮೇಲೆ ಪಾರ್ವತಿ ಕುಳಿತು ತನ್ನ ಬಲತೋಳಿನಿಂದ ಶಿವನ ಸೊಂಟವನ್ನು ಬಳಸಿದ್ದಾಳೆ. ಒಂದು ಕಾಲನ್ನು ಮೇಲಕ್ಕೆ ಮಡಚಿಕೊಂಡು ಮತ್ತೊಂದು (ಎಡ) ಕಾಲನ್ನು ಇಳಿಬಿಟ್ಟಿದ್ದಾಳೆ. ಅದು ಮುಂಗಸಿಯ ತಲೆಯ ಮೇಲೆ ಇದೆ. ಎಡಗೈಯಲ್ಲಿ ಮುಸುಕಿನ ಜೋಳದ ಆಕೃತಿಯಿದೆ. ಉಮಾಮಹೇಶ್ವರನ ಕಿರೀಟದ ಮುಂದುಗಡೆ ತಲೆಬುರುಡೆ ಸಾಲುಗಳಿವೆ. ಶಿವನ ಜಟೆಯಲ್ಲಿ ಚಂದ್ರನಿದ್ದಾನೆ. ಕಿವಿಯಲ್ಲಿ ಸರ್ಪಾಭರಣ. ನಾಲ್ಕುಕೈಗಳಲ್ಲಿ ಬಲಕ್ಕೆ ಅಭಯ ಹಸ್ತದಲ್ಲಿ ಜಪಮಣಿ, ಮೇಲಿನ ಕೈಯಲ್ಲಿ ತ್ರಿಶೂಲ; ಎಡಕ್ಕೆ ಮಹೇಶ್ವರನು ಒಂದು ಕೈಯಲ್ಲಿ ಪಾರ್ವತಿಯ ಹೆಗಲನ್ನು ಬಳಸಿದ್ದು ಮೇಲಿನ ಕೈಯಲ್ಲಿ ಡಮರುಗ ಹಿಡಿದಿದ್ದಾನೆ. ಆಸೀನನಾಗಿರುವ ಮಹೇಶ್ವರ ಎಡತೊಡೆಯ ಮೇಲೆ ಪಾರ್ವತಿ ಕುಳಿತುಕೊಳ್ಳಲು ಅನುವುಮಾಡಿಕೊಟ್ಟು; ಬಲಗಾಲನ್ನು ನಂದಿಯ ಮೇಲೆ ಇಳಿಬಿಟ್ಟಿದ್ದಾನೆ. ಮೂಲಶಿಲ್ಪದ ಬಲಭಾಗದ ಕೆಳಗೆ ಇಲಿಯ ಮೇಲೆ ಸವಾರಿ ಮಾಡುತ್ತಿರುವ ಗಣಪ, ಎಡಭಾಗದ ಕೆಳಗೆ ನವಿಲು ಮೇಲೆ ಕುಳಿತಿರುವ ಷಣ್ಮುಖ (ಆರುಮುಖ)ನಿದ್ದಾನೆ. ಒಟ್ಟಾರೆ ಇದೊಂದು ಪರಿಪೂರ್ಣ ಶಿಲ್ಪವಾಗಿದೆ.

ಮುಖ್ಯಗುಡಿ (ಕಣ್ವೇಶ್ವರ)ಯ ಅಕ್ಕಪಕ್ಕದ ಕೋಣೆಗಳಲ್ಲಿ ಮನೋನ್ಮನ ದೇವಿ (ಪಾರ್ವತಿ), ಚಾಮುಂಡೇಶ್ವರಿ, ಸಪ್ತಮಾತೃಕೆಯರ ಶಿಲ್ಪಗಳಿವೆ. ಗುಡಿಯ ಹೊರಗೋಡೆಯ ಬಲಭಾಗದಲ್ಲಿ ದಕ್ಷಿಣಾ ಮೂರ್ತಿ, ಎಡಭಾಗದಲ್ಲಿ ಚಂಡಿಕೇಶ್ವರ; ಶಿಲ್ಪಗಳಿವೆ.

**ಆವೇಶದ ಅಮ್ಮ :**

ಈ ಸಂರಕ್ಷಣಾ ಗುಡಿಗಳ ಸ್ವಲ್ಪ ದೂರಕ್ಕೆ ಸ್ಥಳಾಂತರಗೊಂಡ ಮಹಾಲಕ್ಷ್ಮಿ

ದೇವಾಲಯವಿದೆ. ಮುಖ್ಯ ಶಾಸನವೂ ಅಲ್ಲಿ ಕಾಣಿಸುತ್ತದೆ. ಒಳಭಾಗದಲ್ಲಿ ಮೂರು ಗರ್ಭಗುಡಿಗಳಿದ್ದು ಮಧ್ಯದಲ್ಲಿ ಮಹಾಲಕ್ಷ್ಮಿ, ಬಲಕ್ಕೆ ಸರಸ್ವತಿ, ಎಡಕ್ಕೆ ಕನ್ನಂಬಾಡಿಯಮ್ಮ ಅಥವಾ ಮಹಾಕಾಳಿ ಮೂರ್ತಿಗಳಿವೆ. ಅಲ್ಲಿಯೇ 'ಆವೇಶದ ಅಮ್ಮ' ಎಂದೇ ಪ್ರಸಿದ್ಧಳಾಗಿರುವ ನಂಜಮ್ಮನ ಶಿಲ್ಪ ಹಾಗೂ ದೇವಿಯರ ಉತ್ಸವ ಮೂರ್ತಿಗಳಿವೆ. ಕ್ರಿ.ಶ. ೧೮೧೮ರ ಶಾಸನದ ಮೇರೆಗೆ ಹಳೇ ಕನ್ನಂಬಾಡಿಯಲ್ಲಿ ಜನ ಪಾಂತಿ-ಭ್ರಾಂತಿಗೆ ತುತ್ತಾದಾಗ ಊರಿನ ಗಂಗಡಿಕಾರ ಕುಲದ ಬೋರೇಗೌಡ-ತಿಮ್ಮಮ್ಮ ದಂಪತಿಗಳ ಮಗಳಾದ ಕನ್ಯೆ ನಂಜಮ್ಮನ ಮೇಲೆ ಕೊಲ್ಲಾಪುರದ ಮಹಾಲಕ್ಷ್ಮಿ ಮತ್ತು ಉಜ್ಜಯನಿಯ ಮಹಾಕಾಳಿಯರು ಅವತರಿಸಿಕೊಂಡು ಕಾಡಿಸಿದ್ದ ರೋಗವನ್ನು ಪರಿಹರಿಸುತ್ತಾರೆ. ಇದರ ಪರಿಣಾಮವಾಗಿ ಸುತ್ತಲಸೀಮೆಗಳಿಂದ ಬಂದ ಕಾಣಿಕೆಯನ್ನು ಒಟ್ಟು ಸೇರಿಸಿ ಊರನಡುವೆ ದೇವಸ್ಥಾನ ಕಟ್ಟಿಸಿ ಮಹಾಕಾಳಿ, ಮಹಾಲಕ್ಷ್ಮಿ ಮಹಾಸರಸ್ವತಿ ಅಮ್ಮನವರ ಸಹಿತ ಪರಿವಾರದೇವತೆಗಳನ್ನು ನಂಜಯ್ಯ ಎಂಬುವನು ಪ್ರತಿಷ್ಠಾಪಿಸಿದ ವಿಷಯ ತಿಳಿದು ಬರುತ್ತದೆ. ಈ ಅಮ್ಮನವರ ಗುಡಿಗೆ ರಂಗಮಂಟಪ, ಮುಖಮಂಟಪಗಳನ್ನು ನಂಜಮ್ಮನ ಕುಲದವರು ಕಟ್ಟಿಸಿದ್ದನ್ನು ಕ್ರಿ.ಶ. ೧೮೩೫ರ ಶಾಸನವೊಂದು ಉಲ್ಲೇಖಿಸುತ್ತದೆ. 'ನಂಜಮ್ಮ' ಆಗಿನಕಾಲಕ್ಕೆ 'ಆವೇಶದಮ್ಮ' ಎಂದು ಪ್ರಸಿದ್ಧಿಯಾಗಿದ್ದಳು. ಈಗಲೂ ಆಕೆಗೆ ಸಲ್ಲಬೇಕಾದ ಗೌರವಾದರವನ್ನು ಸಲ್ಲಿಸುತ್ತಾರೆ. ಈ ದೇವಿಯ ರಥೋತ್ಸವವು ರಾಮನವಮಿಯ ಮಾರನೆಯ ದಿನ ಬಹು ವಿಜೃಂಭಣೆಯಿಂದ ಜರುಗುತ್ತದೆ. ಕನ್ನಂಬಾಡಿಯಲ್ಲಿ ಹಿಂದಿದ್ದ ಹಿರಿದೇವಮ್ಮ ಗುಡಿಯ ವಿಗ್ರಹವು ಈಗ ಹೊಸಕನ್ನಂಬಾಡಿಯಲ್ಲಿದೆ.

**ಸಂಗಮೇಶ್ವರ :**

ಕನ್ನಂಬಾಡಿ ಅಣೆಕಟ್ಟೆಯಲ್ಲಿ ಮುಳುಗಡೆಯಾದ ಹಲವಷ್ಟು ಹಳ್ಳಿಗಳಲ್ಲಿ ಸಂಗಮಪುರ ಅಥವಾ ಸಂಗಾಪುರವೂ ಒಂದಾಗಿದೆ. ಈ ಸ್ಥಳದಲ್ಲಿದ್ದ ಪ್ರಾಚೀನ ಸಂಗಮೇಶ್ವರ ದೇವಾಲಯ ಹೆಸರಿಗೆ ಅನ್ವಯವಾಗುವಂತೆ ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ ನದಿಗಳ ಕೂಡು ಜಾಗದಲ್ಲಿತ್ತು. ಅಣೆಕಟ್ಟು ಕೆಲಸ ಮುಗಿದ ಮೇಲೆ ಅಣೆಗೆ ಬಹುದೂರವಾಗಿ ಹಿನ್ನೀರಿನ ನೆಲೆಯಲ್ಲಿ ಸ್ಥಳಾಂತರಗೊಂಡಿತು. ಇದರೊಟ್ಟಿಗೆ ಸ್ಥಳಾಂತರಗೊಂಡ ಸಂಗಾಪುರವೂ ಹತ್ತಿರದಲ್ಲಿಯೇ ಇದೆ. ಇದು ಈಗ ಕೃಷ್ಣರಾಜ ಪೇಟೆ ತಾಲ್ಲೂಕಿನ ಅಂಚಿನಲ್ಲಿದೆ.

## ಹರವು ವಿಜಯನಗರ ಶೈಲಿ ದೇಗುಲ


ಹರವು, ಪಾಂಡವಪುರದಿಂದ ಕಟ್ಟೇರಿ ರಸ್ತೆಯಲ್ಲಿ ಹತ್ತು ಕಿಲೋಮೀಟರ್ ದೂರದಲ್ಲಿದೆ. ಹರವು ಎಂದರೆ ವಿಸ್ತಾರ, ವಿಶಾಲ ಎಂಬ ಅರ್ಥಗಳಿವೆ. ಶಾಸನ-ಗಳಲ್ಲಿಯೂ ಇದೇ ಹೆಸರನ್ನು ಉಲ್ಲೇಖಿಸಲಾಗಿದೆ. ಕ್ರಿ.ಶ. ೧೫೪೦ರ ಶಾಸನದಲ್ಲಿ ಇದೊಂದು ವ್ಯಾಪಾರ ಕೇಂದ್ರವಾಗಿತ್ತೆಂದು ತಿಳಿಸುತ್ತದೆ. ಇಲ್ಲಿರುವ ವಿಜಯನಗರ ಕಾಲದ ಬೃಹತ್ ರಾಮಚಂದ್ರ ದೇವಾಲಯವೇ ಊರಿನ ವಿಸ್ತರಣೆಯನ್ನು ಹೇಳುತ್ತದೆ. ಇದು ಊರಿನ ಮಧ್ಯಭಾಗದಲ್ಲಿ ಇದ್ದಂತೆ ತೋರುತ್ತದೆ. ಮೈಸೂರು ಅರಸು ಚಿಕ್ಕದೇವರಾಜ (ಕ್ರಿ.ಶ. ೧೬೭೨-೧೭೦೪)ರ ಕಾಲದಲ್ಲಿ ಕಾವೇರಿನದಿಗೆ ಒಡ್ಡುಹಾಕಿ ತೋಡಿಸಿದ ಚಿಕ್ಕದೇವರಾಯ ನಾಲೆ ಊರಿನ ನಡುವೆಯೇ ಹಾದು ಹೋಗಬೇಕಾದ್ದರಿಂದ ಹಳೆಯ ಊರು ಈಗಿರುವ ಜಾಗಕ್ಕೆ ಸ್ಥಳಾಂತರಗೊಂಡಿದೆ. ಊರಿಗೆ ತಕ್ಕಂತೆ ಇದ್ದ ವಿಸ್ತಾರವಾದ ಶಾಸನೋಕ್ತ ಕೆರೆ 'ಶ್ರೀರಾಮದೇವರ ಕೆರೆ' ಈಗ ಸಂಕುಚಿತಗೊಂಡಿದೆ.

ವಿಜಯನಗರದ ಮೊದಲನೇ ದೊರೆ ವೀರಬುಕ್ಕಣ್ಣ (೧೩೫೬- ೧೩೭೭)ನ ಕಾಲದಲ್ಲಿ ನಿರ್ಮಾಣವಾಗಿರುವುದಕ್ಕೆ ಶಾಸನಾಧಾರವಿದೆ. ಕ್ರಿ.ಶ. ೧೪೬೭ ರಲ್ಲಿ ನೆರೆಯ ಸೀತಾಪುರ ಶಾಸನ ಈ ದೇವಾಲಯಕ್ಕೆ ದತ್ತಿಬಿಟ್ಟಿರುವ ಅಂಶವನ್ನು ತಿಳಿಸುತ್ತದೆ. ಇದು ಬೃಹತ್ ಪ್ರಾಕಾರದ ನಡುವೆ ಪೂರ್ವಾಭಿಮುಖವಾಗಿದ್ದು ಪ್ರವೇಶ ದ್ವಾರವು ಎತ್ತರವಾಗಿದ್ದು ಭವ್ಯವಾಗಿದೆ. ಮುಂಭಾಗದ ಮಾದರಿ ಹಂಪೆಯ ಕೃಷ್ಣ ದೇವಾಲಯವನ್ನು ಹೋಲುತ್ತದೆ. ಗರ್ಭಗೃಹ, ಸುಖನಾಸಿ (ಅಂತರಾಳ), ಪ್ರದಕ್ಷಿಣಾಪಥ, ೩೫ ಅಂಕಣದ ಕಂಭಗಳ ಸಾಲಿನ ವಿಶಾಲವಾದ ನವರಂಗ, ಮುಖಮಂಟಪ ಹಾಗೂ ೭೮ ಬೃಹತ್ ಸ್ತಂಭಗಳನ್ನುಳ್ಳ ಹಜಾರವನ್ನು ಹೊಂದಿದೆ. ಈ ಹಜಾರದಲ್ಲಿ ಒಂದು ಸಭಾಮಂಟಪ, ಎರಡು ಅರ್ಧಮಂಟಪಗಳಿವೆ. ಅರ್ಧಮಂಟಪಕ್ಕೆ ಹೊಂದಿ ಕೊಂಡಂತೆಯೇ ಉತ್ತರಕ್ಕೆ ಯಾಗಶಾಲೆ, ದಕ್ಷಿಣಕ್ಕೆ ಪಾಕಶಾಲೆಯಿದೆ. ಇವೆರಡರ ನಡುವೆ ಸಭಾಮಂಟಪಕ್ಕೆ ಹತ್ತಿಹೋಗಲು 'ಹಸ್ತಿ ಹಸ್ತ' ಕೂಡಿದ ಸೋಪಾನವಿದೆ. ಈ ಹಸ್ತಿಹಸ್ತದಲ್ಲಿ ಉತ್ತರಕ್ಕೆ ಆನೆ, ಪಶ್ಚಿಮಕ್ಕೆ ಶರಭ, ದಕ್ಷಿಣಕ್ಕೆ ಸಿಂಹದ ಚಿತ್ರವನ್ನು ಚಿತ್ರಿಸಲಾಗಿದೆ. ಸಭಾಮಂಟಪ, ಪ್ರದಕ್ಷಿಣಾಪಥ, ಹೊರ ಪ್ರಕಾರ ಎಲ್ಲವೂ ಭವ್ಯವಾಗಿವೆ. ಗರ್ಭಗೃಹದ ಹೊರಬಿತ್ತಿಯಲ್ಲಿ ಕಲಾತ್ಮಕವಾದ ಉಬ್ಬುಶಿಲ್ಪಗಳಿವೆ. ಅದೇ ಗೃಹದ ಉತ್ತರದಿಕ್ಕಿನಲ್ಲಿ ನಾಗಬಂಧವನ್ನು ಬಿಡಿಸಲಾಗಿದೆ.


ಇಲ್ಲಿಯ ಪ್ರತಿಕಂಭದ ಮೇಲ್ಭಾಗ ಆರು ಮೂಲೆಗಳಿಂದ ಕೂಡಿದ್ದರೆ, ಕೆಳಭಾಗ ಚೌಕಾಕಾರದಲ್ಲಿದೆ. ದೀಪಗಳನ್ನು ಹಚ್ಚಲು ಕೆಲವು ಕಂಬಗಳಲ್ಲಿ ದೀಪಾಕೃತಿಗಳನ್ನು ಕೊರೆಯಲಾಗಿದೆ.




ಕನ್ನಂಬಾಡಿ ಅಣೆಯ ಉತ್ತರ ಭಾಗದಲ್ಲಿ ಸಂರಕ್ಷಣಾ ಗುಡಿಯಲ್ಲಿರುವ ಅಮೂಲ್ಯ ಶಿಲ್ಪಗಳಲ್ಲಿ ಕೆಲವು.



ರಾಮಚಂದ್ರ ದೇವಾಲಯ, ಹರವು



ಮುಖಮಂಟಪ, ರಾಮಚಂದ್ರ ದೇವಾಲಯ.



ಹೊರಪೌಳಿ, ಕೃಷ್ಣದೇವಾಲಯ, ಕೆರೆತೊಣ್ಣೂರು.

ಗರ್ಭಗುಡಿಯ ಪ್ರವೇಶದ್ವಾರದಲ್ಲಿ ಜಯವಿಜಯರಿದ್ದು ಮೂಲತಃ ಶ್ರೀರಾಮ ಪರಿವಾರಶಿಲ್ಪಗಳು ಹಿಂದೆಂದೋ ಗರ್ಭಗುಡಿಯಿಂದ ಕಣ್ಮರೆಯಾಗಿ ಅದೇ ಸ್ಥಾನದಲ್ಲಿ ಮೂರು ಅಡಿ ಎತ್ತರದ ಲಕ್ಷ್ಮೀನಾರಾಯಣ, ಅಕ್ಕಪಕ್ಕ ಶ್ರೀದೇವಿ, ಭೂದೇವಿಯರಿದ್ದಾರೆ. ಆದರೆ ಮೂಲತಃ ಉತ್ಸವ ಮೂರ್ತಿಗಳಂತೂ (ಶ್ರೀರಾಮ ಪರಿವಾರ) ಬಹು ಆಕರ್ಷಕವಾಗಿವೆ. ಗರ್ಭಗುಡಿಯ ಉತ್ತರಕ್ಕೆ ಜಲಪ್ರನಾಳವಿದೆ. ಪ್ರನಾಳದ ವಿನ್ಯಾಸವು ಸಿಂಹವಕ್ತ್ರ ಆಕಾರವಾಗಿರುವುದರಿಂದ ಈ ದೇವಾಲಯವನ್ನು ಸ್ವತಃ ರಾಜನೇ ಕಟ್ಟಿಸಿದನೆಂಬ ಆಧಾರವಿದೆ.

ಪ್ರಾಚೀನ ಗುಡಿಗಳಲ್ಲಿ ಗರ್ಭಗುಡಿಯಿಂದ ಹರಿದು ಬರುವ ದ್ರವದ ಜಲನಾಳದ ಆಕಾರ ಸಿಂಹಮುಖದ ಲಕ್ಷಣವಿದ್ದರೆ ರಾಜನೆಂದೂ, ಆನೆ ಸೊಂಡಿಲಾಕಾರದಲ್ಲಿದ್ದರೆ ದಂಡನಾಯಕನೆಂದೂ, ಗೋಮುಖವಿದ್ದರೆ ಬ್ರಾಹ್ಮಣರನೆಂದೂ, ಸಾಮಾನ್ಯವಾಗಿದ್ದರೆ ಶ್ರೀ ಸಾಮಾನ್ಯ ನಿರ್ಮಾಣ ಮಾಡಿದ್ದು ಎಂಬ ಅಂಶ ತಿಳಿದುಬರುತ್ತದೆ.

**ಮುಷ್ಟಿಕೆ :**

ಶಿಲ್ಪಿಯ ಚಾತುರ್ಯಕ್ಕೆ ಇಲ್ಲಿ ಹೆಗ್ಗುರುತಾಗಿರುವ ಏಕಶಿಲಾಕೃತಿಯ ಮುಷ್ಟಿಕೆಯೊಂದು ಕಾಣಸಿಗುತ್ತದೆ. ಅಂಗೈಯಲ್ಲಿಟ್ಟುಕೊಂಡು ನೋಡಬಹುದಾದ ಈ ಏಕಶಿಲಾ ಸಾಲಿಗ್ರಾಮವು ಮನಸೆಳೆಯುವುದಲ್ಲದೆ ಅದರ ಸುತ್ತಲೂ ಅಷ್ಟದಿಕ್ಪಾಲಕರ ಕೆತ್ತನೆಯುಳ್ಳ ಕಿರುಗಂಭಗಳಿವೆ. ಅದರ ಒಳಗಡೆ ನಿಂಬೆಹಣ್ಣಿನ ಗಾತ್ರದ ಎರಡು ಸಾಲಿಗ್ರಾಮಗಳು ಅತ್ತ ಇತ್ತ ಓಡಾಡುವದಷ್ಟೆ, ಹೊರಕ್ಕೆ ಬರಲಾಗದು. ಸಾಲಿಗ್ರಾಮದ ಪೂಜೆಗೆ ಹೇಳಿಮಾಡಿಸಿದಂಥ ಮುಷ್ಟಿಕೆ ಇದಾಗಿದೆ. ಅದರ ಮೇಲ್ಭಾಗದಲ್ಲಿ ಸುಂದರ ಸರ್ಪಬಂಧವಿದೆ.

**ಗರುಡಸ್ತಂಭ :**

ದೇವಾಲಯದ ಮುಂಭಾಗದಲ್ಲಿ ಸುಮಾರು ಮೂವತ್ತು ಅಡಿ ಎತ್ತರದ ಗರುಡಸ್ತಂಭವಿದ್ದು, ಅದರ ಕೆಳಗೆ ಗರ್ಭಗೃಹಕ್ಕೆ ಎದುರಾಗಿ ಕೈಮುಗಿದು ನಿಂತಿರುವ ಗರುಡ ಶಿಲ್ಪವನ್ನೂ, ಪೂರ್ವಕ್ಕೆ ಶಂಖಚಕ್ರ, ಉತ್ತರಕ್ಕೆ ಸಿಂಹ, ದಕ್ಷಿಣಕ್ಕೆ ಆಂಜನೇಯರ ಉಬ್ಬುಶಿಲ್ಪಗಳನ್ನೂ ಬಿಡಿಸಲಾಗಿದೆ. ಈ ಸ್ತಂಭದ ಸಮೀಪದಲ್ಲಿಯೇ ವಸಂತೋತ್ಸವದ ಓಕುಳಿಕಟ್ಟೆಯಿದೆ.

**ಜೀರ್ಣೋದ್ಧಾರ :**

ಶಿಥಿಲಾವಸ್ಥೆಗೆ ತಲುಪಿದ್ದ ಈ ದೇವಾಲಯವನ್ನು ಕ್ರಿ.ಶ. ೧೯೯೭ರಲ್ಲಿ ಗ್ರಾಮಸ್ಥರ

ನೆರವಿನೊಂದಿಗೆ ರಾಜ್ಯ ಪುರಾತತ್ವ ಇಲಾಖೆ ಜೀರ್ಣೋದ್ಧಾರದ ಕಾರ್ಯವನ್ನು ಪ್ರಾರಂಭಿಸಿತು. ಆಗ ಈ ಕೆಲಸಕ್ಕೆ ಜಿಲ್ಲಾಡಳಿತ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಒತ್ತುಕೊಟ್ಟಿತು. ಈ ಒಂದು ದಶಕದಲ್ಲಿ ಅಗತ್ಯ ಜೀರ್ಣೋದ್ಧಾರದ ಕೆಲಸಗಳು ನಡೆದಿದ್ದರೂ; ಇನ್ನೂ ಸಾಕಷ್ಟು ಕೆಲಸಗಳು ಆಗಬೇಕಾಗಿವೆ. ದೇವಾಲಯದ ಬಲಭಾಗದ ಪ್ರದೇಶದಲ್ಲಿ ಹಸಿರು ತುಂಬಿದ 'ದೇವರ ಕಾಡು' ಬೆಳೆಸಲಾಗಿದೆ.

ಊರಿಂದ ಪೂರ್ವಕ್ಕೆ ಹರಿದಿರುವ ಚಿಕ್ಕದೇವರಾಜ ನಾಲೆಯ ಎಡದಂಡೆ ಮೇಲೆ ಗದ್ದೆ ಬಯಲಿನಲ್ಲಿ ಶಿಥಿಲಗೊಂಡಿರುವ ಕಲ್ಲಿನಾಥ ಗುಡಿಯೂ ವಿಜಯನಗರ ಕಾಲದ್ದಾಗಿದೆ. ಹಳೇ ಊರಿಗೆ ಇದ್ದ ಕೋಟೆ ಅವಶೇಷಗಳು ಕಾಣಬರುತ್ತವೆ.

**ಗುಮ್ಮನಹಳ್ಳಿ :**

ಇದೇ ಪಾಂಡವಪುರ ತಾಲ್ಲೂಕು ಗುಮ್ಮನಹಳ್ಳಿಯ ಆಂಜನೇಯ ದೇವಾಲಯದ ಮುಖಮಂಟಪ ಮತ್ತು ಗರುಡಗಂಭ ವಿಜಯನಗರ ಕಾಲಕ್ಕೆ ಸಾಕ್ಷಿಯಾಗಿವೆ. ಇಲ್ಲಿ ಗಂಗ ಮತ್ತು ಚೋಳರ ಹಲವಷ್ಟು ಸ್ಮಾರಕಗಳು ಕಾಣಬರುತ್ತವೆ. ಇಲ್ಲಿರುವ ವೀರಸ್ತಂಬವು ಸ್ಥಳದ ವೀರರ ಕಥೆಯನ್ನು ಹೇಳುತ್ತದೆ. ಸುಮಾರು ೨೫ ಅಡಿ ಎತ್ತರದ ಈ ಸ್ತಂಬದ ಒಂದು ಮುಖದಲ್ಲಿ ಕುದುರೆ ಮೇಲೆ ಭರ್ಜಿ ಹಿಡಿದ ವೀರ, ಇನ್ನುಳಿದಂತೆ ಆನೆ, ಸಿಂಹ, ಕಳಸದ ಚಿತ್ರಗಳಿವೆ. ಕುದುರೆ ಮೇಲಿನ ವೀರ 'ಗಾಯದ ಈರಣ್ಣ' ಎಂದು ಉಲ್ಲೇಖಿಸಿದೆ. ಇದು ಚಾರಿತ್ರಿಕವಾಗಿ ಕೋಟೆ ಭೇದಿಸುವ ಮತ್ತು ಕಹಳೆ ಊದುವ ವೀರರ ಊರಾಗಿತ್ತು. ಪ್ರಾಚೀನವಾದ ಸಪ್ತಮಾತೃಕೆಯರು ಮತ್ತು ದೇವೀರಮ್ಮ ಗುಡಿಗಳಿವೆ. ಹಿಂದೆ ಇಲ್ಲಿ ಪ್ರಸಿದ್ಧವಾಗಿದ್ದ ಚೋಳ ದೇವಾಲಯುವನ್ನು ಕೆಡವಿ ಅಲ್ಲಿದ್ದ ಲಿಂಗವನ್ನು ದೇವೀರಮ್ಮ ಗುಡಿಗೆ ಸ್ಥಳಾಂತರಿಸಲಾಗಿದೆ.

## ದೇವರಹಳ್ಳಿ, ದೇವಲಾಪುರ ದೇವಾಲಯಗಳು

ವಿಜಯನಗರ ಕಾಲದಲ್ಲಿ ನಿರ್ಮಾಣವಾದ ನಾಗಮಂಗಲ ತಾಲ್ಲೂಕಿನ ಹೋಬಳಿಕೇಂದ್ರ ದೇವಲಾಪುರಕ್ಕೆ ಸಮೀಪವಾಗಿರುವ ದೇವರಹಳ್ಳಿಯ ತಪಸಿರಾಯ ಅಥವಾ ಶಾಸನೋಕ್ತ ತಿರುಮಲ ದೇವಾಲಯ ಒಂದಾಗಿದೆ. ನೆರೆಯ ಮುತ್ಸಂದ್ರ ಹಾಗೂ ಮಾದಿಹಳ್ಳಿ ಶಾಸನಗಳು (ಕ್ರಿ.ಶ. ೧೪೪೪ ಮತ್ತು ೧೪೫೭) ಇದಕ್ಕೆ ಆಧಾರವಾಗಿವೆ.

ಊರ ಹೆಬ್ಬಾಗಿಲು ಬಳಿ ಇರುವ ಈ ದೇವಾಲಯ ವಿಸ್ತೀರ್ಣದಲ್ಲಿ ವಿಶಾಲವಾಗಿದೆ. ದ್ರಾವಿಡ ಶಿಖರವಿರುವ ಪ್ರಧಾನ ಗರ್ಭಗೃಹದಲ್ಲಿ ಗರುಡ ಪೀಠದ


ಮೇಲೆ ಸ್ಥಾನಕಭಂಗಿಯ ತಿರುಮಲದೇವರ ಪ್ರತಿಷ್ಠಾಪನೆಯಾಗಿದೆ. ಎಡಭಾಗದಲ್ಲಿ ಅಮ್ಮ (ಲಕ್ಷ್ಮಿ)ನವರ ಗುಡಿ ಇದೆ. ವಿರೂಪಣ್ಣನಾಯಕ ಕ್ರಿ.ಶ. ೧೫೨೫ ರಲ್ಲಿ ಈ ಗುಡಿಗೆ ದತ್ತಿಬಿಟ್ಟ ವಿಷಯ ಶಾಸನದಲ್ಲಿ ಉಲ್ಲೇಖವಾಗಿದೆ. ಅಂತರಾಳದಲ್ಲಿ ಎದುರುಬದುರಾಗಿರುವ ಗರ್ಭಗೃಹಗಳಲ್ಲಿ ರಾಮಾನುಜ ಹಾಗೂ ಇತರ ಆಳ್ವಾರರ ಶಿಲ್ಪಗಳಿವೆ. ನವರಂಗದ ಛತ್ತನ್ನು ಕಮಲಾಕೃತಿಯಲ್ಲಿ ಬಿಡಿಸಿದ್ದು; ಮುಂದೆ ಮುಖಮಂಟಪ ಮತ್ತು ಪಾತಾಳಂಕಣಗಳಿವೆ. ದೇವಾಲಯಕ್ಕೆ ಎರಡು ಸುತ್ತಿನ ಪ್ರಾಕಾರವಿದ್ದು ಮುಂದೆ ವಿಶಾಲವಾದ ತೆರೆದ ಕೈಸಾಲೆ ಮಂಟಪವಿದೆ. ವಿಜಯನಗರ ಕಾಲದ ಕಂಭಗಳ ರಚನೆಯೇ ದೇವಾಲಯಕ್ಕೆ ಶೋಭೆ ತಂದಿದೆ.

ಇನ್ನು ದೇವಲಾಪುರದ ಲಕ್ಷ್ಮೀಕಾಂತ ದೇವಾಲಯ ಪೂರ್ವಾಭಿಮುಖ-ವಾಗಿದ್ದು ಗರ್ಭಗೃಹ, ಸುಖನಾಸಿ, ನವರಂಗ ಮತ್ತು ಮುಖಮಂಟಪಗಳನ್ನು ಹೊಂದಿದೆ. ಮೂಲಗುಡಿಯ ರಚನೆ ಹೊಯ್ಸಳರ ಆಳ್ವಿಕೆಯ ಕಡೆಯ ಭಾಗವಾಗಿದೆ. ಮುಖ್ಯವಾಗಿ ಪ್ರಾಕಾರ, ಮಹಾದ್ವಾರ ಹಾಗೂ ದೀಪಸ್ತಂಭಗಳು ವಿಜಯನಗರ ಕಾಲದ ರಚನೆಗಳಾಗಿವೆ. ಕ್ರಿ.ಶ. ೧೪೭೭ ರಲ್ಲಿ ಅಲ್ಲಪ್ಪನಾಯಕನು ನಿರ್ಮಿಸಿದ ವಿಚಾರವನ್ನು ಶಾಸನ ಹೇಳುತ್ತದೆ.


## ಹಾಲ್ತಿ ಮತ್ತು ಕೋಟೆ ಬೆಟ್ಟದ ದೇವಾಲಯಗಳು

ನಾಗಮಂಗಲಕ್ಕೆ ಸಮೀಪದಲ್ಲಿರುವ ಹಾಲ್ತಿ (ಹಾಲಿನ ಬಣ್ಣದ) ಬೆಟ್ಟ ಪರಶುರಾಮನ ಐತಿಹ್ಯದೊಂದಿಗೆ ಬೆಸೆದುಕೊಂಡಿದೆ. ಬೆಟ್ಟದಲ್ಲಿರುವ ಮಲ್ಲೇಶ್ವರ ಗುಡಿಗೆ ಸಂಬಂಧಿಸಿದಂತೆ ವಿಜಯನಗರ ಸಾಮ್ರಾಜ್ಯದ ಅಂತಿಮಕಾಲದ ಕ್ರಿ.ಶ. ೧೬೦೫ ರ ಒಂದು ಶಾಸನದಲ್ಲಿ ನೀಡಿದ ಕಾಣಿಕೆಯನ್ನು 'ಗಳಿಗೆ ಹೊನ್ನು' ಎಂಬ ನಾಣ್ಯದ ಉಲ್ಲೇಖವಿದೆ. ಇಲ್ಲಿರುವ ಗುಡಿ ಎಂದರೆ ಒಂದು ಗುಹಾಲಯ. ಗವಿಯೊಳಗೆ ಅಂಬೆಗಾಲಿಟ್ಟು ನಡೆದರೆ ಮಲ್ಲೇಶ್ವರ ದೇವರ ದರ್ಶನವಾಗುತ್ತದೆ.


ತಪೋನಿರತ ಪರಶುರಾಮರ ಕ್ಷೇತ್ರ ಎನಿಸಿದ ಹಾಲ್ತಿಬೆಟ್ಟದ ಸಾಲಿನಲ್ಲೇ ಬರುವ ಸಾಲಾದ್ರಿ ಕ್ಷೇತ್ರವೆನಿಸಿದ ಕೋಟೆಬೆಟ್ಟದ ಪ್ರಾಕೃತಿಕ ಸೌಂದರ್ಯ ಪಾಲ್ಕೆರೆ ಹಿನ್ನೆಲೆಯಲ್ಲಿ ಬಹು ರಮಣೀಯವಾಗಿ ಕಾಣಬರುತ್ತದೆ. ಈ ಬೆಟ್ಟದ ದಕ್ಷಿಣ ಗಿರಿಯಲ್ಲಿ ಕಾಣಬರುವ ವೆಂಕಟರಮಣ ದೇವಾಲಯ ಪ್ರಾಚೀನವಾದ ಗುಹಾಂತರ ಗುಡಿ ಎನಿಸುತ್ತದೆ. ಗರ್ಭಗೃಹ ಮತ್ತು ಸುಖನಾಸಿಗಳು ಬಂಡೆಯ ಆಶ್ರಯದಲ್ಲೇ ಇವೆ. ರಾಮಾನುಜರ ಪ್ರಭಾವದಿಂದಾಗಿ ಈ ಗುಡಿಗಳು ಆಗಿರುವ ಸಾಧ್ಯತೆ ಇದೆ. ಮೂಲಮೂರ್ತಿ ವೆಂಕಟರಮಣ ಹೊಯ್ಸಳ ಕಾಲದ್ದಾಗಿದೆ. ನವರಂಗ ಮತ್ತು ಇತರ ರಚನೆಗಳು ವಿಜಯನಗರ ಕಾಲಕ್ಕೆ ಸೇರಿವೆ. ನಾಗಮಂಗಲದ ಪ್ರಭುಗಳು




ಗಾರೆ ಶಿಖರ. ಕೈವಲ್ಯೇಶ್ವರ. ನಾರಾಯಣದುರ್ಗ.




ವೆಂಕಟರಮಣ ದೇವಾಲಯ. ಕೋಟೆಬೆಟ್ಟ.



ಕೇಶವ ದೇವಾಲಯ. ದೊಡ್ಡಜಟಕ.


ಲತಾಂಗಿ ಮತ್ತು ಸಿಂಹಮುಖದ 'ಯಾಳಿ' ಕಂಬಗಳು. ವಿಜಯನಗರ ಶೈಲಿ.



ಗರುಡ, ಬಿಂಡಿಗನವಿಲೆ.



ಚಕ್ರಕೊಳ, ನಾಗಮಂಗಲ.



ಆಂಜನೇಯ ದೇವಾಲಯ. ಗುಮ್ಮನಹಳ್ಳಿ.

ಅದರಲ್ಲಿಯೂ ಜಗದೇವರಾಯ ಮತ್ತು ಅಂಕುಶರಾಯರ ಕಾಲದಲ್ಲಿ ವಿಸ್ತರಣೆ ಮತ್ತು ಜೋಡಣೆ ಕೆಲಸಗಳು ಆಗಿರುವ ಸಾಧ್ಯತೆಗಳಿವೆ.

ಜನಪದರಿಗೆ ಹತ್ತಿರವಾಗಿರುವ ಈ ದೇವರ ಹೆಸರಿನಲ್ಲಿ ಜಾತ್ರೆ, ಉತ್ಸವಗಳು ಜರುಗುತ್ತವೆ. ಈ ಭಾಗದಿಂದ ತಿರುಪತಿಗೆ ಹಿಂದೆ ನಡೆದು ಹೋಗುತ್ತಿದ್ದ ಯಾತ್ರಾರ್ಥಿಗಳಿಗೆ ಕೋಟೆಬೆಟ್ಟ ಒಂದು ಠಾಣ್ಯ ಆಗಿತ್ತು. ಆಧುನಿಕ ಸಾರಿಗೆಸಂಪರ್ಕ ಆದ ಮೇಲೂ ತಿರುಪತಿಗೆ ಹೋಗುವ ಮುನ್ನ ಈ ದೇವರನ್ನು ಕಾಣಲೇಬೇಕು. ಬೆಟ್ಟದ ಉತ್ತರಗಿರಿಯ ಕೆಳಗಿನ ಬಂಡೆಯೊಳಗೆ ವೈಷ್ಣವ ಸಂಪ್ರದಾಯದ ಕರಿರಾಯ, ಕೆಂಚರಾಯರ ಹರಿಗೆಗಳಿರುವ ಗೂಡಿನ ಮನೆಯಿದೆ. ಗಿರಿಯ ಮೇಲೆ ಕಂಬದ ನರಸಿಂಹಸ್ವಾಮಿ ಗುಡಿ ಇದೆ. ಇಲ್ಲಿನ ಕಂಬದಲ್ಲಿ ನರಸಿಂಹ ಅವತರಿಸಿದ ಬಗ್ಗೆ ಒಂದು ನೀಳ್ಗತೆಯೇ ಕೇಳಿಬರುತ್ತದೆ. ಇದು ಇಲ್ಲಿನ ಅರ್ಚಕರಿಗೆ ಸಂಬಂಧಿಸಿದ್ದಾಗಿದೆ.

ಈ ತೆರನಾದ ಜನಪದರ ವೈಷ್ಣವ ದೇವಾಲಯಗಳು ಕೃಷ್ಣರಾಜ ಪೇಟೆ ತಾಲ್ಲೂಕಿನ ಭೃಗು ಮಹರ್ಷಿಗಳ ತಪೋಭೂಮಿ ಎಂಬ ಐತಿಹ್ಯವಿರುವ ಹೇಮಾವತಿ ತಟದ ಹೇಮಗಿರಿಯ ಸೊಬಗಿನಲ್ಲಿರುವ ಕಲ್ಯಾಣ ವೆಂಕಟರಮಣಸ್ವಾಮಿ, ಬೂಕನಕೆರೆ ಸಮೀಪದ ಬೋಳಾರೆ ರಂಗನಾಥಸ್ವಾಮಿ, ಮಲಗಿರುವ ಬಂಡೆಯನ್ನು ಗುಡ್ಡದರಾಯ ಎಂದು ಪೂಜಿಸುವ ಗವಿರಂಗನಾಥಸ್ವಾಮಿ, ನಾಗಮಂಗಲ ತಾಲ್ಲೂಕಿನ ಕದಬಹಳ್ಳಿಯ ಕಾವೇಟಿ ರಂಗನಾಥ, (ವಾರ್ಷಿಕ ಉತ್ಸವದಲ್ಲಿ ನರಿಪೂಜೆ ಜರುಗುತ್ತದೆ), ಇಜ್ಜಲಘಟ್ಟ ಊರಿನ ಬಳಿ ಕರಿಕಲ್ಲು ಬೆಟ್ಟದಲ್ಲಿರುವ ಗುಮ್ಮಂಡಿ ರಂಗನಾಥಸ್ವಾಮಿ, ಮಂಡ್ಯ ತಾಲ್ಲೂಕಿನ ಸಾತನೂರು ಬೆಟ್ಟದ ಕಂಬದ ನರಸಿಂಹಸ್ವಾಮಿ, ಮದ್ದೂರು ತಾಲ್ಲೂಕಿನ ಶಿಂಷಾ ತಟದ ನವಿಲೆ ರಂಗನಾಥ, ಮಳವಳ್ಳಿ ತಾಲ್ಲೂಕಿನ ಕಾವೇರಿ ತಟದ ಮುತ್ತತ್ತಿಯ ಮುತ್ತು ರಾಯಸ್ವಾಮಿ ಹೀಗೆ ಇನ್ನೂ ಹಲವಾರು ಪ್ರಾಕೃತಿಕ ವಾತಾವರಣದಲ್ಲಿರುವ ದೇವಾಲಯಗಳನ್ನು ಕಾಣಬಹುದಾಗಿದೆ. ಸುಮಾರು ೨೫ ವರ್ಷಗಳ ಹಿಂದೆ ಮುತ್ತತ್ತಿಯಲ್ಲಿ ಜೋಪಡಿಯೇ ಗುಡಿಯಾಗಿ ಕಕ್ಕೆಮರದ ಬುಡದಲ್ಲಿ ಮೂಡಿದ ಅಥವಾ ಕೆತ್ತಿದ ಮುತ್ತುರಾಯ (ಆಂಜನೇಯ) ಗೋಚರಿಸುತ್ತಿದ್ದ. ನಂತರದಲ್ಲಿ ಶಿಲಾ ದೇಗುಲ ನಿರ್ಮಾಣವಾಯಿತು. ಚಿಕ್ಕಮುತ್ತತ್ತಿ ಎನ್ನುವ ಸ್ಥಳ ಬ್ಲಫ್ ಭಾಗದ ಕಾವೇರಿ ದಂಡೆಯ ಮೇಲಿದೆ.

ಈ ದೇವರುಗಳಿಗೆ ಸಂಬಂಧಪಟ್ಟ ಜನಪದರ ಕಥೆಗಳು ಬಹುಸ್ವಾರಸ್ಯವಾಗಿವೆ. ರಾಮರ ವನವಾಸ ಕಾಲದಲ್ಲಿ ಸೀತೆ ಕಾವೇರಿಯಲ್ಲಿ ಮೀಯುವಾಗ ತನ್ನ ಮೂಗುತಿಯನ್ನು ಕಳೆದುಕೊಂಡಾಗ ಆಂಜನೇಯ ಸೀತೆಯ ಮುತ್ತಿನ

ಮೂಗುತಿಯನ್ನು ಎತ್ತಿಕೊಟ್ಟಿದ್ದರಿಂದ ಮುತ್ತೆತ್ತಿರಾಯ ಮುತ್ತುರಾಯ ಆದನೆಂದೂ; ಗುಮ್ಮಂಡಿ ರಂಗನಾಥಸ್ವಾಮಿ ಹಿನ್ನೆಲೆಯಲ್ಲಿ ಶ್ರೀಹರಿಯು ಗುಮ್ಮನೆಂಬ ರಾಕ್ಷಸ ಜನರಿಗೆ ಕಿರುಕುಳ ಕೊಡುತ್ತಿದ್ದರಿಂದ ಆತನನ್ನು ಕೊಂದನೆಂಬ ಕಥೆ ಕೇಳಿಬರುತ್ತದೆ.

ಇನ್ನು ಸಂತೆಬಾಚಹಳ್ಳಿ ಸಮೀಪದಲ್ಲಿರುವ ಗವಿರಂಗನಾಥಸ್ವಾಮಿ ಗುಡ್ಡವು ಜನಪದ ಸಂಪ್ರದಾಯದಲ್ಲಿ ಕಾಣಬರುವ ಒಂದು ಐತಿಹ್ಯ ಮನಕರಗುವಂತಿದೆ. ಈ ಗುಡ್ಡದಲ್ಲಿ ಗವಿಯ ಮತ್ತು ರಂಗ ಎಂಬ ಕುರಿಕಾಯುವ ಹುಡುಗರು ಒಂದು ದಿನ ಕುತೂಹಲದಿಂದ ಗುಡ್ಡದ ಬಾಯಿ (ಗುಹೆ) ಹತ್ತಿರಕ್ಕೆ ಹೋದರು. ಹುಡುಗರು ಗುಡ್ಡದ ಬಾಯಿಯನ್ನು ಆಸಕ್ತಿಯಿಂದ ನೋಡುತ್ತಿದ್ದಂತೆ; ಶೂರನಾದ ಗವಿಯನಿಗೆ ಒಳಗೆ ಏನಿರಬಹುದೆಂಬ ಕುತೂಹಲ ಕೆರಳಿ ಗುಹೆಯೊಳಕ್ಕೆ ಅಥವಾ ಗುಡ್ಡದ ಬಾಯಿಯೊಳಕ್ಕೆ ತೂರಿಹೋದನು. ಎಷ್ಟು ಹೊತ್ತಾದರೂ ಹಿಂತಿರುಗಿ ಬರಲಿಲ್ಲ. ಗೆಳೆಯನಾದ ರಂಗನು ಎಷ್ಟು ಹೊತ್ತು ಕಾದು ಕುಳಿತು ಕೂಗಿದರೂ ಗವಿಯ ವಾಪಸ್ಸು ಬರಲಿಲ್ಲ. ಮುಸ್ಸಂಜೆಯ ಹೊತ್ತಿಗೆ ರಂಗ ಸುದ್ದಿಯನ್ನು ಹಟ್ಟಿಯವರಿಗೆ ಮುಟ್ಟಿಸಿದ. ಕಡೆಗೆ ಯಾರು ಎಷ್ಟೇ ಪ್ರಯತ್ನಿಸಿ ಕೂಗಿ ಕರೆದರೂ ಗವಿಯ, ಗವಿಯಲ್ಲಿ ಮರೆಯಾಗಿ ಹೋದನು. ಅದೊಂದು ರಾತ್ರಿ ಗವಿಯ ತನ್ನ ತಾಯಿಗೆ ಸ್ವಪ್ನದಲ್ಲಿ ಕಾಣಿಸಿಕೊಂಡು 'ಅವ್ವಾ, ನನಗೆ ಹಿಟ್ಟು ಸೊಪ್ಪಿನ ಸಾರು ತಂದು ಕೊಡು' ಎಂದು ಕೇಳಿದನಂತೆ. ಹೆತ್ತ ತಾಯಿ ಅಡಿಗೆ ಮಾಡಿಕೊಂಡು ಗುಹೆಯ ಬಾಯಿಯ ಹತ್ತಿರ ಎಡೆ ಇಟ್ಟಳು. ಇದು ಮುಂದೆ ದೈವತ್ವಕ್ಕೆ ಏರಿ ಗುಡ್ಡಕ್ಕೆ ಗವಿರಂಗನಾಥನ ಗುಡ್ಡ ಎಂದು ಹೆಸರಾಗಿ ಹರಕೆ ಹೊತ್ತವರು ಹಿಟ್ಟು, ಸೊಪ್ಪಿನ ಸಾರನ್ನು ಗುಡ್ಡದ ಬಾಯಿಗೆ ಎಡೆ ಇಕ್ಕುತ್ತಾರೆ. ಇಂದು ದೇವರ ಹೆಸರಿನಲ್ಲಿ ಗ್ರಾಮೀಣರು ಭಕ್ತಿಯಿಂದ ಪೂಜೆ ಸಲ್ಲಿಸಿ ಸಂತಸದೂಟದಲ್ಲಿ ದಿನವನ್ನು ಕಳೆದು ತಮ್ಮ ಊರುಗಳಿಗೆ ಮರಳುತ್ತಾರೆ. ಇದೊಂದು ಪ್ರಕೃತಿ ಪೂಜೆಯಂತೆ ಭಾಸವಾಗುತ್ತದೆ. ಇದಕ್ಕೆ ಪೂರಕವಾಗಿ ಇಲ್ಲಿ ಮಲಗಿದಂತಿರುವ ರಂಗನಾಥನ ಹೆಸರಿನ ಅಮೂರ್ತ ಬಂಡೆಗೆ ಪೂಜೆ ಸಲ್ಲಿಸುತ್ತಾರೆ.

ಬೆಟ್ಟದ ಹೊಸೂರು ವ್ಯಾಪ್ತಿಯಲ್ಲಿರುವ ಬೋಳಾರೆ ರಂಗನಾಥನ ಗರ್ಭಗುಡಿಯಲ್ಲಿ ಉದ್ಭವಲಿಂಗವಿದ್ದು ಅದರ ಹಿಂಬದಿಯ ಕಲ್ಲಿನ ಗೋಡೆಯಲ್ಲಿ ರಂಗನಾಥ ಮೂರ್ತಿಯನ್ನು ಕೆತ್ತಲಾಗಿದೆ.

**ಚಾಕೇನಹಳ್ಳಿ ಕೇಶವ :**

ಬೆಳ್ಳೂರು ಭಾಗದಲ್ಲಿರುವ ಚಾಕೇನಹಳ್ಳಿಯಲ್ಲಿ ಹಿಂದೆ ಪ್ರಮುಖವಾದ ಜೈನ ಬಸದಿಗಳು ಇದ್ದವೆಂದು ಶಾಸನ ಹೇಳುತ್ತದೆ. ಇಲ್ಲಿರುವ ಚನ್ನಕೇಶವ ದೇವಾಲಯ ವಿಜಯನಗರ ಕಾಲದ್ದಾಗಿದ್ದು ಗರ್ಭಗುಡಿಯಲ್ಲಿ ನಾಲ್ಕು ಅಡಿ ಎತ್ತರದ ಕೇಶವ

ಶಿಲ್ಪವಿದೆ. ನವರಂಗದಲ್ಲಿ ಇನ್ನೆರಡು ಕೇಶವ ಶಿಲ್ಪಗಳಿವೆ. ದೇವಾಲಯ ಶಿಥಿಲವಾಗಿದ್ದು ಇದೀಗ ವಾಸ್ತುಶಿಲ್ಪಕ್ಕೆ ಧಕ್ಕೆಯಾಗದಂತೆ ಜೀರ್ಣೋದ್ಧಾರವಾಗುತ್ತಿದೆ. ಈ ಊರಲ್ಲಿ ನರಸಿಂಹ, ಲಕ್ಷ್ಮಿ ಗುಡಿಗಳಿದ್ದು ಇದೊಂದು ವೈಷ್ಣವ ಕ್ಷೇತ್ರದಂತೆ ಕಾಣಿಸುತ್ತದೆ. ಬೆಳ್ಳೂರಿಗೆ ಸಮೀಪವಿರುವ ಕೋಡಿನಾಗಲಾಪುರದಲ್ಲಿ ವಿಜಯನಗರ ಕಾಲದ ಕೇಶವ ದೇವಾಲಯವಿದೆ. ಇದೇ ಭಾಗದಲ್ಲಿ ಶ್ರೀಕೃಷ್ಣದೇವರಾಯ ದೊಡ್ಡಜಟಕ ಗ್ರಾಮದಲ್ಲಿ ದೇವಾಲಯ ಕಟ್ಟಿಸಿ ಅದಕ್ಕೆ ತನ್ನ ಪತ್ನಿ ಚಿನ್ನಾದೇವಿ ಹೆಸರಿಟ್ಟಿದ್ದು ಶಾಸನಾಧಾರವಿರುವುದರಿಂದ ಕೋಡಿನಾಗಲಾಪುರವು ರಾಯನ ತಾಯಿ ನಾಗಲಾಂಬಿಕೆ ಹೆಸರೇ ಇರಬಹುದೆಂದು ಹೇಳಲಾಗುತ್ತದೆ.

**ಚಕ್ರತೀರ್ಥ :**

ನಾಗಮಂಗಲದ ಸೌಮ್ಯಕೇಶವ ಮತ್ತಿತರ ದೇವಾಲಯಗಳ ವಿಸ್ತರಣೆಯ ರಚನೆಗಳು ವಿಜಯನಗರ ಕಾಲಕ್ಕೆ ಸೇರಿದವೆಂದು ಹಿಂದೆಯೇ ತಿಳಿಸಲಾಗಿದೆ. ಆಧ್ಯಾತ್ಮಿಕ ಹಾಗೂ ಧಾರ್ಮಿಕವಾಗಿ ವೈಷ್ಣವ ದೇವಾಲಯಗಳಲ್ಲಿ 'ಚಕ್ರತೀರ್ಥ ಸ್ನಾನ' ಎಂಬ ಆಚರಣೆ ಇರುತ್ತದೆ. ಸೌಮ್ಯಕೇಶವ ದೇವಾಲಯದ ಎದುರಾಗಿ ನೇರ ರೇಖೆಯಲ್ಲಿ ಸುಮಾರು ಒಂದು ಕಿಲೋಮೀಟರ್ ದೂರದಲ್ಲಿ ಚಕ್ರತೀರ್ಥ ಎಂಬ ಸುಂದರ ಕೊಳವಿದೆ. (ಈಗ ಪಟ್ಟಣ ಬೆಳೆದಿರುವದರಿಂದ ಬಳಸುದಾರಿ ಹಿಡಿಯಬೇಕು.) ಬ್ರಹ್ಮೋತ್ಸವ ಮತ್ತಿತರ ಸಂದರ್ಭಗಳಲ್ಲಿ ದೇವರನ್ನು ಚಕ್ರತೀರ್ಥ ಬಳಿಗೆ ಬಿಜಂಗೈಯಿಸಿ ಪೂಜಿಸುತ್ತಾರೆ. ಹಲವು ಕಡೆ ತಿರುಪತಿಯೂ ಸೇರಿದಂತೆ ಮಂಗಳಕಾರ್ಯವು ಮುಗಿದ ಮೇಲೆ ವಿಷ್ಣುವಿನ ಆಯುಧವಾದ 'ಚಕ್ರ'ವನ್ನು ಶಾಸ್ತ್ರೋಕ್ತವಾಗಿ ಮುಳುಗಿಸಿ ಎತ್ತುವುದಕ್ಕೆ 'ಚಕ್ರಸ್ನಾನ' ಎನ್ನುತ್ತಾರೆ ಅಥವಾ ಅವಭೃಥಸ್ನಾನ ಎಂದೂ ಹೇಳುತ್ತಾರೆ. ಇಂಥ ಒಂದು ಧಾರ್ಮಿಕ ಆಚರಣೆಗೆ ಇಲ್ಲಿ ನಿರ್ಮಿಸಿರುವ ಚಕ್ರಕೊಳ ವಿಜಯನಗರ ಕಾಲದ ಒಂದು ಸೊಗಸಾದ ರಚನೆಯಾಗಿದೆ. ವಿಷ್ಣು ಚಕ್ರ ಮಾದರಿಯಲ್ಲಿರುವ ಇದನ್ನು ಚಕ್ರತೀರ್ಥ ಎಂತಲೂ ಕರೆಯುತ್ತಾರೆ. ಸುಮಾರು ೬೦ ಅಡಿ ವ್ಯಾಸದಲ್ಲಿರುವ ಈ ಕೊಳ ಆಯತಾಕಾರದ ಕಲ್ಲಿನಿಂದ ನಿರ್ಮಿತವಾಗಿದ್ದು; ಮಧ್ಯಭಾಗದಲ್ಲಿ ಸೊಗಸಾದ ನಾಲ್ಕು ಕಾಲಿನ ಮಂಟಪವಿದೆ. ಇದರಲ್ಲಿ ಗಣಪತಿ, ಶ್ರೀರಾಮ, ಆಂಜನೇಯ, ದುರ್ಗಿಯ ಉಬ್ಬುಶಿಲ್ಪಗಳಿವೆ. ಜವುಗು ಪ್ರದೇಶದಲ್ಲಿರುವ ಈ ಕೊಳದಲ್ಲಿ ಸದಾಕಾಲ ನೀರು ಜಿನುಗುತ್ತಿದ್ದು ಹೊರಹೋಗುವುದಕ್ಕೆ ಜಲನಾಳವಿದೆ.

**ನಾರಾಯಣ ದುರ್ಗ :**

ಕೃಷ್ಣರಾಜಪೇಟೆ ತಾಲ್ಲೂಕು ಸಿಂದಘಟ್ಟದ ಕೆರೆಯಾಚೆ ಇರುವ ಗಿರಿಶ್ರೇಣಿಯೇ

ನಾರಾಯಣ ದುರ್ಗವಾಗಿದೆ. ಅದಕ್ಕೆ ಹೊಂದಿಕೊಂಡಂತೆ ಮಾದಗಿತ್ತಿಬೆಟ್ಟ, ಹಂದಿಬೆಟ್ಟ, ಮುದಿಬೆಟ್ಟಗಳಿವೆ. ಇಲ್ಲಿನ ಗವಿಗಳು ಸಿದ್ಧಪುರುಷರ ತಪಸ್ಸಿನ ಸ್ಥಳವೆನ್ನುತ್ತಾರೆ. ಇವು ಶಿಲಾಯುಗದ ಮಾನವನ ನೆಲೆಗಳೂ ಆಗಿರಬಹುದು ಎಂಬ ಅಭಿಪ್ರಾಯವಿದೆ. ಇದಕ್ಕೆ ಸಂಬಂಧಪಟ್ಟಂತೆ ರಾಮಾಯಣ, ಮಹಾಭಾರತದ ಐತಿಹ್ಯಗಳಿವೆ. ಬೆಟ್ಟದ ಒಂದು ಪಾರ್ಶ್ವ ತೀರಾ ಕಡಿದಾಗಿದ್ದು, ಇನ್ನೊಂದು ಪಾರ್ಶ್ವದ ಎಡೆಯಿರುವಲ್ಲಿ ಕೋಟೆಯನ್ನು ನಿರ್ಮಿಸುವ ಮೂಲಕ ಶತ್ರುಗಳು ಒಳನುಸುಳಲು ಅಭೇದ್ಯವಾಗಿದೆ. ಏಳುಸುತ್ತಿನ ಕೋಟೆಯ ಅವಶೇಷಗಳಿದ್ದು; ಕೆಳಗಿನ ಆರು ಸುತ್ತು, ಬೆಟ್ಟದ ಬಂಡೆಗಳ ನಡುವಣ ಜಾಗವನ್ನು ಅಡ್ಡಗೋಡೆಗಳಂತೆ ಕಟ್ಟಲಾಗಿದೆ. ಏಳನೆಯ ಸುತ್ತು ಪೂರ್ಣಕೋಟೆಯಾಗಿದೆ. ಶಿಥಿಲಾವಸ್ಥೆಯಲ್ಲಿದ್ದರೂ ಒಂದೊಂದು ಸುತ್ತಿಗೂ ಇರುವ ಹೆಬ್ಬಾಗಿಲುಗಳಲ್ಲಿ ಸುತ್ತಲ ಪ್ರಾಕೃತಿಕ ಬಳ್ಳಿ ಮತ್ತು ಪಕ್ಷಿಯನ್ನೂ ಕಲಾತ್ಮಕವಾಗಿ ಬಿಡಿಸಲಾಗಿದೆ. ಬೆಟ್ಟದ ಮೇಲು ಭಾಗದ ಆಗಿನ ಭದ್ರಕೋಟೆಯ ಆವರಣದಲ್ಲಿ ಕಲ್ಲೇಶ್ವರ (ಕೈಲಾಸೇಶ್ವರ ಅಥವಾ ಕೈವಲ್ಯೇಶ್ವರ) ದೇವಾಲಯ, ಮದ್ದಿನ ಮನೆ, ನೀರಿನ ಡೋಣಿಗಳಿವೆ. ಕೋಟೆಯ ಕಲಾತ್ಮಕ ದ್ವಾರಗಳು, ಕಲ್ಲೇಶ್ವರ ದೇವಾಲಯದ ರಚನೆ ವಿಜಯನಗರ ಕಾಲದಲ್ಲಿ ಆದಂತಿದೆ. ಇದನ್ನು ಸಮೀಪದ ಸಿಂದಘಟ್ಟದ ಅಥವಾ ಬೆಟ್ಟದ ಕೆಳಗಿನ ರಾಯಸಮುದ್ರದ ಪಾಳೇಗಾರ ಕಟ್ಟಿಸಿರಬಹುದು.

**ಕುಂದೂರು ಬೆಟ್ಟ :**

ಮಳವಳ್ಳಿ ತಾಲ್ಲೂಕು ಕುಂದೂರು ಬೆಟ್ಟದ ಮಧ್ಯಭಾಗದಲ್ಲಿರುವ ಅರೆಮಲ್ಲಿಕಾರ್ಜುನ ದೇವಾಲಯವು ೧೫ನೇ ಶತಮಾನದ ಸರಳ ರಚನೆಯಾಗಿದ್ದು, ನಿರಾಡಂಬರವಾಗಿದೆ. ಗಾರೆಯ ಶಿಖರವನ್ನು ಹೊಂದಿರುವ ಗರ್ಭಗೃಹದಲ್ಲಿ ಲಿಂಗ, ಅಂತರಾಳದಲ್ಲಿ ನಂದಿ, ನವರಂಗದಲ್ಲಿ ಗಣಪತಿ, ನಾಗಶಿಲ್ಪಗಳಿವೆ. ಗುಡಿಯ ಎಡಭಾಗದಲ್ಲಿ ನಂದಿ ಕಂಬವಿದೆ. ಸಮೀಪದಲ್ಲಿ ಹದ್ದಿನಗರಿಕಲ್ಲು, ಜಾರುಗಲ್ಲು, ಸುಂಕದಕಲ್ಲು ಎಂದು ಕರೆಯುವ ದೈತ್ಯಾಕಾರದ ಬಂಡೆಗಳ ಸಮೂಹವಿದೆ. ಹಲವಾರು ಗವಿಗಳೂ ಇವೆ. ಇದು 'ಧರೆಗೆ ದೊಡ್ಡವರು' ಎಂಬ ಹೆಗ್ಗಳಿಕೆಗೆ ಪಾತ್ರರಾದ ಮಂಟೇಸ್ವಾಮಿ ಹಾಗೂ ಅವರ ಶಿಷ್ಯ ಸಿದ್ಧಪ್ಪಾಜಿಯ ತಪೋಲೀಲಾ ಭೂಮಿಯಾಗಿತ್ತು. ಒಳಗೆ ಅವರ ಹೆಸರಿನ ಕಿರುಗದ್ದುಗೆಗಳು ಇವೆಯಾದರೂ ಮಂಟೇಸ್ವಾಮಿಯ ಗದ್ದುಗೆ (ಸಮಾಧಿ) ಇದೇ ತಾಲ್ಲೂಕಿನ ಬೊಪ್ಪಗೌಡನಪುರ –ದಲ್ಲೂ, ಸಿದ್ಧಪಾಜಿಯ ಗದ್ದುಗೆಯು ಕೊಳ್ಳೇಗಾಲ ತಾಲ್ಲೂಕಿನ ಚಿಕ್ಕಾಲೂರಿನಲ್ಲೂ, ಮತ್ತೋರ್ವ ಶಿಷ್ಯ ರಾಚಪ್ಪಾಜಿಯ ಗದ್ದುಗೆ ಕೃಷ್ಣರಾಜನಗರ ತಾಲ್ಲೂಕಿನ ಕಪ್ಪಡಿಯಲ್ಲೂ ಇದೆ.

ಮಳವಳ್ಳಿ ತಾಲ್ಲೂಕು ಬೆಳಕವಾಡಿಯ ನಡುಕೇರಿಯಲ್ಲಿರುವ ವೀರಭದ್ರ ಗುಡಿ ಮತ್ತು ಸಮೀಪದ ಕಾವೇರಿ ದಂಡೆಯಲ್ಲಿರುವ ಈಶ್ವರ ಗುಡಿಗಳು ವಿಜಯನಗರ ಕಾಲಕ್ಕೆ ಸೇರಿದ್ದಾಗಿವೆ. ಆ ಕಾಲದ ಆರು ದತ್ತಿ ಶಾಸನಗಳು ಅಲ್ಲಿಯ ಶಂಭುಲಿಂಗ ಗುಡಿಗೆ ಸಂಬಂಧಿಸಿದ್ದಾಗಿದೆ. ಇದೇ ತಾಲ್ಲೂಕು ಮಿಕ್ಕೆರೆಯ ವೀರಭದ್ರ ಗುಡಿ ಪಾಳೆಗಾರಿಕೆ ಕಾಲದ ರಚನೆಯದಾಗಿದೆ.

**ಸ್ತಂಭಗಣಪತಿ :**

ವಿವಿಧ ಶೈಲಿಯ ಬಿಡಿ ಶಿಲ್ಪ ಗಣಪತಿಗಳನ್ನು ಕಾಣುತ್ತೇವೆ. ಕಂಬದಲ್ಲಿರುವ ಉಬ್ಬು ಶಿಲ್ಪಗಳಲ್ಲಿ ಪ್ರತ್ಯೇಕತೆ ಎನ್ನುವಂತೆ ಸ್ಪಷ್ಟವಾಗಿ ವಿಜಯನಗರ ಶೈಲಿಯ ಸಿಂಹಮುಖದ ಯಾಳಿ ಕಂಬದಲ್ಲಿ ವಿಶೇಷವಾಗಿ ಮೂಡಿಸಿರುವ ಎಡಮುರಿ ಗಣಪತಿ ಶಿಲ್ಪ ಮದ್ದೂರು ತಾಲ್ಲೂಕು ಬೆಸಗರಹಳ್ಳಿಯಲ್ಲಿ ಕಾಣಬಹುದಾಗಿದೆ. ಇದನ್ನು ಸ್ತಂಭಗಣಪತಿ ಎಂದೇ ಕರೆಯಲಾಗಿದೆ. ಕಂಬದ ತಳಭಾಗದಲ್ಲಿರುವ ವಿವಿಧ ಭಂಗಿಯ ಮೂರು ಗಣಪತಿಗಳಲ್ಲಿ ಬಾಲಗಣಪತಿಯಂತೂ ಮನಮೋಹಕವಾಗಿದೆ.

ಇಲ್ಲಿ ವಿಜಯನಗರ ಕಾಲದ ಪಾಳೇಗಾರ ನಿರ್ಮಿಸಿರಬಹುದಾದ ಕೋಟೆ ಅವಶೇಷಗಳಿವೆ. ಎಂದಿನಂತೆ ಕೋಟೆ ಬಾಗಿಲಲ್ಲಿ ಪ್ರತಿಷ್ಠಾಪಿಸುವ ಆಂಜನೇಯಗುಡಿ ಇದೆ. ಸಾಮಾನ್ಯವಾಗಿ ವಿಜಯನಗರ ಕಾಲದ ಆಂಜನೇಯ ವಿಗ್ರಹಗಳು ವ್ಯಾಸರಾಯರ ಪ್ರೇರಿತ ಮಾಧ್ವ ಸಂಪ್ರದಾಯದ ಗಂಟುಹಾಕಿದ ಜುಟ್ಟು, ಜನಿವಾರ, ಬಾಲದಲ್ಲಿ ಗಂಟೆ, ನಾಮ ಇತ್ಯಾದಿ ಲಕ್ಷಣಗಳನ್ನು ಕಾಣುತ್ತೇವೆ. ಜಿಲ್ಲೆಯಲ್ಲಿ ಇಂಥ ಮೂರ್ತಿಗಳು ಹೆಚ್ಚು ಕಾಣುಬರುತ್ತವೆ. ಈ ಗುಡಿಯ ಆಸುಪಾಸಿನಲ್ಲಿ ಕೋಟೆ ಪ್ರವೇಶದಲ್ಲಿ ಉಪ್ಪರಿಗೆ ಬಸವಣ್ಣ, ಸ್ತಂಭಗಣಪತಿ, ವೀರಭದ್ರ, ಮಾರಮ್ಮ ಗುಡಿಗಳು ಕಾಣಬರುತ್ತವೆ.

ಊರಿನ ನಡುವೆ ಶಿಥಿಲಾವಸ್ಥೆಯಲ್ಲಿರುವ ಚನ್ನಿಗರಾಯಸ್ವಾಮಿ ದೇವಾಲಯ ವಿಜಯನಗರ ಶೈಲಿಯಲ್ಲಿದೆ. ಗರ್ಭಗುಡಿಯಲ್ಲಿರುವ ಮೂರ್ತಿ ಸುಮಾರು ಎರಡೂವರೆ ಅಡಿ ಎತ್ತರವಿದ್ದರೂ ಸಮೀಪದ ಮದ್ದೂರಿನ ಭವ್ಯ ವರದರಾಜಸ್ವಾಮಿ ಮೂರ್ತಿಯ ಮಾದರಿಯಂತೆ ಕೆತ್ತನೆಯಲ್ಲಿ ವೈತುಂಬಿಕೊಂಡಿದೆ. ಕಿರೀಟಧಾರಣೆಯಾಗಿ ಚತುರ್ಭುಜ ಧಾರಿಯಾಗಿರುವ ಈ ಶಿಲ್ಪ ಬಲಭಾಗದ ಕೈಗಳಲ್ಲಿ ಶಂಖ, ಅಭಯ ಹಸ್ತದಲ್ಲಿ ಪದ್ಮ, ಎಡಭಾಗದ ಕೈಗಳಲ್ಲಿ ಚಕ್ರ, ಗದೆ, ಕಿವಿಗಳಲ್ಲಿ ಮಕರ ಕುಂಡಲ, ದೇಹದ ಮೇಲೆ ಪೀತಾಂಬರ, ಯಜ್ಞೋಪವೀತ, ನಡುಪಟ್ಟಿ, ಕೌಸ್ತುಭ, ತೋಳಬಂದಿ, ಕಾಲಿಗೆ ಕಡಗ, ಪಾದದ ಕಿರುಗೆಜ್ಜೆ ಹೀಗೆ ಮನಮೋಹಕವಾದ ಕೆತ್ತನೆಗಳನ್ನು ಕಡೆಯಲಾಗಿದೆ. ಗರ್ಭಗೃಹ, ಸುಖನಾಸಿ,

ನವರಂಗ, ಮುಖ ಮಂಟಪಗಳಿಂದ ಕೂಡಿರುವ ಈ ಗುಡಿಯ ಸಂರಕ್ಷಣೆ ತುರ್ತು ಆಗಬೇಕಾಗಿದೆ. ನವರಂಗದ ಎರಡು ಕಂಬಗಳಲ್ಲಿ ಗುಡಿ ಕಟ್ಟಿಸಿ ಕೈಮುಗಿದು ನಿಂತಿರುವ ಪುರಷ ಮತ್ತು ಸ್ತ್ರೀಯೊಬ್ಬಳ ಉಬ್ಬುಶಿಲ್ಪಗಳಿವೆ.

ಈಶಾನ್ಯಕ್ಕೆ ಇರುವ ಕೈವಲ್ಯರಾಮೇಶ್ವರ ಗುಡಿಯೂ ಸಹ ವಿಜಯನಗರ ಶೈಲಿಯಲ್ಲಿದೆ. ಗುಡಿಯ ನವರಂಗವು ವಿಶಾಲವಾಗಿದ್ದು ಅಕ್ಕಪಕ್ಕದ ಕಿರುಗುಡಿಗಳು ಪಾಳುಬಿದ್ದಿವೆ. ಈ ತೆರನಾದ ಸಣ್ಣಪುಟ್ಟ ದೇವಾಲಯಗಳನ್ನು ಅಲ್ಲಲ್ಲಿ ಪಾಳೆಗಾರರ ಆಳ್ವಿಕೆಯ ಸ್ಥಳಗಳಲ್ಲಿ ಕಾಣಬಹುದಾಗಿದೆ.

**ರಾಂಪುರ ಮತ್ತು ಅರುವನಹಳ್ಳಿ ಸಂಸ್ಕೃತಿ :**

ಬೆಸಗರಹಳ್ಳಿಗೆ ಸಮೀಪದ ರಾಂಪುರದ ರಾಮೇಶ್ವರ ದೇವಾಲಯವನ್ನು ವಿಜಯನಗರದ ಮಹಾಪ್ರಧಾನ ತಿಮ್ಮಣ್ಣ ದಂಡನಾಯಕನ ಅನುಮತಿ ಪಡೆದು ಲಕ್ಕಪ್ಪನ ಮಗ ತಿಪ್ಪಯ್ಯ ಎಂಬುವನು ಕ್ರಿ.ಶ. ೧೪೪೫ ರಲ್ಲಿ ಕಟ್ಟಿಸಿರುವ ದಾಖಲೆ ಇದೆ. ಇದೇ ಮದ್ದೂರು ತಾಲ್ಲೂಕು ಅರುವನಹಳ್ಳಿ ಒಂದು ಚಾರಿತ್ರಿಕವಾದ ಸ್ಥಳ. ವಿಜಯನಗರದ ದೊರೆ ಒಂದನೇ ಬುಕ್ಕರಾಯ ಇಲ್ಲಿಗೆ ಆಗಮಿಸಿ ನ್ಯಾಯ ತೀರ್ಮಾನ ಮಾಡಿದಂಥ ದಾಖಲೆ ಶಾಸನವಿದೆ. ಈ ಊರು ವೀರಗಲ್ಲು, ಮಾಸ್ತಿಗಲ್ಲು ಮತ್ತು ಪ್ರಾಚೀನ ನೀರಾವರಿ ವಿಷಯಗಳ ಅಧ್ಯಯನಕ್ಕೆ ಒಂದು ವೇದಿಕೆಯಂತಿದೆ. ಕ್ರಿ.ಶ. ೧೩೭೮ರ ಅದೇ ವೀರಬುಕ್ಕಣ್ಣ ಒಡೆಯರ ಕಾಲದ ಶಾಸನವೊಂದರಲ್ಲಿ ಅರುವನಹಳ್ಳಿಯ ಕೀರ್ತಿ ದೇವರಸರ ಪುತ್ರ ಬಾಚಿಯಪ್ಪನು ತನ್ನ ಪ್ರಭು, ತಂದೆ, ತಾಯಿ ಹಾಗೂ ತನ್ನ ಹೆಸರಿನಲ್ಲಿ ನಿರ್ಮಿಸಿದ ಕೆರೆಗಳು ಬುಕ್ಕರಾಯ ಸಮುದ್ರ, ಕೀರ್ತಿ ಸಮುದ್ರ, ಮಾಳವ್ವೆಯ ಕೆರೆ, ಬಾಚಪ್ಪನ ಕೆರೆ, ಚೌಡಪ್ಪನ ಕಾಲುವೆ ಅಂತೆಯೇ ನಾಲ್ಕು ದಿಕ್ಕಿನಲ್ಲಿಯೂ ನೆಟ್ಟ ಸಾಲು ಮರಗಳು, ಅದಲ್ಲದೆ ತಾನು ನೆಡೆಸಿದ ಅರಳಿಮರಗಳಿಗೆ 'ಮುಂಜಿ' ಪೂಜೆಯನ್ನು ಮಾಡಿಸಿದ್ದು ಈ ನಾಡಿನ ಸಹೃದಯರ ಸಂಸ್ಕೃತಿಯನ್ನು ತೋರ್ಪಡಿಸುತ್ತದೆ. ಅರುವನಹಳ್ಳಿ ಸಮೀಪದ ತೋಪುಬೀರೇಶ್ವರ, ಆಲೂರು ಬೀರೇಶ್ವರ, ಮಾದನಾಯಕನಹಳ್ಳಿಯಲ್ಲಿ ಪಾಳೆಗಾರರ ಕಾಲದಲ್ಲಿ ಕಟ್ಟಿದ ಸಿದ್ಧರಾಮೇಶ್ವರ ದೇವಾಲಯ ಮತ್ತು ಮದ್ದೂರು ಸಮೀಪದ ವಳಗೆರೆಹಳ್ಳಿಯಲ್ಲಿ ವಿಜಯನಗರದ ಕಡೆಯಿಂದ ಬಂದ ಎಲ್ಲೆ ಈರಪ್ಪ (ವೀರಪ್ಪ)ನ ಸಾಹಸ ಮತ್ತು ಆತನ ಹೆಸರಿನಲ್ಲಿರುವ ಗುಡಿ ಮತ್ತಿತರ ದೇವಾಲಯಗಳನ್ನು ಕಾಣಬಹುದಾಗಿದೆ.

## ಶ್ರೀರಂಗಪಟ್ಟಣದ ದೇವಾಲಯಗಳು

ಇದೊಂದು ಕಾವೇರಿ ತೀರದ ದ್ವೀಪವಾಗಿದ್ದು, ಪೌರಾಣಿಕ ಹಿನ್ನೆಲೆಯಂತೆ ಕಾವೇರಿಯ ತಪಸ್ಸಿಗೆ ಶ್ರೀರಂಗನಾಥನು ಇಲ್ಲಿ ಪ್ರತ್ಯಕ್ಷಗೊಂಡು ಕಾವೇರಿಗೆ ಗಂಗೆಗಿಂತಲೂ ಹೆಚ್ಚಿನ ಪಾವಿತ್ರ್ಯತೆಯನ್ನು ಕರುಣಿಸಿದನಂತೆ. ನಂತರದಲ್ಲಿ ಗೌತಮ ಮತ್ತು ಅಹಲ್ಯಾ ಋಷಿದಂಪತಿಗಳು ಆಶ್ರಮವಾಸಿಗಳಾಗಿ ಇಲ್ಲಿ ನೆಲೆಸಿದ್ದರಿಂದ 'ಗೌತಮಕ್ಷೇತ್ರ' ಎಂದು ಹೆಸರಾಯಿತು. ಕಾವೇರಿ ನದಿ ದಂಡೆಯ ಮೇಲೆ ತುಳಸೀವನದಲ್ಲಿ ಮಹರ್ಷಿಗಳೇ ಶ್ರೀರಂಗನಾಥನನ್ನು ಪ್ರತಿಷ್ಠಾಪಿಸಿ ಅರ್ಚಿಸುತ್ತಿದ್ದರಂತೆ. ಇಲ್ಲಿಂದಲೇ ಶ್ರೀರಂಗನಾಥನ ಹೆಸರು ಈ ಸ್ಥಳಕ್ಕೆ ಬೇರೂರಿತು. ಶಿಲೆಯ ಬಳಕೆಗಿಂತ ಮುಂಚೆ ಮಣ್ಣು ಅಥವಾ ಕಾಷ್ಠಗಳಿಂದ ವಿಗ್ರಹ ಮತ್ತು ದೇವಾಲಯಗಳನ್ನು ನಿರ್ಮಿಸಲಾಗುತ್ತಿತ್ತು. ಚಾರಿತ್ರಿಕವಾಗಿ ಕ್ರಿ.ಶ. ೮೯೪ರಲ್ಲಿ ಗಂಗರಸರ ದಂಡನಾಯಕ ತಿರುಮಲಯ್ಯ ಎಂಬಾತನು ಶ್ರೀರಂಗನಾಥನ ವಿಗ್ರಹ ಮತ್ತು ಗುಡಿಯನ್ನು ನಿರ್ಮಿಸಿದನೆಂಬ ಅಂಶ ತಿಳಿದು ಬರುತ್ತದೆ. ಇದಕ್ಕೂ ಮುನ್ನ ಹಂಬಿ ಎಂಬ ದೇವದಾಸಿ ಕ್ರಿ.ಶ. ೮೧೭ರಲ್ಲಿ ರಂಗನಾಥನ ಗುಡಿಯೊಂದನ್ನು ಕಟ್ಟಿಸಿದಳೆಂದು ಹೇಳಲಾಗುತ್ತದೆ. ನಂತರದಲ್ಲಿ ದ್ವೀಪದ ಮತ್ತು ದೇವಾಲಯಗಳ ಅಭಿವೃದ್ಧಿ ಆಯಾ ರಾಜಮನೆತನಗಳ ಮೇಲೆ ಅವಲಂಬಿತವಾಯಿತು. ಒಟ್ಟಿನಲ್ಲಿ ಇಲ್ಲಿಯ ಸ್ಥಳನಾಮ ಆದಿಯಿಂದಲೂ ದೈವಸೂಚಿಯಾಗಿಯೇ ಬಂದಿದೆ.

ಪ್ರಾಚೀನ ಶಾಸನಗಳಲ್ಲಿ ಶ್ರೀರಂಗಧಾಮ, ಶ್ರೀರಂಗಪುರ, ಶ್ರೀಪಶ್ಚಿಮರಂಗಪಟ್ಟಣ ಎಂದೆಲ್ಲ ಉಲ್ಲೇಖಿತಗೊಂಡಿದೆ. ಭೌಗೋಳಿಕ ಹಿನ್ನೆಲೆಯ ಮೇರೆಗೆ 'ಉಭಯ ಕಾವೇರಿ ಮಧ್ಯವರ್ತಿ' ಎಂದೂ ಸಹ ಕರೆಯಲಾಗಿದೆ. ಶ್ರೀರಂಗಪಟ್ಟಣದ ಐತಿಹಾಸಿಕ ಮಹತ್ವ ಮತ್ತು ಸ್ಮಾರಕಗಳ ವಿವರಣೆಯೇ ಒಂದು ಅಧ್ಯಾಯವಾಗುತ್ತದೆ. ಇದೀಗ ಮುಖ್ಯ ವಿಷಯವಾದ ಇಲ್ಲಿಯ ದೇವಾಲಯಗಳ ವಾಸ್ತುಶಿಲ್ಪದ ಬಗ್ಗೆ ಅವಲೋಕಿಸೋಣ.

**ರಂಗನಾಥ ದೇವಾಲಯ :**

ದ್ರಾವಿಡ ಶೈಲಿಯ ಈ ದೇವಾಲಯ ಪೂರ್ವಕ್ಕೆ ಮುಖಮಾಡಿ ನಿಂತಿದೆ. ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ಸುಖನಾಸಿ, ಪ್ರದಕ್ಷಿಣ ಪಥ, ನವರಂಗ, ಮಹಾಮಂಟಪ, ಪ್ರಾಕಾರ, ಕಲ್ಯಾಣಿ, ಬೃಂದಾವನ ಇತ್ಯಾದಿಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಉತ್ತರ–ದಕ್ಷಿಣವಾಗಿ ವ್ಯಾಪಿಸಿರುವ ಶೇಷಶಾಯಿ ಶ್ರೀರಂಗನಾಥ (ವಿಷ್ಣು)ನ ಅಖಂಡ ಶಿಲ್ಪವು ಮನಮೋಹಕವಾಗಿದೆ. ಆದಿಶೇಷನು ನೆರಳು ನೀಡುವಂತೆ ಅಗಲವಾಗಿ ಬಿಚ್ಚಿದ ಏಳು ಹೆಡೆಗಳು ಅದ್ಭುತ ಎನಿಸುತ್ತದೆ. ಬಲಮಗ್ಗುಲಾಗಿ, ಬಲಗೈ

ಮಡಚಿ ಅದರ ಮೇಲೆ ತಲೆಯೂರಿ ಪವಡಿಸಿರುವ ಕಿರೀಟಧಾರಿಣಿ ಶ್ರೀರಂಗನಾಥ ಸರ್ವಾಭರಣ ಭೂಷಿತನಾಗಿದ್ದಾನೆ. ಆದಿಶೇಷನ ಪೊರೆಯ ವಿವರವಾದ ಸೂಕ್ಷ್ಮ ಕೆತ್ತನೆ ಗಮನ ಸೆಳೆಯುತ್ತದೆ. ಶ್ರೀರಂಗಪಟ್ಟಣದ ಶಾಸನವೊಂದು 'ಪನ್ನಗಶಾಯಿ ಪಶ್ಚಿಮರಂಗ' ನೆಂದೇ ವರ್ಣಿಸಿದೆ. ಸ್ವಾಮಿಯ ಪದತಲದಲ್ಲಿ ಕಾವೇರಿ ಮತ್ತು ಗೌತಮ ಮಹರ್ಷಿಯ ಬಿಡಿ ಶಿಲ್ಪಗಳಿವೆ. (ಕ್ಷೀರ ಸಾಗರದಲ್ಲಿ ಶೇಷಶಾಯಿಯಾದ ನಾರಾಯಣನು ವಿಷ್ಣುವೇ ಆಗಿದ್ದು; ಆತನ ಪಾದದ ಬಳಿ ಲಕ್ಷ್ಮಿಯು ಕುಳಿತಿರಲು, ನಾರಾಯಣನ ನಾಭಿಯಿಂದ ಉದ್ಭವಿಸಿದ ಕಮಲದಲ್ಲಿ ಬ್ರಹ್ಮನು ಹುಟ್ಟುತ್ತಾನೆ. ವಿಷ್ಣುವಿನ ಈ ರೂಪವನ್ನು ಶ್ರೀರಂಗನಾಥನೆಂದು ಆರಾಧಿಸಲಾಗುತ್ತದೆ.)

ದೇವಾಲಯದ ಗರ್ಭಗೃಹದ ಮುಂದಿರುವ ಸುಖನಾಸಿ ವಿಸ್ತಾರವಾಗಿದೆ. ಮೇಲ್ಛಾವಣಿಯಲ್ಲಿ ಪದ್ಮದ ಉಬ್ಬು ಕೆತ್ತನೆಯಿದೆ. ನವರಂಗವಂತೂ ಅನೇಕ ಬೃಹತ್ ಕಂಬಗಳ ವಿಶಾಲ ಹಜಾರದಂತಿದೆ. ಹೊಯ್ಸಳಶೈಲಿಯ ನಕ್ಷತ್ರ, ಉರುಳೆ, ಘಂಟೆಯಾಕಾರದ ದಿಂಡುಗಳುಳ್ಳ ಕಂಬಗಳು ಇಲ್ಲಿ ಶೋಭಿಸುತ್ತಿವೆ. ನವರಂಗದಿಂದ 'ಕತ್ತಲೆ ಪ್ರದಕ್ಷಿಣ ಪಥ'ಕ್ಕೆ ದಾರಿಯಿದೆ. ಗರ್ಭಗುಡಿಯ ಹೊರಬಿತ್ತಿ ಕಪ್ಪುಶಿಲೆಯಲ್ಲಿ ಚಿತ್ತಾಕರ್ಷಕವಾಗಿದೆ. ನವರಂಗದ ಮುಖ್ಯದ್ವಾರದಲ್ಲಿ ಆಕರ್ಷಕ ನಿಲುವುಳ್ಳ ಎತ್ತರವಾದ ದ್ವಾರಪಾಲಕರ ಶಿಲ್ಪಗಳಿವೆ. ದೇವಾಲಯದ ಒಳಪ್ರಾಕಾರದ ನಾಲ್ಕೂ ಕಡೆ ಪರಿವಾರ ದೇವತಾ ಗೃಹಗಳಿವೆ. ಇವುಗಳಲ್ಲಿ ಶ್ರೀ ರಾಜಮನ್ನಾರ್ ಕೃಷ್ಣಸ್ವಾಮಿಯ ವಿಗ್ರಹಗಳು, ಪಟ್ಟಾಭಿರಾಮರ ಪದತಲದಲ್ಲಿ ಆಂಜನೇಯ ತನ್ನ ಬಲಗೈಯಲ್ಲಿ ರಾಮನ ಪಾದವನ್ನು ಒತ್ತುತ್ತಲೂ, ಎಡಗೈಯಲ್ಲಿ ರಾಮಾಯಣವನ್ನು ಹಿಡಿದು ಪಠಿಸುತ್ತಲೂ, ಜತೆಗೆ ಸೀತಾ ಲಕ್ಷ್ಮಣ ಇರುವ ಮೂರ್ತಿಗಳು ಅಪೂರ್ವ ಎನಿಸಿವೆ. ಲಕ್ಷ್ಮೀನರಸಿಂಹ, ಸೂರ್ಯ ನಾರಾಯಣ, ಗಜೇಂದ್ರಮೋಕ್ಷ ಮುಂತಾದವುಗಳಲ್ಲಿ ಕೊಳಲುಗೋಪಾಲ ಕೃಷ್ಣನ ಕೆತ್ತನೆಯಂತೂ ಅಸದಳವಾಗಿದೆ. ಈ ಮೂರ್ತಿಯ ಪ್ರಭಾವಳಿಯ ಮೇಲುಭಾಗದಲ್ಲಿ ಛತ್ರಿಯಂತೆ ಹೊಂಗೆಮರದಲ್ಲಿ ಪಕ್ಷಿಗಳೂ, ಸರ್ಪಗಳೂ, ಸುತ್ತಲೂ ಗೋಪಾಲಕರು, ಗೋಪಿಕಾಸ್ತ್ರೀಯರು, ಗೋವುಗಳು ಕೃಷ್ಣನಿಂತ ತ್ರಿಭಂಗಿಯ ರೀತಿಗೆ ಮತ್ತು ವೇಣುನಾದಕ್ಕೆ ಮನಸೋತಿರುವುದು ಶಿಲ್ಪಿಯ ಚಾತುರ್ಯದಲ್ಲಿ ಕೃಷ್ಣನ ನಿಜಜೀವನದ ದರ್ಶನವಾಗುತ್ತದೆ. ರಾಮಾನುಜರು, ಭವ್ಯಆಂಜನೇಯ, ಸುಗ್ರೀವರಲ್ಲದೆ, ವೆಂಕಟರಮಣ, ಮನವಾಳಮಾಮುನಿ ಮತ್ತಿತರ ಆಳ್ವಾರರಲ್ಲದೆ ವಿಷ್ಣು ಅಂಶದ ಮೂರ್ತಿಗಳ ಕಿರುಗುಡಿಗಳಿವೆ. ಇಲ್ಲಿಯೇ ಇರುವ ನಾಲ್ಕು ಕಂಬಗಳ ಮೇಲೆ ವಿಷ್ಣುವಿನ ಇಪ್ಪತ್ನಾಲ್ಕು (ಚತುರ್ವಿಂಶತಿ) ರೂಪಗಳನ್ನು ಕೆತ್ತಲಾಗಿದೆ. ವಿಷ್ಣುವಿನ ಈ ರೂಪಗಳ ಹೆಸರುಗಳನ್ನು ಅಲ್ಲಲ್ಲೇ ಕೊರೆದು ಬರೆದಿರುವುದು ವಿಶೇಷವಾಗಿದೆ.

ಮೂಲಗರ್ಭಗುಡಿಯ ಒಳಪ್ರಾಕಾರದ ವಾಯುವ್ಯದಲ್ಲಿ ಲಕ್ಷ್ಮಿ (ರಂಗನಾಯಕಿ) ಗುಡಿ ಇದೆ. ಶ್ರೀರಂಗಪಟ್ಟಣದಲ್ಲಿಯೇ ನೆಲಸಿದ್ದ ವಿಜಯನಗರದ ರಾಜಪ್ರತಿನಿಧಿಯಾದ ತಿರುಮಲರಾಯನ ಮಡದಿ ಅಲಮೇಲಮ್ಮನು, ಪ್ರತೀ ಮಂಗಳವಾರ–ಶುಕ್ರವಾರಗಳಲ್ಲಿ ವಿಶೇಷ ಪೂಜೆ ಸಲ್ಲಿಸುತ್ತಿದ್ದು ದೇವಿಯ ಮೂಗನ್ನು ಅಪ್ಪಿದ ಮುತ್ತಿನ ಮೂಗುತಿ ಅಲಮೇಲಮ್ಮನದೇ ಎಂಬ ಪ್ರತೀತಿ ಈಗಲೂ ಇದೆ.

ದೇವಾಲಯದ ಮುಂಭಾಗದಲ್ಲಿ ವಿಶಾಲವಾದ ಮಂಟಪವಿದೆ. ಮಂಟಪದ ಮಧ್ಯಭಾಗದಲ್ಲಿ ಎತ್ತರವಾದ ಗರುಡಗಂಭವಿದೆ. ಮಂಟಪದಲ್ಲಿ ಕಾಣುವ ಎತ್ತರವಾದ ಕಂಬಗಳು ವಿಜಯನಗರ ಶೈಲಿಯಲ್ಲಿವೆ. ಗಣಪ, ಆಂಜನೇಯ, ಗರುಡ, ಸರಸ್ವತಿ ಮುಂತಾದ ಉಬ್ಬು ಶಿಲ್ಪಗಳಿವೆ. ವರಾಹ, ಕೂರ್ಮ, ನರಸಿಂಹಾವತಾರಗಳು, ಗರುಡ ಲಕ್ಷ್ಮೀನಾರಾಯಣರನ್ನು ಹೊತ್ತಿರುವುದು ಆಕರ್ಷಕವಾಗಿದೆ. ಗುಡಿಯ ಪಾತಾಳಂಕಣ ಹೈದರ್ ನಿರ್ಮಾಣ ಎಂದು 'ಹೈದರ್‌ನಾಮ' ಹೇಳುತ್ತದೆ. ಮಂಟಪದ ಮುಂಭಾಗದ ಕೈಪಿಡಿಗೋಡೆಯಲ್ಲಿ ವಿವಿಧ ಮಾದರಿಯ ಚಿಕಣಿ ಮಂಟಪಗಳ ಸಾಲಿದೆ. ಇವುಗಳಲ್ಲಿ ವಿಷ್ಣುವಿನ ವಿವಿಧ ಅವತಾರಗಳ ಗಾರೆ–ಗಚ್ಚು ಶಿಲ್ಪಗಳಿವೆ. ದೇವಾಲಯದ ವಾಯವ್ಯಕ್ಕೆ ಪ್ರಸನ್ನವೆಂಕಟರಮಣ ಗುಡಿ ಇದೆ. ಕ್ರಿ.ಶ. ೧೮೨೯ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಈ ಗುಡಿ, ಮುಂದಿನ ಬಾವಿ ಹಾಗೂ ಶಿಲಾಮಂಟಪಗಳು ನಿರ್ಮಾಣಗೊಂಡ ಅಂಶಗಳಿವೆ. ದೇವಾಲಯದ ಸುತ್ತಲೂ ಎತ್ತರವಾದ ಪ್ರಾಕಾರವಿದೆ. ಮಹಾದ್ವಾರದ ಮೇಲೆ ಭವ್ಯವಾದ ಐದು ಅಂತಸ್ತಿನ ರಾಯಗೋಪುರವಿದೆ. (ಒಳಗೆ ಇಂಡೋ ಅರ್ಸೆನಿಕ್ ಶೈಲಿಯಿದೆ. ಇದು ವಿಜಯನಗರ ಶೈಲಿಯಾದರೂ ಈ ಕಮಾನು ಮಾದರಿ ಹೈದರಾಲಿ ಕಾಲದಲ್ಲಿ ಜೀರ್ಣೋದ್ಧಾರವಾಗಿರುವುದನ್ನು ತಳ್ಳಿ ಹಾಕಲಾಗದು.) ಮಹಾದ್ವಾರದ ಒಳಭಾಗದಲ್ಲಿ ನಾಲ್ಕು ಕಲ್ಲಿನ ಆನೆಯ ಶಿಲ್ಪಗಳಿವೆ. ಕೃಷ್ಣ, ರಂಗನಾಥ, ವೇಣುಗೋಪಾಲ, ಜನಾರ್ದನ ಮೂರ್ತಿಗಳಿರುವ ಬೃಂದಾವನವಿದೆ. ಪ್ರಾಕಾರದ ಒಳಗಿನ ಕಲ್ಯಾಣಿ ಸುಂದರವಾಗಿದೆ. ಸಂಕ್ರಾಂತಿಯಲ್ಲಿ ತೆರೆಯುವ ಸ್ವರ್ಗದ ಬಾಗಿಲೂ ಇದೆ. ಮೇಲುಕೋಟೆಯಂತೆ ಈ ದೇವಾಲಯಲ್ಲಿಯೂ ವರ್ಷವಿಡೀ ಉತ್ಸವಗಳು ಜರುಗುತ್ತವೆ. ರಂಗಮುಡಿ, ವೈರಮುಡಿ, ರಾಜಮುಡಿ, ರಥಸಪ್ತಮಿ, ವಯಲ್‌ಮಾಳಿಗೆ ಉತ್ಸವ ಇತ್ಯಾದಿ.

ಹೊಯ್ಸಳರ ಕಾಲದಲ್ಲಿ ರಾಜ ವಿಷ್ಣುವರ್ಧನನು ಶ್ರೀರಾಮಾನುಜಾಚಾರ್ಯರಿಗೆ ನೀಡಿದ ಅಷ್ಟಗ್ರಾಮಗಳ ದತ್ತಿಯಲ್ಲಿ ಶ್ರೀರಂಗಪಟ್ಟಣವೂ ಒಂದೆಂದು ತಿಳಿದಿದೆ. ಇಮ್ಮಡಿ ವೀರಬಲ್ಲಾಳನೂ ಕ್ರಿ.ಶ. ೧೨೨೦ರಲ್ಲಿ ಈ ದೇವಾಲಯಕ್ಕೆ ಅನೇಕ ದಾನದತ್ತಿಗಳನ್ನು ನೀಡಿರುವುದು ಉಲ್ಲೇಖಗೊಂಡಿದೆ.


**ಗಂಗಾಧರೇಶ್ವರ ದೇವಾಲಯ :**

ಶ್ರೀರಂಗಪಟ್ಟಣ ಹೊಯ್ಸಳರ ಕಾಲದಲ್ಲಿ ಮಹಾ ಅಗ್ರಹಾರ ಎಂದು ಕರೆಯಲ್ಪಟ್ಟಿತ್ತು. ಅಗ್ರಹಾರದ ರಚನೆಯಂತೆ ಪೂರ್ವಕ್ಕೆ ವಿಷ್ಣು (ರಂಗನಾಥ) ದೇವಾಲಯವಿದ್ದು; ಈಶಾನ್ಯಕ್ಕೆ ಗಂಗಾಧರೇಶ್ವರ (ಗಂಗೆಯನ್ನು ಧರಿಸಿದ ಈಶ್ವರ) ದೇವಾಲಯ ಮತ್ತು ಅದರ ಬದಿಗೆ ಕಾವೇರಿ ನದಿ ಹರಿಯುತ್ತಿದೆ. ಮೂಲತಃ ಗಂಗರಕಾಲದ ಮೂರ್ತಿ ಎಂಬ ಅಭಿಪ್ರಾಯವಿದ್ದರೂ ಅವರ ಕಾಲದ ರಚನೆಗಳು ಉಳಿದಿಲ್ಲ. ಮುಂದೆ ಆಡಳಿತ ನಡೆಸಿದ ಹೊಯ್ಸಳರು, ವಿಜಯ ನಗರದ ಅರಸರು, ಮೈಸೂರು ಅರಸರು ಮತ್ತು ದಳವಾಯಿಗಳು ದೇವಾಲಯವನ್ನು ವ್ಯವಸ್ಥಿತವಾದ ಜೋಡಣೆಗಳೊಂದಿಗೆ ವಿಸ್ತಾರಗೊಳಿಸಿದ್ದಾರೆ. ಗರ್ಭಗುಡಿ, ಸುಖನಾಸಿ, ವಿಶಾಲವಾದ ನವರಂಗ, ಪಾತಾಳಂಕಣ, ಮುಖಮಂಟಪ, ಬಲಿಪೀಠ, ಧ್ವಜಸ್ತಂಭಗಳಿಂದ ರಚನೆಗೊಂಡಿದೆ. ನವರಂಗ ಮತ್ತಿತರ ಭಾಗಗಳು ವಿಜಯನಗರ ಶೈಲಿಯಲ್ಲಿದ್ದರೆ; ಇಲ್ಲಿ ಕಾಣಬರುವ ಹಲವಾರು ಶಿಲ್ಪಗಳು ಹೊಯ್ಸಳ ಶೈಲಿಯಲ್ಲಿವೆ. ಹಲವು ನಂತರದ ಕಾಲದಲ್ಲಾಗಿವೆ. ನವರಂಗದಲ್ಲಿ ಒಳ ಪ್ರವೇಶದ ಅಕ್ಕಪಕ್ಕದಲ್ಲಿ ಸೂರ್ಯ–ಚಂದ್ರ, ಷಣ್ಮುಖಿ, ವರದರಾಜಸ್ವಾಮಿ, ಮಹಿಷಾಸುರಮರ್ಧಿನಿ, ಸುಬ್ರಹ್ಮಣ್ಯ, ಕಾಲಭೈರವ, ಮಹಾಬಲೇಶ್ವರ, ಹಲವಾರು ಗಣಪತಿಗಳಲ್ಲಿ ಮಹಾಗಣಪತಿ, ಸಪ್ತಮಾತೃಕೆಯರ ಶಿಲ್ಪಗಳು ಆಕರ್ಷಕವಾಗಿವೆ. ನವರಂಗದ ಬಲಭಾಗದಲ್ಲಿರುವ ಉತ್ಸವ ಮೂರ್ತಿ ಗಂಗಾಧರೇಶ್ವರ, ಗಂಗೆ ಮತ್ತು ಪಾರ್ವತಿ ಪರಿವಾರದ ಮೂರ್ತಿಗಳು ಮತ್ತು ಪಕ್ಕದ ಕೋಣೆಯಲ್ಲಿರುವ ನಟರಾಜ ವಿಗ್ರಹ ಮನಮೋಹಕವಾಗಿವೆ. ಪಾರ್ವತಿ ಮತ್ತು ಗಂಗೆಯರ ಉತ್ಸವ ಮೂರ್ತಿಗಳನ್ನು ನಾಟ್ಯರಾಣಿ ರತ್ನ ಎಂಬುವವಳು ದಾನ ನೀಡಿದ್ದಾಳೆ. ಹೀಗೆಯೇ ಹಲವಾರು ದಾನಿಗಳ ಹೆಸರುಗಳನ್ನು ಕಾಣಬಹುದಾಗಿದೆ.


ಮೂರು ಪಾರ್ಶ್ವಗಳಲ್ಲಿ ಸುತ್ತಾಲಯ ಮಂಟಪ ನಿರ್ಮಿತವಾಗಿದ್ದು, ದೇವಾಲಯದ ಹಿಂಭಾಗಕ್ಕಾದಂತೆ ಎಡಭಾಗದಲ್ಲಿ ಪ್ರಸನ್ನಪಾರ್ವತಿ ಗುಡಿಯಿದೆ. ಇಲ್ಲಿ ಗೋಡೆಗೆ ಆನಿಸಿರುವ ಮೈಸೂರು ಶೈಲಿಯಲ್ಲಿ ರಚಿತಗೊಂಡಿರುವ ಪಾರ್ವತಿ ಚಿತ್ರದಲ್ಲಿ ಶೈವ–ವೈಷ್ಣವದ ಸಮನ್ವಯತೆ ಕಾಣುತ್ತದೆ. ಬಿಲ್ಲು, ಬಾಣ, ಪದ್ಮಗಳನ್ನು ಹಿಡಿದಿರುವ ಪ್ರಧಾನ ಚಿತ್ರ ಪಾರ್ವತಿ ಚತುರ್ಭುಜೆಯಾಗಿದ್ದಾಳೆ. ಅಕ್ಕ ಪಕ್ಕದಲ್ಲಿ ಸಖಿಯರಿದ್ದಾರೆ. ಬ್ರಹ್ಮ, ವಿಷ್ಣು, ಮಹೇಶ್ವರ, ಸರಸ್ವತಿ, ಲಕ್ಷ್ಮಿ, ಸಪ್ತಮಹರ್ಷಿಗಳು, ದೇವಲೋಕದ ಬಿಳಿ ಆನೆ, ಹಾರುವ ಕುದುರೆ ಇತ್ಯಾದಿ ವರ್ಣಚಿತ್ರಗಳಿವೆ. ಗುಡಿಯ ಎಡಭಾಗದಲ್ಲಿ ಶಂಕರಾಚಾರ್ಯ, ಗಾಯತ್ರೀದೇವಿ, ನವಗ್ರಹ, ಬಲಭಾಗದಲ್ಲಿ ವೀರಭದ್ರ ಗುಡಿಗಳಿವೆ. ಪೂರ್ವದ ಕೈಸಾಲೆಯಲ್ಲಿ ಕಾಳಿಂಗ ಮರ್ಧನ, ವೇಣುಕೃಷ್ಣ, ನಾಗರಶಿಲ್ಪ ಮುಂತಾದ ಆಕರ್ಷಕ ಶಿಲ್ಪಗಳಿವೆ.

ಗುಡಿಯ ಬಲಭಾಗದ ಕೊತಾರೋತ್ಸವ ಮಂಟಪದಲ್ಲಿ ಓಂಕಾರೇಶ್ವರ, ಸದ್ಯೋಜಾತೇಶ್ವರ, ವಾಮದೇವೇಶ್ವರ, ಅಘೋರೇಶ್ವರ, ತತ್ಪುರೇಶ್ವರ, ಈಶಾನ್ಯೇಶ್ವರ ಎಂಬ ಶಿವನ ಪಂಚಮುಖದ ಲಿಂಗಗಳಿವೆ. ಇದೇ ಮಂಟಪದ ಮೇಲ್ಭಾಗದಲ್ಲಿ ದಳವಾಯಿ ನಂಜರಾಜಯ್ಯನ ಸೇವೆ ಎಂದು ಲಿಖಿತಗೊಂಡಿರುವ ರುದ್ರವೀಣೆಯೊಂದಿಗೆ ಧ್ಯಾನಾಸಕ್ತ ಮುದ್ರೆಯಲ್ಲಿರುವ ಪಂಚಲೋಹದ ದಕ್ಷಿಣಾಮೂರ್ತಿ ಅತ್ಯಾಕರ್ಷಕವಾಗಿದೆ. ಇದರ ಬಲಕ್ಕಾದಂತೆ ಬೃಹತ್ ಲಿಂಗವಿದ್ದು, ಅದನ್ನು ಗೌತಮೇಶ್ವರ ಎಂದು ಹೆಸರಿಸಲಾಗಿದೆ. ಇದನ್ನು ಚೋಳರ ಆಕೃತಿ ಎಂದು ಪರಿಗಣಿಸಬಹುದಾಗಿದೆ. ಇದರ ಪಕ್ಕದಲ್ಲಿ ವೀರಭದ್ರಮೂರ್ತಿ ಇದೆ. ದಕ್ಷಿಣಾ ಮೂರ್ತಿಯ ಎಡಕ್ಕಾದಂತೆ ಅರುಣಾಚಲೇಶ್ವರ, ಅವಿಮುಕ್ತೇಶ್ವರ, ಅರ್ಕೇಶ್ವರ, ಅಗಸ್ತ್ಯೇಶ್ವರ, ಆನಂದೇಶ್ವರ, ಕಪಿಲೇಶ್ವರ, ಕೌಂಡಿನ್ಯೇಶ್ವರ ಹೀಗೆ ವಿವಿಧ ಹೆಸರಿನ ಲಿಂಗಗಳು ಪ್ರತ್ಯೇಕ ಕೋಣೆಯಲ್ಲಿವೆ. ಈ ದೇವಾಲಯದ ಆವರಣದಲ್ಲಿ ಅರವತ್ಮೂರು ಪುರಾತನ ಶೈವಭಕ್ತರಲ್ಲಿ ಹದಿನಾಲ್ಕು ಭಕ್ತರ ವಿಗ್ರಹಗಳಿವೆ. ಇವರುಗಳೇ ಈಶ್ವರನ ಮಹಿಮೆಯನ್ನು ಧರೆಗೆ ಸಾರಿದವರು ಎಂಬ ನಂಬಿಕೆ ಪ್ರಚಲಿತದಲ್ಲಿದೆ. ಪ್ರತಾಪಸೂರ್ಯರು, ಕಲಾನೀತರು, ನಿರುಪಮ ಶಾರ್ದೂಲರು, ಧರ್ಮಕೇತನರು, ಮಾನಕುಂಜರು, ಮಾತೃವತಿಯರು, ಕಳಾನಾಥರು, ಅಪ್ಪರು, ಮೂರ್ತಿನಾಥರು, ಮಾರಶ್ಯಾಮರು, ನಿಟಿಲವರ್ಗ್ಯರು, ತಿರುಜ್ಞಾನ ಸಂಬಂಧರು, ನೀಲಕಂಠರು, ಪರಾಂತಕರು (ಸಾಮಾನ್ಯ ಅರಸರು) ಹೀಗೆ ಇವರ ಹೆಸರುಗಳು ಬೆಳೆಯುತ್ತವೆ. ಈ ಭಕ್ತರ ಮೂರ್ತಿಗಳನ್ನು ಅವರ ಸಿದ್ದಿಗೆ ಅಥವಾ ಅವರ ವಯಸ್ಸಿಗೆ ಅನುಸಾರವಾಗಿ ರಚಿಸಬೇಕೆಂಬ ನಿಯಮಗಳನ್ನು ಶಾಸ್ತ್ರಗಳು ಹೇಳಿವೆ. ಅದರಂತೆ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ಎಂಬ ನಾಲ್ಕು ವಿಧಗಳಿವೆ. ಭಕ್ತಿ, ಜ್ಞಾನ, ವೈರಾಗ್ಯ, ಸಮಚಿತ್ತ, ಬುದ್ಧಿವಂತ, ನಿಷ್ಕಾಮಕರ್ಮಿ, ಪರಮಾತ್ಮನಿಗೆ ಸಮೀಪ, ತಪಸ್ಸು, ಧ್ಯಾನಾವಸ್ಥೆ, ದೈವತ್ವ, ಶುದ್ಧಜ್ಞಾನ ಮುಂತಾದ ಅಂಶಗಳು ಒಳಗೊಂಡಿರುತ್ತವೆ. ಇಲ್ಲಿ ಕಾಣಬರುವ ಶಿವಭಕ್ತರು ತಮಿಳುನಾಡಿನವರಾಗಿದ್ದು ತಮಿಳು ಮತ್ತು ಶೈವ ಎರಡು ಕಣ್ಣುಗಳಿದ್ದಂತೆ ಎಂಬ ನಾಣ್ಣುಡಿ ನೆನಪಿಗೆ ಬರುತ್ತದೆ. ಈ ದೇವಾಲಯದಲ್ಲಿರುವ ಶಿಲ್ಪಗಳನ್ನು ಶೈವಾಗಮಕ್ಕನುಸಾರವಾಗಿ ರಚಿಸಲಾಗಿದೆ. ಭಕ್ತರ ಶಿಲ್ಪಗಳಲ್ಲಿ ಸ್ತ್ರೀಭಾವವನ್ನು ಗಮನಿಸಬಹುದು.


ದೇವಾಲಯದ ಕೊತಾರೋತ್ಸವ ಮತ್ತಿತರ ಕಂಬಗಳಲ್ಲಿ ಉಬ್ಬುಶಿಲ್ಪಗಳ ಕೆತ್ತನೆಯಿದ್ದು ಅವುಗಳಲ್ಲಿ ಹಲವಾರು ಕಡೆ ಕಾಣಬರುವಂತೆ ಶಿಲ್ಪಿಯ ಕಲ್ಪನೆಯ ಪ್ರಾಣಿಯೊಂದಿದೆ. ಹಸುವಿನಂತೆ ಕಿವಿ, ಮೀನಿನಂತೆ ಕಣ್ಣು, ಮೊಸಳೆಯಂತೆ ಬಾಯಿ, ಹಂದಿಯಂತೆ ಶರೀರ, ಸಿಂಹದಂತೆ ಕಾಲು, ನವಿಲಿನ ರೆಕ್ಕೆ, ಆನೆಯ ಸೊಂಡಿಲು




ಶ್ರೀರಂಗನಾಥ ದೇವಾಲಯ.
ಶ್ರೀರಂಗಪಟ್ಟಣ.




ಮುಖಮಂಟಪ.
ರಂಗನಾಥ
ದೇವಾಲಯ.




ಲಕ್ಷ್ಮೀನರಸಿಂಹ
ದೇವಾಲಯ.
ಶ್ರೀರಂಗಪಟ್ಟಣ.



ವಿವಿಧ ಪ್ರಾಕಾರದ ಕಂಬಗಳು. ರಂಗನಾಥ ದೇವಾಲಯ.



ಗಂಗಾಧರೇಶ್ವರ ದೇವಾಲಯ. ಶ್ರೀರಂಗಪಟ್ಟಣ.



ವಿವಿಧ ಭಕ್ತರ ಶಿಲ್ಪಗಳು. ಗಂಗಾಧರೇಶ್ವರ ದೇವಾಲಯ.

ಆಕಾರವನ್ನು ಈ ಪ್ರಾಣಿಶಿಲ್ಪದಲ್ಲಿ ಕಾಣಬಹುದು. ನವರಂಗದಲ್ಲಿರುವ ಆರು ಮುಖಗಳೂ, ಹನ್ನೆರಡು ಕೈಗಳೂ ಇರುವ ಸುಬ್ರಹ್ಮಣ್ಯ ಗಮನಾರ್ಹವಾಗಿದೆ. ಅನೇಕ ಉಬ್ಬುಶಿಲ್ಪಗಳು ಪುರಾಣ ಕಥೆಗಳನ್ನು ಹೇಳುತ್ತವೆ.

ದಕ್ಷಿಣಕ್ಕೆ ವಿಜಯನಗರ ಶೈಲಿಯ ಭವ್ಯ ಮಹಾದ್ವಾರವಿದ್ದು ಪೂರ್ವಾಭಿಮುಖವಾಗಿರುವ ಈ ದೇವಾಲಯದ ಶಿಖರದಲ್ಲಿ ಶಿವನ ಐದು ಮುಖದ, ಐದು ತತ್ತ್ವದ ಮತ್ತು ಪಂಚಾಕ್ಷರಿ ನಾಮದ ಸಂಕೇತವಾಗಿ ಐದು ಕಳಸಗಳಿವೆ. ಮಹಾದ್ವಾರಕ್ಕೆ ಗೋಪುರವಿಲ್ಲ. ಗೋಪುರ ಕೆಡವಿಸಿದ ಬಗ್ಗೆ ಒಂದು ದಂತ ಕತೆ ಪ್ರಚಲಿತದಲ್ಲಿದೆ. ಮಹಾದ್ವಾರದ ಎಡಕ್ಕಾದಂತೆ ಆಕರ್ಷಕವಾದ ದೇವಾನುದೇವತೆಗಳ ಉಬ್ಬು ಶಿಲ್ಪಗಳಿರುವ ಮಾರ್ಕಂಡೇಯ ಮಂಟಪವಿದೆ. ಇದರ ಕೈಂಕರ್ಯಕ್ಕೂ ಭೂದಾನ ನೀಡಿದ ವಿಷಯ ಉಲ್ಲೇಖವಾಗಿದೆ. ಮಹಾದ್ವಾರದ ಬಲಕ್ಕೆ ಗಣಪತಿ ಗುಡಿ ಇದೆ. ಹಲವು ದತ್ತಿದಾನದ ಶಾಸನಗಳಲ್ಲಿ ಕ್ರಿಶ. ೧೫೪೫ರ ಶಾಸನವೊಂದರಲ್ಲಿ ಈ ದೇವರ ಸನ್ನಿಧಿಯಲ್ಲಿ ಉಮ್ಮತ್ತೂರು ಮಠಕ್ಕೆ ದತ್ತಿಬಿಟ್ಟ ವಿಷಯವನ್ನು ಉಲ್ಲೇಖಿಸಿದೆ.

**ಲಕ್ಷ್ಮೀನರಸಿಂಹ ದೇವಾಲಯ :**

ಶ್ರೀರಂಗನಾಥ ದೇವಾಲಯದ ಸಮೀಪದಲ್ಲಿರುವ ಲಕ್ಷ್ಮೀನರಸಿಂಹ ದೇವಾಲಯದ ಮೂಲಶಿಲ್ಪ ಹೊಯ್ಸಳ ರಚನೆಯೇ ಆಗಿದೆ. ಎತ್ತರದ ಪೀಠದ ಮೇಲೆ ತನ್ನ ಎಡತೊಡೆಯ ಮೇಲೆ ಲಕ್ಷ್ಮಿಯನ್ನು ಆಲಿಂಗನ ಭಂಗಿಯಲ್ಲಿ ಕೂರಿಸಿಕೊಂಡಿರುವ ನರಸಿಂಹ ಶಿಲ್ಪವು ಮನೋಹರವಾಗಿದೆ. ಅಲ್ಲಿಯೇ ಇರುವ ಅಂಬೆಗಾಲು ಕೃಷ್ಣನ ವಿಗ್ರಹವೂ ಅತ್ಯಾಕರ್ಷಕವಾಗಿದೆ. ದೇವಾಲಯದ ಬಹುಪಾಲು ರಚನೆ ಮೈಸೂರು ಅರಸು ಶ್ರೀರಂಗಪಟ್ಟಣವಾಸಿ (ಇವರುಗಳ ಅರಮನೆ ಈ ದೇವಾಲಯದ ಹಿಂಭಾಗದಲ್ಲಿತ್ತು) ರಣಧೀರ ಕಂಠೀರವ ಎನಿಸಿದ ನರಸರಾಜ ಒಡೆಯರ್ (ಕ್ರಿ.ಶ. ೧೬೩೮–೧೬೫೯) ನಿರ್ಮಿಸಿದರೆಂದು ತಿಳಿದು ಬರುತ್ತದೆ. ಇದಕ್ಕೆ ಸಾಕ್ಷಿಯಾಗಿ ರಂಗಮಂಟಪದ ಎಡಭಾಗದ ಕೊಠಡಿಯಲ್ಲಿ ಕೈಮುಗಿದು ನಿಂತಿರುವ ಸುಮಾರು ಮೂರೂವರೆ ಅಡಿ ಎತ್ತರದ ಮೈಸೂರು ಅರಸರು ಧರಿಸುವ ಪೋಷಾಕು ಮತ್ತು ನಡುವಿನಲ್ಲಿರುವ ಕಠಾರಿ ಸಹಿತ ನಿಂತಿರುವ ಕಂಠೀರವ ನರಸರಾಜ ಒಡೆಯರ ಭಕ್ತಿಭಾವದ ಶಿಲ್ಪವೊಂದು ಮೈಸೂರು ಶಿಲ್ಪ ಶೈಲಿ ಕೆತ್ತನೆಗೆ ಸಾಕ್ಷಿಯಾಗಿದೆ. ಈತ ಪಟ್ಟಣದಲ್ಲಿ ಒಂದು ಟಂಕಸಾಲೆಯನ್ನು ಸ್ಥಾಪಿಸಿ 'ಕಂಠೀರವ ಪಣ' ಎಂಬ ನಾಣ್ಯಗಳನ್ನು ಅಚ್ಚುಹಾಕಿಸಿದ. ಒಟ್ಟು ದೇವಾಲಯ ವಿಶಾಲವಾಗಿದ್ದು ಹೊರಪ್ರಾಕಾರ ಭಗ್ನಗೊಂಡಿದೆ. ದೊಡ್ಡದಾದ ಗರ್ಭಗೃಹ, ವಿಶಾಲವಾದ

ಸುಖನಾಸಿ, ನವರಂಗ ಮತ್ತು ಅನೇಕ ಕಂಬಗಳುಳ್ಳ ಮುಖಮಂಟಪಗಳಿಂದ ಶೋಭಿಸಿದೆ.

**ಇನ್ನಿತರ ಗುಡಿಗಳು :**

ಪ್ರಾಚೀನವಾದ ಗಂಗರ ಕಾಲದ ಬಸದಿ (ಕಟ್ಟಡ ಬದಲಾಗಿದೆ)ಯ ಪ್ರಥಮ ತೀರ್ಥಂಕರ ವೃಷಭನಾಥ ಶಿಲ್ಪವೂ ಸೇರಿದಂತೆ ಧರಣೇಂದ್ರ, ಯಕ್ಷ, ಯಕ್ಷಿ, ಪದ್ಮಾವತಿಯರ ಶಿಲ್ಪಗಳು ಗಮನಾರ್ಹವಾಗಿವೆ.

ಇನ್ನು ಪೇಟೆಬೀದಿಯಲ್ಲಿರುವ ವಾಲಗ ಸೇವೆ ಸಲ್ಲಿಸುವ ಜನಾಂಗದವರಿಗೆ ದಾನದತ್ತಿಯ ಮೂಲಕ ನೀಡಿರುವ ಪೇಟೆರಾಮರ ಗುಡಿ, ಕಾಳಮ್ಮ, ಗೋಪಾಲಕೃಷ್ಣ, ಜನಾರ್ದನ ಮುಂತಾದ ಪ್ರಾಚೀನ ಗುಡಿಗಳಿವೆ. ಇಲ್ಲಿಯ ಜ್ಯೋತಿರ್ಮಹೇಶ್ವರ ದೇವಾಲಯ ವಿಶಾಲವಾಗಿದ್ದು, ಮೈಸೂರು ಅರಸರ ಕಾಲದಲ್ಲಿ ಅದರಲ್ಲಿಯೂ ದಳವಾಯಿಗಳು ಅಭಿವೃದ್ಧಿಪಡಿಸಿದ ವಿಚಾರ ತಿಳಿದುಬರುತ್ತದೆ. ಒಂದೆ ಲಕ್ಷ ಸಂಖ್ಯೆಯಲ್ಲಿ ದೀಪಗಳು ಉರಿಯುವ ಊರಿನಲ್ಲಿ ಜ್ಯೋತಿರ್ಮಹೇಶ್ವರ ಅಂಕಿತ ದೇವಾಲಯ ನಿರ್ಮಿಸುವ ಪದ್ಧತಿ ಇತ್ತು ಎನ್ನಲಾಗಿದೆ. ಈ ದೇವಾಲಯದ ಒಂದು ಭಾಗದಲ್ಲಿ ಸ್ಥಳಪಲ್ಲಟಗೊಂಡ ಮೂಡಲುಬಾಗಿಲು ಕೋಟೆ ಆಂಜನೇಯ ವಿಗ್ರಹವಿದೆ. ಪುರಾಣ ಪ್ರಸಿದ್ಧ ಗೌತಮ ಕ್ಷೇತ್ರವು ಕಾವೇರಿ ಎಡಸೀಳಿನ ನಡುಗಡ್ಡೆಯಲ್ಲಿದೆ.

ದ್ವೀಪಮಾಡಿಕೊಂಡು ಹರಿಯುವ ಎಡಭಾಗದ ಕಾವೇರಿ ತೀರದ ಗಂಜಾಂನ ಅನಿಮಿಷಾಂಬ ದೇವಾಲಯ (ವಿಜಯನಗರ ಕಡೆಯಿಂದ ಬಂದ ಕುಸುರಿ ಕೆಲಸದವರ ಮನೆದೇವತೆ), ಬಲಭಾಗದ ಕಡೆಯಿಂದ ಬರುವ ಕಾವೇರಿಯ ದಡದಲ್ಲಿರುವ ಉತ್ತರಭಾರತ ಘೋಸಾಯಿಗಳ ದೊಡ್ಡ ಮತ್ತು ಚಿಕ್ಕ ಘೋಸಾಯಿ ಘಾಟ್‌ಗಳು, ವಿಶೇಶ್ವರ ಗುಡಿ, ಮತ್ತಿತರ ಪ್ರಾಚೀನ ಗುಡಿಗಳು ಕಾಣಬರುತ್ತವೆ.

ಉತ್ತಮ ವಾಸ್ತು ಮತ್ತು ಚಿತ್ರಕಲಾ ದೃಷ್ಟಿಯಿಂದ ಇಲ್ಲಿರುವ ಜುಮ್ಮಾಮಸೀದಿ ಪ್ರಸಿದ್ಧಿಯಾಗಿದೆ.

**ಕರಿಘಟ್ಟದ ವೆಂಕಟರಮಣ :**

ಪಟ್ಟಣಕ್ಕೆ ಸಮೀಪವಾಗಿ ಲೋಕಪಾವನಿ ದಡದ ಮೇಲಿರುವ ಕರಿಘಟ್ಟದ ವೆಂಕಟರಮಣಸ್ವಾಮಿ ದೇವಾಲಯ ವಿಜಯನಗರ ಕಾಲದ ಹಲಕೆಲವು ರಚನೆಗಳೊಂದಿಗೆ ಮೈಸೂರು ಅರಸರ ರಚನೆಗಳು ಹೆಚ್ಚು ಸೇರಿಕೊಂಡಿವೆ. ನವರಂಗ ವಿಶಾಲವಾಗಿದೆ. ಅದರ ಕಂಬಗಳು ಸೌಂದರ್ಯವನ್ನು ಹೆಚ್ಚಿಸಿವೆ.

ಗರ್ಭಗುಡಿಯಲ್ಲಿ ಮೂಲಮೂರ್ತಿ ಆಕರ್ಷಕವಾಗಿದೆ. ನವರಂಗದ ಎಡ-ಬಲಗಳಲ್ಲಿ ಯೋಗಾ ಮತ್ತು ಭೋಗ ಶ್ರೀನಿವಾಸ ಮೂರ್ತಿಗಳಿರುವುದು ಇಲ್ಲಿನ ವಿಶೇಷವಾಗಿದೆ. ಎದುರಿಗೆ ಗರುಡ ಮಂಟಪದಲ್ಲಿ ಗರುಡ ಶಿಲ್ಪವಿದೆ. ದೇವಾಲಯದ ಬಲಕ್ಕೆ ಪದ್ಮಾವತಿ ಎಡಕ್ಕೆ ಹನುಮಂತನ ಗುಡಿಗಳಿವೆ. ನಿಸರ್ಗ ವಾತಾವರಣದಲ್ಲಿ ಬೆಟ್ಟದ ಕೆಳಗೆ ಚಿಕ್ಕದೇವರಾಯರ ನಾಲೆ ಹೂಮಾಲೆಯಂತೆ ಹರಿದಿದೆ. ಇಲ್ಲಿರುವ ರಾಮಪರಿವಾರ ಶಿಲ್ಪಗಳು ಆಕರ್ಷಕವಾಗಿವೆ. ಹತ್ತಿರದ ಬಾಬುರಾಯ ಕೊಪ್ಪಲಿನ ಗುಂಜಾ ನರಸಿಂಹಸ್ವಾಮಿ ಹೆಸರಿಸಬಹುದಾದ ಪ್ರಾಚೀನ ಗುಡಿ. ಇದೂ ಸಹ ಕಾವೇರಿ ಎಡದಂಡೆಯ ಮೇಲಿದೆ.

ವಿಶೇಷವಾಗಿ ಕಾಣಬರುವ ಗಂಜಾಂನ 'ಅಬ್ಬೆದುಬೆ ಇಗರ್ಜಿ' ಜನ ಸೇವಾನಿರತನಾಗಿದ್ದ ಫ್ರೆಂಚ್‌ಪಾದ್ರಿ (ಕ್ರಿ.ಶ. ೧೮೦೦-೧೮೨೩) ಯಿಂದ ಸ್ಥಾಪಿತವಾಗಿರುವುದು ಘಂಟೆಗೋಪುರದ ಮೇಲಿರುವ ಕ್ರಿ.ಶ. ೧೮೦೦ರ ಬರೆಹದಿಂದ ತಿಳಿಯುತ್ತದೆ. ಪಶ್ಚಿಮವಾಹಿನಿ ಸೇರಿದಂತೆ ಕಾವೇರಿತೀರದ ಆಸುಪಾಸು ದಡದಲ್ಲಿ ಇನ್ನೂ ಹಲವು ಪ್ರಾಚೀನ ಗುಡಿಗಳಿರುವುದಲ್ಲದೆ ಆಧುನಿಕವಾಗಿ ಕೃಷ್ಣ ಪ್ರಜ್ಞಾದಂಥ ಹಲವಾರು ಸಂಸ್ಥೆಗಳು ಆಧ್ಯಾತ್ಮಿಕ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ.

ಒಟ್ಟಾರೆ ಇತಿಹಾಸ ಪ್ರಿಯರಿಗೆ, ಸಂಶೋಧಕರಿಗೆ ಶ್ರೀರಂಗಪಟ್ಟಣದ ಅಧ್ಯಯನ ಮಾಡಲು ದಿನ ಅಥವಾ ವಾರಗಳು ಸಾಲದು. ವರ್ಷವಿಡೀ ಬೇಕಾಗುತ್ತದೆ. ಶ್ರೀರಂಗಪಟ್ಟಣದ ಊರುಕೇರಿ, (ಈಗೆಲ್ಲ ಬದಲಾಗುತ್ತಿದೆ) ಮನೆಮಠ, ಅವುಗಳ ಚಿತ್ತಾರಗಳು, ತಾಳೆಗರಿಗಳು, ಗುಡಿಗೋಪುರಗಳು, ಕೋಟೆ ಬುರುಜಗಳು, ಕಲ್ಲುಮಣ್ಣುಗಳೆಲ್ಲ ಬೆಲೆಬಾಳುವಂತಹವು. ಹಿಂದೊಮ್ಮೆ ದಕ್ಷಿಣ ಭಾರತದ ಸಾಂಸ್ಕೃತಿಕ ಕೇಂದ್ರವಾಗಿದ್ದ ಪಟ್ಟಣದಲ್ಲಿ ಆಳಿದ ಅರಸರು, ಟಂಕಿಸಿದ ನಾಣ್ಯಗಳು, ಕಟ್ಟಿಸಿದ ಸೌಧಗಳು, ತಯಾರಾದ ಆಯುಧಗಳು, ಜೀವಿಸಿದ್ದ ಕವಿಗಳು, ಅವರು ರಚಿಸಿದ ಗ್ರಂಥಗಳು, ಆ ಕಾಲದ ಜನಜೀವನ ಪದ್ಧತಿ ಎಲ್ಲವನ್ನೂ ಅವಲೋಕಿಸಬೇಕಾಗುತ್ತದೆ.

ಹಂಪೆಯಲ್ಲಿ ವೈಭವದಿಂದ ಜರುಗುತ್ತಿದ್ದ ದಸರಾ ಹಬ್ಬವನ್ನು ಶ್ರೀರಂಗಪಟ್ಟಣದಲ್ಲಿ ಮುನ್ನಡೆಯುವಂತೆ ಮೈಸೂರು ಅರಸರು ಅದರಲ್ಲಿಯೂ ಮೊದಲ ಸ್ವತಂತ್ರ ಅರಸು ರಾಜಒಡೆಯರ್ ಆದಿಯಾಗಿ ವ್ಯವಸ್ಥೆಗೊಳಿಸಿದರು. ಮೈಸೂರು ಶೈಲಿ ಎಂದೇ ಗುರುತಿಸಿಕೊಳ್ಳುವ ಕಲಾತ್ಮಕ ಚಿತ್ರಗಳು ವಿಶೇಷವಾಗಿ ರಾಮಪರಿವಾರದ ಚಿತ್ರಗಳು ಶ್ರೀರಂಗಪಟ್ಟಣ ಮತ್ತು ಪಾಂಡವಪುರ ಭಾಗಗಳಲ್ಲಿ ಹೆಚ್ಚು ಕಾಣಬರುತ್ತವೆ. ತಂಜಾವೂರು ಶೈಲಿ ಚಿತ್ರಗಳನ್ನೂ ಸಹ ಅಲ್ಲಲ್ಲಿ

ನೋಡಬಹುದಾಗಿದೆ. ಇವು ಮೈಸೂರು ಮತ್ತು ತಂಜಾವೂರು ಅರಸರ ಪ್ರೋತ್ಸಾಹದಿಂದ ಅರಳಿದವು.

ಕವಿಗಳಾದ ಚಿಕ್ಕುಪಾಧ್ಯಾಯ, ಅಳಹಿಯ ಸಿಂಗರಾರ್ಯ, ತಿರುಮಲಾರ್ಯ, ಗೋವಿಂದವೈದ್ಯ, ಗಮಕಿನಂಜಯ್ಯ, ಸಂಚಿಯ ಹೊನ್ನಮ್ಮ, ಶೃಂಗಾರಮ್ಮ ಮುಂತಾದವರಿಗೆ ಸ್ಫೂರ್ತಿಯ ಅಥವಾ ಪ್ರೋತ್ಸಾಹದ ನೆಲೆಯಾಗಿತ್ತು. ಕವಿ ಗೋವಿಂದವೈದ್ಯ ಅಂತೂ ತನ್ನ 'ಕಂಠೀರವ ನರಸರಾಜ ವಿಜಯಂ' ಕಾವ್ಯದಲ್ಲಿ ಶ್ರೀರಂಗಪಟ್ಟಣದ ಜೀವನ ಮತ್ತು ಸಂಸ್ಕೃತಿಯನ್ನು ತೆರೆದಿಟ್ಟಿದ್ದಾನೆ. ರಥಸಪ್ತಮಿ, ಮಹಾನವಮಿಯ ಒಡ್ಡೋಲಗ, ದಸರಾ ಮೆರವಣಿಗೆ, ಘಟಿಸಿದ ಯುದ್ಧಗಳು ಮುಂತಾದ ವಿಷಯಗಳಿಂದ ಆ ಕಾವ್ಯ ಕೂಡಿದೆ.

ಶ್ರೀರಂಗಪಟ್ಟಣದ ಶ್ರೀರಂಗನಾಥನಿಗೆ 'ಕಸ್ತೂರಿ ರಂಗ' ಎಂದೂ ಕರೆಯುತ್ತಾರೆ. ದಾಸಕೂಟದ ಮೊದಲಿಗರೆನಿಸಿದ ಶ್ರೀಪಾದರಾಯರು ಈ ದೇವರ ದರ್ಶನಗೈದು ರಚಿಸಿದ.

ಕಂಗಳಿವ್ಯಾತಕೋ ಕಾವೇರಿ ರಂಗನ ನೋಡದ
ಕಸ್ತೂರಿ ರಂಗನ ನೋಡದ ।
ಜಗಂಗಳೊಳಗೆ ಮಂಗಳ ಮೂರುತಿ
ರಂಗನ ಶ್ರೀಪಾದಂಗಳ ನೋಡದ
..........................................
..........................................

ಎಂಬ ತೋಡಿರಾಗದ ಹಾಡು ಈಗಲೂ ಜನಪ್ರಿಯವಾಗಿದೆ.

ಇನ್ನೆಷ್ಟು ಕಾಲ ನೀನಿಲ್ಲಿ ಮಲಗಿದ್ದರೂ
ನಿನ್ನೆಬ್ಬಿಸುವರೊಬ್ಬರನು ಕಾಣೆ
ಶ್ರೀರಂಗಪಟ್ಟಣದ ರಂಗನಾಥ
..........................................
..........................................

ಶ್ರೀರಂಗನಾಥ ಮಲಗಿರುವ ಶೈಲಿಯನ್ನು ನೋಡಿ ಕನಕದಾಸರು ಸ್ನೇಹಭಾವದಲ್ಲಿ ಕೀರ್ತಿಸಿದ್ದಾರೆ.

ಕೊಟ್ಟ ಸಾಲವ ಕೊಡದೆ ಭಂಡಾಟ ಮಾಡುತಾನೆ
ಎಷ್ಟು ಬೇಡಿದರೆನ್ನ ಪೋಯೆನ್ನುತ್ತಾನೆ
..........................................
..........................................

ಅದೇ ಸ್ನೇಹ ಭಾವದಲ್ಲಿ ಛೇಡಿಸುವ ಪುರಂದರ ದಾಸರ ಈ ಹಾಡಿನಲ್ಲಿ ಕಡೆಯ ಸಾಲು ಇದೇ ರಂಗನಾಥನೆಂದು ತಿಳಿಯುತ್ತದೆ.

ಕೊಟ್ಟು ಹೋಗೆನಲು ಕಲಿಯಾಗುತಾನೆ
ಸೃಷ್ಟಿಗೊಡೆಯ ಶ್ರೀರಂಗಪಟ್ಟಣದ ಪುರಂದರ
ವಿಠಲೇಶನು ನಮ್ಮ ಪಶ್ಚಿಮದ ರಂಗನಾಥ

**ಅರಕೆರೆ ದೇವಾಲಯಗಳು :**

ಶ್ರೀರಂಗಪಟ್ಟಣದಿಂದ ಪೂರ್ವಕ್ಕೆ ೧೮ ಕಿ.ಮೀ. ದೂರದಲ್ಲಿರುವ ಹೋಬಳಿ ಕೇಂದ್ರ. ಚಾರಿತ್ರಿಕ ಮಹತ್ವವುಳ್ಳ ಊರು. ಅರೆ (ಕಲ್ಲು) ಜಾಗದಲ್ಲಿರುವ ಊರು ಮತ್ತು ಕೆರೆ ಸೇರಿ ಅರಕೆರೆ ಆಗಿದೆ. ಕ್ರಿ.ಶ. ೧೧೧೦೮ರ ಶಾಸನವೊಂದರಲ್ಲಿಯೂ ಅರಕೆರೆ ಎಂದೇ ಉಲ್ಲೇಖಿಸಿದೆ. ಊರೊಳಗೆ ಇರುವ ಚನ್ನಕೇಶವ ಹೊಯ್ಸಳ ಕಾಲದ್ದಾದರೂ ಚೋಳಶೈಲಿಯಲ್ಲಿದೆ. ಗರ್ಭಗೃಹ, ಸುಖನಾಸಿ, ತೆರೆದ ಅರ್ಧ ಮಂಟಪ, ನವರಂಗ, ವಿಶಾಲವಾದ ಸಭಾಮಂಟಪ, ಮೊಗಸಾಲೆ, ಪ್ರಾಕಾರ ಹಾಗೂ ದ್ವಾರಮಂಟಪಗಳನ್ನು ಹೊಂದಿದೆ. (ಸಾಕಷ್ಟು ಮಾರ್ಪಾಡು ಆಗಿದೆ.) ಗರ್ಭಗೃಹದಲ್ಲಿನ ಕೇಶವ ಬದಲಾದದ್ದು ಎನ್ನಲಾಗಿದೆ. ಬಾಗಿಲವಾಡಕ್ಕೆ ತ್ರಿಶಾಖಾಲಂಕಾರವಿದ್ದು, ಸುಖನಾಸಿಯಲ್ಲಿ ರಾಮಾನುಜ ಶಿಲ್ಪವಿದೆ. ನವರಂಗದಲ್ಲಿ ದೇವಿ ಮೂರ್ತಿ ಇದ್ದು ನಡುವಣ ಛತ್ತು ಕಮಲಾಲಂಕೃತವಾಗಿದೆ. (ಮುಖಮಂಟಪದಲ್ಲಿ ಚ್ಯುತಿಗೊಂಡ ಪೂರ್ವದ ಶಿಲ್ಪವಿದೆ) ದೇವಾಲಯದ ಮುಂದೆ ಗರುಡಗಂಬವಿದೆ. ಗುಡಿಯ ಎಡಭಾಗದಲ್ಲಿ ಅಮ್ಮನವರ ಗುಡಿ, ಬಲಕ್ಕೆ ಮಂಟಪವಿದೆ. ಈ ಕೇಶವ ದೇವರಿಗೆ ಐಯ್ಯಿದ್ಯಕೆ ಎಂಬ ಸ್ತ್ರೀ ದಾನಿಯು ತನ್ನ ಪಾಲಿಗೆ ಬಂದ ಭೂಮಿಯ ವೃತ್ತಿಯಲ್ಲಿ ಕಾಲುಭಾಗವನ್ನು ನೀಡಿದ್ದಾಳೆ. ಶಾಸನದಲ್ಲಿ ಇದನ್ನು ಪ್ರೀತಿದಾನ ಎನ್ನಲಾಗಿದೆ. ಹೊಯ್ಸಳ ವೀರಸೋಮೇಶ್ವರನ (ಕ್ರಿ.ಶ. ೧೨೩೩-೧೨೬೭) ಇಪ್ಪತ್ತೊಂದನೆಯ ಆನಂದಸಂವತ್ಸರದ ಕಾರ್ತಿಕ ಶುದ್ಧ ಪಂಚಮಿ ಆದಿವಾರದಂದು...... ಕಾಲವನ್ನು ಹೀಗೆ ತಿಳಿಸಿದೆ.

ಊರಾಚೆ ಇರುವ ಪ್ರಾಚೀನ ಗುಡಿ ಮರಳೇಶ್ವರ ಅಥವಾ ಮಣಲೇಶ್ವರ (ಶಾಸನದಲ್ಲಿ) ದೇವಾಲಯವೂ ಸಹ ಚೋಳ ಶೈಲಿಯಲ್ಲಿದೆ. ಇದಕ್ಕೆ ಗರ್ಭಗೃಹ, ಸುಖನಾಸಿಗಳಿದ್ದು, ನವರಂಗ ವಿಶಾಲವಾಗಿದೆ. ಪೂರ್ವ ಮತ್ತು ದಕ್ಷಿಣ ಭಾಗಗಳಲ್ಲಿ ಮುಖಮಂಟಪಗಳೊಂದಿಗೆ ದ್ವಾರಗಳಿವೆ. ಬಹುಕೋನಾಕಾರದ ತಳವಿನ್ಯಾಸದಲ್ಲಿರುವ ಈ ಗುಡಿಯ ಗರ್ಭಗೃಹದಲ್ಲಿ ಪ್ರಾಚೀನವಾದ ಲಿಂಗವಿದೆ. ನವರಂಗದಲ್ಲಿ ಮಹಿಷಮರ್ಧಿನಿ, ಗಣಪತಿ ಮತ್ತು ದೇವಿಯರ ಶಿಲ್ಪಗಳಿದ್ದು,

ದಕ್ಷಿಣದ್ವಾರಕ್ಕೆ ಅಭಿಮುಖವಾಗಿ ಇರುವ ಒಂದಂಕಣ ಗುಡಿಯಲ್ಲಿ ದೇವಿಯ ಶಿಲ್ಪವಿದೆ. ನವರಂಗದ ಕಂಬಗಳ ಮೇಲೆ ಮತ್ತು ಮುಖಮಂಟಪದ ಮೇಲ್ಭಾಗದಲ್ಲಿ ಕಮಲಾಕೃತಿಯನ್ನು ಕೆತ್ತಿದ್ದಾರೆ.

ಮತ್ತೊಂದು ಲಕ್ಷ್ಮೀನರಸಿಂಹ ಗುಡಿ ವಿಜಯನಗರ (ಕ್ರಿ.ಶ. ೧೫೧೬) ಕಾಲದ್ದಾಗಿದೆ. ಗರ್ಭಗೃಹದಲ್ಲಿ ಬಹು ಸುಂದರವಾದ ಲಕ್ಷ್ಮೀನರಸಿಂಹ ವಿಗ್ರಹವಿದೆ. ಗರ್ಭಗೃಹ, ಅಂತರಾಳ, ನವರಂಗ ಮತ್ತು ಮೊಗಸಾಲೆಗಳಿವೆ. ಇತ್ತೀಚೆಗೆ ದೇವಾಲಯ ಜೀರ್ಣೋದ್ಧಾರವಾಗಿದೆ. ಮತ್ತೊಂದು ರಾಮಲಿಂಗೇಶ್ವರ ಗುಡಿಯೂ ಸಹ ಜೀರ್ಣೋದ್ಧಾರಗೊಂಡಿದೆ. ಇಲ್ಲಿಯ ಗ್ರಾಮದೇವತೆ ಬಿಸಿಲು ಮಾರಮ್ಮನ ಹಬ್ಬದಲ್ಲಿ ಹಲವು ವರ್ಷಗಳಿಗೊಮ್ಮೆ ನಡೆಯುವ ಶೂಲ-ಬಲಿ ರೋಮಾಂಚನಗೊಳಿಸುತ್ತದೆ.

## ಹೊಸದೇವಾಲಯಗಳ ನಿರ್ಮಾಣ; ಆದಿಚುಂಚನಗಿರಿ ಪಾತ್ರ

ಹಳೇ ದೇವಾಲಯಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಒಂದೆಡೆ ಯತ್ನಗಳು ನಡೆಯುತ್ತಿದ್ದರೆ; ಮತ್ತೊಂದೆಡೆ ಕಲಾಶಿಲ್ಪಗಳ ಅರಿವಿಲ್ಲದೆ ಹಳೆಯ ದೇವಾಲಯಗಳನ್ನು ಕೆಡವಿ ಆಧುನಿಕ ನೈಸ್ ಕಾಂಕ್ರೀಟ್ ಕಟ್ಟಡಗಳನ್ನಾಗಿ ಪರಿವರ್ತಿಸುವ ಕೆಲಸ ನಡೆದಿದೆ. ಇಂಥ ಒಂದು ತಾಕಲಾಟದ ಪರಿಸ್ಥಿತಿಯಲ್ಲಿ ಪ್ರಾಚೀನತೆಯುಳ್ಳ ಹಾಗೂ ಇತ್ತೀಚಿನ ವರ್ಷಗಳಲ್ಲಿ ಮಹಾಸಂಸ್ಥೆಯಾಗಿ ಬೆಳೆದುನಿಂತಿರುವ ಆದಿಚುಂಚನಗಿರಿ ಮಠ ತನ್ನ ಕ್ಷೇತ್ರದಲ್ಲಿನ ಮೂಲದೇವರಾದ ಕಾಲಭೈರವೇಶ್ವರನ ಹೆಸರಿನಲ್ಲಿ ಇದೀಗ ನಿರ್ಮಿಸಲಾಗಿರುವ ಒಂದು ಬೃಹತ್ ದೇವಾಲಯ ಪ್ರಾಚೀನ ವಾಸ್ತು ಶಿಲ್ಪದಲ್ಲಿ ಒಂದು ಹೊಸ ವಿನ್ಯಾಸವನ್ನು ಪಡೆದುಕೊಂಡಿದೆ. ದ್ರಾವಿಡ ಶೈಲಿಯ ಈ ದೇವಾಲಯದಲ್ಲಿ ಒಂದೆಡೆ ಚೋಳ ಶೈಲಿ; ಮತ್ತೊಂದೆಡೆ ವಿಜಯನಗರ ಶೈಲಿಗಳ ಸಮ್ಮಿಶ್ರಣದಂತೆ ಕಾಣುತ್ತದೆ.

ಪೂರ್ವಾಭಿಮುಖವಾಗಿರುವ ಈ ದೇವಾಲಯ ವಿಶಾಲವಾದ ಹಸ್ತಗಿರಿಯ ಮೇಲೆ ನಿಂತಿದೆ. ಪೂರ್ವ-ಪಶ್ಚಿಮ ೨೭೫ ಅಡಿ ಹಾಗೂ ಉತ್ತರ ದಕ್ಷಿಣ ೧೭೫ ಅಡಿಗಳ ವಿಸ್ತೀರ್ಣದಲ್ಲಿ ನಿರ್ಮಾಣವಾಗಿರುವ ಈ ದೇವಾಲಯ ನಾಲ್ಕು ದಿಕ್ಕಿನಲ್ಲೂ ನಾಲ್ಕು ಗೋಪುರಗಳನ್ನು ಹೊಂದಿದೆ. ಪೂರ್ವ ದಿಕ್ಕಿನ ರಾಜಗೋಪುರ ೧೦೦ ಅಡಿ ಎತ್ತರಕ್ಕೇರಿದ್ದು ದ್ರಾವಿಡ ಶೈಲಿಯನ್ನು ಹೊಂದಿದೆ. ಹೊರ ಪ್ರಕಾರದೊಂದಿಗೆ ಸುಮಾರು ೧೭೨ ಕೆತ್ತನೆಯ ಕಂಬಗಳನ್ನು ಬಳಸಿ ನಿರ್ಮಿಸಲಾಗಿದೆ. ಹೊರ ಪ್ರಾಕಾರದಲ್ಲಿ ಜಾಲಂಧ್ರಗಳಿವೆ. ಮಹಾದ್ವಾರದ

ಇಕ್ಕೆಲಗಳಲ್ಲೂ ವಿಜಯನಗರ ಶೈಲಿಯ ಲತಾಂಗಿ ಮತ್ತು ಹಂಸಬಳ್ಳಿಗಳನ್ನು ಕೆತ್ತಲಾಗಿದೆ. ಇಡೀ ದೇವಾಲಯಕಟ್ಟಡ ಕೆತ್ತನೆಕಲ್ಲಿನಿಂದ ನಿರ್ಮಿತವಾಗಿದೆ. ಗರ್ಭಗುಡಿಯ ವಿಮಾನ ಮತ್ತು ಗೋಪುರಗಳು ಚೋಳ ಶೈಲಿಯಲ್ಲಿವೆ. ಉಳಿದ ಮೂರು ದಿಕ್ಕಿನ ಗೋಪುರಗಳು ಐದು ಅಂತಸ್ತಿನಲ್ಲಿ ೫೭ ಅಡಿ ಎತ್ತರದಲ್ಲಿದ್ದು ಮುಖ್ಯ ಗೋಪುರಕ್ಕೆ ಸಹವರ್ತಿಗಳಂತೆ ಕಾಣುತ್ತವೆ. ಎಲ್ಲ ಗೋಪುರಗಳಲ್ಲಿ ಚೋಳ ಶೈಲಿಯ ದ್ವಾರಪಾಲಕರು, ಶಿವಭಕ್ತರು, ಗಣಾಧಿಗಳ ಶಿಲ್ಪಗಳಿವೆ.

ಗರ್ಭಗುಡಿ ಮತ್ತು ಸುಖನಾಸಿ ಮುಂದಿನ ಹಜಾರಕ್ಕೆ ಎತ್ತರದಲ್ಲಿದ್ದು ಕೃಷ್ಣಶಿಲೆಯಲ್ಲಿ ನಿರ್ಮಿಸಲಾಗಿದೆ. ಗರ್ಭಗುಡಿಯಲ್ಲಿ ಸುಮಾರು ಮೂರು-ಮೂರುವರೆ ಅಡಿ ಎತ್ತರದ ನಾಲ್ಕು ಕೈಗಳುಗಳ್ಳ ಕಾಲಭೈರವನ ಶಿಲ್ಪವಿದೆ. ಬಲಕ್ಕೆ ತ್ರಿಶೂಲ-ಕತ್ತಿ; ಎಡಕ್ಕೆ ಡಮರುಗ-ಕಪಾಲಗಳಿದ್ದು, ಕಪಾಲದ ಕಡೆಗೆ ನೆಗೆದ ನಾಯಿ ಚಿತ್ರಣವಿದೆ. (ತ್ರಿಮೂರ್ತಿಗಳಲ್ಲಿ ತಾನು ಶ್ರೇಷ್ಠನೆಂದು ಬ್ರಹ್ಮ ಹೆಮ್ಮೆಗೊಂಡಾಗ ಶಿವನು ಭೈರವನನ್ನು ಸೃಜಿಸಿ ಬಿಡಲು, ಅವನು ಬ್ರಹ್ಮನ ಐದನೇ ತಲೆಯನ್ನು ಕತ್ತರಿಸಲು, ಅದು ಅವನ ಕೈಗಂಟಿಕೊಂಡಿತು. ಭೈರವನು ಕಾಪಾಲಿಕನಾಗಿ ತಿರುಗುತ್ತ ಕಾಶಿಗೆ ಬರಲು ಬ್ರಹ್ಮ ಕಪಾಲವು ಆತನ ಕೈಯಿಂದ ಜಾರಿಹೋಯಿತು.) ಈ ಶಿಲ್ಪ ಹಿಂದಿನ ಗುಡಿಯ ಪ್ರಾಚೀನ ಶಿಲ್ಪವಾಗಿದೆ.

ಗರ್ಭಗುಡಿಯ ಇಕ್ಕೆಲಗಳಲ್ಲಿ ದ್ವಾರಪಾಲಕರಿದ್ದು, ಎದುರಿಗೆ ವಿಶಾಲವಾದ ನವರಂಗಕ್ಕೆ ಪರ್ಯಾಯವಾಗಿ ಒಂದು ದೊಡ್ಡ ಹಜಾರವಿದೆ. ಸಿಂಹಬೋದಿಗೆಯುಳ್ಳ ಎತ್ತರದ ಕಂಬಗಳು ಹಜಾರವನ್ನು ಶೋಭಿಸಿವೆ. ಇವು ವಿಜಯನಗರ ಮತ್ತು ಚೋಳ ಮಿಶ್ರಿತ ಶೈಲಿಯ ಸ್ತಂಭಗಳಂತಿವೆ. ಹಜಾರಕ್ಕೆ ಮುಂದೆ ಹೊಂದಿಕೊಂಡಂತೆ ಬಲಿಪೀಠ, ಧ್ವಜಸ್ತಂಭವಿದೆ. ಸ್ತಂಭದ ಮೇಲಿನ ಛತ್ತಿನಲ್ಲಿ ದ್ವಾದಶರಾಶಿಗಳನ್ನು ಚಿತ್ರಸಹಿತ ಕೆತ್ತಲಾಗಿದೆ. ಹಜಾರದ ಅತ್ತ ಇತ್ತ ಎಂಟೆಂಟು ಆಕರ್ಷಕ ಕಂಬಗಳಲ್ಲಿ ಕೃಷ್ಣಶಿಲೆಯಲ್ಲಿ ನಿರ್ಮಿತವಾಗಿರುವ ಹತ್ತು ಅಡಿ ಎತ್ತರದ ಅಷ್ಟ ಭೈರವರ ಭಾರೀ ಗಾತ್ರದ ಮೂರ್ತಿಗಳನ್ನು ಜೋಡಿಸಲಾಗಿದೆ. ಇವು ಚೋಳಶೈಲಿಗೆ ಸಾಕ್ಷಿಯಾಗಿವೆ. ಹಜಾರದೊಂದಿಗೆ ತೆರೆದ ಪ್ರದಕ್ಷಿಣಾ ಪಥವಿದೆ. ಇದು ಹಳೆಯ ವಾಸ್ತುಶಿಲ್ಪಕ್ಕೆ ವಿನೂತನ ಮಾದರಿಯಲ್ಲಿದೆ. ಈ ಪ್ರದಕ್ಷಿಣಾ ಪಥದ ಗರ್ಭಗುಡಿಯ ಹಿಂದಿನ ಎಡಬಲಗಳಲ್ಲಿ ಮಾಳಮ್ಮ ಮತ್ತು ಕಂಬದಮ್ಮ ಕಿರುಗುಡಿಗಳೂ ಸಹ ಶೋಭಿಸುವಂತಿವೆ.

ಇನ್ನು ದೇವಾಲಯದ ಒಳಪ್ರಾಕಾರವಂತೂ ತಮಿಳುನಾಡಿನ ರಾಮೇಶ್ವರ ಮತ್ತು ಇನ್ನಿತರ ದೇವಾಲಯದ ಒಳ ಪಥವನ್ನು ಹೋಲುತ್ತದೆ. ಅತ್ತ ಇತ್ತ

ಸಾಲುಕಂಬಗಳಲ್ಲಿ ನಾಲ್ಕೂವರೆ ಅಡಿ ಎತ್ತರದ ಅರವತ್ತು ನಾಲ್ಕು ಅಷ್ಟಾಷ್ಟ ಭೈರವಮೂರ್ತಿಗಳನ್ನು ಕಂಬಗಳಿಗೆ ಆನಿಸಿದ್ದು ಪ್ರತಿಯೊಂದಕ್ಕೂ ಹೆಸರನ್ನು ಬರೆಸಲಾಗಿದೆ. ಅದೇ ಪ್ರಕಾರದ ಹಿಂಭಾಗದ ಸುತ್ತಿನಲ್ಲಿ ಭವ್ಯ ಗಣಪತಿ ಮತ್ತು ಷಣ್ಮುಖ ಕಿರುಗುಡಿಗಳಿವೆ. ಷಣ್ಮುಖ ಕಿರುಗುಡಿಯಿಂದ ಬಳಸಿದರೆ ಕೆಳಮಾಳಿಗೆಯಲ್ಲಿ ಕ್ಷೇತ್ರದ ಅಥವಾ ಸ್ಥಳದ ಮೂಲದೇವತೆ ಕಂಬದಮ್ಮನ ಕಂಬಾಕೃತಿಯಿದೆ. ಕ್ಷೇತ್ರದಲ್ಲಿನ ಕೊಳ, ಕಲ್ಯಾಣಿಗಳು ಸಮಗ್ರವಾಗಿ ವ್ಯವಸ್ಥಿತವಾಗಿ ಜೀರ್ಣೋದ್ಧಾರಗೊಂಡಿವೆ.

ದೇವಾಲಯದ ಮಹಾದ್ವಾರದ ಎಡಕ್ಕೆ ಒಂದೇ ಬಂಡೆಯಲ್ಲಿ ಕೆತ್ತಿರುವ ನಾಗಲಿಂಗೇಶ್ವರ ಆಕೃತಿ ಭವ್ಯವಾಗಿದೆ. ಪುರಾಣೇತಿಹಾಸದಲ್ಲಿ ಶ್ರೀರಾಮ ಶಿವನ ಸಂಬಂಧವಾಗಿ ಬೆಳೆದು ಬಂದ ಈ ಗಿರಿಶ್ರೇಣಿಗೆ ನವಿಲುಗಳೇ ಆಗರವಾಗಿದ್ದು ಅವುಗಳ ಚುಂಚು (ಕೊಕ್ಕು) ಆಧಾರದ ಮೇಲೆ ಗಿರಿಯೂ ಸೇರಿ ಚುಂಚನಗಿರಿ ಹಾಗೂ ಚುಂಚಲ ಸಸ್ಯದಿಂದಾಗಿಯೂ ಈ ಸ್ಥಳನಾಮಕ್ಕೆ ಸುಲಭವಾಗಿ ಸಿಕ್ಕುವಂತಾಗಿದೆ. ಚುಂಚ-ಕಂಚ ಎಂಬ ರಾಕ್ಷಸರ ಕಥೆಯೂ ಇಲ್ಲಿ ಪ್ರಚಲಿತದಲ್ಲಿದೆ. ಒಟ್ಟಾರೆ ಈ ಕ್ಷೇತ್ರದಲ್ಲಿ ಸಿದ್ಧರ ಗವಿಗಳಿದ್ದು; ಚಂದ್ರಮೌಳೇಶ್ವರ, ಅನ್ನಪೂರ್ಣೇಶ್ವರಿ, ಗಂಗಾಧರೇಶ್ವರ, ಪಾರ್ವತಿ ಮತ್ತಿತರ ಗುಡಿಗಳೊಂದಿಗೆ ಜ್ವಾಲಾಪೀಠ, ಮೇದರಮಂಟಪ, ಒಕ್ಕಲ್ಲು ಬಸವ, ಚೋಳಗಂಬ, ಆಕಾಶಭೈರವ (ಗಳಿಗೆ ಕಲ್ಲು) ಮುಂತಾದ ಐತಿಹ್ಯಕುರುಹುಗಳಿವೆ. ಶ್ರೀಕ್ಷೇತ್ರದ ಗುರುಪರಂಪರೆಯ ಪ್ರಕಾರ ಈಗಿನ ಪೀಠಾಧ್ಯಕ್ಷರೂ ಹಾಗೂ ಅದ್ಭುತ ಸಾಧನೆಗೈದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥಸ್ವಾಮಿಗಳು ಎಪ್ಪತ್ತೊಂದನೆಯವರು. ಚುಂಚನಗಿರಿಯ ಪ್ರಕೃತಿ ಮತ್ತು ಭೈರವನ ಬಗ್ಗೆ ನಮ್ಮ ಜನಪದರು ಹಿಂದಿನಿಂದಲೂ ಒಂದು ಅವಿನಾಭಾವ ಸಂಬಂಧವನ್ನು ಬೆಳೆಸಿಕೊಂಡು ಬಂದಿದ್ದಾರೆ. ಹಬ್ಬಹರಿದಿನ ಜಾತ್ರೆ ಉತ್ಸವಗಳಲ್ಲಿ ಪಾಲ್ಗೊಂಡು ಹಾಡುತ್ತಾರೆ. ಕುಣಿಯುತ್ತಾರೆ. ಅದರ ವರ್ಣನೆ ಹೀಗಿದೆ.

ನವಿಲು ಕುಣಿದಾವೋ ಹಿಂಡ್ಯಕ್ಕಿ ಹಾಡ್ಯಾವೊ
ಹುಲಿಮರಿ ಕುಣಿದ್ಯಾವೋ ಚುಂಚನಗಿರಿಯ
ಸುತ್ತೆಲ್ಲ ಸ್ವಾಮಿ ಕುಣಿದಾನೊ ॥

ಆ ಬೆಟ್ಟ ಈ ಬೆಟ್ಟ ನಡುವೆ ತಾವರೆ ಕೊಳ
ತಾವರೆ ಹೂವ ಕೊಯ್ಯಬಂದ । ಭೈರುವ
ತಾವೊಳ್ಳೆದೆಂದು ನೆಲೆಗೊಂಡ ॥

**ಆತ್ಮಲಿಂಗೇಶ್ವರ ದೇವಾಲಯ :**

ಮದ್ದೂರು ತಾಲ್ಲೂಕು ಕಾಳಮುದ್ದನದೊಡ್ಡಿ ಬಳಿಯಿರುವ ಆತ್ಮಲಿಂಗೇಶ್ವರ ದೇವಾಲಯ ಆಧುನಿಕವಾಗಿ ನಿರ್ಮಾಣವಾಗಿರುವ ದ್ರಾವಿಡ ಶೈಲಿಯ ರಚನೆಯದಾಗಿದೆ. ಇದು ಗರ್ಭಗುಡಿ, ದೊಡ್ಡದಾದ ಹಜಾರ, ಬಲಿಪೀಠ, ಧ್ವಜಸ್ತಂಭ, ಮಹಾಗೋಪುರಗಳಿಂದ ರಚನೆಯಾಗಿದೆ. ದೇವಾಲಯಕ್ಕೆ ವಿಶಾಲವಾದ ಜಾಗದೊಂದಿಗೆ ವಿಶಾಲವಾದ ಸುತ್ತಾಲೆ ನಿರ್ಮಾಣಗೊಂಡಿದೆ. ಗರ್ಭಗುಡಿಯ ಮೇಲಿನ ಶಿಖರ ಹಾಗೂ ಮಹಾದ್ವಾರದ ಗೋಪುರ ಚೋಳ ಶೈಲಿಯಲ್ಲಿದೆ. ಐದು ಅಂತಸ್ತಿನ ಗೋಪುರದಲ್ಲಿ ಶೈವ ಸಂಬಂಧಿತ ಶಿಲ್ಪಗಳಿವೆ. ಶಿಖರ ಆಮಲಕದೊಂದಿಗೆ ಸುಂದರವಾಗಿದೆ. ಎತ್ತರದಲ್ಲಿರುವ ದೇವಾಲಯವನ್ನು ಕೆಳಗಿನ ಸೋಪಾನಗಳಿಂದ ಏರಬಹುದು. ದೇವಾಲಯದ ಸುತ್ತಲಿನ ಉದ್ಯಾನವನ, ಕೆಳಗಿನ ಕಲ್ಯಾಣಿ ಎಲ್ಲವೂ ಸುಂದರವಾಗಿದೆ. ಆದರೆ ದೇವಾಲಯದ ಹಲವಷ್ಟು ಭಾಗ ಕಾಂಕ್ರೀಟ್‌ನಿಂದ ನಿರ್ಮಾಣಗೊಂಡಿದೆ. ಇದು ಜನಪದರ ದೇವಾಲಯವಾಗಿ ಶಿವರಾತ್ರಿಯಲ್ಲಿ ಉತ್ಸವಗಳು ನಡೆದು, ದನಗಳ ಜಾತ್ರೆಯೂ ಜರುಗುತ್ತದೆ.

**ತೋಪಿನ ತಿಮ್ಮಪ್ಪ :**


ಇದೇ ತಾಲ್ಲೂಕಿನ ಆಬಲವಾಡಿಯ ತೋಪಿನ ತಿಮ್ಮಪ್ಪ ಎಂಬ ಹೊಯ್ಸಳ-ವಿಜಯನಗರ ಶೈಲಿಯ ಪ್ರಾಚೀನ ದೇವಾಲಯವನ್ನು ತೆರವುಗೊಳಿಸಿ ಆಧುನೀಕರಣದೊಂದಿಗೆ ಬೃಹತ್ ಕಟ್ಟಡ ಕಟ್ಟಲಾಗಿದೆ. ಗರ್ಭಗುಡಿ, ಸುಖನಾಸಿ, ಹಜಾರ, ಸುತ್ತಾಲೆ ಮಂಟಪ, ಶಿಖರ, ಗೋಪುರಗಳಿಂದ ಕೂಡಿ ಭವ್ಯವಾಗಿದೆ. ಈ ದೇವರ ಜಾತ್ರೆ ಉತ್ಸವಗಳಲ್ಲಿ ತಾವರೆ (ಆಬಲ) ಎಲೆಯಲ್ಲಿ ಊಟ ಮಾಡುವುದು ಆರೋಗ್ಯ ದೃಷ್ಟಿಯಿಂದಲೂ ಗಮನಾರ್ಹವಾಗಿದೆ.

ದೇವಾಲಯದ ಸಮೀಪದಲ್ಲಿ ಹೊಯ್ಸಳ ಕಾಲದ ಶಿಥಿಲಗೊಂಡ ಜಿನಶಾಸನವೊಂದಿದೆ.


ಇದೇ ತಾಲ್ಲೂಕಿನ ತೊಪ್ಪನಹಳ್ಳಿ ವ್ಯಾಪ್ತಿಯಲ್ಲಿರುವ ಪ್ರಾಚೀನ ಮುತ್ತುರಾಯ-ಸ್ವಾಮಿ ಗುಡಿಯೂ ಸಹ ಆಧುನೀಕರಣದೊಂದಿಗೆ ನಿರ್ಮಾಣಗೊಂಡಿದೆ. ಹಲವು ಭಾಗಕ್ಕೆ ಅಮೃತ ಶಿಲೆಯನ್ನು ಬಳಸಲಾಗಿದೆ.

**ಬೂಕನಕೆರೆ ಕೈವಲ್ಯೇಶ್ವರ :**


ಕೃಷ್ಣರಾಜಪೇಟೆ ತಾಲ್ಲೂಕಿನ ಬೂಕನಕೆರೆಯ ಪ್ರಾಚೀನ ಕೈವಲ್ಯೇಶ್ವರ ಮತ್ತು ಸಿಂದಘಟ್ಟದ ಕೋಟೆ ಗಣಪತಿ ದೇವಾಲಯಗಳನ್ನು ಆಧುನಿಕ ರೀತಿಯಲ್ಲಿ ನಿರ್ಮಾಣಗೊಳಿಸಲಾಗಿದೆ.




ಕಾಲಭೈರವೇಶ್ವರ ದೇವಾಲಯ. ಆದಿಚುಂಚನಗಿರಿ.



ಒಳಪ್ರಾಕಾರ ಕಾಲಭೈರವೇಶ್ವರ ದೇವಾಲಯ.



ಆತ್ಮಲಿಂಗೇಶ್ವರ ದೇವಾಲಯ. ಹನುಮಂತನಗರ.



ಚಂದ್ರಮೌಳೀಶ್ವರ ದೇವಾಲಯ. ಶಿವಶೈಲ.



ಮಂಟೇಸ್ವಾಮಿ ಗದ್ದುಗೆ. ಬೊಪ್ಪಗೌಡನಪುರ.



ರಾವಳೇಶ್ವರ ವೀರಗಲ್ಲು. ಚೋಳೇನಹಳ್ಳಿ.



ಹತ್ತು ತಲೆ ರಾವಣ ಶಿಲ್ಪ.
ಸರಗೂರು.

ವಿಜಯನಗರದ ದೊರೆ ಎರಡನೇ ಬುಕ್ಕರಾಯನು ಬೂಕನಕೆರೆಯ ಹಳೆಯ ಕೆರೆ ಮತ್ತು ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿ ಇಲ್ಲಿನ ಸ್ಥಾಣಾದ್ರಿ ಲಿಂಗಸ್ವರೂಪಿ ರಂಗನಾಥನ ದರ್ಶನ ಪಡೆದನೆಂದು ಕ್ರಿ.ಶ. ೧೪೦೧ರ ಶಾಸನ ಉಲ್ಲೇಖಿಸುತ್ತದೆ.

**ಶಿವಶೈಲ :**

ಪಾಂಡವಪುರ ತಾಲ್ಲೂಕು ಪಟ್ಟಸೋಮನಹಳ್ಳಿ ಬಳಿ ಲೋಕಪಾವನಿ ಬಲದಂಡೆ ಮೇಲಿರುವ ಶಿವಶೈಲ ಒಂದು ಸುಂದರ ಬನದಲ್ಲಿದೆ. ಇಲ್ಲಿ ಆಧುನಿಕವಾಗಿ ಚಂದ್ರಮೌಳೀಶ್ವರ ಮತ್ತು ಕಾಮಾಕ್ಷಿ ದೇವಾಲಯಗಳು ನಿರ್ಮಾಣಗೊಂಡಿವೆ. ಶ್ರೀರಾಮಕೃಷ್ಣ ಪರಮಹಂಸರ ಸ್ಮರಣೆಯಲ್ಲಿರುವ ಧ್ಯಾನ ಮಂದಿರ, ಸಂಸ್ಕೃತ ವಿದ್ಯಾಲಯ, ಗ್ರಂಥ ಭಂಡಾರ ಎಲ್ಲವೂ ಕೂಡಿ ಒಂದು ಪ್ರಶಾಂತ ವಾತಾವರಣದ ಆಶ್ರಮದಂತಿದೆ. ಲೋಕಪಾವನಿಯೊಂದಿಗೆ ಪಕ್ಷಿಗಳ ಕಲರವ ಮೈಮನಸ್ಸಿಗೆ ಹರ್ಷವನ್ನುಂಟು ಮಾಡುತ್ತದೆ.

ಇದೇ ತಾಲ್ಲೂಕಿನ ಹಾರೋಹಳ್ಳಿಯ ಹೊಯ್ಸಳ ಕಾಲದ ಲಕ್ಷ್ಮೀನಾರಾಯಣ ದೇವಾಲಯವನ್ನು ತೆರವುಗೊಳಿಸಿ ಹೊಸ ಕಲ್ಲಿನಿಂದ ನಿರ್ಮಾಣ ಮಾಡಲಾಗುತ್ತಿದೆ.

ಇಲ್ಲಿಗೆ ಸಮೀಪದಲ್ಲಿರುವ ಕೆನ್ನಾಳು ಗ್ರಾಮದ ಹೊರವಲಯದಲ್ಲಿರುವ ಪ್ರಾಚೀನ ಈಶ್ವರ ಗುಡಿಯನ್ನು ಸಂರಕ್ಷಣಾ ದೃಷ್ಟಿಯಿಂದ ಧರ್ಮಸ್ಥಳ ಧರ್ಮೋತ್ಥಾನ ಟ್ರಸ್ಟ್ ತನ್ನ ಕಾರ್ಯ ಪ್ರಾರಂಭಿಸಿದೆ.

**ಚೋಳಶೈಲಿಯ ವೆಂಕಟರಮಣ :**

ಪ್ರಸಿದ್ಧ ಕೆರೆತೊಣ್ಣೂರು ಸಮೀಪದಲ್ಲಿರುವ ತಿರುಮಲಸಾಗರ ಛತ್ರದ ವ್ಯಾಪ್ತಿಯಲ್ಲಿದ್ದ ಪ್ರಾಚೀನ ಚೋಳಶೈಲಿಯ ವೆಂಕಟರಮಣಸ್ವಾಮಿ ಮೂರ್ತಿಯನ್ನು ಸುಮಾರು ಎಪ್ಪತ್ತೈದು ವರ್ಷಗಳ ಹಿಂದೆ ಮೈಸೂರಿನ ಒಂಟಿ ಕೊಪ್ಪಲಿಗೆ (ಈಗ ಅದು ಪ್ರಸಿದ್ಧ ದೇವಾಲಯವಾಗಿದೆ) ಸ್ಥಳಾಂತರಗೊಂಡ ಮೇಲೆ ಇತ್ತೀಚಿನ ವರ್ಷಗಳಲ್ಲಿ ಅದೇ ಸ್ಥಳದಲ್ಲಿ ಹೊಸ ದೇವಾಲಯವನ್ನು ಕಟ್ಟಲಾಗಿದೆ.

**ಕಾವೇರಿ ತೀರದಲ್ಲಿ :**

ಶ್ರೀರಂಗಪಟ್ಟಣ ದ್ವೀಪದ ಕಾವೇರಿ ತೀರದಲ್ಲಿ ಇತ್ತೀಚಿನ ದಶಕಗಳಲ್ಲಿ ಹಲವಷ್ಟು ದೇವಾಲಯಗಳ ಹೆಸರಿನಲ್ಲಿ ಆಶ್ರಮಗಳು ಸ್ಥಾಪನೆಗೊಂಡಿವೆ. ದೊಡ್ಡ ಘೋಸಾಯಿ ಘಾಟಿನಲ್ಲಿರುವ ಶ್ರೀ ನರಸಿಂಗ ಚೈತನ್ಯ ಮಠದ ಹೆಸರಿನಲ್ಲಿರುವ ಕೃಷ್ಣದೇವಾಲಯ ಮತ್ತು ಸಮುಚ್ಚಯದೊಂದಿಗೆ ನಿರ್ಮಾಣವಾಗಿರುವ ಉದ್ಯಾನವನ ಹಿಂದಿನ

ಗೋಕುಲದ ಬೃಂದಾವನವನ್ನು ನೆನಪಿಸುತ್ತದೆ. ಕಾರೇಪುರದ ಕಾವೇರಿ ತೀರದಲ್ಲಿರುವ ಶ್ರೀ ಕೃಷ್ಣದೇವಾಲಯ ಕರಾವಳಿ ತೀರದ ಕಟ್ಟಡ ರಚನೆಯೊಂದಿಗೆ ಬಹು ಸುಂದರ –ವಾಗಿದೆ. ಇನ್ನು ಕಾವೇರಿ ಬಲಸೀಳಿನ ನಡುಗಡ್ಡೆಯಲ್ಲಿರುವ 'ಬಂಬಂ' ಆಶ್ರಮ, ಸತ್ಯಸಾಯಿ ಆಶ್ರಮ, ಇತ್ತೀಚಿನ ಜೈಗುರುದೇವ ಆಶ್ರಮ, ಕಾವೇರಿ ಚಂದ್ರವನದಲ್ಲಿರುವ ಬೇಬಿಮಠದ ಆಶ್ರಮ ಹೀಗೆ ಇನ್ನೂ ಹಲವಾರು ಆಶ್ರಮಗಳು ತೆರೆದುಕೊಂಡಿವೆ. ವಿಶೇಷವಾಗಿ ಕಾವೇರಿ ಮಗ್ಗುಲಿನ ಬೆಳಗೊಳ ವ್ಯಾಪ್ತಿಯಲ್ಲಿ ಪ್ರಕೃತಿಯ ಮಡಿಲಲ್ಲಿ ಪ್ರಾಚೀನದಿಂದಲೂ ಬಂದಿರುವ ಹಳೆಯ ದೇವಾಲಯಗಳನ್ನು ಕಾಣಬಹುದು.

ಹೀಗೆ ಜಿಲ್ಲೆಯಾದ್ಯಂತ ಹಲವಾರು ದೇವಾಲಯಗಳ ಸಂರಕ್ಷಣೆ ಮತ್ತು ಹೊಸತನದ ಕಟ್ಟಡಗಳು ನಿರ್ಮಾಣ ಆಗುತ್ತಿವೆ.

## ಸಂರಕ್ಷಣಾ ಕಾರ್ಯಗಳು

ವಿಜಯನಗರ ಆಡಳಿತದ ತರುವಾಯ ದೇವಾಲಯಗಳ ನಿರ್ವಹಣೆ, ನಿರ್ಮಾಣ ಮತ್ತು ಸಂರಕ್ಷಣೆ ಕಾರ್ಯ ಮುಂದೆ ಅಸ್ತಿತ್ವಕ್ಕೆ ಬಂದ ಹಲವಾರು ಸಂಸ್ಥಾನ ರಾಜರುಗಳ ಮತ್ತು ಬಲಿಷ್ಠ ಪಾಳೇಗಾರರ ಹೊಣೆಗಾರಿಕೆಯಾಯಿತು. ಅವರೂ ಕೆಲಕಾಲ ಈ ಕಾರ್ಯ ನಿರ್ವಹಿಸಿದಂತೆ ಕಾಣಬರುತ್ತದೆ. ಕಾಲಕ್ರಮೇಣ ಆರ್ಥಿಕ ಮತ್ತು ಸ್ಥಿರ ಅಧಿಕಾರದ ಕೊರತೆಯಿಂದಾಗಿ ಹಲವಾರು ದೇವಾಲಯಗಳು ಶಿಥಿಲಾವಸ್ಥೆ ತಲುಪಿದವು. ಸ್ಥಳೀಯ ಜಗಳ, ದಾಳಿಕೋರರ ಆಕ್ರಮಣವೂ ಜತೆಗೆ ಸೇರಿಕೊಂಡಿತು.

ಹೀಗೆ ಶಿಥಿಲಗೊಂಡ ದೇವಾಲಯಗಳಲ್ಲಿ ವಿಪುಲವಾದ ಕಲೆ, ಸಂಸ್ಕೃತಿ ಹಾಗೇ ಉಳಿದಿತ್ತು. ಬ್ರಿಟಿಷ್ ಆಡಳಿತದಲ್ಲಿ ಕೆಲ ಆಸಕ್ತರು, ಪ್ರಾಚೀನ ಶಾಸ್ತ್ರವಿದ್ವಾಂಸರು, ಶಿಕ್ಷಣ ತಜ್ಞರು ಈ ಬಗ್ಗೆ ಗಮನ ಸೆಳೆದರು. ಶಾಸನಗಳನ್ನು ಅಧ್ಯಯನ ಮಾಡುವಷ್ಟು ಆಸಕ್ತಿ ತೆಗೆದುಕೊಂಡರು. ಈ ಒಂದು ಪರಿಣಾಮವಾಗಿ ಭಾರತದಲ್ಲಿ ಪುರಾತತ್ವ ಹಾಗೂ ಸಂಗ್ರಹಾಲಯಗಳ ಇಲಾಖೆ ಪ್ರಾರಂಭಗೊಂಡಿತು. ಇದು ಪ್ರಾಚೀನ ಸಂಸ್ಕೃತಿಸಂಪತ್ತನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ತನ್ನ ಕಾರ್ಯಪ್ರಾರಂಭಿಸಿತು. ಜನರಲ್ ಅಲೆಗ್ಸಾಂಡರ್ ಕನಿಂಗ್ ಹ್ಯಾಂ, ಬರ್ಗೆಸ್, ಹುಲ್ಷ್, ಕೀಲ್ ಹಾರನ್, ಬರ್ನಾಪ್, ಮ್ಯಾಕ್ಸ್ ಮುಲ್ಲರ್, ಲಾಸೆನ್, ಸರ್‌ಜಾನ್ ಮಾರ್ಷಲ್, ಮಾರ್ಟಿಮನ್ ವೀಲರ್, ರಾಬರ್ಟ್ ಬ್ರೂಸ್ ಪುಟ್, ಲೂಯಿಸ್ ರೈಸ್, ಜಾನ್ ಫ್ಲೀಟ್ ಮುಂತಾದ ಮಹನೀಯರನ್ನು ಈ ಸಂದರ್ಭದಲ್ಲಿ ಸ್ಮರಿಸಲೇಬೇಕು. ಕರ್ನಾಟಕ ಶಾಸನಗಳ ಪಿತಾಮಹ ಎಂದು ಲೂಯಿಸ್ ರೈಸ್ ಅವರನ್ನು ಹೆಸರಿಸಲಾಯಿತು. ಕ್ರಿ.ಶ. ೧೮೮೫ರಲ್ಲಿ ರಾಜ್ಯ ಪುರಾತತ್ವ ಇಲಾಖೆಯೂ ಅಸ್ತಿತ್ವಕ್ಕೆ ಬಂದಿತು. ಮೈಸೂರು ಸಂಸ್ಥಾನದ ದಿವಾನರಾದ ಕೆ. ಶೇಷಾದ್ರಿ ಅಯ್ಯರ್, ಸರ್‌ಮಿರ್ಜಾ ಇಸ್ಮಾಯಿಲ್,

ಪ್ರಾಚ್ಯ ಸಂಶೋಧನಾ ವಿದ್ವಾಂಸರಾದ ಆರ್. ನರಸಿಂಹಾಚಾರ್ಯ, ಆರ್. ಶಾಮಾಶಾಸ್ತ್ರಿ, ಸಿ. ಹಯವದನ ರಾವ್, ಕೆ.ಎ. ನೀಲಕಂಠಶಾಸ್ತ್ರಿ, ಎಂ. ಶೇಷಾದ್ರಿ, ಎಂ.ಎಚ್. ಕೃಷ್ಣ ಮುಂತಾದ ಮಹನೀಯರು ಈ ಬಗ್ಗೆ ತೀವ್ರ ಆಸಕ್ತಿ ವಹಿಸಿದರು.

ಈ ನಿಟ್ಟಿನಲ್ಲಿ ಮಂಡ್ಯ ಜಿಲ್ಲೆಯಲ್ಲಿ ಕೇಂದ್ರ ಸರಕಾರದ ಪುರಾತತ್ವ ಇಲಾಖೆ ಅಡಿಯಲ್ಲಿ ಸಂರಕ್ಷಣಾ ಕಾರ್ಯಕ್ಕೆ ಒಳಪಟ್ಟ ದೇವಾಲಯಗಳು ಹೀಗಿವೆ. ಕೆರೆತೊಣ್ಣೂರು ನಂಬಿನಾರಾಯಣ, ಮೇಲುಕೋಟೆ ಚಲುವನಾರಾಯಣ, ನಾಗಮಂಗಲ ಸೌಮ್ಯಕೇಶವ, ಕಂಬದಹಳ್ಳಿ ಪಂಚಕೂಟ ಬಸದಿ, ಗೋವಿಂದನಹಳ್ಳಿ ಪಂಚಲಿಂಗೇಶ್ವರ, ಸಿಂದಘಟ್ಟ ಲಕ್ಷ್ಮೀನಾರಾಯಣ, ಹೊಸಹೊಳಲು ಲಕ್ಷ್ಮೀನಾರಾಯಣ, ಬಸರಾಳು ಮಲ್ಲಿಕಾರ್ಜುನ, ಅರೆತಿಪ್ಪೂರು ಜೈನ ಅವಶೇಷಗಳು, ಮಾರೇಹಳ್ಳಿ ಲಕ್ಷ್ಮೀನರಸಿಂಹ, ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯಗಳು, ವಿಶೇಷವೆಂದರೆ ಶ್ರೀರಂಗಪಟ್ಟಣ ಲಕ್ಷ್ಮೀನರಸಿಂಹ ದೇವಾಲಯದ ಒಂದು ಕೋಣೆಯಲ್ಲಿರುವ ಕಂಠೀರವ ನರಸರಾಜಒಡೆಯರವರ ಪ್ರತಿಮೆಯೂ ಮೇಲ್ಕಂಡ ಇಲಾಖೆಗೆ ಒಳಪಟ್ಟಿದೆ.

ಇನ್ನು ರಾಜ್ಯ ಪುರಾತತ್ವ ಇಲಾಖೆಯ ಅಡಿಯಲ್ಲಿ ಹಲವಾರು ದೇವಾಲಯಗಳು ಸಂರಕ್ಷಣೆಗೆ ಒಳಪಟ್ಟಿವೆ. ಅವುಗಳಲ್ಲಿ ಹೊಸಬೂದನೂರಿನ ಅನಂತ ಪದ್ಮನಾಭ, ಆತಗೂರಿನ ಚಲ್ಲೇಶ್ವರ, ಅರಕೆರೆಯ ಲಕ್ಷ್ಮೀನರಸಿಂಹ, ಈಶ್ವರ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿದ್ದು; ಹರವು ಗ್ರಾಮದ ಬೃಹತ್ ರಾಮಚಂದ್ರ ದೇವಾಲಯ, ಮದ್ದೂರಿನ ವರದರಾಜಸ್ವಾಮಿ ದೇವಾಲಯಗಳ ಕೆಲಸ ಪ್ರಗತಿಯಲ್ಲಿದೆ. ಕಿಕ್ಕೇರಿಯ ಬ್ರಹ್ಮೇಶ್ವರ, ತೆಂಗಿನ ಘಟ್ಟದ ಈಶ್ವರ ದೇವಾಲಯದ ಸಮಗ್ರ ಸಂರಕ್ಷಣೆ ಆಗಬೇಕಾಗಿದೆ.

ಈ ನಡುವೆ ನಮ್ಮ ಪ್ರಾಚೀನ ಪರಂಪರೆಯನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಶಿಥಿಲಗೊಂಡ ದೇವಾಲಯಗಳ ಸಂರಕ್ಷಣಾ ಕಾರ್ಯದ ಸಾಹಸಕ್ಕೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ಎಂಬ ಸಂಸ್ಥೆ ಜನ್ಮಪಡೆಯಿತು. ಇದರ ಕಾರ್ಯಭಾರ ರಾಜ್ಯವ್ಯಾಪ್ತಿ ವಿಸ್ತರಿಸಿದರೂ, ಮಂಡ್ಯ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೇವಾಲಯಗಳು ಜೀರ್ಣೋದ್ಧಾರ ಗೊಂಡವು. ಪ್ರಾರಂಭದಲ್ಲಿ ಸ್ವತಂತ್ರವಾಗಿಯೇ ಕಾರ್ಯನಿರ್ವಹಿಸಿದ ಈ ಸಂಸ್ಥೆಗೆ ರಾಜ್ಯ ಸರಕಾರದ ಪುರಾತತ್ವ ಇಲಾಖೆಯ ನೆರವೂ ಸಹ ದೊರಕಿತು.

ಹೀಗಾಗಿ ಈ ಜಿಲ್ಲೆಯಲ್ಲಿ ಮಾದಾಪುರದ ವೀರಭದ್ರೇಶ್ವರ ಮತ್ತು ಮಹಲಿಂಗೇಶ್ವರ, ಅಕ್ಕಿಹೆಬ್ಬಾಳು ಗ್ರಾಮದ ಲಕ್ಷ್ಮೀನರಸಿಂಹ ಮತ್ತು ಚನ್ನಿಗರಾಯ,

ಸಿಂದಘಟ್ಟದ ಸಂಗಮೇಶ್ವರ, ಭಾರತೀಪುರದ ಗೋಪಾಲಕೃಷ್ಣ, ಅಘಲಯದ ಮಲ್ಲೇಶ್ವರ, ಅಗ್ರಹಾರ ಬಾಚಹಳ್ಳಿಯ ಹುಣಸೇಶ್ವರ ಮತ್ತು ವೀರಗರುಡರ ಕಂಬಗಳು, ಸಂತೇಬಾಚಹಳ್ಳಿಯ ಮಲ್ಲೇಶ್ವರ, ಸೋಮನಾಥಪುರದ (ಕೆ.ಆರ್. ಪೇಟೆ ತಾಲ್ಲೂಕು) ಚನ್ನಕೇಶವ, ದೊಡ್ಡಜಟಕದ ಚನ್ನಕೇಶವ, ಮಾಚಲಘಟ್ಟದ ಮಲ್ಲೇಶ್ವರ, ಹೊಸಕೋಟೆಯ ನಿಷ್ಕಾಮೇಶ್ವರ, ಹೊಸಹಳ್ಳಿಯ (ಪಾಂಡವಪುರ ತಾಲ್ಲೂಕು) ವೀರಭದ್ರೇಶ್ವರ, ಹೊಸಬೂದನೂರು ಗ್ರಾಮದ ಕಾಶಿವಿಶ್ವನಾಥ, ನಿಲುವಾಗಿಲು (ಮದ್ದೂರು ತಾಲ್ಲೂಕು) ಗ್ರಾಮದ ಯೋಗಾನರಸಿಂಹ ದೇವಾಲಯಗಳು ಸಂರಕ್ಷಣಾ ಕಾರ್ಯಕ್ಕೆ ಒಳಪಟ್ಟು ಜೀರ್ಣೋದ್ಧಾರದ ಹೊಸಬೆಳಕನ್ನು ಕಂಡವು. ನಾಗಮಂಗಲ ತಾಲ್ಲೂಕಿನ ಚಾಕೇನಹಳ್ಳಿಯ ಕೇಶವ ಮತ್ತು ಬೆಳತೂರು (ಮದ್ದೂರು ತಾಲ್ಲೂಕು) ಗ್ರಾಮದ ಹೊಯ್ಸಳರ ಕಾಲದ ಸೋಮೇಶ್ವರ ದೇವಾಲಯಗಳ ಸಂರಕ್ಷಣಾ ಕಾರ್ಯ ಪ್ರಗತಿಯಲ್ಲಿದೆ. ಇಂಥ ಸಂರಕ್ಷಣಾ ಕಾರ್ಯಗಳಿಗೆ ಸ್ಥಳೀಯ ಜನರೂ ಸಹ ಇಂತಿಷ್ಟು ಎಂದು ತಮ್ಮ ಭಾಗದ ಆರ್ಥಿಕ ನೆರವನ್ನು ನೀಡಿ ಅಗತ್ಯ ಸೌಲಭ್ಯಗಳನ್ನು ನೀಡುತ್ತಿದ್ದಾರೆ. ಬೆಳಗೊಳದ ಜನಾರ್ದನ ಮತ್ತು ಭಕ್ತವತ್ಸಲ ದೇವಾಲಯಗಳನ್ನು ರಾಜ್ಯ ಪ್ರಾಚ್ಯವಸ್ತು ಇಲಾಖೆ ಇದೀಗ ಜೀರ್ಣೋದ್ಧಾರಗೊಳಿಸುತ್ತಿದೆ.

ಸ್ಥಳೀಯ ಜನರು ಇವುಗಳನ್ನು ಉಳಿಸಿಕೊಂಡು ಹೋಗುವುದರ ಜತೆಗೆ ತಮ್ಮ ನೈತಿಕ ಶಿಕ್ಷಣಕ್ಕೆ ಪೂರಕವಾಗುವಂತೆ ಹರಿಕಥೆ, ಭಜನೆ, ಗಮಕ, ಸಂಕೀರ್ತನೆ, ಧ್ಯಾನ, ಉಪನ್ಯಾಸ, ಶ್ರಮದಾನ ಮುಂತಾದ ಕಾರ್ಯಕ್ರಮಗಳನ್ನು ಹಾಕಿಕೊಂಡು ನಡೆದಾಗ ಅದಕ್ಕೊಂದು ಸಾರ್ಥಕತೆ ಸಿಗುತ್ತದೆ.

## ಉಪಸಂಹಾರ ಮತ್ತು ಗ್ರಾಮದೇವತೆಗಳು

ಹೀಗೆ ದೇವಾಲಯಗಳ ಹಿನ್ನೆಲೆ, ರಚನೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಹೇಳುತ್ತಾ ಹೋದರೆ ಅದಕ್ಕೆ ತಡೆಗೋಡೆ ಹಾಕಲಾಗದು. ಅದೊಂದು ಜೀವನ ಕ್ರಮ. ಇಡೀ ಭಾರತೀಯರ ಜೀವನಾಡಿ. ಅದು ನಿರಂತರವಾಗಿ ಮಿಡಿಯುತ್ತಲೇ ಇರುತ್ತದೆ. ಪಾಪ-ಪುಣ್ಯಗಳ ಅಂತರದ ಅರಿವಿದ್ದ ಜನ ಜೀವನವನ್ನು ಕಾಣುತ್ತೇವೆ. ಸಾವು-ನೋವು, ದುಃಖ-ದುಮ್ಮಾನ, ಕಷ್ಟ-ಸುಖ, ಯುದ್ಧ-ಕ್ಷಾಮ ಎಲ್ಲವನ್ನೂ ಜೀರ್ಣಿಸಿಕೊಳ್ಳುತ್ತಾ ಬಂದ ಮನುಷ್ಯ ದೇವರು ದಿಂಡಿರನ್ನು ಮರೆಯಲೇ ಇಲ್ಲ. ಅದನ್ನು ನಿರಂತರವಾಗಿ ತನ್ನೊಟ್ಟಿಗೆ ತರುತ್ತಿದ್ದಾನೆ. ಅದರಲ್ಲಿ ಸುಖ, ಶಾಂತಿ, ನೆಮ್ಮದಿ ಕಾಣಲು ಹವಣಿಸುತ್ತಿದ್ದಾನೆ. ವೈಚಾರಿಕತೆಯಲ್ಲಿಯೂ 'ಆಧ್ಯಾತ್ಮ' ಎಂಬುದು ಬಂದೇ ಬರುತ್ತದೆ. ಅದು ನಮ್ಮ ದೇಹಕ್ಕೆ ಸಾತ್ವಿಕ ಕಂಪನವನ್ನು ಪೂರೈಸುವಂತದ್ದಾಗಿದೆ.

ಭಾರತದಲ್ಲಿ ಹಿಂದೆ ಜನಪದರ ಮತ್ತು ವೈದಿಕರ ಜೀವನದ ಮುಖ್ಯ ಆಧಾರ ಬಹುತೇಕ ಕೃಷಿ. ಕೃಷಿಅವಲಂಬಿತ ಕಸುಬು ಹಾಗೂ ಪಶುಸಂಗೋಪನೆಯೇ ಆಗಿತ್ತು. ಪಟ್ಟಣದಲ್ಲಷ್ಟೇ ಅಲ್ಲ ಹಳ್ಳಿಯಲ್ಲಿ ಎಲ್ಲವನ್ನು ಕಂಡುಕೊಂಡಿದ್ದರು. ಜಾತಿ ವ್ಯವಸ್ಥೆ ಇದ್ದರೂ ಎಲ್ಲರೂ ಪರಸ್ಪರ ಪೂರಕವಾಗಿ ಬದುಕಲೇಬೇಕಾಗಿತ್ತು. ಯಂತ್ರ ಜಗತ್ತಿಲ್ಲದೆ ಕೈ ಕಸುಬು ಹಾಗೆ ಮಾಡಿತ್ತು. ಆಧ್ಯಾತ್ಮಿಕ ನೆಲೆಗಟ್ಟಿನಲ್ಲಿ ಹಬ್ಬ, ಹರಿದಿನ, ಜಾತ್ರೆ, ಉತ್ಸವಗಳನ್ನು ಆಚರಿಸಿಕೊಂಡು ಜೀವನಾಮೃತವನ್ನು ಸವಿಯುತ್ತಿದ್ದರು. ಈಗಲೂ ಅದು ಮುಂದುವರಿದ ಭಾಗವೇ ಆಗಿದೆ. ಊರದೇವತೆ ಮಾರಮ್ಮನಿಂದ ಹಿಡಿದು ವೈದಿಕ ದೇವತೆ ಲಕ್ಷ್ಮಿ, ಪಾರ್ವತಿಯವರೆಗೂ ತಮ್ಮ ಸಂಬಂಧವನ್ನು ಕಾಯ್ದಿರಿಸಿಕೊಳ್ಳಲಾಗಿದೆ. ಮನೆದೇವತೆಗಳೆನಿಸಿದ ಮಾಸ್ತಮ್ಮ, ಚೌಡಮ್ಮ, ಮದ್ದೂರಮ್ಮ, ಪಟ್ಟಲದಮ್ಮ, ಮಾಯಮ್ಮ, ಹಿರಿದೇವಮ್ಮ, ಹುಚ್ಚಮ್ಮ, ಅಟ್ಟಿಲಕ್ಕಮ್ಮ, ಹರಿಯಾಲದಮ್ಮ ಇತ್ಯಾದಿ ದೇವತೆಗಳನ್ನು ಅವಲೋಕಿಸಿದಾಗ ಆಯಾ ದೇವರ ಬುಡಕಟ್ಟಿನ ಜನಾಂಗದ ವಲಸೆ, ಜೀವನ ಪದ್ಧತಿಗಳನ್ನು ಅರಿಯಬಹುದಾಗಿದೆ. ಉದಾಹರಣೆಗೆ ಕಷ್ಟ ಕೋಟಲೆಗಳನ್ನು ಎದುರಿಸಿದ ಚೌಡಮ್ಮ (ಚೌಡೇಶ್ವರಿ) ಕೊಳ್ಳೇಗಾಲ ಕಡೆಯ ಕಾಗಲವಾಡಿಯಿಂದ ಬಂದವಳೆಂದೂ, ಮದ್ದೂರಿನ ಮದ್ದೂರಮ್ಮ ಕೊಡಗಿನವಳೆಂದೂ ಹೀಗೆ ಆಯಾ ಬುಡಕಟ್ಟಿನ ವಲಸೆಯೊಂದಿಗೆ ಮನೆದೇವತೆಗಳ ಕಥೆಯ ಹಂದರವೂ ಬೆಳೆಯುತ್ತಾ ಹೋಗುತ್ತದೆ. ನಾಗಮಂಗಲ ತಾಲ್ಲೂಕು ಚಿಣ್ಯ ಸಮೀಪದ ಸೋಮನಹಳ್ಳಿಕೊಪ್ಪಲು ಸೋಮಣ್ಣಳಮ್ಮ ಕಥೆ ಪಾಳೆಗಾರಿಕೆ ಕಥೆಯೊಂದಿಗೆ ಬೆಸೆದುಕೊಂಡಿದೆ. ಇಲ್ಲಿರುವ ಕೋಟೆಮಾರಿ ಐತಿಹಾಸಿಕ ಮಹತ್ವವನ್ನು ಪಡೆದಿದೆ. ಇವರೊಂದಿಗೆ ಚಿಕ್ಕಮ್ಮ, ದೊಡ್ಡಮ್ಮ ದೇವತೆಯರಿದ್ದಾರೆ. ಇಲ್ಲಿ ವಿಶೇಷವೆಂದರೆ ಕೋಟೆಮಾರಿ ಮಾಂಸ ಹಾರಿಯಾದರೆ ಉಳಿದವರು ಚೊಕ್ಕ ಭೋಜನದವರು. ಈ ದೇವತೆಗಳನ್ನು ಮುಂದಿಟ್ಟುಕೊಂಡು ಸ್ಥಳೀಯ ಚಾರಿತ್ರಿಕ ಪಾಳೆಪಟ್ಟುಗಳ ಕಥೆಯನ್ನು ರಚಿಸಬಹುದಾಗಿದೆ. ಇಂದು ಕಂದಕ ಹಾಗೂ ಅಗಸೆ ಬಾಗಿಲುಗಳಷ್ಟೆ ಉಳಿದಿದ್ದು ಕೋಟೆಯ ಒಳಗಿರುವ ಲಕ್ಷ್ಮೀನರಸಿಂಹ ಗುಡಿ ಚೋಳ ಮಾದರಿಯ ಹೊಯ್ಸಳ ಗುಡಿಯಾಗಿದೆ. ಶಿಥಿಲಾವಸ್ಥೆಯಲ್ಲಿರುವ ಈ ಗುಡಿಯ ಸಂರಕ್ಷಣೆ ಆಗಬೇಕಾಗಿದೆ. ಕೋಟೆಯ ಹೊರಗೆ ಆಂಜನೇಯ ಗುಡಿಯಲ್ಲಿರುವ ಹನುಮನ ಮೂರ್ತಿ ಬಹು ಆಕರ್ಷಕವಾಗಿದೆ. ಪಾಂಡವಪುರ ತಾಲ್ಲೂಕಿನ ಉಕ್ಕಡದ ಮಾರಮ್ಮ ಆವರಣದಲ್ಲಿ ಜರುಗುವ ಕಟ್ಟಳೆಗಳು ಜನಪದರಿಗಷ್ಟೇ ಅಲ್ಲ ಸುಶಿಕ್ಷಿತ ಜನರಿಗೂ ಹತ್ತಿರವಾಗಿದೆ. ಇದೇ ತಾಲ್ಲೂಕಿನ ಡಿಂಕಾ ಗ್ರಾಮದ ಡಿಂಕಾದಮ್ಮ ಎಂಬುದು ಒಂದು ಅಪರೂಪದ ಹೆಸರು. ಡಿಂಕಾಸುರ ಎಂಬ ರಾಕ್ಷಸನನ್ನು ಕೊಂದ ಕಾರಣ ಅವಳಿಗೆ ಡಿಂಕಾದಮ್ಮ ಎಂಬ ಹೆಸರು ಬಂದಿತೆಂಬ ಐತಿಹ್ಯವಿದೆ.

ಗುಡಿಯಲ್ಲಿರುವ ಮೂರ್ತಿ ಲಲಿತಾಸೀನ ಮಹಿಷಮರ್ಧಿನಿಯ ಕೆಂಪು ವರ್ಣದ ಉಗ್ರ ಶಿಲ್ಪವು ಕಟ್ಟಿಗೆಯದಾಗಿದೆ. ದಂಡಿ (ದಂಡು=ಸೈನ್ಯ) ನೊಂದಿಗೆ ಬಂದ ದಂಡಿನಮಾರಮ್ಮ ಮಳವಳ್ಳಿ ಮತ್ತಿತರ ಕಡೆಗಳಲ್ಲಿ ಕಾಣಬಹುದು. ಗುಡಿಯ ಮೇಲುಭಾಗದ ಸೂರು ಇಲ್ಲದ ಬಿಸಿಲುಮಾರಮ್ಮ, ಸಾಹಸದ ಸಾಸೆಮಾರಮ್ಮ, ಪ್ಲೇಗ್ ನಿವಾರಣೆಗಾಗಿ ಹುಟ್ಟಿಕೊಂಡ ಪ್ಲೇಗ್ ಮಾರಮ್ಮ ಹೀಗೆ ನಾನಾ ಹೆಸರಿನ ಮಾರಮ್ಮ ಗುಡಿಗಳನ್ನು ಕಾಣಬಹುದು.

ಒಟ್ಟಾರೆ ಜನಪದರ ದೇವತೆಗಳ ಅಧ್ಯಯನದಲ್ಲಿ ಕುತೂಹಲದೊಂದಿಗೆ ವೈಜ್ಞಾನಿಕವಾಗಿ ಪರಿಶೀಲಿಸಬಹುದಾದ ಅನೇಕಾನೇಕ ಅಂಶಗಳಿವೆ. ಒಂದೇ ದೇವತೆಯ ಬುಡಕಟ್ಟಿನ ಜನರಲ್ಲಿ ವೈವಾಹಿಕ ಸಂಬಂಧವನ್ನು ಬೆಳೆಸುವುದಿಲ್ಲ. ಅವರು ಎಲ್ಲೇ ಇರಲಿ ಒಂದೇ ರಕ್ತದ ಬುಡಕಟ್ಟು ಎಂಬ ನಂಬಿಕೆ ಬೇರೂರಿದೆ. ಹಿಂದೆ ಹಿರಿಮಗಳಿಗೆ 'ಪಟ್ಟ' ಕಟ್ಟುವ ಸಂಪ್ರದಾಯದಿಂದಾಗಿ 'ಪಟ್ಟಲದಮ್ಮ' ಎಂಬ ಹೆಸರು ಬಂತೆಂಬ ಅಭಿಪ್ರಾಯವೂ ಇದೆ. ಒಟ್ಟಾರೆ ಬಹುತೇಕ ದೇವತೆಗಳು ಕೊಂಡಕ್ಕೆ ಹಾರಿರುವುದು ಕೇಳಿಬರುತ್ತದೆ. ಮಾಸ್ತಮ್ಮ ಅಂತೂ ಹೇಳಿ ಕೇಳಿ ಮಹಾಸತಿ ಆದವಳು. ಗಂಡನ ಜತೆಯಲ್ಲಿಯೇ ಚಿತೆಗೆ ಹೋದವಳು. ಸಾಮಾನ್ಯವಾಗಿ ಈ ಗುಡಿಗಳಲ್ಲಿ ಗದ್ದುಗೆಗೆ ಪೂಜೆ ಸಲ್ಲಿಸಿದರೆ, ಕೆಲವೆಡೆ ಸತಿಕಲ್ಲು, ಸತಿದಿಬ್ಬಗಳಿಗೆ ಪೂಜೆ ಸಲ್ಲಿಸುತ್ತಾರೆ. ಒಂದು ದೇವತೆಗೆ ನಿರ್ದಿಷ್ಟ ಹೆಸರಿದ್ದರೂ ಏಳು ಊರುಗಳಿಗೆ ಸೇರಿದ ದೇವತೆಯನ್ನು 'ಏಳೂರಮ್ಮ' ಎಂದು ಕರೆಯಲಾಗುತ್ತದೆ. ಪ್ರಮುಖ ಊರಿನ ಹೊರವಲಯದಲ್ಲಿರುವ ನಾಲ್ಕುಕಾಲಿನ ಮಂಟಪದಲ್ಲಿರುವ ಮಣ್ಣಿನ ದೇವತೆಗೆ ಮರೆಮಾಡುವುದಿಲ್ಲ. ಏಳು ಊರಿನವರೂ ಸೇರಿ ಹಬ್ಬವನ್ನು ಆಚರಿಸುತ್ತಾರೆ. ಪ್ರಮುಖ ದೇವತೆಗೆ ಊರಲ್ಲಿ ಒಂದು ಗುಡಿ ಇರುತ್ತದೆ. ಅದಕ್ಕೆ 'ಮಟ್ಮನೆ' ಎಂದು ಹೆಸರಿಸುತ್ತಾರೆ. ಇನ್ನು ಊರ ಹೊರಭಾಗದಲ್ಲಿ ಸಾಮಾನ್ಯವಾಗಿ ತೋಪಿನಲ್ಲಿ ಒಂದು ಗುಡಿ ಇರುತ್ತದೆ. ಇಲ್ಲಿಯೇ ಕೊಂಡ, ಬಂಡಿ, ಸಿಡಿಗಳಂಥ ಕೈಂಕರ್ಯಗಳು ಜರುಗುತ್ತವೆ. ಜನಜಾತ್ರೆಗೂ ಅನುಕೂಲಕರವಾಗಿರುತ್ತದೆ. ಹಲವೆಡೆ ಸ್ಥಳೀಯ ದೇವರುಗಳೊಂದಿಗೆ ಸಂಬಂಧವನ್ನೂ ಕಲ್ಪಿಸುತ್ತದೆ. ಮುತ್ತುರಾಯ (ಹನುಮಂತ), ವೀರಭದ್ರ, ಅಂಕನಾಥ, ತಿಮ್ಮಪ್ಪ (ಶ್ರೀನಿವಾಸ), ಬೀರಪ್ಪ, ಬೋರಪ್ಪ (ಬೈರವ), ನರಸಿಂಹ, ಬೊಮ್ಮಲಿಂಗೇಶ್ವರ, ಅರ್ಕೇಶ್ವರ, ಸಿದ್ದರಾಮೇಶ್ವರ ಇತ್ಯಾದಿ ಗಂಡು ದೇವರುಗಳು ಜನಪದರಲ್ಲಿ ಹಾಸುಹೊಕ್ಕಾಗಿದ್ದಾರೆ. ಹಲವೆಡೆ ಕೃಷ್ಣ ಅಥವಾ ಕೊಳಲು ವೇಣುಗೋಪಾಲ ಗುಡಿಗಳೂ ಇವೆ. ಜನಪದರ ದೇವತೆಗಳ ಬಹುತೇಕ ಜಾತ್ರೆಗಳಲ್ಲಿ ಕೊಂಡ ಹಚ್ಚುವುದು, ಕೆಂಡದ ಮೇಲೆ ಹಾಯುವುದು, ಸಿಡಿಯಾಡುವುದು ರೋಮಾಂಚಕಾರಿ ಭಾಗವಾಗಿರುತ್ತದೆ. ಜನಪದರ

ವಾದ್ಯವಿಶೇಷಗಳಾದ ತಮಟೆ, ನಗಾರಿ, ಕೊಂಬು, ಕಹಳೆ ಎಲ್ಲ ದೇವರಿಗೂ ಸಲ್ಲುತ್ತದೆ.

ಈಗ ಯಂತ್ರಬಳಕೆ ಆಗುತ್ತಿದ್ದರೂ ತಮ್ಮ ದುಡಿಮೆಗೆ ಆಧಾರವಾಗಿದ್ದ, ಉಸಿರಾಗಿದ್ದ ರಾಸುಗಳನ್ನು ಪೂಜನೀಯ ದೃಷ್ಟಿಯಿಂದ ಈಗಲೂ ನೋಡಲಾಗುತ್ತಿದೆ. ಗೋವುಗಳು ಇರುವ ಅಥವಾ ಓಡಾಡುವ ಜಾಗದಲ್ಲಿ ಯಾವುದೇ ದೇಗುಲವನ್ನು ಕಟ್ಟಬಹುದೆಂದೂ; ಸಂಜೆ ಗೋಧೂಳಿ ಹೊತ್ತು ಎಂದರೆ ಅದೊಂದು ಪವಿತ್ರವಾದ ಸಮಯ ಎಂಬ ನಂಬಿಕೆಯೂ ಇದೆ. ಅದಕ್ಕಾಗಿಯೇ ಮಾರಮ್ಮನಂತೆ ಬಸವಣ್ಣ ದೇವಾಲಯಗಳನ್ನೂ ವ್ಯಾಪಕವಾಗಿ ಕಾಣಬಹುದು. ಮಳವಳ್ಳಿ ತಾಲ್ಲೂಕಿನ ಪ್ರಕೃತಿ ಮಡಿಲಿನಲ್ಲಿರುವ ಬಸವನ ಬೆಟ್ಟದ ಹೆಬ್ಬೆಟ್ಟು ಬಸವೇಶ್ವರ, ಮದ್ದೂರು ತಾಲ್ಲೂಕಿನ ಚಿಕ್ಕಅಂಕನಹಳ್ಳಿ ಬಯಲಿನಲ್ಲಿರುವ ನಂದಿಬಸವೇಶ್ವರ, ಹೇಮಗಿರಿ ಸ್ಥಳಗಳಲ್ಲಿ ದೊಡ್ಡ ಜಾತ್ರೆಯೇ ಜರುಗುತ್ತದೆ. ಅನೇಕ ಕಡೆ ಉಪ್ಪರಿಗೆಬಸವ ಎಂದು ಬಸವ ಮೂರ್ತಿಯನ್ನು ಎತ್ತರದ (ಉಪ್ಪರಿಗೆ) ಸ್ಥಳದಲ್ಲಿ ಇಟ್ಟು ಭಕ್ತಿಯಿಂದ ಪೂಜಿಸುತ್ತಾರೆ. ಮದ್ದೂರು ತಾಲ್ಲೂಕು ಚಿಕ್ಕಅರಸಿನಕೆರೆ ಮತ್ತು ಕಾರ್ಕಹಳ್ಳಿಯ ದೇವರಿಗೆ ಬಿಟ್ಟ ಜೀವಂತಿಕೆ ಬಸವಗಳನ್ನು ನ್ಯಾಯ ತೀರ್ಮಾನ, ಒಪ್ಪು ತಪ್ಪು ಇನ್ನಿತರ ಶ್ರೇಯೋ ಕಾರ್ಯಗಳಿಗಾಗಿ ಕೋರಿಕೊಳ್ಳುವ ಸಂಪ್ರದಾಯ ಬಳಕೆಯಲ್ಲಿದೆ ಅಥವಾ ನಂಬಿಕೆಯಿದೆ. ಇದೇ ತಾಲ್ಲೂಕು ಗೊಲ್ಲರದೊಡ್ಡಿಗಳಲ್ಲಿ ಮಧ್ಯ ವಯಸ್ಸಿನ ಮಹಿಳೆಯರು ತಮ್ಮ ಎಡಮೊಣಕೈಗೆ ತಾಮ್ರ ಅಥವಾ ಪಂಚಲೋಹದ 'ಕೃಷ್ಣ ಮುದ್ರೆ' ಎಂಬ ಹೆಸರಿನ ಕಪ್ಪವನ್ನು ತೊಡುತ್ತಾರೆ. ಇದರಲ್ಲಿ ಕೃಷ್ಣನ ಕಾಳಿಂಗಮರ್ಧನದ ಮುದ್ರೆ ಇರುತ್ತದೆ. ಈ ಕಪ್ಪತೊಟ್ಟ ಮೇಲೆ ಅವರು ಯೋಗಿಗಳಂತೆ ಬದುಕಬೇಕು. ಸಾತ್ವಿಕ ಜೀವನ ಪಾಲಿಸಬೇಕು. ಈಗ ಈ ಪದ್ಧತಿ ಇಳಿಮುಖವಾಗಿರಬಹುದು. ಆದರೆ ಅದರ ಹಿಂದಿನ ಬದುಕನ್ನು ಅರ್ಥಮಾಡಿಕೊಳ್ಳಬಹುದು. ನಾಗಮಂಗಲ ತಾಲ್ಲೂಕು ಹದ್ದಿನಕಲ್ಲು ಹನುಮಂತರಾಯ ಎಂಬ ಬೆಟ್ಟದಲ್ಲಿ ಮಾನಸಿಕವಾಗಿ ಬಳಲುವ ರೋಗಿಯ ನೆರಳಿಗೆ ಹುಯ್ಯುವ 'ಗಾಳಿಕಲ್ಲು' ಎಂಬ ಸಂಪ್ರದಾಯವನ್ನು ಕಾಣಬಹುದು. ಹಾಗೂ ಮನೋವೈಜ್ಞಾನಿಕವಾಗಿ ವಿಶ್ಲೇಸಬಹುದಾಗಿದೆ. ಮಳವಳ್ಳಿ ಸಮೀಪದಲ್ಲಿರುವ ಮತ್ತಿಮರಗಳ ತೋಪಿನಲ್ಲಿರುವ ಮತ್ತಿತಾಳೇಶ್ವರ ದೇವಾಲಯ ಪ್ರಾಕೃತಿಕವಾಗಿ ಚರ್ಮರೋಗ ನಿವಾರಣಾ ಕೇಂದ್ರವಾಗಿದೆ.

### ಮೈಲಾರಲಿಂಗೇಶ್ವರ :

ಉತ್ತರ ಕರ್ನಾಟಕದಲ್ಲಿ ಪ್ರಚಲಿತದಲ್ಲಿರುವ ಮೈಲಾರಲಿಂಗೇಶ್ವರ ಹೆಸರಿನ

ಗುಡಿಗಳು ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಮತ್ತು ಮೈಲಾರಪಟ್ಟಣದಲ್ಲಿ ಕಾಣಬರುತ್ತವೆ. ಕುದುರೆ ಮೇಲೆ ಕತ್ತಿ ಹಿಡಿದು ಕುಳಿತಿರುವ ಮೈಲಾರ (ಮಲ್ಲಯ್ಯ) ರೂಪದ ಶಿವನನ್ನು ಇವರು ಆರಾಧಿಸುತ್ತಾರೆ. ಈ ಮೈಲಾರ ದೇವನನ್ನು ಖಂಡೋಬ ಹಾಗೂ ಮಾರ್ತಾಂಡ ಎಂದೂ ಕರೆಯುವುದುಂಟು. ಜತೆಗೆ ಮೈಲಾರನ ಪತ್ನಿ ಮಾಳಚಿ (ಮಾಳವ್ವ) ಯನ್ನು ಆರಾಧಿಸುತ್ತಾರೆ. ಶಿವನ ಅವತಾರವೆಂದು ಮೈಲಾರಲಿಂಗೇಶ್ವರನ ಮಹಿಮೆಯನ್ನು ಪುರಾಣರೂಪದಲ್ಲಿ ಬಣ್ಣಿಸುವ ಗ್ರಂಥಗಳೂ ರಚನೆಯಾಗಿವೆ. ಪ್ರತಿವರ್ಷ ಕಾಮನ ಹುಣ್ಣಿಮೆ ಹಿಂದೆ ಮುಂದೆ ಬರುವ ಮಂಗಳವಾರವೂ ಸೇರಿದಂತೆ ಮೈಲಾರಪಟ್ಟಣದಲ್ಲಿ ಸುಮಾರು ಐದಾರು ದಿನಗಳ ಜಾತ್ರೆ ಜರುಗುತ್ತದೆ.

**ಸಿದ್ಧ ಗುಹೆಗಳು :**

ಮಂಡ್ಯ ತಾಲ್ಲೂಕು ಚಂದಾಗಲು, ಕುರಿಕೊಪ್ಪಲು ಭಾಗದಲ್ಲಿರುವ ಗವಿಸಿದ್ಧೇಶ್ವರ ಅಥವಾ ಸಿದ್ಧೇದೇವರ ಬೆಟ್ಟದಲ್ಲಿ ಸಿದ್ಧರು ಸಿದ್ಧಿ ಪಡೆಯುತ್ತಿದ್ದ ಅಥವಾ ತಪಗೈಯುತ್ತಿದ್ದ ಗುಹೆಗಳಿವೆ ಎಂಬ ನಂಬಿಕೆಯೊಂದಿಗೆ ಕುರುಹೂಗಳೂ ಕಾಣಿಸುತ್ತವೆ. ಗುಹೆಯ ಪ್ರವೇಶದಲ್ಲಿಯೇ ಆಕರ್ಷಕವಾದ ಒಂದು ಲಿಂಗವಿದೆ. ಲಿಂಗವನ್ನು ಸಲೀಸಾಗಿ ಮುಟ್ಟುವಂತಿಲ್ಲ. ಗುಹೆಯ ಬಾಯಿಗೂ ಮತ್ತು ಲಿಂಗಕ್ಕೂ ನಡುವೆ ಒಂದಾಳುದ್ದದ ಕಂದಕವಿದೆ. ಕಂದಕದಲ್ಲಿ ಅತ್ತ-ಇತ್ತ ಇಣುಕಿದ ಕಲ್ಲುಗಳ ಮೇಲೆ ಎಚ್ಚರಿಕೆಯಿಂದ ಕಾಲು ಹಾಕಿ ಲಿಂಗದ ಬಳಿಗೆ ಹೋಗಬೇಕಾಗುತ್ತದೆ. ಕಂದಕದ ಕೆಳಗಿನ ತಿರುವಿನಲ್ಲಿ ಗುಹೆ ಮಾರ್ಗವಿದೆ. ಒಳಗೆ ಹೋದಂತೆ ಹಲವಾರು ಪ್ರತ್ಯೇಕ ಮಂಟಪಗಳಿವೆ ಎಂಬ ಪ್ರತೀತಿ ಇದೆ. ಹಿಂದೆ ಎಂದೋ ಗುಹೆ ಅಥವಾ ಸುರಂಗದೊಳಕ್ಕೆ ಒಂದು ಹುಂಜ ಬಿಟ್ಟು ನೋಡಿದರಂತೆ. ಅದು ಮೈಲುಗಟ್ಟಲೆ ನಡೆದು ಮತ್ತೊಂದು ತುದಿಯಲ್ಲಿ ಕಾಣಿಸಿಕೊಂಡಿತಂತೆ. ಆ ಸ್ಥಳದ ಊರನ್ನು ಹುಂಜನಕೆರೆ (ಶ್ರೀರಂಗಪಟ್ಟಣ ತಾಲ್ಲೂಕು) ಎಂದು ಹೆಸರಿಸಲಾಗಿದೆ.

**ರಾವಳೇಶ್ವರ ಗುಡಿಗಳು :**

ರಾವಳೇಶ್ವರನ ಗುಡಿಗಳು ನಿಜಕ್ಕೂ ರಾವಣೇಶ್ವರನದೇ? ಎಂಬ ವಿಚಾರವನ್ನು ವಿಶ್ಲೇಷಿಸಬೇಕಾಗಿದೆ. ರಾವಳೇಶ್ವರನ ನೆಲೆಯಲ್ಲಿನ ಶಿಲ್ಪಗಳನ್ನು ಮೌಖಿಕ ಶಾಸನದಂತೆ ಪರಿಗಣಿಸಿ ಶಿಲ್ಪಕಥಾ ಆಧಾರದ ಮೇಲೆ ಜಾನಪದ ಇತಿಹಾಸವನ್ನು ರಚಿಸಬಹುದಾಗಿದೆ. ಸಂಶೋಧನಾ ದೃಷ್ಟಿಯಿಂದ ನೋಡಿದಾಗ ರಾವಳೇಶ್ವರನ ಸಾಂಸ್ಕೃತಿಕ ನೆಲೆ ಗಂಗ ಮತ್ತು ಚೋಳ ರಾಜರ ಕಾಲದಲ್ಲಿ ಪ್ರಾದೇಶಿಕ ಸಂಸ್ಕೃತಿಯಾಗಿ ಬೆಳೆದಿರುವಂತೆ ಕಾಣಬರುತ್ತದೆ. ಹಳೇ ಮೈಸೂರು ವ್ಯಾಪ್ತಿಯ

ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಗಳಲ್ಲಿ ಹಲವು ತಲೆಯ ರಾವಣನ ಶಿಲ್ಪಗಳು ಕಂಡು ಬರುತ್ತವೆ. ಮಂಡ್ಯ ಜಿಲ್ಲೆಯಲ್ಲಿ ಮಳವಳ್ಳಿ ತಾಲ್ಲೂಕಿನಲ್ಲಿ ಇವು ಹೆಚ್ಚಿನ ಪ್ರಾಧಾನ್ಯತೆ ಪಡೆದುಕೊಂಡಿದೆ.

ಚತುರ್ಭುಜಧಾರಿಯಾಗಿದ್ದು ಭವ್ಯ ಕಿರೀಟ ಧಾರಣೆಯೊಂದಿಗೆ ಬಲಭಾಗದ ಕೈಗಳಲ್ಲಿ ಚಕ್ರ, ಖಡ್ಗ ಮತ್ತು ಎಡಭಾಗದ ಕೈಗಳಲ್ಲಿ ಬಿಲ್ಲು, ಗದೆ (ಕೆಲವೆಡೆ ಗುರಾಣಿ) ಹಿಡಿದ ಸ್ಥಾನಕ ಭಂಗಿಯ ರಾವಳೇಶ್ವರ ಶಿಲ್ಪ ಮಳವಳ್ಳಿಗೆ ಸಮೀಪದಲ್ಲಿರುವ ನಿಡಘಟ್ಟದ ಮಟ್ಮನೆಯಲ್ಲಿದೆ. ಪಂಚಲೋಹದ ಈ ಉತ್ಸವ ಮೂರ್ತಿ ಗಮನಸೆಳೆಯುತ್ತದೆ. ಉತ್ಸವದಲ್ಲಿ ಕುದುರೆ ಸವಾರಿಯೊಂದಿಗೆ ತೆರಳುವ ಮೂರ್ತಿಯನ್ನು ರಾವಳೇಶ್ವರ ಎಂದು ಕರೆಯುತ್ತಾರೆ. ಆದರೆ ರಾವಣೇಶ್ವರ ಎಂದು ಅವರು ಒಪ್ಪುವುದಿಲ್ಲ. ಮೂರ್ತಿಯ ಹಣೆಯಲ್ಲಿರುವ ವಿಭೂತಿಪಟ್ಟೆ, ಮೀಸೆ, ಮುಖಲಕ್ಷಣ ಮಾತ್ರ ರಾವಣನಂತೆಯೇ ಕಂಡುಬರುತ್ತದೆ. (ಹಿಂದೆ ಊರಲ್ಲಿ ಉತ್ಸವ ಹೊರಟಾಗ ಈ ಒಕ್ಕಲಿನವರು ಬಿಟ್ಟು ಉಳಿದವರು ಮನೆಬಾಗಿಲು ಮುಚ್ಚಿಕೊಳ್ಳುತ್ತಿದ್ದರಂತೆ.) ಅಕ್ಕಪಕ್ಕದಲ್ಲಿ ತಾವರೆ ಹೂ ಹಿಡಿದು ಸೌಮ್ಯ ಭಂಗಿಯಲ್ಲಿ ದೇವೀರಮ್ಮ ಮತ್ತು ಕೆಂಪೀರಮ್ಮ ಎಂಬ ಪತ್ನಿಯರು ಇದ್ದಾರೆ. ಕೆಂಪೀರಮ್ಮನ ಕಂಕುಳಲ್ಲಿ ಒಂದು ಮಗು ಇದೆ. 'ರಾವುತ' ಕುದುರೆ ಸವಾರ ಎಂಬುದರಿಂದ ಅಥವಾ ಗಾಳಿ–ಗರ ಬಿಡಿಸುವ 'ರಾವು' ಎಂಬ ಹೆಸರಿನಿಂದ ರಾವಳ ಎಂಬ ಪದಪ್ರಯೋಗ ಬಂದಿದೆಯೋ ಎಂದು ನೋಡಬೇಕಾಗಿದೆ. ಅಥವಾ ವೀರನೊಬ್ಬನ (ಚೋಳ) ಪ್ರತಿನಿಧಿಯೋ ಎಂಬುದೂ ಸಹ ಇದರಲ್ಲಿ ಅಡಗಿರುವಂತಿದೆ. ಗುಡಿಯ ಮುಖ್ಯಸ್ಥರೊಬ್ಬರು ಹೇಳುವಂತೆ ಹಿಂದಿನ ಅರ್ಚಕರೊಬ್ಬರು 'ಮಹಾಶಿವಭಕ್ತ ಲಂಕಾಧಿಪತಿ ರಾವಣೇಶ್ವರ' ಎಂದೇ ಹೆಸರಿಸಿ ಪೂಜಿಸುತ್ತಿದ್ದರಂತೆ!

ಇದೇ ಊರಿನ ಅರ್ಚಕರು ಪೂಜಿಸುವ ತೋಪಿನ ಗುಡಿಯಲ್ಲಿ ಚೋಳೇನಹಳ್ಳಿ ಎಲ್ಲೆಯಲ್ಲಿರುವ ರಾವಳೇಶ್ವರ ಶಿಲ್ಪವನ್ನು ಕಗ್ಗಲ್ಲನ್ನು ಬಳಸಿ ಉಬ್ಬು ರಚನೆಯಲ್ಲಿ ಕೆತ್ತಲಾಗಿದೆ. ಇಲ್ಲಿಯೂ ಸಹ ಊರಿನ ಮಟ್ಮನೆಯಲ್ಲಿರುವಂತೆಯೇ ಶಸ್ತ್ರಧಾರಿಯಾಗಿ ಯುದ್ಧಕ್ಕೆ ಹೊರಟಿರುವಂತಿದೆ. ವೇಷಭೂಷಣಗಳು ರಾಜನ ಪರಾಕ್ರಮದಂತೆ ಹೊಂದಿಕೊಂಡಿವೆ. ಇಲ್ಲಿ ವಿಶೇಷವಾಗಿ ಶಿಖೆ ಗಂಟುಹಾಕಿದ ತುರುಬಿನಂತಿದೆ. ಬಲಗಡೆ ಚಾಮರಧಾರಿಯು ಛತ್ರಿಯನ್ನು ಹಿಡಿದಿದ್ದಾನೆ. ಅಕ್ಕಪಕ್ಕದಲ್ಲಿ ಇಬ್ಬರು ಪತ್ನಿಯರಿದ್ದು ಇಲ್ಲಿ ರಾಕಾಸಮ್ಮ ಎಂದು ಕರೆಯಲ್ಪಡುವ ಪತ್ನಿಯ ಕಂಕುಳಲ್ಲಿ ಮಗು ಇದ್ದು, ಮತ್ತೊಬ್ಬಳು ಗಂಗಮಾಳಮ್ಮನ ಕೈಯಲ್ಲಿ ಚೊಂಬು ಇದೆ. ಸುತ್ತಲ ಮಾಳದಲ್ಲಿ 'ಗಾಳಿಗರ' ಬಿಡಿಸಲು ಹುಯ್ಯುವ ಕಲ್ಲುಗಳೊಂದಿಗೆ ವೀರಗಲ್ಲುಗಳೂ

ಇವೆ. ಚೋಳೇನಹಳ್ಳಿ ವ್ಯಾಪ್ತಿಯಲ್ಲಿರುವುದರಿಂದ ಚೋಳವೀರನೊಬ್ಬನ 'ವೀರಗಲ್ಲು' ಪ್ರಮುಖಸ್ಥಾನ ಪಡೆದು ಕೊಂಡಿರಬಹುದು.

ಮಳವಳ್ಳಿ-ಪೂರಿಗಾಲಿ ರಸ್ತೆಯಲ್ಲಿರುವ ರಾವಣಿಯಲ್ಲಿ ಕೆಂಡಗಣ್ಣೇಶ್ವರ ಗುಡಿಯ ಆವರಣದಲ್ಲಿ ಸತಿದಿಬ್ಬದ ಮೇಲಿರುವ ಗಂಗ-ಚೋಳರ ಕಾಲದ ವೀರ ಮತ್ತು ಮಾಸ್ತಿಕಲ್ಲುಗಳ ಸಮೂಹದಲ್ಲಿ ಕಾಣಬರುವ ಹತ್ತು ತಲೆಯ ರಾವಣ ವೀರನಂತೆ ನಿಂತು ಹೋರಾಟ ಮಾಡುವಂತಿದೆ. ಎದುರಾಳಿ ಖಡ್ಗ ಹಿಡಿದು ನಿಂತಂತಿದೆ. ಬಲಗಡೆಗೆ ಒಬ್ಬ ಮಹಿಳೆಯೂ ಕೂಡ ಹೋರಾಟಕ್ಕೆ ಸಿದ್ಧವಿರುವಂತೆ ಕಾಣುತ್ತದೆ. ರಾವಣನ ಎಡಭಾಗದಲ್ಲಿ ರಾಕಾಸಮ್ಮ ಮಗುವೊಂದನ್ನು ಎತ್ತುಕೊಂಡು ಕೈಯಲ್ಲಿ ಕತ್ತಿ ಹಿಡಿದಿರುವಂತಿದೆ. (ಮತ್ತೊಂದು ಕಲ್ಲಿನಲ್ಲಿ ಹೆಂಗಸೊಬ್ಬಳು ತನ್ನ ಮಗುವನ್ನು ಆತುಕೊಂಡು ಕುದುರೆ ಮೇಲೆ ಹೊರಟಂತಿದೆ.) ಈ ಶಿಲ್ಪ ಲಕ್ಷಣದಲ್ಲಿ ಕಾಣಬರುವ ವೀರ ರಾವಣನನ್ನು ಎದುರಿಸುವಷ್ಟು ಧೈರ್ಯವಂಥನೆಂಬ ಅಭಿಪ್ರಾಯ ವ್ಯಕ್ತವಾಗುತ್ತದೆ. ಈ ಬಗ್ಗೆ ಇನ್ನಷ್ಟು ಸಂಶೋಧಿಸುವ ಅಗತ್ಯವಿದೆ. ಇಲ್ಲಿಯೇ ಕದಗಾರಪ್ಪ ಎಂಬ ವೀರಗಲ್ಲಿನ ಗುಡಿಯೊಂದಿದೆ.

ಮಳವಳ್ಳಿ ತಾಲ್ಲೂಕು ಬೆಳಕವಾಡಿಗೆ ಸಮೀಪವಿರುವ ಹೊನಗಾನಹಳ್ಳಿ -ಯಲ್ಲಿರುವ ರಾವಳೇಶ್ವರ ಶಿಲ್ಪವು ಎರಡೂವರೆ ಅಡಿ ಎತ್ತರ, ಒಂದೂವರೆ ಅಡಿ ಅಗಲವಿದೆ. ಗುಡಿಯಲ್ಲಿರುವ ಈ ಶಿಲ್ಪವನ್ನು ಊರಿನ ಜನ 'ಮಗ' ಎಂದು ಹೇಳುತ್ತಾರೆ. ಮತ್ತೊಂದು ಬಿಡಿಯಾಗಿರುವ ಹತ್ತು ತಲೆಯ ರಾವಣೇಶ್ವರ ಶಿಲ್ಪವನ್ನು 'ತಂದೆ' ಎನ್ನುತ್ತಾರೆ. ರಾವಳೇಶ್ವರನ ಶಿಲ್ಪ ಮೂಲದಲ್ಲಿ ನಿಡಘಟ್ಟದ ಚತುರ್ಬಾಹು ಶಿಲ್ಪದಂತೆಯೇ ಇದೆ. ಆದರೆ ರಾವಣನ ಶಿಲ್ಪದಲ್ಲಿರುವ ಇತರೆ ಪರಿವಾರವನ್ನು ಗಮನಿಸಿದಾಗ ಈ ರಾವಣನಿಗೂ ರಾಮಾಯಣಕ್ಕೂ ಸಂಬಂಧ ಕಾಣುವುದಿಲ್ಲ. ರಾವಳೇಶ್ವರ ರಾಜನಾಗಿ ಮೆರೆದು ದೈವತ್ವಕ್ಕೆ ಏರಿದ್ದಾನೆ. ಒಟ್ಟಾರೆ ರಾವಳೇಶ್ವರ ಕ್ರಿ.ಶ. ೧೦ನೇ ಶತಮಾನದ ರಾಜ ಅಥವಾ ವೀರ ಎಂದೇ ಪರಿಗಣಿಸಬಹುದಾಗಿದೆ. ರಾವಣ, ರಾಕಾಸಮ್ಮ, ಗಂಗಮಾಳಮ್ಮ ಈ ಕಥೆಗೆ ಪೋಷಕವಾಗಿ ನಿಂತಿವೆ. ಕೆಲವೆಡೆ ರಾವಣನ ಶಿಲ್ಪಗಳಲ್ಲಿ ಮೂರು ತಲೆ, ಐದು ತಲೆಗಳೂ ಕಾಣಬರುತ್ತವೆ. ಇವೆಲ್ಲವೂ ಆಗಿನ ಶಿಲ್ಪಿಯ ಕಲ್ಪನೆಯ ಭಾವನೆಯಾಗಿದ್ದು ಅಂದಿನ ಕಥೆಯನ್ನು ಹೇಳಲು ಶಿಲ್ಪವನ್ನು ರೂಪಿಸಿದ್ದಾನೆ ಎನ್ನಬಹುದು.

ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆ ಗ್ರಾಮದಲ್ಲಿ ಗಂಗೆಮತಸ್ಥರ ಎರಡು ಗುಡಿಗಳಲ್ಲಿರುವ ವೀರಗಲ್ಲುಗಳಲ್ಲಿ ಒಂದು ಹುಲಿಬೇಟೆಯ ದೃಶ್ಯವಾಗಿದ್ದು ಮತ್ತೊಂದರಲ್ಲಿ ಮೂರು ಹಂತದ ವೀರಗಲ್ಲಿನಲ್ಲಿ ರಾವಣ ಮತ್ತು ವೀರನೊಬ್ಬನ

ಹೋರಾಟದ ದೃಶ್ಯವಿದೆ. ರಾವಣಿಯಲ್ಲಿರುವ ಇಂಥದೇ ವೀರಗಲ್ಲು ಗಂಗೆಮತಸ್ಥರಿಗೆ ಸೇರಿದೆ. ಅರಕೆರೆ ಸಮೀಪದ ಕೊತ್ತತ್ತಿ, ಮಳವಳ್ಳಿ ತಾಲ್ಲೂಕಿನ ಕಲ್ಕುಣಿ, ದೇಶವಳ್ಳಿ, ಸರಗೂರು ಮುಂತಾದ ಕಡೆ ಮೂರು ಇಲ್ಲವೇ ಹತ್ತು ತಲೆಯ ರಾವಣನ ಶಿಲ್ಪ ಕಂಡುಬರುತ್ತದೆ. ಹೀಗೆ ರಾವಣ ಅಥವಾ ರಾವಳೇಶ್ವರನ ಶಿಲ್ಪಗಳು ಮದ್ದೂರು ತಾಲ್ಲೂಕಿನ ಕಾಡುಕೊತ್ತನಹಳ್ಳಿ (ಮಳವಳ್ಳಿ ಗಡಿ), ನಗರಕೆರೆ ನೀಲಕಂಠನಹಳ್ಳಿ ಇತ್ಯಾದಿ ಸ್ಥಳಗಳಲ್ಲಿ ಕಂಡು ಬರುತ್ತದೆ.

**ಇತರೆ ಪ್ರಾಕಾರಗಳು :**

ಪುರಾಣ ಶಿಷ್ಟಸಾಹಿತ್ಯವನ್ನು ಜನಪದರಿಗೆ ತಲುಪಿಸುವ ನಿಟ್ಟಿನಲ್ಲಿ ಹುಟ್ಟಿಕೊಂಡ 'ಭಾಗವಂತಿಕೆ' ಎಂಬ ಮೇಳದ ಭೂಮಿಕೆ ಮೇಲುಕೋಟೆ ಎಂದು ಹೇಳಲಾಗುತ್ತದೆ. ಈ ಮೇಳ ರಾಮಾಯಣ, ಭಾರತ, ಭಾಗವತ ಮುಖ್ಯವಾಗಿ ವೈಷ್ಣವ ಸಂಪ್ರದಾಯದ ಹಾಡು ಮತ್ತು ಕುಣಿತಗಳಿಂದ ಜನಸಾಮಾನ್ಯರನ್ನು ರಂಜಿಸಿ ಆಧ್ಯಾತ್ಮ ಜ್ಞಾನ ಕೊಡುವಂತಿದೆ. ಶೈವಧರ್ಮದ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವ ಕಾವ್ಯ ಸಂಪ್ರದಾಯದ ಕಂಸಾಳೆ, ತತ್ತ್ವಪದ, ನೀಲಗಾರರು ಹೀಗೆ ಇನ್ನಿತರ ಧಾರ್ಮಿಕ ಗಾಯಕರನ್ನೂ ಸಹ ಕಾಣಬಹುದಾಗಿದೆ. ಮಲೆಯ ಮಹದೇಶ್ವರ, ಮಂಟೇಸ್ವಾಮಿ ಕಾವ್ಯವನ್ನು ಹಾಡುವುದರಲ್ಲಿ ಇವರು ಪರಿಣಿತರು. ಇನ್ನು ವೀರಭದ್ರನ ಕುಣಿತವಂತೂ ಶಿವನ ಸ್ತುತಿ ಮತ್ತು ಮಹಿಮೆಯಲ್ಲಿ ಕೊಂಡಾಡುತ್ತದೆ. ಹಿಂದೊಮ್ಮೆ ಪುರಾಣ ಪುಣ್ಯ ಕಥೆಗಳನ್ನು ಹೇಳುತ್ತಿದ್ದ ಸೂತ್ರದಬೊಂಬೆ, ತೊಗಲುಬೊಂಬೆ ಆಟಗಳು ಹಿಂದಕ್ಕೆ ಸರಿದಿವೆ. ಇದ್ದುದ್ದರಲ್ಲಿ ಸೋಮನ ಕುಣಿತ ಮತ್ತು ಪೂಜೆ ಕುಣಿತಗಳು ಜಿಲ್ಲೆಯಲ್ಲಿ ವ್ಯಾಪಕವಾಗಿ ಕಾಣಬರುತ್ತವೆ. 'ಪೂಜೆ' ಎಂಬುದು ಒಂದು ಅಲಂಕೃತ ಬಿದಿರು ತಳಿ. ಇದು ಸಾಮಾನ್ಯವಾಗಿ ಐದು ಅಡಿ ಉದ್ದ, ನಾಲ್ಕು ಅಡಿ ಅಗಲವಿರುತ್ತದೆ. ಇದರ ಮಧ್ಯಭಾಗದಲ್ಲಿ ದೇವರ ಮುಖವಾಡವನ್ನು ಕಟ್ಟಿ, ಎರಡೂ ಕಡೆಯೂ ತಳಿ ಉದ್ದಕ್ಕೆ ಬಣ್ಣದ ಸೀರೆಗಳನ್ನು ಇಳಿಬಿಟ್ಟು, ಆಭರಣ ಮತ್ತು ಹೂವಿನ ಹಾರಗಳಿಂದ ಅಲಂಕರಿಸುತ್ತಾರೆ. ತಳಿಯ ಮೇಲುಭಾಗ ದೇವಾಲಯದ ಕಳಸಗಳಂತೆ ಬೆಸಸಂಖ್ಯೆಯಲ್ಲಿ ಮೂರು, ಐದು, ಏಳು ಅಥವಾ ಒಂಬತ್ತು ಕಳಸಗಳನ್ನು ಕೂರಿಸುವಂತೆ ಮಾಡಲಾಗಿರುತ್ತದೆ. ಇಲ್ಲಿ ಆಭರಣವೆಂದರೆ ಅದರಲ್ಲೂ ದೇವಿಯ ವಿಗ್ರಹವಾದರೆ ಮುಖವಾಡದ ಅಕ್ಕಪಕ್ಕಕ್ಕೆ ಹರಕೆ ಹೊತ್ತು ಸಲ್ಲಿಸಿದ ಕಡಗ, ಡಾಬು, ಕಾಲುಮುರಿ, ಹಸ್ತ, ಓಲೆ, ಜೋಮಾಲೆ ಮುಂತಾದ ಜನಪದರ ಒಡವೆಗಳನ್ನು ಒಪ್ಪವಾಗಿ ಕಟ್ಟುತ್ತಾರೆ. ತಳಿಯ ಹಿಂಬದಿಗೆ ಬಣ್ಣದ 'ಬೆನ್‌ಬಟ್ಟೆ' ಕಟ್ಟಿ ಇಳಿಬಿಟ್ಟಿರುತ್ತಾರೆ. ಅದನ್ನು ತಳಭಾಗದ ಗಿಂಡಿಯ ಆಧಾರದಿಂದ ಹೊತ್ತು ಕುಣಿಯುವಾಗ, ಸುತ್ತುವಾಗ

ಬೆನ್‌ಬಟ್ಟೆ ಹಾರಿಹಾರಿ ಆಕರ್ಷಕವಾಗಿಯೂ ಮನೋರಂಜಕವಾಗಿಯೂ ಕಾಣಬರುತ್ತದೆ. ಈ ಪೂಜೆಗಳ ಬಗ್ಗೆ ಅಧ್ಯಯನ ಮಾಡಲು ಅಥವಾ ನೋಡುವ ಆಸಕ್ತರಿಗೆ ಉಗಾದಿ ಹಬ್ಬದ ಮುಂಜಾನೆ ಅರಕೆರೆ ಬಳಿ ಕಾವೇರಿ ನದಿ ದಂಡೆಯಲ್ಲಿರುವ ಕಾವೇರಿ ಬೋರೇದೇವರ (ಇಲ್ಲಿ ಪ್ರಾಚೀನ ಯೋಗಾನರಸಿಂಹ ಗುಡಿಯೂ ಇದೆ) ಹಸಿರು ವನದಲ್ಲಿ ಅಸಂಖ್ಯಾತ ಪೂಜೆಗಳು ವಿವಿಧ ಸ್ಥಳಗಳಿಂದ ಬರುವುದಲ್ಲದೆ; ನಂದಿಕಂಬದಿಂದ ಹಿಡಿದು ಹುಲಿವಾಹನದವರೆಗೆ ಇನ್ನೂ ಹಲವು ಜನಪದ ಪ್ರಕಾರಗಳು ಮೇಳೈಸುತ್ತವೆ. ಪೂಜೆಯೊಂದಿಗೆ ಆಯಾ ದೇವರ ಅಥವಾ ದೇವತೆಯ ಮೇಲಿನ ಹಾಡುಗಳು, ಕೋಲಾಟದ ಪದಗಳೂ ಕೇಳಿಬರುತ್ತವೆ. ಅವರ ಒಂದೊಂದು ನುಡಿಯಲ್ಲೂ ವಿಶ್ವಕ್ಷೇಮದ ಬಯಕೆ ತುಂಬಿದೆ.

ಊರಿನ ಮಾರಿಗುಡಿಗಳಲ್ಲಿರುವ ಬನ್ನಿ, ಮತ್ತಿ, ಶ್ರೀಗಂಧ ಅಥವಾ ಅಂಕೋಲೆ ಮರದಲ್ಲಿ ಮಾಡಿದ ಆಕಾರವಿಲ್ಲದ ಮಾರಮ್ಮ ವಿಗ್ರಹ ಇಂದಿಗೂ ಪ್ರಾಚೀನ ದ್ರಾವಿಡ ಘಟಕ ಎಂದೇ ಪರಿಣಿತಗೊಂಡಿದೆ. ಸಾಮಾನ್ಯವಾಗಿ ಹಳ್ಳಿಗಳಲ್ಲಿ 'ರಂಗ' ಎಂಬ ವಿಶಾಲ ಸ್ಥಳವಿರುತ್ತದೆ. ಇದು ಹಳ್ಳಿಗೆ ಹೃದಯಭಾಗವಿದ್ದಂತೆ. ಇದರ ಆಸುಪಾಸಿನಲ್ಲಿ ಗುಡಿಗಳಿರುತ್ತವೆ. ಜನ ಈ ರಂಗ ಪ್ರದೇಶವನ್ನು ಹಿಂದಿನಿಂದಲೂ ಭಕ್ತಿಭಾವದಿಂದ ಕಾಣುತ್ತಾ ಬಂದಿದ್ದಾರೆ. ಹಬ್ಬಹರಿದಿನ, ಜಾತ್ರೆ ಉತ್ಸವಗಳಲ್ಲಿ ಜನ ಇಲ್ಲಿ ನೆರೆಯುತ್ತಾರೆ. 'ರಂಗದ ಕುಣಿತ' ದಲ್ಲಿ ಕುಣಿತದವರೊಂದಿಗೆ ನೋಡುಗರೂ ಸಹ ಹರ್ಷಗೊಳ್ಳುತ್ತಾರೆ. ತಮ್ಮ ಯಾವುದೇ ಸಮಸ್ಯೆ, ಭಿನ್ನಾಭಿಪ್ರಾಯ ಬಂದರೂ ಇಲ್ಲಿ ಬಗೆಹರಿಸಿಕೊಳ್ಳುವ ಅವಕಾಶವಿರುತ್ತದೆ. ಹಿಂದೆ ಅದಕ್ಕೆಂದೇ ಮಾರಿಗುಡಿಯಲ್ಲಿ 'ಮಾರಿ ಛಾವಡಿ' ಎಂಬ ಜಗಲಿ ಮೀಸಲಾಗಿತ್ತು. ಇವತ್ತಿನ ಕೋರ್ಟು, ಕಛೇರಿ ಕೆಲಸಗಳು ಅಂದು ಗುಡಿಯಲ್ಲಿಯೇ ಆಗುತ್ತಿದ್ದವು. ದೇವರ ಹೆಸರಿನಲ್ಲಿ ದೇವರ ಕಾಡು, ಬೆಟ್ಟಗುಡ್ಡ, ನದಿ, ಸರೋವರಗಳು ಸಂರಕ್ಷಿತವಾಗಿರುತ್ತಿದ್ದವು.

ಭಾರತದ ಇನ್ನಿತರ ಭಾಗಗಳಲ್ಲಿ ಕಾಣುವಂತೆ ಮಂಡ್ಯ ಜಿಲ್ಲೆಯ ಬಹುತೇಕ ಶಾಸನಗಳಲ್ಲಿಯೂ ದೇವಾಲಯ, ಬಸದಿಗಳ ನಿರ್ಮಾಣದ ಜೊತೆಯಲ್ಲಿಯೇ ಕೆರೆ ಕಟ್ಟೆ, ಕಲ್ಯಾಣಿ ಹೀಗೆ ನೀರಾವರಿ ಯೋಜನೆಗಳು ಜಾರಿಗೊಂಡಿರುವುದನ್ನು ಕಾಣಬಹುದಾಗಿದೆ. ಇಂಥ ಹಲವಾರು ಸಾರ್ವಜನಿಕ ಸ್ವತ್ತುಗಳನ್ನು ನಾಶಪಡಿಸಿದರೆ ಅಥವಾ ಅತಿಕ್ರಮಿಸಿದರೆ ಅಂಥವರಿಗೆ ತಮ್ಮ ಮಾತಾಪಿತೃಗಳನ್ನು ವಾರಣಾಸಿಯಲ್ಲಿ ವಧಿಸಿದ ಪಾಪ, ಸೋಮಸೂರ್ಯನ ಗ್ರಹಣದಲ್ಲಿ ಕಪಿಲೆ (ಹಸು)ಯನ್ನು ಕೊಂದ ಪಾಪ, ಗುರುದ್ರೋಹ ಮಾಡಿದ ಪಾಪ, ಬ್ರಹ್ಮಹತ್ಯೆ ಮಾಡಿದ ಪಾಪ, ಶಿಶುಹತ್ಯೆ ಮಾಡಿದ ಪಾಪ ಹೀಗೆ ಪಂಚಮಹಾಪಾಪಗಳನ್ನು ಸೂಚಿಸಿ, ಸಾವಿನ ನಂತರವೂ

ಸಹಸ್ರವರ್ಷಗಳ ಕಾಲ ಕ್ರಿಮಿ, ಕೀಟ, ವಿಷಜಂತುಗಳಾಗಿ ಜನ್ಮತಾಳುವ ದುರ್ದೆಶೆ ಪ್ರಾಪ್ತವಾಗುತ್ತದೆ ಎಂದು ಶಾಸನಗಳಲ್ಲಿ ಎಚ್ಚರಿಸಲಾಗಿದೆ. ಒಂದು ಮಂಗಳಕಾರ್ಯವನ್ನು ಹಾಳುಮಾಡಬಾರದು ಎಂಬುದೇ ಇದರ ಮೂಲ ಉದ್ದೇಶವಾಗಿದೆ. ಕೆರೆಕಟ್ಟೆ, ಗೋಮಾಳ, ಗುಂಪು ತೋಪುಗಳ ಸಂರಕ್ಷಣೆಯಲ್ಲಿ ಕೌಟಿಲ್ಯನ ಅರ್ಥಶಾಸ್ತ್ರವೂ ಅಡಕವಾಗಿದೆ. ಇಂದು ಅವುಗಳ ಸಂರಕ್ಷಣೆ ಮತ್ತು ಮಾಲಿನ್ಯದ ಬಗ್ಗೆ ನಾವು ಆತ್ಮಾವಲೋಕನ ಮಾಡಿಕೊಳ್ಳುವ ಪರಿಸ್ಥಿತಿ ಎದುರಾಗಿದೆ.


ಕಲಾ ಸೌಂದರ್ಯದ ವೈದಿಕ ದೇವಾಲಯಗಳು ಒಂದು ಅಧ್ಯಾಯವಾದರೆ, ಜನಪದರ ಗುಡಿಗಳ ನಂಬಿಕೆ, ಆಚರಣೆಗಳೇ ಮತ್ತೊಂದು ಅಧ್ಯಾಯವಾಗುತ್ತದೆ. ಒಟ್ಟಾರೆ ಭಾರತೀಯ ಸಂಸ್ಕೃತಿ, ಸಾಹಿತ್ಯ, ಸಂಗೀತ, ಕಲೆ, ಪರಂಪರೆ, ನಂಬಿಕೆ ಎರಡರಲ್ಲೂ ರೋಚಕವಾಗಿ ಒಡಮೂಡಿವೆ. **'ಆನೋ ಭದ್ರೋ ಕೃತವೋಯಂತು ವಿಶ್ವತಃ' "ಉದಾತ್ತ ಆಲೋಚನೆಗಳು ವಿಶ್ವದ ಎಲ್ಲೆಡೆಯಿಂದಲೂ ಬರಲಿ"** ಎಂಬ ಉಪನಿಷತ್ತಿನ ಸೂಕ್ತಿ ಸಾರ್ವಕಾಲಿಕ ವಾದದ್ದು. ಇಷ್ಟೆಲ್ಲಾ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆಯ ದೇವಾಲಯಗಳ ಸಮೀಕ್ಷೆ ಎಂದಾಗ ಅದರಲ್ಲಿ ಬರುವ ವಾಸ್ತುಶಿಲ್ಪ, ಮೂರ್ತಿಶಿಲ್ಪ ಇನ್ನಿತರೆ ವಿಚಾರಗಳ ಬಗ್ಗೆ ಹೇಳಿರುವುದು ಸಮುದ್ರದ ಒಂದು ಹನಿನೀರು ಮಾತ್ರ ಎಂದೆನಿಸುತ್ತದೆ. ಇದು ವಿಶಾಲ ಭಾರತೀಯ ಸಂಸ್ಕೃತಿಯ ಬೇರು. ಇವತ್ತಿನ ನಗರೀಕರಣ, ಜಾಗತೀಕರಣ, ನಾಗಾಲೋಟದ ಯಾಂತ್ರೀಕರಣದ ತ್ರಿಶಂಕು ಸ್ಥಿತಿಯಲ್ಲಿಯೂ ನಮ್ಮ ಬುದ್ಧಿ ನಮ್ಮ ಕೈಯಲ್ಲಿದ್ದರೆ ನಮಗೂ ಕ್ಷೇಮ, ದೇಶಕ್ಕೂ ಕ್ಷೇಮ.

**ಸತ್ಯಂ ಶಿವಂ ಸುಂದರಂ**


* * * *




ಪೂಜೆ ಕುಣಿತ.



ಬಲರಾಮ(ಮೇಣಿ) ಕಲ್ಲು.



ಶಿಲ್ಪ ವಿಸ್ಮಯ. ಬಸರಾಳು.




ಮಧ್ಯರಂಗ. ಶಿವಸಮುದ್ರ.

## ಆಧಾರ ಪೂರಕಗಳು


| | |
|---|---|
| ಯುಗಯಾತ್ರೀ ಭಾರತೀಯ ಸಂಸ್ಕೃತಿ. ಸಂಪುಟ: ೧ | ಪ್ರಸಾರಂಗ, ಮೈಸೂರು ವಿಶ್ವವಿದ್ಯಾನಿಲಯ |
| ಪ್ರಾಚೀನ ಮತ್ತು ಮಧ್ಯಯುಗೀನ ಹಿಂದೂ ಸಂಸ್ಕೃತಿ | ಸ್ವಾಮಿ ಹರ್ಷಾನಂದ |
| ಪುರಾಣ ಭಾರತ ಕೋಶ | ಯಜ್ಞನಾರಾಯಣ ಉಡುಪ |
| ಸಮಗ್ರ ಭಾರತದ ಇತಿಹಾಸ | ಟಿ.ಜಿ. ಚಂದ್ರಶೇಖರಪ್ಪ |
| ಭಾರತದ ಇತಿಹಾಸ | ಹೆಚ್.ಎಂ. ಬಸವರಾಜು |
| ಲಾಸ್ಯ ರಂಜನ | ಮೈಸೂರು ವಿಶ್ವವಿದ್ಯಾನಿಲಯ |
| ಕರ್ನಾಟಕ ಸಂಸ್ಕೃತಿ ಸಮೀಕ್ಷೆ | ಡಾ॥ ಹೆಚ್. ತಿಪ್ಪೇರುದ್ರಸ್ವಾಮಿ |
| ಮಂಡ್ಯ ಜಿಲ್ಲಾ ಗೆಜೆಟಿಯರ್ | ಕರ್ನಾಟಕ ಸರ್ಕಾರ |
| ಎಪಿಗ್ರಾಪಿಯ ಕರ್ನಾಟಕ (ಸಂಪುಟ ೬ ಮತ್ತು ೭) | ಮೈಸೂರು ವಿಶ್ವವಿದ್ಯಾನಿಲಯ |
| ಕನ್ನಡ ವಿಷಯ ವಿಶ್ವಕೋಶ | ಮೈಸೂರು ವಿಶ್ವವಿದ್ಯಾನಿಲಯ |
| ಗ್ರಾಮ ದೇವತೆಗಳು | ಡಾ. ಸಿದ್ದಲಿಂಗಯ್ಯ |
| ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ | ಡಾ. ಎಂ. ಚಿದಾನಂದ ಮೂರ್ತಿ |
| ಸಿರಿಯೊಡಲು | ೬೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಗ್ರಂಥ, ಮಂಡ್ಯ. |
| Sculptural Art of Hampi<br>ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ | ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು. |
| ಸಕ್ಕರೆ ಸೀಮೆ | ಕೆ. ಅನಂತರಾಮು |
| ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ | ತೈಲೂರು ವೆಂಕಟಕೃಷ್ಣ |
| ಮಂಡ್ಯ ಜಿಲ್ಲೆಯ ಸ್ಥಳನಾಮಗಳ ಅವಲೋಕನ | ತೈಲೂರು ವೆಂಕಟಕೃಷ್ಣ |